1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್,ಶಾನುಭೋಗರುಗಳು ಆಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ (ಇಂಗ್ಲೀಷು ಅಥವಾ ಕನ್ನಡ) ..		2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ		1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸಗಳಿಗೆ :—

ಮೊದಲನೇ ಸಲಕ್ಕೆ		5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ		2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸುಗಳಿಗೆ :-

ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	,, ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:-

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..	..	0	4

ಷರಾ.—ಚಂದಾ ವಗೈರೇ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗ್ಯಾದ ದರಖಾಸ್ತುಗಳು ಮೈಸೂರು ದಿವಾನರವರ ಚೀಫ್ ಸೆಕ್ರೆಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಯಿಲ್ಲ.

ಟಿ. ಟಿ. ಲಿನಾರ್ಡ್,
ಮೈಸೂರ ಗೆಜೆಟ್ ಕಂಪೈಲರ್.

Mysore Government Central Press, Bangalore.—1895.

ಮೈಸೂರ ಗೆಜೆಟ್.

ನಂ. 5] ಸರ್ಕಾರದಿಂದ ಛಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಫಿಬ್ರವರಿ ತಾ|| 14, ಸನ್ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರಕ್‌ಸ್ ಆಫಿಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ನ್ ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ, ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 20ನೇ ಡಿಸೆಂಬರ 1894.

ನಂ. 10510.—ಆರ್. ಎಫ್. 147 92.—ಮೈಸೂರ ಶ್ರೀಮನ್ ಮಹಾರಾಜಾ ಸರ್ಕಾರದವರು ಆಜ್ಞಾಪಿಸುವದೇನಂದರೆ, ಮೈಸೂರ್ ಲ್ಯಾಂಡ್ ರೆವಿನ್ಯೂ Xನೇ ರೂಲ್ 4ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರುವದನ್ನು ಉಪಯೋಗಿಸತಕ್ಕದ್ದು:—

"4. ಲೋಕಲ್‌ಫಂಡು ಇಲಾಖೇಯವರು ಪಬ್ಲಿಕ್ ವರ್ಕ್ಸ್ ಇಲಾಖೇಯವರು ಮತ್ತು ಇತರ ಸರ್ಕಾರದ ಇಲಾಖೇಯವರು, ವ ಮ್ಯುನಿಸಿಪಾಲಿಟಿಯವರು ಅಥವಾ ಅವರುಗಳ ಕಂಟ್ರಾಕ್ಟುದಾರರು ಹಾಂಗೆ ಮಾಡುವದಕ್ಕೆ ವಿಶೇಷತಃ ಅಧಿಕಾರ ಕೊಡಲ್ಪಟ್ಟರೆ ಅವರು ಗವರ್ನಮೆಂಟಿನಿಂದ ವಿಧಿಸೋಣಾಗುವ ಅಂಥಾ ರಾಜಪಾಲು ಮೊಬಲಗನ್ನು ತೆರುವದಕ್ಕೆ ವಳಪಟ್ಟು ನದಿಗಳ, ನಾಲಾಗಳ ಅಥವಾ ಸರ್ಕಾರ್ ಕೆರೆಗಳ ಅಂಗಳಗಳಿಂದಲಾಗಲಿ, ಸರ್ಕಾರ್ ಕೆಲಸಗಳಿಗೆ ಪ್ರಜೆಗಳ ವುಪಯೋಗಾರ್ಥವಾದ ವಿಶೇಷ ಕೆಲಸಗಳಿಗೋಸ್ಕರ

ಗೊತ್ತು ಮಾಡಲ್ಪಡದಂಥಾ ಆಕಾರ ಕಾಣದ ಅಥವಾ ಹಿಡುವಳೀಲಿ ಯಿಲ್ಲದ ಜಮೀನಿನಿಂದಲಾಗಲಿ ಮಣ್ಣು, ಕಲ್ಲು, ಕಂಕರ್, ಮರಳು, ಮರಂಮತ್ತು ಇತರ ಪದಾರ್ಥಗಳನ್ನು ಸಾಗಿಸಬಹುದು; ಪರಂತು ಡೆಪ್ಯುಟಿ ಕಮಿಷನರವರು ಸದರೀ ಪದಾರ್ಥಗಳು ಈ ರೂಲಿಗನುಸಾರವಾಗಿ ಗೊತ್ತಾದ ಪ್ರದೇಶಗಳಿಂದ ಸಾಗಿಸಲ್ಪಡಕೂಡದೆಂದು ನಿಷೇಧಿಸಬಹುದು. ಅಥವಾ ಅವರಿಗೆ ಯುಕ್ತವಾಗಿ ಕಾಣಬರುವ ಷರತ್ತುಗಳನ್ನು ವಿಧಿಸಬಹುದು."

ತಾರೀಖು 19ನೇ ಜನವರಿ 1895.

ನಂ. 11096.—ಯಲ್. ಎಫ್. 257—92—1894ನೇ ಇಸವಿ ಮೈಸೂರು ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಪ್ರಕಾರ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡಿ ಕಂಡ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿ ಮ್ಯುನಿಸಿಪಲ್ ಟವನಿನಲ್ಲಿ ಯಿರುವ ರಸ್ತೆಯನ್ನು ಬಡಾಯಿಸುವದಕ್ಕೆ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರ್ರ ಹೆಸರು.	ಜಮೀನ್ ತಪ್ಸೀಲ್.				ಚಕ್ಕುಬಂದಿ.
				ವಿವರ.	ಸರ್ವೆ ನಂ.	ವಿಸ್ತೀರ್ಣ.	ಕಂದಾಯ.	
						ಅಡಿ	ರೂ. ಆ. ಪೈ.	
ಬೆಂಗಳೂರು	ದೇವನಹಳ್ಳಿ	ವಡಿಗೇನಹಳ್ಳಿ	1 ಬಾಗಲೂರು ಮುದ್ದಣ್ಣ	ಮನೆ ಮುಂದುಗಡೆಯಲ್ಲಿರುವ ಜಗಲಿಯ ಭಾಗ	..	39 × 6	..	ಪೂರ್ವಕ್ಕೆ—ಮಾಲೀಕನಮನೆಯ ಮುಖ್ಯವಾದ ಕಟ್ಟಡ ಪಶ್ಚಿಮಕ್ಕೆ—ರೆಡ್ಡಿ ಪ್ಯಾಟೆಗೆ ಹೋಗುವ ರಸ್ತೆ ಉತ್ತರಕ್ಕೆ—ರುದ್ರಪ್ಪನ ಮನೆಯ ಪಡಸಾಲೆ ದಕ್ಷಿಣಕ್ಕೆ—ರಥದ ಮಂಟಪ
			2 ಕೋರಮಂಗಲದ ರುದ್ರಪ್ಪ	ಡಿಟೋ	..	29 × 6	..	ಪೂರ್ವಕ್ಕೆ—ಮಾಲೀಕನಮನೆಯ ಮುಖ್ಯವಾದ ಕಟ್ಟಡ ಪಶ್ಚಿಮಕ್ಕೆ—ರೆಡ್ಡಿ ಪ್ಯಾಟೆಗೆ ಹೋಗುವ ರಸ್ತೆ ಉತ್ತರಕ್ಕೆ—ಬಾಗಲೂರು ಮುದ್ದಣ್ಣನಮನೆ ದಕ್ಷಿಣಕ್ಕೆ—ರಥದ ಮಂಟಪ

ನಂ. 11097.—ಯಲ್. ಎಫ್. 257—92—1894ನೇ ಇಸವಿ ಮೈಸೂರು ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಪ್ರಕಾರ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡಿ ಕಂಡ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ ಆನೇಕಲ್ಲಿನಲ್ಲಿ ವೊಂದು ಮುಸಾಫರ್‌ಖಾನೆ ಕಟ್ಟುವ ಬಗ್ಗೆ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರರ ಹೆಸರು.	ಜಮೀನ್ ತಪ್ಸೀಲ್.				ಚಕ್ಕುಬಂದಿ.
				ವಿವರ.	ಸರ್ವೆ ನಂ.	ಬೇಕಾದ ವಿಸ್ತೀರ್ಣ.	ಕಂದಾಯ.	
						ಎ. ಗು.	ರೂ. ಆ. ಪೈ.	
ಬೆಂಗಳೂರು	ಆನೇಕಲ್	ಆನೇಕಲ್ ಕಸಬಾ	ಮೃತಪಟ್ಟ ಮಾಗಡಿ ರಾಮಕ್ಕ, ಪಟ್ಟಾದಾರ್ ಕೆಂಪರಾಮನ ಮಗ ಮನ್ನಯ್ಯ ಭೋಗ್ಯದಾರ್ ಮೈನರ್	ಖುಷ್ಕಿ	128ನೇ ನಂಬರಿನ ಪೈಕಿ ನಂ. 2	0 20	1 0 0	ಪೂರ್ವಕ್ಕೆ—ಸರ್ವೆ ನಂ. 113 ಮತ್ತು 127 ಪಶ್ಚಿಮಕ್ಕೆ ಸರ್ವೆ ನಂ. 129 ಉತ್ತರಕ್ಕೆ—ಬಿದರಗೆರೆಗೆ ಹೋಗುವ ಬಣಿ ದಕ್ಷಿಣಕ್ಕೆ—ಹೈ ರೋಡ್

78

ತಾರೀಖು 27ನೇ ಡಿಸೆಂಬರ್ 1894.

ನಂ. 10897.—ಆರ್. ಎಫ್. 115—92 1894ನೇ ಇಸವಿ VIIನೇ ರೆಗ್ಯುಲೇಷನ್ಯಾನೆ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡೀಲಿರುವ ಷೆಡ್ಯೂಲಿನಲ್ಲಿ ನಮೂದಾದ ಜಮೀನುಗಳು ಸರ್ಕಾರದ ಕೆಲಸಕ್ಕೆ ಅಂದರೆ ಚಿಕ್ಕಬಳ್ಳಾಪುರ ಪಟ್ಟಣವನ್ನ ಬಡಾಯಿಸುವದಕ್ಕಾಗಿ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರನ ಹೆಸರು.	ಬೇಕಾದವಿಸ್ತೀರ್ಣ.			ಕಂದಾಯ.	ತರಹಾ.	ಚಕ್ಕುಬಂದಿ.			
					ಸರ್ವೇ ನಂಬರ್.	ವಿಸ್ತೀರ್ಣ.				ಪೂರ್ವಕ್ಕೆ.	ಪಶ್ಚಿಮಕ್ಕೆ.	ಉತ್ತರಕ್ಕೆ.	ದಕ್ಷಿಣಕ್ಕೆ.
						ಎ.	ಗು.						
ಕೋಲಾರ	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಶಿಡ್ಲಘಟ್ಟದ ಜಂಗಲ್	1 ಖಾತೇದಾರ್ ಶೇಷಭಟ್ಟ ಬಿನ್ ರಾಮಭಟ್ಟ ಹಿಡುವಳಿದಾರ್ ಜವಳಿ ಸುಬ್ಬಾಶಾಸ್ತ್ರಿ)	ಪೈಕಿ ನಂಬರ್ 10	..	20	1-0-0	ಖುಷ್ಕಿ ಪರ್ಸನಲ್ ಇನಾಂ	ಸರ್ವೇ ನಂ. 52 ವ 54ವುಳ್ಳ ಜಮೀನು	ಸರ್ವೇ ಪೈಕಿ ನಂ. 10	ಶಿಡ್ಲಘಟ್ಟದ ರಸ್ತೆ	ಸರ್ವೇ ನಂ. 9ನೇ ಜಮೀನು
				2 ಖಾತೇದಾರ್ ಎಸ್. ವಾಸುದೇವಾಚಾರು, ಹಿಡುವಳಿದಾರ್ ವೈದ್ಯ ಸುಬ್ಬಾಪಂಡಿತರು	ಪೈಕಿ ನಂಬರ್ 10	1	12	2-12-0	ಡಿಟೋ	ಡಿಟೋ	ಡಿಟೋ	ಶೇಷಭಟ್ಟರ ಇನಾಂ ಜಮೀನು ಸರ್ವೆ ಪೈಕಿ ನಂ. 10	ಡಿಟೋ

ತಾರೀಖು 27ನೇ ಜನವರಿ 1895.

ನಂ. 11768.—ಜಿ. 657—1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 6ನೇ ಸೆಕ್ಷನ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟು ರಿಜಿಸ್ಟ್ರಾರ್ ಆಫಿಸ್ ಹೆಡ್‌ಕ್ಲರ್ಕ್ ಬಿ. ವೆಂಕಟಪತಯ್ಯಂಗಾರ್ರವರು, ಲೆಜಿಸ್ಲೆಟಿವ್ ಇಲಾಖೆಗೆ ವರ್ಗ ಮಾಡಲ್ಪಟ್ಟ ಎಂ. ವೆಂಕೋಬರಾಯರಿಗೆ ಬದಲು, ಅಜಮಾಯಿಷೀ ತರೀಕ್ ಚಾಮರಾಜನಗರದ 2ನೇ ಗ್ರೇಡ್ ಸಬ್ ರಿಜಿಸ್ಟ್ರಾರ್ರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

2. ಎಂ. ಶಾಮರಾವ್, ಬಿ. ಎ. ಯವರು, ಮೈಸೂರು ಡಿಸ್ಟ್ರಿಕ್ಟು ರಿಜಿಸ್ಟ್ರಾರ್ರವರ ಆಫೀಸ್ ಹೆಡ್ ಕ್ಲರ್ಕಾಗಿ ಬಡ್ತಿ ಮಾಡಲ್ಪಟ್ಟ ಸಿ. ವೆಂಕಟರಾವ್, ಬಿ. ಎ. ಯವರಿಗೆ ಬದಲಾಗಿ, ಅಜಮಾಯಿಷೀ ತರೀಕ್ ಕೃಷ್ಣರಾಜಪೇಟೆ 3ನೇ ಗ್ರೇಡ್ ಸಬ್ ರಿಜಿಸ್ಟ್ರಾರ್ರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ|| 62—ಡಿ. ಎಚ್. ಬಿ. ಮೊಕ್ಕಾಂ ಮೈಸೂರ್,

ತಾರೀಖು 2ನೇ ಫೆಬ್ರುವರಿ 1895.

ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ಪಿ. ಎನ್. ಪೂರ್ಣಯ್ಯನವರು, ಸನ್ 1895ನೇ ಇಸವಿ ಫೆಬ್ರುವರಿ 4ನೇ ತಾರೀಖು ಮೊದಲು ಅಥವಾ ಅವರದನ್ನುಪಯೋಗಿಸಿಕೊಳ್ಳುವ ತಾರೀಖು ಮೊದಲು 27 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫಿಸರಾದ ಮೆಸ್ಟರ್ ಎ. ಕೃಷ್ಣಸ್ವಾಮಯ್ಯಂಗಾರ್ರವರು, ಮೆಸ್ಟರ್ ಪೂರ್ಣಯ್ಯನವರು, ರಜಾದ ಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಹಾಸನದ ಡೆಪ್ಯುಟಿ ಕಮ್ಮಿಷನರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,

ಟಿ. ಆನಂದರಾವ್,
ಚೀಫ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂ. 942. ತಾರೀಖು 5ನೇ ಫೆಬ್ರುವರಿ 1895ನೇ ಇಸವಿ, ಮೊಕ್ಕಾಂ ಮೈಸೂರ್.

ಮೈಸೂರ್ ಹಳೆಅಗ್ರಹಾರದಲ್ಲಿರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ನವಾಮಸ್ಜೀದಿಗೆ ಈ ಕೆಳಗೆ ನಮೂದಿಸುವವರನ್ನ ನಾಜರ್ (ಧರ್ಮದರ್ಶಿಗಳು) ಆಗಿ ನೇಮಿಸಿ ಯಿಧೆ.

1. ಮೈಸೂರ್ ಕ್ರಿಷ್ಣರಾಜ ಮೊಹಲ್ಲಾದಲ್ಲಿರುವ ಕಂಟ್ರಾಕ್ಟರ್ ಮಹಮ್ಮದ್ ಖಾಸೀಂಸಾಬರು.
2. ಹಿಂದುಸ್ತಾನಿ ಸ್ಕೂಲ್ ಹೆಡ್ಮಾಸ್ಟರ್, ದರೋಗೆ ಅಬ್ದುಲ್ ಮಜೀದ್ ಸಾಬರು.

ಎ. ಶ್ರೀನಿವಾಸಾಚಾರ್ಲು
ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 5] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ|| 14, ಸನ್ 1895.

೨ನೇ ಭಾಗ.

ಇಂಡ್ಯಾಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ನೋಟಿಸ.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಆಸಲ್ ಖರೀದಿ (ರೂಪಾಯಿ.)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇನ್ಗ್ಲಾನ್ಡ್ ಪೋರ್ಟರು ಬ್ರದರಸ್ರ ಡಿಟೋ	„ 170
1	ಮದ್ರಾಸ್ ಓಕ್ಸರವರ ಡಿಟೋ	„ 250
1	ಡಿಟೋ ಡಿಟೋ ಡಿಟೋ	„ 188
1	ಡಿಟೋ ಜೋರ್ಯ್ಯಾಮ್ರವರ ಡಿಟೋ	„ 85

ಖರೀದಿದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ, ಆಸಲ್ ಖರೀದಿಯಲ್ಲಿ ಶೇಕಡಾ 12½ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್[illegible] ಜನರಲ್ ಆಫ್ ಫಾರೆಸ್ಟ್ಸ್,

ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 23ನೇ ಜನವರಿ 1895.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೈನರ್ ಫಾರೆಸ್ಟ್ ಯಾನೆ ಚಿಲ್ಲರೆ ಪಸಾರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ಸಾದರ್ ಮಾಡಲ್ಪಟ್ಟಿರುವ 1892ನೇ ಇಸವಿ ಜೂನ್ 2ನೇ ಮರಕುಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಫಾಯಿಷಾಗಿರುವ ಅದೇ ಇಸವಿ ಮೇ 11ನೇ ಮರ್ಕೂಂ ಇಸ್ತಿಹಾರನ್ನು ಬದಲಾಯಿಸಿ ಅಮಲ್ದಾರ್ ಮತ್ತು ಸವಾಲ್‌ದಾರ್‌ಗಳ ನಡವಳಿಕೆ ಬಗ್ಗೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಸಲ್ಪಟ್ಟಿರುತ್ತೆ.

(1) ಕಾರ್ತಿಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್ದಾರ್ರು ತಪ್ಪದೆ ತಾವೇನೇ ಆಯಾಯ ಹೋಬಳಿ ಕಸಬೆಯಲ್ಲಿ ಆಯಾಯ ಹೋಬಳಿ ಫಸಲನ್ನು ಹರಾಜು ಮಾಡುವರು. ಕಾರ್ತಿಕ ಫಸಲನ್ನು ಡಿಸೆಂಬರ್ ತಿಂಗಳಲ್ಲಿಯೂ ವೈಶಾಖಿ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್ಧಾರ್ರು ಪ್ರಕಟಿಸುತ್ತಾರೆ.

(3) ಹರಾಜು ಷರತ್ತುಗಳೇನಂದರೆ.

(*a*) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್ ಮಾಡುವದಿಲ್ಲ.

(*b*) ಆಖೈರ್ ಚಡಸವಾಲ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯಕೂಡದು.

(*c*) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೊ ಅಥವಾ ಇತರರ ಏಜಂಟರಾಗಿ ಸವಾಲ್ ಮಾಡುತ್ತಾರೋ ಕೇಳಲ್ಪಡಬಹುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(*d*) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ಮತ್ತು ರೂಪಾಯಿ 1ಕ್ಕೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ಸನ್ನು ಸಹ ಹರಾಜು ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್ದಾರ್ರಿಂದ ತಿಳಿಸಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟನ್ನು ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್‌ದಾರನನ್ನು ಗುರಿಮಾಡುವದು.

(*e*) ಅಂಗೀಕರಿಸಲ್ಪಟ್ಟ ಸವಾಲ್‌ದಾರನು ವೈಶಾಖಿ ಫಸಲನ್ನು ಜೂನ್ 1ನೇ ತಾರೀಖು ಲಾಗಾಯತು ಡಿಸೆಂಬರ್ 31ರ ವರಿಗೂ, ಕಾರ್ತಿಕ ಫಸಲನ್ನು ಜನವರಿ 1ನೇ ತಾರೀಖು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ಎ. ನರಸಿಂಹಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 6ನೇ ಫೆಬ್ರುವರಿ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟ್ ನಾರಾಯಣದುರ್ಗ ಫಾರೆಸ್ಟ್ ಬಾಬತು ಈ ಕೆಳಗೆ ವಿವರಿಸಿರುವ ಪಸಾರೆ ಜಿನಸಿಗಳು ಸನ್ 1895ನೇ ಇಸವಿ ಮಾರ್ಚಿ ತಾರೀಖು 5ರಲ್ಲು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಶ್ರೀರಂಗಪಟ್ಟಣದ ಸಂದಲ್ ಕೋಠಿಯಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸಿ ತಪ್ಸೀಲ್.	ಸುಮಾರು ಮೊತ್ತ.	
	ಮಣ.	ಪೌ.
ಅಳಲೆಕಾಯಿ	2000	..
ಅರಗು	130	..

ಷರತ್ತು—ಮೈಸೂರು ಗೆಜೆಟ್ 93ನೇ ಜನವರಿ 12ನೇ ಮರ್ಕೂಮಿನಲ್ಲಿ ಚವಬಿನೆ ಮತ್ತು ಬೊಂಬು ವಿಷಯದಲ್ಲಿ ಫಾಯಿಷ್ ಮಾಡಿರುವ 1892ನೇ ಇಸವಿ ನವೆಂಬರು 29ನೇ ಮರ್ಕೂಂ 7953-ಆರ್. ಎಫ್. 155—92ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ಮೇರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ತಾರೀಖು 16ನೆ ಜನವರಿ 1895.

1. ಇದರಿಂದ ಸಕಲ ಜನಗಳಿಗೂ ತಿಳಿಯ ಪಡಿಸುವದೇನಂದರೆ,—1878ನೆ ಇಸವಿ ಜೂನ್ 8ನೇ ತಾರೀಖಿನ ಫಾರೆಸ್ಟ್ ರೂಲ್ಸ್ 13ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿರುವ ಸ್ಟೇಟ್ ಫಾರೆಸ್ಟುಗಳು ಮತ್ತು ರಿಜರ್ವ್ ಫಾರೆಸ್ಟುಗಳು, ಪ್ಲಾನ್ಟೇಷನ್‌ಗಳು 1895ನೇ ಇಸವಿ ಫೆಬ್ರುವರಿ 1ರಲಾಗಾಯಿತು 1895ನೇ ಇಸವಿ ಮೇ ಆಖೈರು ವರಿಗೆ ಬಿಸಲು ಕಾಲದಲ್ಲಿ ಜನಗಳಿಗೆ ಬಂದ್ ಮಾಡಲ್ಪಟ್ಟು ಇರುತ್ತೆ.

2. ಈ ಮೇಲ್ಕಂಡ ಕಾಲದಲ್ಲಿ ಯಾವ ವಿಧವಾದ ಷಿಕಾರಿಯೂ ನಿರೋಧಿಸಲ್ಪಟ್ಟುಇದೆ. ಅತಿಕ್ರಮ ಪ್ರವೇಶಮಾಡುವರು ಪ್ರಾಸಿಕ್ಯೂಷನ್‌ಗೆ ಗುರಿಯಾದಾರು.

ನಂಬರು.	ಸ್ಟೇಟ್ ಫಾರೆಸ್ಟ್ ಅಥವ ಪ್ಲಾನ್ಟೇಷನ್‌ಗಳ ಹೆಸರು.	ತಾಲ್ಲೂಕು.
	ಫಾರೆಸ್ಟುಗಳು.	
1	ನಂದೀದುರ್ಗ	ಚಿಕ್ಕಬಳ್ಳಾಪುರ
2	ನರಸಿಹ್ಮದೇವರಬೆಟ್ಟ	ಡಿಟೋ ಗೋರೀಬಿದನೂರು ಮತ್ತು ಗುಡಿಬಂಡೆ ಸಬ್ ತಾಲ್ಲೂಕು
3	ಕಾಮಸಂದ್ರ ಜಂಗಲ್ ಮತ್ತು ಅದರಲ್ಲಿ ಇರುವ ಪ್ಲಾನ್ಟೇಷನ್	ಬೌರಿಂಗ್‌ಪೇಟೆ ಮತ್ತು ಮಾಲೂರು
4	ರಾಯಲುಪಾಡು, ಅಡ್ಡಗಲ್ಲು, ನೆಲವಂಕಿ ಜಂಗಲುಗಳು ಮತ್ತು ಅವುಗಳಲ್ಲಿ ಇರುವ ಪ್ಲಾನ್ಟೇಷನ್‌ಗಳು	ಚಿಂತಾಮಣೀ ತಾಲ್ಲೂಕು ಮತ್ತು ಶ್ರೀನಿವಾಸಪುರ ಸಬ್ ತಾಲ್ಲೂಕು
5	ಶ್ರೀನಿವಾಸಪುರ, ಯಲದೂರು ಜಂಗಲ್ ಮತ್ತು ಅವುಗಳಲ್ಲಿ ಇರುವ ಪ್ಲಾನ್ಟೇಷನ್	ಶ್ರೀನಿವಾಸಪುರ ಸಬ್ ತಾಲ್ಲೂಕು ಮತ್ತು ಮುಳಬಾಗಲ್ ತಾಲ್ಲೂಕು
6	ಅಗರ ಜಂಗಲ್	ಮುಳಬಾಗಲು
7	ಹೊಸೂರು ಅಣಜಗಾನಹಳ್ಳಿ ಪಾಳ್ಳೆಗಾರ್ ಪೊದೆ	ಶ್ರೀನಿವಾಸಪುರ ಸಬ್ ತಾಲ್ಲೂಕು
8	ಇಟ್ಟಿಕಲ್ ದುರ್ಗ	ಬಾಗೇಪಲ್ಲಿ
9	ವಲಸೆ ಫಾರೆಸ್ಟು	ಗೋರೀಬಿದನೂರು
10	ಗದರೆ ಬೆಟ್ಟ ಮತ್ತು ಯಮ್ಮಗುಟ್ಟ ಜಂಗಲ್‌ಗಳು ಸಂದಲ್ ಪೇರಾವ್ ಆಗಿರತಕ್ಕ ಪ್ರದೇಶಮಾತ್ರನೆ	ಡಿಟೋ
	ಪ್ಲಾನ್ಟೇಷನ್‌ಗಳು.	
11	ನಂದಿ	ಚಿಕ್ಕಬಳ್ಳಾಪುರ
12	ಸೂಲಾಲಪ್ಪನ ದಿನ್ನೆ	ಡಿಟೋ
13	ಗಾಜಲದಿನ್ನೆ	ಕೋಲಾರ
14	ಸಂಗೊಂಡಹಳ್ಳಿ	ಡಿಟೋ
15	ಮಾಲೂರು	ಮಾಲೂರು
16	ಬೀಚಗಾನಹಳ್ಳಿ	ಗುಡಿಬಂಡೆ ಸಬ್ ತಾಲ್ಲೂಕು
17	ಪುಟ್ಟೇನಹಳ್ಳಿ	ಶಿಡ್ಲಘಟ್ಟ
18	ತಿರುಮಲಯ್ಯನ ದಿನ್ನೆ	ಡಿಟೋ
19	ಚವಡಸಂದ್ರ	ಡಿಟೋ
20	ಗೊರಮಡಗು	ಡಿಟೋ
21	ಯಲ್ಲಂಪಲ್ಲಿ	ಬಾಗೇಪಲ್ಲಿ

ಬಿ. ರಾಮಸ್ವಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರ್ ಕೋಲಾರ್.

ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಇಲಾಖಾ.

ಟೆಂಡರ್ ನೋಟಿಸ್.

ತಾರೀಖು (14—15ನೇ) ಜನವರಿ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಸ್ಟೇಟ್ ರೈಲ್ವೆಯವರಿಂದ ರಿಜಕ್ಟ್ ಮಾಡಲ್ಪಟ್ಟ ಹಾಲಿ ಮೈಸೂರು ಉಡ್ಯಾರ್ಡಿನಲ್ಲಿ ಹಾಜರು ಇರತಕ್ಕ 4½ ಮತ್ತು 5 ಅಂಗುಲಗಳ ಸ್ಲೀಪರುಗಳನ್ನೂ ಮತ್ತು ಬಳ್ಳೀ ಸ್ಲೀಪರುಗಳನ್ನೂ ಸಹ ಒಟ್ಟು ಖರೀದಿಗೆ ತೆಗದುಕೊಳ್ಳತಕ್ಕ ಬಗ್ಯೆ ದರಖಾಸ್ತುಗಳು ಸನ್ 1895ನೇ ಇಸವಿ ಫೆಬ್ರುವರಿ 20ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ತೆಗದುಕೊಳ್ಳಲ್ಪಡುತ್ತೆ.

2. ಮೇಲೆ ನಮೂದಿಸಿರುವ ತಾರೀಖು ಕಳದ ನಂತರ ದರಖಾಸ್ತುಗಳು ತೆಗದುಕೊಳ್ಳಲ್ಪಡುವದಿಲ್ಲ.

3. 4½ ಮತ್ತು 5 ಅಂಗುಲಗಳ ಬಾಬತು ನಕಾರೆ ಮತ್ತು ಬಳ್ಳಿ ಸ್ಲೀಪರುಗಳ ಖರೀದಿಗೆ ತೆಗದುಕೊಳ್ಳತಕ್ಕ ಬಗ್ಯೆ ದರಖಾಸ್ತು ಯೆಂಬದಾಗಿ ಲಿಫಾಫೆ ಮೇಲೆ ಬರಿಯಬೇಕು.

4. ಟೆಂಡರ್ ಜೊತೇಲಿ ಯರಡು ನೂರು ರೂಪಾಯಿಗಳು ನಗದಾಗಿಯೋ ಆಗಲಿ ನೋಟ್ ಅಥವಾ ಗವರ್ನಮೆಂಟ್ ಪ್ರೋನೋಟ್ ಮೂಲಕವಾಗಿಯೋ ಆಗಲಿ ಬಾರದೆ ಇದ್ದಲ್ಲಿ ಅಂಥಾ ಟೆಂಡರನ್ನ ಅಂಗೀಕರಿಸಲ್ಪಡುವದಿಲ್ಲ.

5. ಹಾಜರು ಇರತಕ್ಕ ದರಖಾಸ್ತುದಾರರ ರೂಬರೂ ಟೆಂಡರ್‌ಗಳು ಡೆಪ್ಯುಟಿ ಕಮ್ಮಿಷನರ ಸಾಹೆಬರವರಿಂದ ಆಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಲಾಗಲಿ ಬರುವ ಫಿಬ್ರವರಿ 20ನೇ ತಾರೀಖು ಮಧ್ಯಾಹ್ನ 2 ಘಂಟೆಗೆ ವಡಿಯಲ್ಪಡುವದು.

6. ಪ್ರತಿ ಟೆಂಡರ್‌ನಲ್ಲೂ ಸಲೆ ಅಡಿ 1ಕ್ಕೆ ಇಷ್ಟು ದರವೆಂತಲಾಗಲಿ ಅಥವಾ 4½ ಮತ್ತು 5 ಅಂಗುಲಗಳ ಪ್ರತಿ ಒಂದು ಸ್ಲೀಪರಿಗೆ ಇಷ್ಟು ದರವೆಂತಲಾಗಲಿ ನಮೂದಿಸಿರಬೇಕು.

7. ಕಾರಣಗಳು ನಮೂದು ಇಲ್ಲದೆ ದರಖಾಸ್ತುಗಳನ್ನು ತಿರಸ್ಕರಿಸತಕ್ಕ ಅಧಿಕಾರವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ವಹಿಸಿಕೊಂಡು ಇದ್ದಾರೆ.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ದರಖಾಸ್ತು ಮಂಜೂರಾದ ಮೂರು ದಿವಸಗಳ ವಳಗೆ ಒಟ್ಟು ಮೊಬಲಗು ಪೈಕಿ ಕಾಲು ಹಿಸ್ಸೆ ಮೊಬಲಗನ್ನು ಮತ್ತು ಮೂವತ್ತು ದಿವಸಗಳ ವಳಗೆ ಬಾಕಿಯಾಗುವ ಮುಕ್ಕಾಲುವಾಸಿ ಮೊಬಲಗನ್ನೂ ಪಾವತಿ ಮಾಡಬೇಕು. ಈ ಷರತ್ತಿಗೆ ತಪ್ಪಿದರೆ ಅವನ ಡಿಪಾಜಿಟ್ ಮೊಬಲಗು ಶಿವಾಯಿಜಮೆಗೆ ದಾಖಲ್ಮಾಡಿಕೊಳ್ಳಲ್ಪಡುತ್ತೆ. ಮತ್ತು ಖರೀದಿಗೆ ಪಡದ ಸ್ಲೀಪರ್ ಮೇಲೆ ಯಾವ ವಿಧವಾದ ಭಾಧ್ಯತೆಯೂ ಇರುವದಿಲ್ಲ. ಮತ್ತು ಸದರೀ ಸ್ಲೀಪರ್‌ಗಳ ದುಸರಾ ಹರಾಜಿನಲ್ಲಿ ಉಂಟಾಗುವ ನಫೆಗೆ ಅವನಿಗೆ ಯೇನೂ ಹಕ್ಕು ಇರುವದಿಲ್ಲ.

9. ಮೊಬಲಗು ಪಾವತಿ ಮಾಡಿದ್ದಕ್ಕೆ ಖಜಾನೆ ರಶೀತಿ ಹಾಜರು ಮಾಡಿದಲ್ಲಿ ಸ್ಲೀಪರುಗಳು ಉಡ್ಯಾರ್ಡಿನಿಂದ ರಪ್ತು ಮಾಡಲು ರಹದಾರಿ ಕೊಡಲ್ಪಡುತ್ತೆ.

10. ಚುನಾಯಿಸಿ ಕೆಲವು ಸ್ಲೀಪರುಗಳನ್ನು ಖರೀದಿಗೆ ತೆಗದುಕೊಳ್ಳುವದಕ್ಕೆ ಮಾತ್ರ ದರಖಾಸ್ತು ಕೊಡಲಾಗದು.

11. ದರಖಾಸ್ತುಗಳ ಮಂಜೂರಾತಿ ಮತ್ತು ನಾಮಂಜೂರಾತಿ ತಿಳಿದ ವಡನೆ ಮಂಜೂರಾಗದೆ ಇರತಕ್ಕ ದರಖಾಸ್ತುದಾರರುಗಳ ಡಿಪಾಜಿಟ್ ಮೊಬಲಗು ವಾಪಸ್ ಮಾಡಲ್ಪಡುತ್ತೆ.

12. ವರಖಾಸ್ತು ದುಂಜೂರಾದ ತಾರೀಖು ಲಾಗಾಯತು ಮೂವತ್ತು ದಿವಸಗಳ ವಳಗಾಗಿ ಸ್ಲೀಪರುಗಳು ಉಡ್ಯಾರ್ಡಿನಿಂದ ರಪ್ತು ಮಾಡಲ್ಪಡಬೇಕು. ಅದಕ್ಕೆ ತಪ್ಪಿದರೆ ಒಟ್ಟು ಖರೀದಿ ಮೊಬಲಗಿಗೆ ವರುಷ ಒಂದಕ್ಕೆ ಶೇಕಡಾ 12 ರೂಪಾಯಿನಂತೆ ದರಖಾಸ್ತು ಮಂಜೂರಾದ ತಾರೀಖು ಲಾಗಾಯತು ಉಡ್ಯಾರ್ಡು ಬಾಡಿಗೆ ಕೊಡಬೇಕಾಗುತ್ತೆ. ಲಿಖಿತ ಮೂಲಕವಾದ ನೋಟಿಸ್ ಮೂಲಕ ಖರೀದಿದಾರ್ರಿಗೆ ತಿಳಿಸಿ ಅವರು ಖರೀದಿಗೆ ಪಡದುಕೊಂಡು ಇರತಕ್ಕ ಸ್ಲೀಪರು ಯಲ್ಲಾ ಅಥವಾ ಕೆಲವನ್ನಾಗಲಿ ದುಸರಾ ಹರಾಜು ಮೂಲಕ ಸದರೀ ಬಾಡಿಗೆ ಮೊಬಲಗನ್ನ ವಸೂಲ್ಮಾಡಿಕೊಳ್ಳಲು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಸ್ವತಂತ್ರರಾಗಿದ್ದಾರೆ.

ಅಬ್ದುಲ್‌ಕರೀಮ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 17—1—95.

1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಕಲಂ ಅನುಸರಿಸಿ ಇದರಡಿ ನಮೂದಾಗುವ ಸರ್ಕಾರಿ ಜಂಗಲ್‌ಗಳನ್ನು, ಪ್ಲಾಂಟೇಷನ್‌ಗಳನ್ನೂ ಮತ್ತು ಸಂದಲ್ ರಿಜರ್ವ್‌ಗಳನ್ನೂ ಸಹ ಬಿಸಲು ಕಾಲಕ್ಕಾಗಿ 1895ನೇ ಇಸವಿ ಫೆಬ್ರವರಿ ಗುರ್ರೇ ಲಾಗಾಯತು ಮೇ ಆಖೈರ್‌ವರಿಗೆ, ಬೇಟೆಗಾರರಿಗೂ ಇತರ ಜನಗಳಿಗೂ ಬಂದ್ ಮಾಡಲ್ಪಟ್ಟವೆ. ಶಿಕಾರಿಗೆ ಅತಿಕ್ರಮ ಪ್ರವೇಶ ಮಾಡತಕ್ಕವರು ಪ್ರಾಸಿಕ್ಯೂಷನ್‌ಗೆ ವಳಪಡುವರು.

ನಂಬರು.	ಫಾರೆಸ್ಟ್, ಪ್ಲಾಂಟೇಷನ್ ವ ಸಂದಲ್ ರಿಜರ್ವ್.	ತಾಲ್ಲೂಕು.
1	ಬುರಡಾಳು ಬೋರೆ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	ಹಾಸನ
2	ಮಲ್ಲಪ್ಪನಬೆಟ್ಟದ ಸಂದಲ್ ರಿಜರ್ವ್	ಡಿಟೋ
3	ಗೆಂಡೆಕಟ್ಟೆ ಪ್ಲಾಂಟೇಷನ್	ಡಿಟೋ
4	ಬ್ಯಾಬಾ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	ಡಿಟೋ
5	ನಾಕಲ್‌ಗೂಡು ಸಂದಲ್ ರಿಜರ್ವ್ ಪ್ಲಾಂಟೇಷನ್	ಡಿಟೋ
6	ದೊಡ್ಡಬೆಟ್ಟದ ಗ್ರೂಲ್ ಫಾರೆಸ್ಟಿನಲ್ಲಿ ಶೇರಲ್ಪಟ್ಟಿರುವ ಚಿಕ್ಕಬೆಟ್ಟ, ದೊಡ್ಡಬೆಟ್ಟ, ತಪಶಿ ಮಲ್ಲಪ್ಪನಬೆಟ್ಟ ಮತ್ತು ಕೊಡಗತ್ತವಳ್ಳಿ ಬೆಟ್ಟದ ಸ್ಟೇಟ್ ಫಾರೆಸ್ಟ್	ಡಿಟೋ
7	ಭಕ್ತರವಳ್ಳಿ ಪ್ಲಾಂಟೇಷನ್	ಡಿಟೋ
8	ಶೀಗೇದಗುಡ್ಡ ಫಾರೆಸ್ಟ್	ಡಿಟೋ
9	ಹಗರೆ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	ಬೇಲೂರು
10	ಕಬ್ಬಿನಾಲೆಘಾಟ್ ಫಾರೆಸ್ಟ್	ಮಂಜರಾಬಾದ್
11	ಕೆಂಪುಹೊಳೆಘಾಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	ಡಿಟೋ
12	ಕಾಗಿನೆರಿ ಘಾಟ್ ಫಾರೆಸ್ಟ್	ಡಿಟೋ
13	ನಡಕೊಪ್ಪಲು ಇಲಾಚಿ ಪ್ಲಾಂಟೇಷನ್	ಡಿಟೋ
14	ಬಿಸಲೆಘಾಟ್ ಫಾರೆಸ್ಟ್	ಡಿಟೋ
15	ಕೆಂಮಂಣುಬೋರೆ ಅಥವ ಕೆಂದೀಣಿ ಕಾವಲ್ ಸಂದಲ್ ರಿಜರ್ವ್	ಅರ್ಕಲಗೂಡು
16	ವಿಜಯಾಪುರದ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	ಡಿಟೋ
17	ಬೈಗೂರು ಸ್ಟೇಟ್ ಫಾರೆಸ್ಟ್	ಡಿಟೋ
18	ಗುಬ್ಬಿ ಸ್ಟೇಟ್ ಫಾರೆಸ್ಟ್	ಡಿಟೋ
19	ಗಬ್ಬಿ ಸಂದಲ್ ರಿಜರ್ವ್	ಡಿಟೋ
20	ಹಿರೀಕಲ್ಲುಗುಡ್ಡ ಸ್ಟೇಟ್ ಫಾರೆಸ್ಟ್	ಅರಶೀಕೆರೆ
21	ಬೆಂಡೆಕೆರೆ ಪ್ಲಾಂಟೇಷನ್	ಡಿಟೋ
22	ಜಾಜೂರು ಪ್ಲಾಂಟೇಷನ್	ಡಿಟೋ
23	ಗವುಡಗೆರೆ ಸ್ಟೇಟ್ ಫಾರೆಸ್ಟ್	ಚನ್ನರಾಯಪಟ್ಣ
24	ವಂಟಿಗುಡ್ಡದ ಸಂದಲ್ ರಿಜರ್ವ್	ಹೊಳೇನರಶೀಪುರ

ಮುದ್ದಪ್ಪ, ಅಸಿಸ್ಟೆಂಟ್ ಕನ್ಸರವೇಟರ ಆಫ್ ಫಾರೆಸ್ಟ್.

ಹಾಸನ್ ಮುನಸಿಫ್ ಕೋರ್ಟು.

Original Suit No. 609 of 1891.

ವಾದಿ.	ಪ್ರತಿವಾದಿ.
ಮಂಜರಾಬಾದ್ ತಾಲ್ಲೂಕು ಬೆಳಗೋಡು ಕಲ್ಲುಮ ಠವಗುರುಪಾದ ದೇಶಿಕೇಂದ್ರರು	ಮಂಜರಾಬಾದ್ ತಾಲ್ಲೂಕು ಬಾಳಗೋಡಿನಲ್ಲಿರುವ ಪಟೇಲ್ ಮಲ್ಲೇಗವುಡ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಮಂಜರಾಬಾದ್ ತಾಲ್ಲೂಕು ಬಾಳಗೋಡು ಮಠದ ಮುದ್ವೀರ ದೇಶಿಕೇಂದ್ರರೆಂಬ ಗುರುಗಳ ಆಸ್ತಿಗೆ ವಾದಿಯೇ ವಾರಸ್‌ದಾರನೆಂತಲೂ ಅವುಗಳನ್ನು ಬರಮಾಡಿಕೊಡಬೇಕೆಂತಲೂ ಕೋರ್ಟಿನಲ್ಲಿ ದಾವಾ ತಂದಿರುವದ್ದರಿಂದ ಸದರಿಯವರ ಆಸ್ತಿಗೆ ಯಾರಾದರೂ ಹಕ್ಕುದಾರರಿದ್ದರೆ ಈ ಕೋರ್ಟು ರೂಬರೂ 1895ನೇ ಇಸವಿ ಮಾರ್ಚಿ ಮಾಹೆ 4ನೇ ದಿವಿ 11 ಘಂಟೆಗೆ ಹಾಜರಾಗಬೇಕು.

6—2—95ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನೂ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಮೀರ್‌ಹಂಜಾಹುಸೇನ್,
ಮುನಸಿಫ್.

ತಾರೀಖು 25—1—95.

1894ನೇ ಇಸವಿ ಡಿಸೆಂಬರ್ ತಾರೀಖು 16ನೇ ದಿನ ಶಿವಮೊಗ್ಗಾ ಡಿಸ್ಟ್ರಿಕ್ಟು ಶಿಕಾರಿಪುರ ತಾಲ್ಲೂಕು ತಡಸನಹಳ್ಳಿ ಗ್ರಾಮದ ಒಂದು ತೋಟದಲ್ಲಿ ತಡಸನಹಳ್ಳಿ ವಾಸಸ್ಥನಾದ ವಸ್ತ್ರರ ದಾಸ ಯೆಂಬುವನನ್ನು ಖೂನ್ ಮಾಡಿ ಫರಾರಿ ಆಗಿರುವ ಆಸಾಮಿಗಳ ಚಹರೆ ಪಟ್ಟಿ.

ಶಿಕಾರಿಪುರ ತಾಲ್ಲೂಕು ಕ್ರೈಂ ನಂಬರ್ 33—94—95.

I.	ಅಪರಾಧಿ ಹೆಸರು	ದುರ್ಗದವರ ಬಸಲಿಂಗ
	ತಂದೆ ಹೆಸರು	ನಾಗಣ್ಣ
	ವಾಸಸ್ಥಳ	ತಡಸನಹಳ್ಳಿ—ಶಿಕಾರಿಪುರ ತಾಲ್ಲೂಕು ಶಿವಮೊಗ್ಗಾ ಡಿಸ್ಟ್ರಿಕ್ಟು.
	ಜಾತಿ	ಹಿಂದೂ ಶಿವಾಚಾರ
	ವಯಸ್ಸು	30 ವರುಷ
	ಯತ್ರ	5 ಅಡಿ 3 ಅಂಗ್ಲ
	ಬಣ್ಣ	ಬಿಳಿ ಕೆಂಪು

ಗುರ್ತಿಸತಕ್ಕ ಇತರ ಗುರ್ತುಗಳು.—ಸಾಧಾರಣ ಜುಟ್ಟು ಬಿಟ್ಟಿದ್ದಾನೆ—ಸಂಣಕೆ ಮೀಸೆ ಬಿಟ್ಟಿದ್ದಾನೆ—ಅಗಲವಾದ ಮುಖ—ಹಣೆ ಉಬ್ಬು—ಸಾಧಾರಣ ಬಿಳಿ ಹಲ್ಲು—ಸಾಧಾರಣವಾದ ಆಳು—ಜಲ್ದಿ ನಡಿಗೆ—ಹೊಟ್ಟೇ ಮೇಲೆ ಕೂದಲು—ಕೊರಳಲ್ಲಿ ಕೆಂಪು ವಸ್ತ್ರದಿಂದ ದೇವರು ಕಟ್ಟಿಸ್ದಾನೆ—ಕೆಂಪು ಬಟ್ಟೆ ನೂಲಂಚಿನ ಧೋತ್ರ ಹೊದಿಯುತ್ತಾನೆ—ಬಿಳೇ ಕರಿ ನೂಲು ಕೂಡಿದ ಗಿಂಟನ ಅಂಗಿ ಧರಿಸುತ್ತಾನೆ—ಜಾಡಿ ಕಂಬಳಿ ಹೊದಿಯುತ್ತಾನೆ—ಸೊಂಟಕ್ಕೆ ಪಂಚೆ ಕಟ್ಟಿರುತ್ತಾನೆ—ಎರಡು ಕಿವಿಯಲ್ಲಿಯೂ ಭಂಗಾರದ ಹತ್ತೊಂಟಿ ಬಾವಲಿ ಸಹ ಇಧೆ—ಇವನ ಸಂಬಂಧೀಕರು ಶಿಕಾರಿಪುರ ತಾಲ್ಲೂಕಿನಲ್ಲಿಯೂ ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕಿನ ಸರಹದ್ದಿನಲ್ಲಿಯೂ ಇದ್ದಾರೆ.

II. ಹೆಸರು ಕಾನಕೆರೆಯಾನೆ ಕಿನ್ನರಿ ಬಸವಂತ.

ತಂದೆ ಹೆಸರು	..	ಶಿವಲಿಂಗಪ್ಪ
ವಾಸಸ್ಥಳ	..	ತಡಸನಹಳ್ಳಿ ಶಿಕಾರಿಪುರ ತಾಲ್ಲೂಕು ಶಿವಮೊಗ್ಗಾ ಡಿಸ್ಟ್ರಿಕ್ಟು.
ಜಾತಿ	..	ಹಿಂದೂ ಶಿವಾಚಾರ
ವಯಸ್ಸು	..	25 ವರುಷ
ಯತ್ರ	..	5 ಅಡಿ 4 ಅಂಗಲ
ಬಣ್ಣ	..	ಕೆಂಪು

ಗುರ್ತಿಸತಕ್ಕ ಗುರ್ತುಗಳು:—ಸಂಣಕ್ಕೆ ಮೀಸೆ ಕತ್ತರಿಸಿದ್ದಾನೆ—ದುಂಡುಮುಖ—ಅಗಲವಾದ ಹಣೆ—ದೃಢಾಂಗನಾದ ಆಳು—ಮೊಖದಮೇಲೆ ಮೈಲಿ ಕಲೆಗಳು ಇವೆ—ದಬ್ಬಣಕಾಟ ಬಣ್ಣದ ಅಂಚಿನ ಧೋತ್ರ ಹೊದಿಯುತ್ತಾನೆ—ಒಂದು ಕಂಬಳಿ ಇರುತ್ತೆ—ಸೊಂಟಕ್ಕೆ ನಡಕಟ್ಟು ಕಟ್ಟುತ್ತಾನೆ—ಸಂಬಂಧೀಕರು ಶಿವಮೊಗ್ಗಾ ಡಿಸ್ಟ್ರಿಕ್ಟು ಶಿಕಾರಿಪುರ ತಾಲ್ಲೂಕಿನಲ್ಲಿಯೂ ಮತ್ತು ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕಿನಲ್ಲಿಯೂ ಇರುತ್ತಾರೆ.

ವ. ರಾಮರಾವ್,
ಫ॥ ಪೊಲೀಸ್ ಅ॥ ಸೂಪರಿಂಟೆಂಡೆಂಟ್,
ಶಿವಮೊಗ್ಗಾ ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 21ನೇ ಜನವರಿ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸಿರುವ ರಿಜಿಸ್ಟರಾದ ದಸ್ತೈವಜುಗಳು ಯರಡ ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಿ ಆಫೀಸ್‌ಗಳಲ್ಲಿ ವಾರಸ್‌ದಾರರು ಹಾಜರಾಗಿ ವಾಪಸು ಪಡಿಯದೆ ನಿಂತು ಇರುತ್ತವೆ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಸದರೀ ತಂಸೂಕುಗಳನ್ನ ಹಾಜರ್‌ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ತಂಸೂಕುಗಳಿಗೆ ಬಾಧ್ಯತೆವುಳ್ಳವರಾಗಲಿ ಸಬ್ ರಿಜಿಸ್ಟ್ರಿ ಆಫೀಸ್‌ಗಳಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನು ವಾಪಸ್ ಪಡಿಯಪೇಕು ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ಸದರೀ ದಸ್ತೈವಜುಗಳು ನಾಶಪಡಿಸಲ್ಪಡುತ್ತವೆ.

ಸಬ್ ರಿಜಿಸ್ಟ್ರೀ ಆಫೀಸ್ ಹೆಸರು.	ಬುಕ್ಕು ಮತ್ತು ರಿಜಿಸ್ಟರ್ ನಂಬರು.	ತಂಸೂಕು ಬರದುಕೊಟ್ಟವರ ಹೆಸರು.	ತಂಸೂಕು ಬರಸಿಕೊಂಡವರ ಹೆಸರು.	ದಸ್ತೈವಜಿನ ತಾರೀಖು.	ರಿಜಿಸ್ಟ್ರು ತಾರೀಖು.	ದಸ್ತೈವಜಿನ ಸ್ವಭಾವ.
ತರೀಕೆರೆ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸ್.	1ನೇ ಬುಕ್ಕು 116 1892—93	ಹೊಸಹಳ್ಳಿ ಮೂಡಬಾಗಿಲ ನಿಂಗಣ್ಣ	ಹೊಸಹಳ್ಳಿ ಹೊಮ್ಮನಮಗ ಚನ್ನಮಲ್ಲಣ್ಣ	13—6—92	13—6—92	40 ಜಮೀನ್ ಕ್ರಯಪತ್ರ
	161 92—93	ಕರಡಿ ರಾಮನಹಳ್ಳಿ ಹನುಮಣ್ಣನಮಗ ಬೊಮ್ಮ	ಹೊಸಹಳ್ಳಿ ಗೌಡ ನಂಜಪ್ಪನಮಗ ಲಿಂಗಪ್ಪ	25-6-92	25-6-92	200 ಜಮೀನ್ ಕ್ರಯಪತ್ರ
	220 92—93	ಕುಳವಾಡಿ ಕರಿಯಣ್ಣನಮಗ ದಾಸಣ್ಣ	ಕುಳವಾಡಿ ಸಣ್ಣ ಹನುಮನಮಗ ಹನುಮ	29—7—92	6—8—92	25 ಹುಲ್ಲುಮನೆ ಕ್ರಯಪತ್ರ
	235 92—93	ಬೆಲಗೂರು ಶಟ್ರಮರಿಯಪ್ಪನ ಮಗ ರೇವಣ್ಣ	ಹಲಸಗೊಂದಿ ಗುರುಬಸಟ್ಟಿಮಗ ನಂಜಪ್ಪ	11—5—92	17-8-92	100 ಹುಲ್ಲುಮನೆ ಕ್ರಯಪತ್ರ
	398 92—93	ಗಂಗೂರು ಮರುಳಯ್ಯನಮಗ ಗುರಣ್ಣ	ಪುಟ್ಟಲಿಂಗಮ್ಮನ ಬಸಣ್ಣನ ಮಗ ಚಂದಯ್ಯ	10 11-92	9—12—92	40 ಜಮೀನ್ ಕ್ರಯಪತ್ರ
ಕೊಪ್ಪ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸ್	18 92—93	ಹೊಸಮನೆ ನಂಜಪ್ಪಯ್ಯನ ಮಗ ಸುಬ್ರಾಯ	ಮುನಿಯೂರ ಸುಬ್ರಾಯರ ಮಗ ಸಾಹುಕಾರ್ ಕೃಷ್ಣಪ್ಪ	15-12-91	15—4—92	99 ಜಮೀನ್ ಕ್ರಯಪತ್ರ
	146 92—93	ಕಾಗಿನಗೊಳಿ ತಮ್ಮಣ್ಣಗವುಡನಮಗ ರಾಮಣ್ಣ	ಸಂಪಿಗೆಮಠದ ರಾಘವೇಂದ್ರ ತೀರ್ಥಸ್ವಾಮಿಗಳವರು	2—7—92	3—9—92	ಸಾಲಿಯಾನಾ 26 ಖಂಡಗ ಭತ್ತ ಕೊಡತಕ್ಕ ಗೇಣಿ ಕರಾರು
ಯಡೆಹಳ್ಳಿ ಸಬ್ ರಿಜಿಸ್ಟ್ರಿ ಆಫೀಸ್	35 92—93	ಕಾನೂರಲ್ಲಿರುವ ಹಿರಿಯಣ್ಣಪ್ಪನ ಮಗ ರಾಮಚಂದ್ರಯ್ಯ	ಸೂಪರ್‌ವೈಜರ್ ಮೆ॥ ಸೂರನಾರಾಯಣರಾವ್	31—8—92	2—9—92	150 ಜಮೀನ್ ಕ್ರಯಪತ್ರ
ಶೃಂಗೇರಿ ಸಬ್ ರಿಜಿಸ್ಟ್ರಿ ಆಫೀಸ್	96 91—92	ಮರಾಟೆ ಹುವನ ಮಗ ಪುಟ್ಟ	ಹಳೆಮನೆ ತಮ್ಮಯ್ಯನಮಗ ರಾಮಪ್ಪ	7—1—92	12—1—92	250 ತೋರಡವು ಪತ್ರ
	97 91—92	ಗಿಡ್ಡಣ್ಣನ ಮಗ ಕಾಳಣ್ಣ	ಕಳಸಭಟ್ಟರಮಗ ವೆಂಕಟಭಟ್ಟ	24—9—91	22—1—92	192 ಬಾಗಾಯತು ಕ್ರಯಪತ್ರ

ಸಬ್ ರಿಜಿಸ್ಟ್ರೀ ಆಫಿಸ್ ಹೆಸರು.	ಬುಕ್ಕು ಮತ್ತು ರಿಜಸ್ಟರ್ ನಂಬರ್.	ತಂಸೂಕು ಬರದುಕೊಟ್ಟವರ ಹೆಸರು.	ತಂಸೂಕು ಬರಸಿಕೊಂಡವರ ಹೆಸರು.	ದಸ್ತೈವಜು ತಾರೀಖು.	ರಿಜಸ್ಟ್ರಾದ ತಾರೀಖು.	ದಸ್ತೈವಜಿನ ಸ್ವಭಾವ.
ಶ್ರಿಂಗೇರಿ ಸಬ್ ರಿಜಿಸ್ಟ್ರಿ ಆಫಿಸ್.	28 92—93	ನಂಜುಂಡಜೋಯಿಸರ ಹೆಂಡತಿ ಗಂಗಮ್ಮ	ಸೂಭಟ್ಟರಮಗ ಶಾಂಭಟ್ಟ	5—1—92	4—6—92	55—13—0 ಗೇಣಿ ಕರಾರು.
	58 92—93	ಮಲ್ಲಿಕಾರ್ಜನಶಾಸ್ತ್ರಿ ಮಗ ಸುಬ್ಬಾಶಾಸ್ತ್ರಿ	ಕ್ರಿಷ್ಣಯ್ಯನ ಮಗ ಕಾಳಯ್ಯ	13-8-92	24-8-92	64 ಗೇಣಿ ಕರಾರು.
	ಬುಕ್ಕುನಾಲ್ಕು 14 91—92	ಶುಕ್ರಶೆಟ್ಟಿಮಗ ಅಂಗಡಿ ಶೇಷಶೆಟ್ಟಿ	ಅಣ್ಣಯ್ಯಗವುಡನ ಮಗ ಹಿರಗಣ್ಣಗವುಡ	16-12-91	28-1—92	ಭತ್ತದ ಫಸಲ್ 175 ಕ್ರಯಪತ್ರ
ಚಿಕ್ಕಮಗಳೂರು ಸಬ್ ರಿಜಿಸ್ಟ್ರಿ ಆಫಿಸ್.	1ನೇ ಬುಕ್ಕು 127 92—93	ಕುರುಬ ಚಿಕ್ಕಣ್ಣನ ಮಗ ಚಿಕ್ಕಣ್ಣ	ಕುರುಬರ ಅಚಣ್ಣನ ಮಗ ದೊಡ್ಡಲಕ್ಕಣ್ಣ	11—5—92	11—5—92	10 ಜಮೀನ್ ಕ್ರಯಪತ್ರ.
	183 92—93	ಕಾಫಿಪ್ಲ್ಯಾಂಟರ್ ಮಹಮ್ಮದ್ ಬಾಖರ ಸಾಹೇಬ್	ತವಕಲ್ ಸಾಹೇಬರ ಮಗ ಖಾಸಿಂಸಾಹೇಬ್	3-6—92	4—6-92	150 ಕಾಫಿತೋಟ ಕ್ರಯಪತ್ರ.
	544 92—93	ವೀರಪ್ಪಯ್ಯನಮಗ ಶಿದ್ದಲಿಂಗಯ್ಯ	ಅಮೃತೇಗವುಡನ ಮಗ ಈರೇಗವುಡ	1-11-92	1-11-92	200 ರೀಡು ದಸ್ತೈವಜು

ಜೆ. ಡಬ್ಲ್ಯು. ನೈಟ್,
ರಿಜಿಸ್ಟ್ರಾರ್.

ನೋಟಿಫಿಕೇಷನ್.

ತಾರೀಖು 29ನೇ ಜನವರಿ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತರೀಕೆರೆ ಡಿಪೋದಲ್ಲಿ ಸಾಗವಾನಿ ರಿಜರ್ವ್ಡ್ ಸ್ಲೀಪರುಗಳೂ ಮತ್ತು ನಾಟಾಗಳೂ ಮತ್ತು ಸಾಗವಾನಿ ತುದಿ ತುಂಡುಗಳೂ ಶಿಕ್ಕುತ್ತವೆ ಮತ್ತು ಅವುಗಳು ಈ ಕೆಳಗೆ ನಮೂದಿಸಿ ಇರುವ ದರದ ಪ್ರಕಾರ ಮಾರಾಟ ಮಾಡಲ್ಪಡುತ್ತವೆ.

1.	ರಿಜರ್ವ್ಡ್ ಸ್ಲೀಪರುಗಳು ದರ 1ಕ್ಕೆ	..	..	..	1— 2—0
2.	ತುದಿ ತುಂಡುಗಳು 1 ಸಲೆ ಅಡಿಗೆ	..	..	..	0—10—0
3.	ರಿಜರ್ವ್ಡ್ ನಾಟಾಗಳು ಡಿಟೋ	..	..	..	0—12—0

ಬಿ. ಶ್ರೀನಿವಾಸರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಪ್ರಕಟನೆ.

ವಿನಯ ಪೂರ್ವಕ ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ನನ್ನಲ್ಲಿ ನೌಕರಿಯಲ್ಲಿ ಇದ್ದು ಬಿಟ್ಟವನಾದ ಕನ್ನಡಾ ಜಿಲ್ಲಾ, ಬೆಳ್ಳಿಹಾಡಿ ಶೀನಪ್ಪ ಯಾನೆ ಶ್ರೀನಿವಾಸರಾಯನೆಂಬವನು ತನ್ನ ಸಹಾಯಕ್ಕೆ ಕುಕ್ಕೆಲಾಯದ ಶಾನುಭೋಗ ಸುಬ್ಬರಾಯನೆಂಬುವನನ್ನು ಸೇರಿಸಿಕೊಂಡು ನನಗೆ ಅನ್ಯಾಯನಷ್ಟ ವುಂಟುಮಾಡಬೇಕೆಂದು ಅಪ್ರಮಾಣಿಕ ಇರಾದೆನಿಂ ನನ್ನ ಹೆಸರಿನಿಂದ ಕ್ರತಕದ ಹುಂಡಿಯನ್ನು ಲೆಕ್ಕದ ಪಟ್ಟಿಯನ್ನು ಸಹ ಬರದು ಅವುಗಳಿಗೆ (ಕೊಪ್ಪ ತಾಲ್ಲೂಕು ಹಾ॥ ಯ॥ ಬಿ) ಯಂದು ಕನ್ನಡ ಅಕ್ಷರಗಳು ಯಿರುವ ನನ್ನ ಹೆಸರಿನ ಮೊಹರಿನಂತೆ ಛಾಪಾವತ್ತಿ ಹುಂಡಿಯನ್ನು ಬಿಕ್ರಿಮಾಡಿ ತೀರ್ಥಹಳ್ಳಿ ಪ್ಯಾಟೆಯಲ್ಲಿ ಜವಳಿ ಛರ್ತಿಯಿಂದ ನೈದ ಸಂದರ್ಭದಲ್ಲಿ ಫಿರ್ಯಾದು ನಡದು ಕ್ರಮಪಡುವದೆ ಮೊಕದ್ದಮೆಯು ಬಾಕಿಯಲ್ಲಿ ಯಿರುತ್ತೆಯಲ್ಲದೆ ಸದ್ರಿ ಆಸಾಮಿಗಳು ಪೋಲೀಸಿನವರಿಗೆ ಸಿಕ್ಕದೆ

ಫರಾರಿಯಾಗಿರುತ್ತಾರೆ, ಮೇಲ್ಕಂಡ ಹುಂಡಿಯು ಲೆಖ್ಖದ ಪಟ್ಟಿ ಸಹ ಮಾಮೂಲ್ ಪದ್ಧತಿಯಾ ಆಚರಣೆಯಂತೆ ನನ್ನ ವೊ ನನ್ನ ಮಗ ಶಂಕರಭಟ್ಟನ ಖುದ್ದು ಅಕ್ಷರದ ಬರವಣಿಗೆ ಮತ್ತು ರುಜು ಇರತಕ್ಕದ್ದಲ್ಲಾ ಬರೀ ಕೃತಕದ ಯಾ ಮೋಸಗೊಳಿಸಿ ಮಾಡಿದ ಮೊಹರನ್ನೆ ಯಿತರರು ನಂಬಿ ಈ ರೀತಿ ಗಲಾಟೆನಡದಿರುತ್ತೆ ಆದ್ದರಿಂದಾ ಈಗ್ಯೆ ಸುಮ್ಮನೆ ಇದ್ದರೆ ಮುಂದೂನು ಪುಂಡುಜನಗಳಿಂದ ಇಂಥಾ ಮೋಸ ಕೃತ್ಯಗಳು ಹೇರಳವಾಗಿ ನಡಿಯುವದಕ್ಕೆ ಆಸ್ಪದವಾಗುವದೆಂದು ಯೆಣಿಸಿ ನನ್ನಲ್ಲಿ ಮೇಲೆ ಹೇಳಿದಂತೆ ವಿಳಾಸ ಇತರಕ್ಕ ನನ್ನ ಹೆಸರಿನ ರಬ್ಬರ ಸೀಲನ್ನು ತಾ॥ 1—1—95ರ ಲಾಗಾಯತು ವಜಾಮಾಡಿರುತ್ತೇನೆ, ಇತಃಪರ ನನ್ನ ಯಾ ನನ್ನಮಗ ಶಂಕರಭಟ್ಟನ ಖುದ್ದು ಅಕ್ಷರದ ಬರವಣಿಗೆ ಸೈನು ಇರತಕ್ಕ ಲೆಖ್ಖದಪಟ್ಟಿ ಹುಂಡಿ ಕಾಗದ ಮುಂತಾದವುಗಳು ಕ್ರಮವಾಗಿ ಇರುವದನ್ನ ವಿಚಾರಿಸಿ ತಿಳದು. ಅಂಥಾವುಗಳನ್ನ ಮಾತ್ರ ನಮ್ಮದೆಂಬ ಭಾವಿಶಿ ಅಂಗೀಕರಿಸಬೇಕೇ ಹೊರ್ತು ಮೇಲ್ಕಂಡಂತೆ ಮೊಹರುನಿಸಿ ಬರುವ ಹುಂಡಿ ಲೆಖ್ಖದಪಟ್ಟಿ ಕಾಗದ ಮುಂತಾದವುಗಳನ್ನು ನನ್ನದೆಂತ ಯಾರೊಬ್ಬರೂ ನಂಬಿ ಖಂಡಿತವಾಗಿಯು, ಅಂಗೀಕರಿಸಕೂಡದೆಂದು ಇದರಿಂದ ತಿಳಿಯಪಡಿಸಿ ಇರುತ್ತೇನೆ.

ತಾರೀಖು 1895ನೇ ಇಸವಿ
ಹಾಲಮತ್ತೂರು,

ರುಜು ಭಿಷ್ಣುಭಟ್ಟ.

ಮಿಶ್ರವಿಲ್ಲದ ಸಲ್ಫೇಟ್ ಆಫ್ ಕ್ವಿನಿಯನ್ ಯಂಬ ಔಷಧ.

ಬಂಗಾಳಾ ಗವರ್ನ್ಮೆಂಟಿನ ಶಿಂಕೋನಾ ಪ್ಲ್ಯಾಂಟೇಷನಿನಲ್ಲಿ ತಯಾರ್ಮಾಡಲ್ಪಟ್ಟದ್ದು.

ಈ ಕ್ವಿನಿಯನ್ನಿನ ಖರೀದಿಯು ಇದರಡಿ ಕಂಡಂತೆ ಇರುವದು.

ಪೌಂಡ್ ವೊಳ್ಳೆ ಡಬ್ಬಿ 1ಕ್ಕೆ	ರೂ. 16	ಅಥವಾ ಟಪ್ಪಾಲ್ ಹಾಸಲ್ ದೇಖೀಲ್ ರೂ.		..	16-12-0
$\frac{1}{2}$ ಡಿಟೋ	ರೂ. 8	ಡಿಟೋ	..	..	8- 8-0
$\frac{1}{4}$ ಡಿಟೋ	ರೂ. 4	ಡಿಟೋ	..	..	4- 8-0

ಪರೀಕ್ಷೆಯಲ್ಲಿ ಈ ಕ್ವಿನಿಯನ್ ಕೇವಲ ಶುದ್ಧವಾದದ್ದೆಂಬದಾಗಿ ಕಂಡುಬಂದಿರುತ್ತೆ; ಮತ್ತು ಕೀಳ್ ತರಹೇದ ಕಿಲಬು ಪದಾರ್ಥವನ್ನು ಸಿಂಕೋನಾ ಸಂಬಂಧವಾದ ಕೆಟ್ಟ ಭಸ್ಮಗಳು ಮನಃಪೂರ್ತಿಯಾಗಿ ಮಿಶ್ರ ಮಾಡಲ್ಪಡದೆಯೂ ಖಾತರ್ ಮಾಡಲ್ಪಟ್ಟಿರುತ್ತೆ. ಇದರನ್ನ ಗವರ್ನ್ಮೆಂಟ್ ಆಫಿಸರರುಗಳಿಗೆ ನಗದ್ ಖರೀದಿಗೆ ಮಾತ್ರ ಕಲ್ಕತ್ತಾ ಬಳಿಯಣ ಸೀಬ್ ಪುರದಲ್ಲಿರುವ ಬೊಟಾನಿಕಲ್ ಗಾರ್ಡನ್ ಯಾ ತೋಟದ ಸೂಪರಿಂಟೆಂಡೆಂಟರವರಿಂದ ಸರಬರಾಯಿ ಮಾಡಲ್ಪಡುವದು. ಬೇರೆ ಬಣ್ಣದ್ದಾಗಲಿ ಅಥವಾ ಕಪ್ಪಿನ ಮೇಲೆ ಮಿಶ್ರಬಣ್ಣದ್ದಾಗಲಿ ಪಡೆಯಬಹುದು.

MYSORE GOVERNMENT CENTRAL PRESS, BANGALORE.—1895.

ಮೈಸೂರ ಗೆಜೆಟ್.

ನಂ. 6] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಫಿಬ್ರವರಿ ತಾ|| 21, ಸನ್ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‍ಟ್ರೋಲರವರು, ಪಬ್ಲಿಕ ವರ್ಕ್ಸ ಆಫಿಸರ್ಗಳು, ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ಸ ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್ಗಳು ವಗೈರೆ, ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್.

ಮೈಸೂರು ಶೀಮೆಯ ಮಹಾರಾಜರವರಾದ ಶ್ರೀಮನ್ ಮಹಾರಾಜಾ ಶ್ರೀ ಕೃಷ್ಣರಾಜ ವಡೆಯರ್ ಬಹದ್ದೂರವರ ಬಾಲ್ಯಾವಸ್ಥೆಯಲ್ಲಿ ಮೈಸೂರು ರಾಜ್ಯದ ಆಡಳಿತವನ್ನು ಶ್ರೀಮನ್ಮಹಾರಾಣೀ ವಾಣೀವಿಲಾಸ ಸನ್ನಿಧಾನದ ಕೆಂಪನಂಜಮ್ಮಣ್ಣಿ ಸಿ. ಐ. ಯವರು ರೀಜೆಂಟಾಗಿಯೂ, ಮೂರು ಮೆಂಬರ್ಗಳುಳ್ಳ ಕೌನ್ಸಿಲಿನ ಕುಮ್ಮಕಿನಿಂದ ದಿವಾನರೂ ಸಹ ನಡಿಸತಕ್ಕದ್ದೆಂತಲೂ, ಕೌನ್ಸಿಲ್ಗೆ ದಿವಾನರು ಪ್ರಸಿಡೆಂಟರಾಗಿರತಕ್ಕದ್ದೆಂತಲೂ, ಘನವನ್ನು ಹೊಂದಿದ ವೈಸರಾಯ್ ಮತ್ತು ಗವರ್ನರ್ ಜನರಲ್ ಆಫ್ ಇಂಡ್ಯ ಇನ್ ಕೌನ್ಸಿಲ್ ಯವರು ತಿಳಿಯಪಡಿಸಿರುತ್ತಾರಾಗಿ, ಶ್ರೀಮನ್ಮಹಾರಾಣೀ ರೀಜೆಂಟರವರು ಇಂಡ್ಯಾ ಸರ್ಕಾರದ ಒಪ್ಪಿಕೆಯನ್ನು ಪಡೆದು—

1. ಮೈಸೂರು ಚೀಫ್ ಕೋರ್ಟ್ ಚೀಫ್ ಜಡ್ಜ್ ರಾಜಧರ್ಮ ಪ್ರವೀಣ ಮೆಸ್ಟರ್ ಟಿ. ಆರ್. ಎ. ತಂಬುಶೆಟ್ಟಿಯವರನ್ನೂ,
2. ಮೈಸೂರ್ ಚೀಫ್ ಕೋರ್ಟ್ ಜಡ್ಜ್ ಮೆಸ್ಟರ್ ಪಿ. ಯನ್. ಕೃಷ್ಣಮೂರ್ತಿಯವರನ್ನೂ,
3. ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಖಾನ್ ಬಹದ್ದೂರ್ ಮೆಸ್ಟರ್ ಅಬ್ದುಲ್‌ರಹಿಮಾನ್ಯವರನ್ನೂ,

ಸದರೀ ಕೌನ್ಸಿಲ್ ಮೆಂಬರ್‌ಗಳಾಗಿರಲು ನೇಮಿಸಿರುತ್ತಾರೆ. ಇವರುಗಳು ಮೂರು ವರುಷದವರಿಗೆ ಕೌನ್ಸಿಲ್ ಮೆಂಬರುಗಳಾಗಿರತಕ್ಕದ್ದು. ಪರಂತು ಆ ಅವಧಿ ಕಳದ ನಂತರ ಪುನಃ ಅವರನ್ನು ನೇಮಿಸಬಹುದಾಗಿರುತ್ತೆ. ಈಗ ಅವರುಗಳಿಗೆ ಇರತಕ ಕೆಲಸಗಳಿಂದ ನಿವರ್ತರಾದನಂತರ, ಮೇಲ್ಕಂಡ ಮೇರಿಗೆ ನೇಮಿಸಲ್ಪಟ್ಟ 2ನೇ 3ನೇ ಮೆಂಬರ್‌ಗಳು ಅವರುಗಳ ಕೆಲಸದ ಮೇಲೆ ಹಾಜರಾಗತಕ್ಕವೆಂತ ಶ್ರೀಮನ್ಮಹಾರಾಣೀ ರೀಜೆಂಟರವರು ಅಪ್ಪಣೆ ಮಾಡಿರುತ್ತಾರೆ. ಮಿಸ್ಟರ್ ಶಂಭುಶೆಟ್ಟಿಯವರು ಚೀಫ್ ಜಡ್ಜ್ ಕೆಲಸದಿಂದ ನಿವರ್ತರಾಗುವವರೆಗೂ ಕೌನ್ಸಿಲ್ ಕೆಲಸಗಳ ಜೊತೆಗೆ ಚೀಫ್ ಜಡ್ಜಿ ಕೆಲಸವನ್ನು ಮಾಡುತ್ತಾ ಬರುವದು.

II. ಇದರಡಿ ವಿವರಿಸಿರುವ ರೂಲ್‌ಗಳು ಸದರೀ ಕೌನ್ಸಿಲ್ ಕೆಲಸವು ನಡಿಯತಕ್ಕ ಬಗ್ಗೆ ಇಂಡ್ಯಾ ಸರ್ಕಾರದ ಒಪ್ಪಿಕೆಯಿಂದ ಮಾಡಲ್ಪಟ್ಟಿವೆ :—

1. ರಾಜ್ಯದ ಕೆಲಸವನ್ನು ತಮಿಗೂ ಮೂವರು ಕೌನ್ಸಿಲರಿಗೂ ಮಧ್ಯೆ ಇಲಾಖೆವಾರ್ ದಿವಾನರು ಕೌನ್ಸಿಲ್‌ನಲ್ಲಿ ಹಂಚುವದು. ಸದರೀ ಹಂಚಿಕೆಯು ಕೌನ್ಸಿಲ್ ನಡವಳಿಕೆಗಳ ಮಿನಿಟ್‌ನಲ್ಲಿ ರಿಕಾರ್ಡ್ ಮಾಡಲ್ಪಡತಕ್ಕದ್ದು.

2. ಪ್ರತಿ ಇಲಾಖೆಯ ಚಾರ್ಜಿನಲ್ಲಿರುವ ಮೆಂಬರು ಆ ಇಲಾಖೆ ಬಾಬತು ಎಲ್ಲಾ ಸಾಧಾರಣ ಕೆಲಸವನ್ನು ಅವರೇ ಫೈಸಲ್ ಮಾಡಿ ಹುಕುಂಗಳನ್ನು ಮೈಸೂರು ಸರ್ಕಾರದ ಹೆಸರಿನಲ್ಲಿ ಕೊಡತಕ್ಕದ್ದು; ಸಂದೇಹಾಸ್ಪದವಾದ, ಸೂಕ್ಷ್ಮವಾದ, ಅಥವ ಮುಖ್ಯವಾದ ಸಂಗತಿಗಳನ್ನು ದಿವಾನರಿಗೆ ರಿಫರ್ ಮಾಡತಕ್ಕದ್ದು.

3. ಆ ಮೇರಿಗೆ ರಿಫರ್ ಮಾಡಲ್ಪಟ್ಟ ಸಂಗತಿಗಳಲ್ಲಿ ಆಖೈರ್ ಹುಕುಂಗಳನ್ನು 2ನೇ ರೂಲ್‌ನಲ್ಲಿ ಕಂಡ ಮೇರಿಗೆ ಕೊಡತಕ್ಕದ್ದೇ ಅಥವ ಸದರೀ ಸಂಗತಿಯನ್ನು ಕೌನ್ಸಿಲ್‌ಗೆ ರಿಫರ್ ಮಾಡತಕ್ಕದ್ದೇ ಎಂಬುವ ವಿಚಾರವು ದಿವಾನರಿಂದ ನಿರ್ಣಯಿಸಲ್ಪಡುವದು.

ಸಂಗತಿಯು ಮುಂದಿನ ರೂಲ್ ಮೇರಿಗೆ ಅವಶ್ಯಕವಾಗಿ ಕೌನ್ಸಿಲ್‌ಗೆ ರಿಫರ್ ಮಾಡಲ್ಪಡತಕ್ಕಂಥಾದ್ದಾಗಿದ್ದರೆ ದಿವಾನರು ಅದನ್ನು ಆ ಮೇರಿಗೆ ರಿಫರ್ ಮಾಡತಕ್ಕದ್ದಾಗಿರುತ್ತೆ. ಆದರೆ ದಿವಾನರು, ಯಾವ ಸಂಗತಿಯನ್ನಾಗಲಿ, ಕೌನ್ಸಿಲ್‌ಗೆ ರಿಫರ್ ಮಾಡುವದಕ್ಕೆ ಈ ರೂಲ್‌ನಲ್ಲಿ ಮೇಲೆ ಹೇಳಿರುವದರಿಂದ ಅಡ್ಡಿಯಿಲ್ಲವು. ಮತ್ತು ಅವರೂ ರಿಫರ್ ಮಾಡುವ ಮೆಂಬರೂ ಒಂದೆ ಅಭಿಪ್ರಾಯಪಡುವದಕ್ಕಾಗದೆ ಇದ್ದರೆ, ಹಾಗೆ ಭಿನ್ನಾಭಿಪ್ರಾಯಕ್ಕೊಳಗಾದ ಸಂಗತಿಯು ಕೌನ್ಸಿಲ್ ಮುಂದೆ ಇಡಲ್ಪಡತಕ್ಕದ್ದು.

4. ಶ್ರೀಮನ್ಮಹಾರಾಜರವರ 1881ನೇ ಇಸವಿ ಜುಲೈ 8ನೇ ಮುರ್ಕುಂ ನಂಬರ್ 104ನೇ ಇಸ್ತಿಹಾರ್‌ನಲ್ಲಿ ಉದಹರಿಸಿರುವ ಸಂಗತಿಗಳು ಇದುವರಗಿನಂತೆ ಕೌನ್ಸಿಲ್ ಮುಂದೆ ಇಡಲ್ಪಡತಕ್ಕದ್ದು.

5. ದಿವಾನ್ ಯಿನ್ ಕೌನ್ಸಿಲ್‌ಯವರ ಫೈಸಲ್‌ಗಳು ಜಾರೀಗೆ ತರಲ್ಪಡತಕ್ಕದ್ದು. ಪರಂತು ದಿವಾನರು ಕೌನ್ಸಿಲಿನ ಹೆಚ್ಚು ಸಂಖೆಯವರ ಅಭಿಪ್ರಾಯದಲ್ಲಿ ಅನುಮೋದಿಸದಿರುವ ಪಕ್ಷದಲ್ಲಿ ಅವರು ಸದರೀ ಸಂಗತಿಯನ್ನು ಶ್ರೀಮನ್ಮಹಾರಾಣೀ ರೀಜೆಂಟರವರ ಆಖೈರ್ ಹುಕುಂ ಬಗ್ಗೆ ರಿಫರ್ ಮಾಡಬಹುದು.

ಆದರೆ ಈ ರೂಲ್‌ನಲ್ಲಿ ಹೇಳಿರುವ ಯಾವ ಸಂಗತಿಯೂ, ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರಿನ 22ನೇ ಆರ್ಟಿಕಲ್‌ನಲ್ಲಿ ಹೇಳಿರುವದಕ್ಕೆ ವಿರೋಧವಾಗಿರತಕ್ಕದ್ದಲ್ಲವು. ಮತ್ತು ಇಂಡ್ಯ ಸರ್ಕಾರಕ್ಕೆ ಬರಿಯಬೇಕಾದಂಥ ಸಂಗತಿಗಳನ್ನು ರೆಸಿಡೆಂಟರಿಗೆ ರಿಫರ್ ಮಾಡತಕ್ಕದ್ದು ದಿವಾನರ ಕರ್ತವ್ಯವಾಗಿರುತ್ತೆ. ಶ್ರೀಮನ್ಮಹಾರಾಣೀ ರೀಜೆಂಟರವರಿಂದಲಾಗಲಿ ದಿವಾನರಿಂದಲಾಗಲಿ ರೆಸಿಡೆಂಟರಿಗೆ ರಿಫರ್ ಮಾಡಲ್ಪಟ್ಟ ಯಾವ ಸಂಗತಿಯಲ್ಲಿಯೂ ರೆಸಿಡೆಂಟರ ಸಲಹೆಗೆ ವಿರೋಧವಾಗಿ ಯಾವ ಹುಕುಮನ್ನೂ ಕೊಡಕೂಡದು.

6. ಒಂದು ಇಲಾಖೆಯ ಚಾರ್ಜಿನಲ್ಲಿರುವ ಮೆಂಬರಿಂದ ಆಖೈರ್ ಹುಕುಂ ಕೊಡಲ್ಪಟ್ಟಿದ್ದಾಗ್ಯೂ ಹಾಗೆ ಫೈಸಲ್ಮಾಡಲ್ಪಟ್ಟ ಸಂಗತಿಯನ್ನು ಕೌನ್ಸಿಲ್‌ನಲ್ಲಿ ಪುನರಾಲೋಚನೆಗೆ ತರತಕ್ಕ ಬಗ್ಗೆ, 1ನೇ ರೂಲ್ ಮೇರಿಗೆ ಹಂಚಿಕೊಡಲ್ಪಟ್ಟಂಥ ಯಾವ ಇಲಾಖೆಗಳಿಂದಲಾಗಲಿ ಪಬ್ಲಿಕ್ ರಿಕಾರ್ಡುಗಳನ್ನು ಹಾಜರ್ಪಡಿಸಿಕೊಳ್ಳುವದಕ್ಕೆ ದಿವಾನರಿಗೆ ಹಕ್ಕಿರುತ್ತೆ.

7. ಶ್ರೀಮನ್ಮಹಾರಾಣೀ ರೀಜೆಂಟರವರ ಇಸ್ತಿಹಾರ್ ಮೂಲಕ ಕ್ಲಿಪ್ತ ಮಾಡಲ್ಪಡುವ ರೀಸೆಸ್ ಕಾಲಗಳಲ್ಲಿ ವಿನಹ, ಯಾವದಾದರೂ ವಿಶೇಷ ಕಾರಣದಿಂದ ರೀಜೆಂಟ್‌ರವರು ಕೌನ್ಸಿಲ್ ಸೇರುವದು ಅವಶ್ಯಕ ವಿಲ್ಲವೆಂದು ಹೇಳಿದ ಹೊರ್ತು, ಕೌನ್ಸಿಲ್ ವಾರಕ್ಕೊಂದಾವರ್ತಿ ಕ್ರಮವಾಗಿ ಸೇರತಕ್ಕದ್ದು. ಶ್ರೀಮನ್ಮಹಾರಾಣೀ ರೀಜೆಂಟ್‌ರವರಾಗಲಿ ದಿವಾನರಾಗಲಿ ಅವರಿಗೆ ಅವಶ್ಯಕವೆಂದು ಕಂಡಾಗ ಕೌನ್ಸಿಲನ್ನು ಕರೆಸಬಹುದು.

8. ಕೌನ್ಸಿಲ್ ಮೀಟಿಂಗ್‌ಗಳಲ್ಲಿ ನಡವಳಿಕೆಯು, ದಿವಾನರಿಂದ, ಅವರ ಗೈರ್ ಹಾಜರಿಯಲ್ಲಿ, ಹಾಜರಿರುವ ಸೀನಿಯರ್ ಕೌನ್ಸಿಲರ್‌ಯವರಿಂದ, ಕ್ರಮಪಡಿಸಲ್ಪಡತಕ್ಕದ್ದು.

9. ಕೌನ್ಸಿಲ್‌ಗೆ ರಿಫರ್ ಮಾಡಲ್ಪಟ್ಟ ಪ್ರತಿ ಸಂಗತಿಯಲ್ಲಿಯೂ ಕೌನ್ಸಿಲ್ ಫೈಸಲ್‌ಗಳು ಒಂದು ಜರ್ನಲ್ ಆಫ್ ಪ್ರೊಸೀಡಿಂಗ್ಸ್ ಎಂಬ ಬುಕ್ಕಿನಲ್ಲಿ ರಿಕಾರ್ಡ್ ಮಾಡತಕ್ಕದ್ದು. ಈ ಜರ್ನಲ್ ನಕಲನ್ನು ಏಕಕಾಲದಲ್ಲಿ ಶ್ರೀಮನ್ಮಹಾರಾಣೀ ರೀಜೆಂಟರವರಿಗೂ ರೆಸಿಡೆಂಟರಿಗೂ ಕಳುಹಿಸತಕ್ಕದ್ದು. ಯಾವ ಒಬ್ಬ ಮೆಂಬರಾಗಲಿ ಯಾವ ಸಂಗತಿಯಲ್ಲಾಗಲಿ ತಮ್ಮ ಭಿನ್ನಾಭಿಪ್ರಾಯದ ಮಿನಿಟಿನ ಗೋಷ್ವಾರೆಯನ್ನು ರಿಕಾರ್ಡ್ ಮಾಡಬೇಕೆಂತ ಹೇಳಬಹುದು.

III. ಅಪೀಲ್ ಮೂಲಕವಾಗಲಿ ಮೈಸೂರ್ ಲ್ಯಾಂಡ್ ರೆವಿನ್ಯೂಕೋಡ್ 217ನೇ ಸೆಕ್ಷನ್ ಪ್ರಕಾರವಿರುವ ಅಧಿಕಾರವನ್ನು ಚಲಾಯಿಸುವದರಮೂಲಕವಾಗಲಿ ಸರ್ಕಾರದ ಫೈಸಲ್ ಬಗ್ಗೆ ಬರುವ ಸಂಗತಿಗಳ ಹಿಯರಿಂಗ್ ಮತ್ತು ವ್ಯವಸ್ಥೆ ಬಗ್ಗೆ 1889ನೇ ಇಸವಿ ಮೇ 17ನೇ ಮತ್ತು 1893ನೇ ಇಸವಿ ಜುಲೈ 4ನೇ ತಾರೀಖುಗಳಲ್ಲಿ, ಆಳಿದ ಶ್ರೀಮನ್ಮಹಾರಾಜರವರಿಂದ ಏರ್ಪಡಿಸಲ್ಪಟ್ಟಿರುವ ರೂಲ್‌ಗಳು ಅವಶ್ಯಕವಾದ ಬದಲಾವಣೆ ಮಾಡಲ್ಪಟ್ಟು ಅಯಿಂದ ಫಾಯಿಷ್ ಮಾಡಲ್ಪಡುವವು.

ತಾರೀಖು 18ನೇ ಫೆಬ್ರವರಿ 1895.

ರಾಜಮಂತ್ರ ಪ್ರವೀಣ ಮೆಸ್ಟರ್ ಚಂಚಲರಾವ್ ಸಿ. ಐ. ಈ. ಯವರು ಒಪ್ಪಿಸಿದ ರಾಜೀನಾಮೆಯನ್ನು ಅಂಗೀಕರಿಸುವದರಲ್ಲಿ, ಮೆಸ್ಟರ್ ಚಂಚಲರಾಯರು ಶ್ರೀಮನ್ ಮಹಾರಾಜರವರ ಕೌನ್ಸಿಲ್ ಮೆಂಬರಾಗಿ ಮೈಸೂರ್ ಸಂಸ್ಥಾನಕ್ಕೋಸ್ಕರ ಮಾಡಿದ ಶ್ಲಾಘ್ಯವಾದ ಕಾರ್ಯಗಳ ವಿಷಯದಲ್ಲಿ ಆಳಿದ ಶ್ರೀಮನ್ ಮಹಾರಾಜರವರಿಗೆ ಉಂಟಾಗಿದ್ದ ಉದಾರಾಭಿಪ್ರಾಯವನ್ನ ಶ್ರೀಮನ್ ಮಹಾರಾಣಿ ರೀಜೆಂಟ್ರವರು ಈ ಮೂಲಕ ಪ್ರದರ್ಶನ ಪಡಿಸುತ್ತಾರೆ. ಮೆಸ್ಟರ್ ಚಂಚಲರಾಯರ ಪ್ರಕೃಷ್ಟವಾದ ಸಾಮರ್ಥ್ಯದಿಂದಲೂ ವಿಶೇಷವಾದ ಅನುಭವದಿಂದಲೂ ಈ ಸಂಸ್ಥಾನಕ್ಕೆ ಆರು ವರುಷಗಳಿಂದ ಅಮೌಲ್ಯವಾದ ಸಹಾಯ ವುಂಟಾಗಿತ್ತು. ಆರೋಗ್ಯಭಾಗ್ಯವನ್ನು ಕಾಪಾಡಿಕೊಳ್ಳುವದಕ್ಕಾಗಿ ಅವರು ಈ ಸಂಸ್ಥಾನದ ಕೆಲಸದಿಂದ ವಿಶ್ರಾಂತಿಯಂ ಪಡೆಯಬೇಕಾಗಿ ಬಂದದ್ದಕ್ಕೆ ಶ್ರೀಮನ್ ಮಹಾರಾಣಿಯವರು ವಿಷಾದಪಡುತ್ತಾರೆ.

ಬಮೋಜೀಬ್ ಹುಕುಂ,

ಬೆಂಗಳೂರು,
18ನೇ ಫೆಬ್ರವರಿ 1895.

ಕೆ. ಶೇಷಾದ್ರಿ ಅಯ್ಯರ್,
ಮೈಸೂರ್ ದಿವಾನ್.

ತಾರೀಖು 20ನೇ ಡಿಸೆಂಬರ್ 1894.

ನಂ. 10510.—ಆರ್. ಎಫ್. 147 92.—ಮೈಸೂರ್ ಶ್ರೀಮನ್ ಮಹಾರಾಜಾ ಸರ್ಕಾರದವರು ಆಜ್ಞಾಪಿಸುವದೇನಂದರೆ, ಮೈಸೂರ್ ಲ್ಯಾಂಡ್ ರೆವಿನ್ಯೂ Xನೇ ರೂಲ್ 4ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರುವದನ್ನು ಉಪಯೋಗಿಸತಕ್ಕದ್ದು:—

"4. ಲೋಕಲ್‌ಫಂಡು ಇಲಾಖೆಯವರು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮತ್ತು ಇತರ ಸರ್ಕಾರದ ಇಲಾಖೆಯವರು, ವ ಮ್ಯುನಿಸಿಪಾಲಿಟಿಯವರು ಅಥವಾ ಅವರುಗಳ ಕಂಟ್ರಾಕ್ಟುದಾರರು ಹಾಗೆ ಮಾಡುವದಕ್ಕೆ ವಿಶೇಷತಃ ಅಧಿಕಾರ ಕೊಡಲ್ಪಟ್ಟರೆ ಅವರು ಗವರ್ನಮೆಂಟಿನಿಂದ ವಿಧಿಸೋಣಾಗುವ ಅಂಥಾ ರಾಜಪಾಲು ಮೊಬಲಗನ್ನು ತೆರುವದಕ್ಕೆ ವಳಪಟ್ಟು ನದಿಗಳ, ನಾಲಾಗಳ ಅಥವಾ ಸರ್ಕಾರ್ ಕೆರೆಗಳ ಅಂಗಳಗಳಿಂದಲಾಗಲಿ, ಸರ್ಕಾರ್ ಕೆಲಸಗಳಿಗೆ ಪ್ರಜೆಗಳ ವುಪಯೋಗಾರ್ಥವಾದ ವಿಶೇಷ ಕೆಲಸಗಳಿಗೋಸ್ಕರ ಗೊತ್ತು ಮಾಡಲ್ಪಡದಂಥಾ ಆಕಾರ ಕಾಣದ ಅಥವಾ ಹಿಡುವಳೀಲಿ ಯಿಲ್ಲದ ಜಮೀನಿನಿಂದಲಾಗಲಿ ಮಣ್ಣು, ಕಲ್ಲು, ಕಂಕರ್, ಮರಳು, ಮರಂಮತ್ತು ಇತರ ಪದಾರ್ಥಗಳನ್ನು ಸಾಗಿಸಬಹುದು; ಪರಂತು ಡೆಪ್ಯುಟಿ ಕಮ್ಮಿಷನರವರು ಸದರೀ ಪದಾರ್ಥಗಳು ಈ ರೂಲಿಗನುಸಾರವಾಗಿ ಗೊತ್ತಾದ ಪ್ರದೇಶಗಳಿಂದ ಸಾಗಿಸಲ್ಪಡಕೂಡದೆಂದು ನಿಷೇಧಿಸಬಹುದು. ಅಥವಾ ಅವರಿಗೆ ಯುಕ್ತವಾಗಿ ಕಾಣಬರುವ ಷರತ್ತುಗಳನ್ನು ವಿಧಿಸಬಹುದು."

ತಾರೀಖು 31ನೇ ಜನವರಿ 1895.

ನಂ. 11956.—ಜೆ. 674.—1870ನೇ ಇಸವಿಯ VIIನೇ ನಂಬರ್ ಕೋರ್ಟ್‌ಫೀಸ್ ಆಕ್ಟಿನ 35ನೇ ಸೆಕ್ಷನಿನಿಂದ ಉಂಟುಮಾಡಲ್ಪಟ್ಟಿರುವ ಅಧಿಕಾರಗಳನ್ನು ಚಲಾಯಿಸಿ ಘನವನ್ನೈದ ಶ್ರೀಮನ್ ಮಹಾರಾಜಾ ಸರ್ಕಾರದವರು ಇದರಿಂದ ಅಜ್ಞಾಪಿಸುತಾ [illegible]ನಂದರೆ:—

1882ನೇ ಇಸವಿಯ XIVನೇ ನಂಬರ್ ಆಕ್ಟಾದ ಸಿವಿಲ್ ಪ್ರೊಸಿಡ್ಯೂರ್ ಕೋಡಿನ 244ನೇ ಸೆಕ್ಷನ್ (ಸಿ) ಕ್ಲಾಜ್ ಅನ[illegible] ಕೊಡಲ್ಪಡುವ ಹುಕುಂಗಳ ಮೇಲಿನ ಅಪೀಲ್‌ಗಳಿಗಾಗಿ ವಸೂಲ್ ಮಾಡಲ್ಪಡತಕ್ಕ ಫೀಜ್ ಮೊಬಲಗು, 1870ನೇ ಇಸವಿಯ ಕ[illegible] ಫೀಜ್ ಆಕ್ಟಿನ ಯರಡನೇ ಷೆಡ್ಯೂಲ್‌ನಲ್ಲಿ ಕಂಡ 11ನೇ ಆರ್ಟಿಕಲ್ ಪ್ರಕಾರ ವಸೂಲಾಗತಕ್ಕ ಮೊಬಲಗಿಗೆ ತಕ್ಕಂತೆ ಏರ್ಪ[illegible] ತಕ್ಕದ್ದು.

ತಾರೀಖು 4ನೇ ಫೆಬ್ರವರಿ 1895.

ನಂ. 11966.—ಜೆ. 682.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ 12ನೇ ಸೆಕ್ಷನ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟ್ ಎಕಸ್ಟ್ರಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ವಿ. ಶ್ರೀನಿವಾಸಾಚಾರ್ಲು ಯವರು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟು, ಸದರೀ ಕೋಡಿನ 37ನೇ ಸೆಕ್ಷನ್ ಅನುಸರಿಸಿ, ಸದರೀ ಕ್ಲಾಸ್ ಮಾಜಿಸ್ಟ್ರೇಟರಿಗೆ ಜಾಸ್ತೀ ಅಧಿಕಾರವಾಗಿ ಗವರ್ನಮೆಂಟಿನವರು ಕೊಡಬಹುದೆಂದು ನಾಲ್ಕನೆಯ ಷೆಡ್ಯೂಲ್‌ನಲ್ಲಿ ನಮೂದಾಗಿರುವ ಇದರಡಿ ತಿಳಿಸಲ್ಪಡುವ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

(1) ಆಗಿಂದಾಗ್ಯೆ ಹೇಸಿಗೆ ಮಾಡಕೂಡದೆಂದು ಹುಕುಂ ಕೊಡುವ ಅಧಿಕಾರ,—143ನೇ ಸೆಕ್ಷನ್.

(2) 144ನೆಯ ಸೆಕ್ಷನ್ ಅನುಸರಿಸಿ ಹುಕುಂ ಕೊಡುವ ಅಧಿಕಾರ.

(3) ಲಾಷ್ ವಿಚಾರಣೆ ಮಾಡುವ ಅಧಿಕಾರ—174ನೆಯ ಸೆಕ್ಷನ್ ಪ್ರಕಾರ.

(4) ಫಿರ್ಯಾದಿನ ಮೇಲೆ ಮೊಕದ್ದಮೆಗಳನ್ನು ಹಿಡಿಯುವ ಅಧಿಕಾರ,—191ನೇ ಸೆಕ್ಷನ್ ಪ್ರಕಾರ.

(5) ಪೋಲೀಸಿನವರ ರಿಪೋರ್ಟ್‌ಗಳ ಮೇಲೆ ಮೊಕದ್ದಮೆಗಳನ್ನು ಹಿಡಿಯುವ ಅಧಿಕಾರ,—191ನೇ ಸೆಕ್ಷನ್.

ತಾರೀಖು 11ನೇ ಫಿಬ್ರವರಿ 1895.

ನಂ. 12111.—ಜಿ. 2897.—ಚಿತ್ರದುರ್ಗದ ಡಿಸ್ಟ್ರಿಕ್ಟು ಪ್ರೊಬೇಷನೆರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಸಿ. ದೇವರಾಜೇ ಅರಸರವರಿಗೆ, 1895ನೇ ಇಸವಿ ಜನವರಿ 13ನೇ ಮುರ್ಕುಂ 10787—ಜಿ. 2505ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟಿದ್ದ ಒಂದು ತಿಂಗಳ ಬಗರ್ ತಲಬ್ ಜಾಸ್ತೀ ರಜಾ ಇದರಿಂದ ಇನ್ನೂ 15 ದಿನಗಳ ತನಕ ಜಾಸ್ತೀ ಮಾಡಲ್ಪಟ್ಟಿರುತಿದೆ.

ನಂ. 12113.—ಜಿ. 2899.—ಮೈಸೂರ್ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಚೆಂಗಯ್ಯಶೆಟ್ಟಿರವರಿಗೆ 94ಸೇ ಇಸವಿ ಡಿಸೆಂಬರ್ 22ನೇ ಮುರ್ಕುಂ 10656.—ಜಿ. 2474ನೇ ನಂಬರ್ ಇಸ್ತಿಹಾರ್ ನಾಮೆಯ ಮೂಲಕ ಕೊಡಲ್ಪಟ್ಟಿದ್ದ 7 ದಿನಗಳ ಕ್ಯಾಜುಯಲ್ ರಜಾ ಇಸ್ನೊಂದು ದಿನಕ್ಕೆ ಜಾಸ್ತೀ ಮಾಡಲ್ಪಟ್ಟಿಥೆ.

ನಂ. 12116.—ಜಿ. 2902.—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಯಡತೊರೆ ತಾಲ್ಲೂಕು ಅಮಲ್ದಾರ್ ವೆಂಕಟಾಚಲಯ್ಯನವರಿಗೆ, 1895ನೇ ಇಸವಿ ಫಿಬ್ರವರಿ 5ನೇ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು 8 ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ. 12147.—ಜಿ. 2909.—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ್ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ನರಸಿಂಹಯ್ಯಂಗಾರ್ರವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಒಂದು ವಾರ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ತಾರೀಖು 12ನೇ ಫಿಬ್ರವರಿ 1895.

ನಂ. 12115.—ಜಿ. ಎಫ್. 209—92.—ಮೆಸ್ಟರ್ ಎ. ಕೃಷ್ಣಸ್ವಾಮಯ್ಯಂಗಾರ್ರವರು, ಈ ತಿಂಗಳ 2ನೇ ತಾರೀಖಿನಲ್ಲಿ ಅಪರಾಹ್ನದಲ್ಲಿ ಹಾಸನ ಡಿಸ್ಟ್ರಿಕ್ಟು ಚಾರ್ಜನ್ನು ಮೆಸ್ಟರ್ ಪಿ. ಎನ್. ಪೂರ್ಣಯ್ಯನವರಿಂದಲೂ, 8ನೇ ತಾರೀಖಿನ ಪೂರ್ವಾಹ್ನದಲ್ಲಿ ಹಾಸನ ಡಿಸ್ಟ್ರಿಕ್ಟು ಟ್ರೆಜರೀ ಚಾರ್ಜನ್ನು ಮೆಸ್ಟರ್ ಸೈಯದ್ ಅಮೀರ್ ಹಸ್ನೆಯವರಿಂದಲೂ, ತೆಗದುಕೊಂಡಿರುತ್ತಾರೆ.

ಹುಕುಂ ಬಮೋಜಿಬ್,

ಎಲ್. ಅನಂತಸಾಮಿರಾವ್,
ಅಂಡರ್ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 6] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ|| 21, ಸನ್ 1895.

೧ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ನೋಟಿಸ.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ.)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ಯಾಮ್‌ರವರ ಡಿಟೋ	,, 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ, ಅಸಲ್ ಖರೀದಿಯಲ್ಲಿ ಶೇಕಡಾ $12\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಇಸ್ತಿಹಾರ್‌ನಾಮೆ.

ಮೈಸೂರು ಫಾರೆಸ್ಟ್ ಇಲಾಖಾ.

ತಾರೀಖು 13ನೇ ಫೆಬ್ರುವರಿ 1895.

ಸನ್ 1878ನೇ ಇಸವಿ ಫಾರೆಸ್ಟ್ ರೂಲ್ಸ್ 9ನೇ ಸೆಕ್ಷನ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟ್ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಹೊಸದಾಗಿ ಡಿಮಾರ್ಕೇಟ್ ಮಾಡಲ್ಪಟ್ಟ ನಾರಾಯಣದುರ್ಗ ಸ್ಟೇಟ್ ಫಾರೆಸ್ಟ್ ಸರಹದ್ದುಗಳು ಸಕಲರಿಗೂ ತಿಳಿಯುವ ಬಗ್ಗೆ ಫಾಯಿಷ್ ಮಾಡಲ್ಪಟ್ಟಿದೆ.

ವಿಸ್ತೀರ್ಣ—10048 ಎಕರೆಗಳು ಅಥವಾ 15·7 ಚದರ ಮೈಲಿಗಳು ಇದರಗಡಿ ಸರಹದ್ದುಗಳು

ಪಶ್ಚಿಮಕ್ಕೆ—66 ಅಡಿ ಅಗಲ ಪಾಕ್ ಮಾಡಲ್ಪಟ್ಟ ಲೈನು. ಮಾರ್ಬ್ಬಳ್ಳಿ ಶಿಂಗಾಪುರ ಮತ್ತು ಚಟಮ್ಮಗಿರಿ ಹಳ್ಳಿಗಳ ಸರಹದ್ದು ಬಾಂದುಗಳಿಂದ ಹೊರಟು ಚಟಂಗೇರಿ ಸರ್ವೆ ನಂಬರು 78 ಹೆಮ್ಮಡಹಳ್ಳಿ ಬಾಬತು 59 ಮತ್ತು 41 ಶಿಂಗಾಪುರ ಬಾಬತು 12 ವಸಂತಪುರದ 18 ಮತ್ತು 17 ಮಾದಿಗರ ಹೊಸಹಳ್ಳಿ ಬಾಬತು 14 ಚಾಮಲಾಪುರದ 51 ಮತ್ತು 50 ಶಿಂಧಘಟ್ಟದ ಬಾಬತು 173 ಜಾಗನಕೇರೆ ಬಾಬತು 99 ಮತ್ತು ಕೊಟ್ಟಿಗೆಹಳ್ಳಿ ಬಾಬತು 35ನೇ ನಂಬರ್‌ಗಳ ಮಧ್ಯೆ ಹೊರಟು ಕೃಷ್ಣರಾಜಪ್ಯಾಟೆ ತಾಲ್ಲೂಕು ದುಗ್ಗನಹಳ್ಳಿ ಮತ್ತು ಬೊಪ್ಪನಹಳ್ಳಿಗಳ ಗಡಿ ಬಾಂದುಗಳಿಗೆ ಶೇರುತ್ತೆ.

ಉತ್ತರ—ಡಿಟ್ಟೋ ಮೇಲೆ ಹೇಳಲ್ಪಟ್ಟ ಗಡಿ ಬಾಂದುಗಳಿಂದ ಹೊರಟು ಕೃಷ್ಣರಾಜಪ್ಯಾಟೆ ತಾಲ್ಲೂಕು ಬೊಪ್ಪನಹಳ್ಳಿಯ ಸರ್ವೆ ನಂಬರು 63—64 ನಾಗಮಂಗಲ ತಾಲ್ಲೂಕು ಕೊರವಿನಗುಂಡಿಯ 68—59 ಹಿಂಡ್ಸಹಳ್ಳಿಯ 40—41 ಮತ್ತು 31 ಮಾದಿಹಳ್ಳಿ ಬಾಬತು 16 ಜೋಗಾದಿ ಬಾಬತು 36ನೇ ಸರ್ವೆ ನಂಬರುಗಳ ಮಧ್ಯೆ ಹೋಗುತ್ತೆ.

ಪೂರ್ವ—ಡಿಟ್ಟೋ ಜೋಗಾದಿ ಸರ್ವೆ ನಂಬರು 36 ಬಿಟ್ಟ ನಂತರ ಗುಜ್ಜಗೋನಹಳ್ಳಿ ಬಾಬತು ಸರ್ವೆ ನಂಬರು 4 ಸಿಂಗಾಪುರದ 12 ಪಗಡೆಕಲ್ಲಹಳ್ಳಿ ಬಾಬತು 33ರ ಮಧ್ಯೆ ಹೋಗಿ ಜೋಡಿ ರಾಂಪುರದ ಜಂಗಲ್ ಅಡ್ಡಲಾಗಿ ಹೋಗಿ ಅಲ್ಲಿಂದ ಕೊಡಗಹಳ್ಳಿ ಸರ್ವೆ ನಂಬರು 4 ನಾರಣಪುರದ ಸರ್ವೆ ನಂಬರು 29—12 ಮತ್ತು ಶ್ರೀರಂಗಪಟ್ಟಣ ತಾಲ್ಲೂಕು ಮಾದೇನಹಳ್ಳಿ ಸರ್ವೆ 28ನೇ ನಂಬರು ಮಧ್ಯೆ ಹೋಗಿ ಶಿದ್ದಪ್ಪನಕಟ್ಟೆ ಬಾಂದು ಯೆಂದು ಹೆಸರುವುಳ್ಳ ಮಾದೇನಹಳ್ಳಿ ಮೇಲ್‌ಕೋಟೆ ಮತ್ತು ಹುಲಿಗೆರೆ ಗಡಿ ಬಾಂದುಗಳಿಗೆ ಶೇರುತ್ತೆ.

ದಕ್ಷಿಣ—ಡಿಟ್ಟೋ ಮೇಲೆ ಹೇಳಿರುವ ಸ್ಥಳದಿಂದ ಹೊರಟು ಹುಲಿಗೆರೆ ಸರ್ವೆ ನಂಬರು 1 ಮತ್ತು ಕೃಷ್ಣರಾಜಪ್ಯಾಟೆ ತಾಲ್ಲೂಕು ಸಿಂಗಾಪುರದ 15—14ನೇ ನಂಬರು ಮಧ್ಯೆ ಹೋಗಿ ಮೂರು ಸ್ಥಳವಾದ ಮಾರ್ಬ್ಬಳ್ಳಿ ಸಿಂಗಾಪುರ ಚಟಂಗೆರೆ ಗಡಿ ಬಾಂದಿಗೆ ಶೇರುತ್ತೆ.

ಯಲ್. ರಿಕ್ಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 23ನೇ ಜನವರಿ 1895.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ,—ಮೈನರ್ ಫಾರೆಸ್ಟ್ ಯಾನೆ ಚಿಲ್ಲರೆ ಪಸಾರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ಸಾದರ್ ಮಾಡಲ್ಪಟ್ಟಿರುವ 1892ನೇ ಇಸವಿ ಜೂನ್ 2ನೇ ಮರಕುಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಫಾಯಿಷಾಗಿರುವ ಅದೇ ಇಸವಿ ಮೇ 11ನೇ ಮರ್ಕುಂ ಇಸ್ತಿಹಾರನ್ನು ಬದಲಾಯಿಸಿ ಅಮಲ್‌ದಾರ್ ಮತ್ತು ಸವಾಲ್‌ದಾರ್‌ಗಳ ನಡವಳಿಕೆ ಬಗ್ಗೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತಿಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯೆರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್‌ದಾರ್ರು ತಪ್ಪದೆ ತಾವೇ ಆಯಾಯ ಹೋಬಳಿ ಕಸಬೆಯಲ್ಲಿ ಆಯಾಯ ಹೋಬಳಿ ಫಸಲನ್ನು ಹರಾಜು ಮಾಡುವರು. ಕಾರ್ತಿಕ ಫಸಲನ್ನು ಡಿಸೆಂಬರ ತಿಂಗಳಲ್ಲಿಯೂ ವೈಶಾಖಿ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್‌ದಾರ್ರು ಪ್ರಕಟಿಸುತ್ತಾರೆ.

(3) ಹರಾಜು ಷರತ್ತುಗಳೇನಂದರೆ.

(a) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್ ಮಾಡುವದಿಲ್ಲ.

(b) ಆಖೈರ್ ಚಡಸವಾಲ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯಕೂಡದು.

(c) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೊ ಅಥವಾ ಇತರರ ಏಜಂಟರಾಗಿ ಸವಾಲ್ ಮಾಡುತ್ತಾರೋ ಕೇಳಲ್ಪಡಬಹುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(d) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ಮತ್ತು ರೂಪಾಯಿ 1ಕ್ಕೆ ಬಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ಸನ್ನು ಸಹ ಹರಾಜು ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರಿಂದ ತಿಳಿಸಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟನ್ನು ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್‌ದಾರನನ್ನು ಗುರಿಮಾಡುವದು.

(e) ಅಂಗೀಕರಿಸಲ್ಪಟ್ಟ ಸವಾಲ್‌ದಾರನು ವೈಶಾಖಿ ಫಸಲನ್ನು ಜೂನ್ 1ನೇ ತಾರೀಖು ಲಾಗಾಯತು ಡಿಸೆಂಬರ್ 31ರ ವರಿಗೂ, ಕಾರ್ತಿಕ ಫಸಲನ್ನು ಜನವರಿ 1ನೇ ತಾರೀಖು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ಎ. ನರಸಿಂಹಯ್ಯಂಗಾರ್, ಫಾರ್ ಡೆಪ್ಯುಟಿ ಕಮ್ಮಿಷನರ್.

ನಂದೀದುರ್ಗ್ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 190.

ಅರ್ಜಿದಾರ್ ದೊಡ್ಡಬಳ್ಳಾಪುರ ತಾಲ್ಲೂಕು ಕಸಬಾ ಕೊಡಿಗೆಹಳ್ಳಿಯಲ್ಲಿರುವ ನಂಜುಂಡಪ್ಪನು, ಖಾತಿ ಈರಣ್ಣನ ಮಕ್ಕಳು ಮೈನರಾದ ಕೊಡಿಗೆಹಳ್ಳಿ ಸ್ಥಳದ ಭದ್ರಮ್ಮ, ನರಸಮ್ಮ ಮತ್ತು ಭದ್ರಪ್ಪಪ್ಪ ಇವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಭದ್ರಮ್ಮ, ನರಸಮ್ಮ ಮತ್ತು ಭದ್ರಪ್ಪ ಇವರಿಗೆ ತಂದೆಯು ಸಹೋದರನು ಆಗಬೇಕೆಂಬ ಹಕ್ಕಿನಮೇಲೆ, ಕೊಡಿಗೆಹಳ್ಳಿ ಸ್ಥಳದ ನಂಜುಂಡಪ್ಪನು, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ್ 1895ನೇ ಇಸವಿ ಮಾರ್ಚಿ ತಾರೀಖು 2ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಸ್ ಕೊಡಲಾಗಿಧೆ.

ಸನ್ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 270.

ಅರ್ಜಿದಾರ್ ಬೆಂಗಳೂರ್ ಲಾಲ್‌ಬಾಗ್ ರೋಡಿನಲ್ಲಿರುವ ಖಾತಿ ಮೇಸ್ತ್ರಿ ರಾಮಣ್ಣನ ಹೆಂಡತಿ ಮುನಿಯಮ್ಮ, ಮೈನರಾದ ಬೆಂಗಳೂರು ಸ್ಥಳದ ಶಿದ್ದರಾಮ, ಮುನಿಶಿದ್ದ, ಶಿದ್ದಪಾಪ, ಶಿವಶಿದ್ದ ಇವರುಗಳ ಆಸ್ತಿ ವಿಷಯದಲ್ಲಿ—

ಸದರೀ ಮೈನರಾದ 1ನೇ ಶಿದ್ದರಾಮ, 2ನೇ ಮುನಿಶಿದ್ದ, 3ನೇ ಶಿದ್ದಪಾಪ, 4ನೇ ಶಿವಶಿದ್ದ ಇವರುಗಳಿಗೆ ತಾಯಿ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸ್ಥಳದ ಮುನಿಯಮ್ಮ, ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1895ನೇ ಇಸವಿ ಮಾರ್ಚಿ ತಾರೀಖು 2ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸನ್ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 272.

ಅರ್ಜಿದಾರ್ ಸದಾಶಿವಯ್ಯ, ಮೈನರಾದ ತುಮಕೂರು ತಾಲ್ಲೂಕು ಮನ್ನೆಕೊಳಾಲ ಸ್ಥಳದ ರಾಮಸ್ವಾಮಿ ಆಸ್ತೀ ವಿಷಯದಲ್ಲಿ-

ಸದರೀ ಮೈನರಾದ ರಾಮಸ್ವಾಮಿಗೆ, ಜನಕತಂದೆ ಆಗಬೇಕೆಂಬ ಹಕ್ಕಿನ ಮೇಲೆ ಮನ್ನೆಕೊಳಾಲ ಸ್ಥಳದ ಸದಾಶಿವಯ್ಯನು, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1895ನೇ ಇಸವಿ ಮಾರ್ಚಿ ತಾರೀಖು 2ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

1895ನೇ ಇಸವಿ ಫೆಬ್ರುವರಿ ತಿಂಗಳ 6ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 273.

ಅರ್ಜಿದಾರ್ ಬವರಿಂಗ್‌ಪೇಟೆ ತಾಲ್ಲೂಕು ಬೇತಮಂಗಲದಲ್ಲಿರುವ ಅಲ್ಲಿಹುಸೇನ್‌ಖಾನ್, ಮೈನರಾದ ಬೇತಮಂಗಲ ಸ್ಥಳದ ಗೌಸಖಾನ್ ಅಬ್ದುಲ್ ಲತಿಫ್‌ಖಾನ್, ಖಾಕೂಬಿ ಇವರುಗಳಿಗೆ ಕೋಲಾರ್‌ಪೇಟೆ ಕಸಬಾದಲ್ಲಿದ್ದು ಮೃತಪಟ್ಟ ಮೈನೊದ್ದಿನ್ ಮಸ್ತಾನಸಾಬಿಯು ವಿಲ್ಲಿನಲ್ಲಿ ನಮೂದು ಮಾಡುವ ಮೂರುಸಾವಿರ ರೂಪಾಯಿನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಗೌಸ್‌ಖಾನ್, ಅಬ್ದುಲ್ ಲತಿಫ್‌ಖಾನ್, ಖಾಕೂಬಿ ಇವರಿಗೆ ತಂದೆ, ಆಗಬೇಕೆಂಬ ಹಕ್ಕಿನಮೇಲೆ ಬೇತಮಂಗಲ ಸ್ಥಳದ ಅಲ್ಲಿಹುಸೇನ್‌ಖಾನ್, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ್ 1895ನೇ ಇಸವಿ ಮಾರ್ಚಿ ತಾರೀಖು 2ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸನ್ 1895ನೇ ಇಸವಿ ಫೆಬ್ರುವರಿ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1894—95ನೇ ಇಸವಿ ಮಿ|| ಅರ್ಜಿ ನಂಬರ್ 283.

ದೇವನಹಳ್ಳಿಯಲ್ಲಿದ್ದ ಲಕ್ಷ್ಮೀನಾರಾಯಣ ಜೋಯಿಸರ ಮಗ ದೇವನಹಳ್ಳಿ ತಾಲ್ಲೂಕು ಬೂದಿಗೆರೆಯಲ್ಲಿ ಮೃತಪಟ್ಟ
ಗುಂಡಪ್ಪನ ಆಸ್ತೀ ವಿಷಯದಲ್ಲಿ—

ಅರ್ಜಿದಾರು ಚಿಕ್ಕಬಳ್ಳಾಪುರ ತಾಲ್ಲೂಕು ಸುಲ್ತಾನಪೇಟೆಯಲ್ಲಿರುವ ಸಾಕಮ್ಮ ಮೈನರ್, ಗಾರ್ಡಿಯನ್ ತಂದೆ ಶೇಷಪ್ಪ, ಮೃತಪಟ್ಟ ಸದರೀ ಗುಂಡಪ್ಪನಿಗೆ ಮಾವನು ಆಗಬೇಕೆಂಬ ಹಕ್ಕುದಾರಿಮೇಲೆ ಸುಲ್ತಾನಪೇಟೆ ಸ್ಥಳದ ಶೇಷಪ್ಪನು, ದೇವನಹಳ್ಳಿ ತಾಲ್ಲೂಕು ಬೂದಿಗೆರೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ಗುಂಡಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಾಕಮ್ಮ ಮೈನರ್, ಗಾರ್ಡಿಯನ್ ಮತ್ತು ತಂದೆ ಶೇಷಪ್ಪನ ಅರ್ಜಿಯನ್ನು ಸನ್ 1895ನೇ ಇಸವಿ ಮಾರ್ಚಿ ತಿಂಗಳ ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುಂಡಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895ನೇ ಇಸವಿ ಫೆಬ್ರವರಿ ತಿಂಗಳ 9ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 289.

ಮೃತಪಟ್ಟ ದೊಡ್ಡಯ್ಯನ ಆಸ್ತೀ ವಿಷಯದಲ್ಲಿ—

ಅರ್ಜಿದಾರರು ಬೆಂಗಳೂರ್ ಪವಾಡಿಶಟ್ಟಿ ಪೇಟೆಯಲ್ಲಿರುವ ಕುರಬರ ಕ್ಲೊರಪ್ಪನ ಮಗ ಸತ್ತಿಗಪ್ಪ, ಮೃತಪಟ್ಟ ಸದರೀ ದೊಡ್ಡಯ್ಯನಿಗೆ ಅಂಣನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರ್ ಸ್ಥಳದ ಸತ್ತಿಗಪ್ಪನು, ಡಿಟೋ ವಾಸಸ್ಥರಾಗಿ ಮೃತಪಟ್ಟ ದೊಡ್ಡಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸತ್ತಿಗಪ್ಪನ ಅರ್ಜಿಯನ್ನು ಸನ್ 1895ನೇ ಇಸವಿ ಮಾರ್ಚಿ ತಿಂಗಳ ತಾರೀಖು 11ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895ನೇ ಇಸವಿ ಫೆಬ್ರವರಿ ತಿಂಗಳ 14ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜಿ.

ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಇಲಾಖಾ.

ನೋಟಿಫಿಕೇಷನ್.

ತಾರೀಖು 6ನೇ ಫೆಬ್ರವರಿ 1895.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ನಾರಾಯಣದುರ್ಗ ಫಾರೆಸ್ಟು ಬಾಬತು ಈ ಕೆಳಗೆ ವಿವರಿಸಿರುವ ಪಸಾರೆ ಜಿನಸಿಗಳು ಸನ್ 1895ನೇ ಇಸವಿ ಮಾರ್ಚಿ ತಾರೀಖು 5ರಲ್ಲು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಶ್ರೀರಂಗಪಟ್ಣದ ಸಂದಲ್ ಕೋಠಿಯಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸಿ ತಪ್ಸೀಲ್.	ಸುಮಾರು ಮೊತ್ತ.	
	ಮಣ.	ಪೌ.
ಅಳಲೆಕಾಯಿ	2000	..
ಅರಗು	130	..

ಷರತ್ತು—ಮೈಸೂರು ಗೆಜೆಟ್ 93ನೇ ಜನವರಿ 12ನೇ ಮುರ್ಕ್ಕುಮಿನಲ್ಲಿ ಚವಬಿನೆ ಮತ್ತು ಬೊಂಬು ವಿಷಯದಲ್ಲಿ ಫಾಯಿಷ್ ಮಾಡಿರುವ 1892ನೇ ಇಸವಿ ನವಂಬರು 29ನೇ ಮುರ್ಕ್ಕುಂ 7953-ಆರ್. ಎಸ್. 155—92ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ಮೇರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ಮೈಸೂರ್ ಡಿಸ್ಟ್ರಿಕ್ಟು.

ಇಸ್ತಿಹಾರ್ ನಂಬರ್ 1.—1894—95ನೇ ಇಸವಿ ಬಾಬತು.

ತಾರೀಖು 11ನೇ ಫೆಬ್ರುವರಿ 1895.

ಮೈಸೂರು ಡಿಸ್ಟ್ರಿಕ್ಟು—ಇದರಲ್ಲಿ ನಮೂದಾಗುವ ಸಬ್ ರಿಜಿಸ್ಟ್ರಾರ್ ಆಫಿಸುಗಳಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತೈವಜುಗಳನ್ನು ಕ್ರಮವಾದ ವಾರಸ್‌ದಾರರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ಆಫಿಸುಗಳಲ್ಲಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶ ಪಡಿಸಲ್ಪಡುತ್ತೆ.

ನಂಬರ್.	ಆಫಿಸ್	ಬುಕ್ಕು ಮತ್ತು ನಂಬರ್.	ದಸ್ತೈವಜು ಬರದುಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ಸ್ವಭಾವ.
1	ಚಾಮರಾಜನಗರದ ಸಬ್ ರಿಜಿಸ್ಟ್ರಿ ಆಫಿಸ್	1ನೇ ನಂಬರ್ ಬುಕ್ಕು—ನಂಬರ್ 759	ಚಾಮರಾಜನಗರದ ತಾಲ್ಲೂಕು ತಿರಗೋಕಾರದಲ್ಲಿರುವ ಶಿವಾಚಾರದ ಬೋಳಮಲ್ಲೀಗವುಡನ ಮಾದೇಗವುಡನ ಮಗ ಮಲ್ಲಯ್ಯ	ನಂಜನಗೂಡು ತಾಲ್ಲೂಕು ಹೆಡತಲೆ ಹೋಬಳಿ ಮಲ್ಲಹಳ್ಳಿಯಲ್ಲಿರುವ ಗಟ್ಟವಾಡಿಪುರದ ನಂಜಪ್ಪನವರಮಗ ವೆಂಕಟರಾಮಯ್ಯ	20—5—92	22—9—92	700 ರೂಪಾಯಿಗಳ ಆಧಾರ ಪತ್ರ
2	ಮೈಸೂರ್ ಸಬ್ ರಿಜಿಸ್ಟ್ರಿ ಆಫಿಸ್	ನಂ.	ಮೈಸೂರ್ ಮಂಡಿಮೊಹಲೆಲಿರುವ ಫುಮ್ಮರ್‌ಸಾಬರ ಮಗ ಥರಡಪಟಾಲಂ ನಾಲ್ಕನೆ ಕಂಪೆನಿ ಶಿಪಾಯಿ ಮಹಮ್ಮದ್ ಹಯಾತ'ಸಾಬಿ	ಮೈಸೂರ್ ಮಂಡಿಮೊಹಲೇಲಿರುವ ಸಿಪಾಯಿ ಮಹಮ್ಮದ್ ಹಯಾತ'ಸಾಬಿ ಹೆಂಡತಿ ಹುಸೇನ್‌ಬಿ	23—3—92	29—3—92	100 ರೂಪಾಯಿಗಳ ಕ್ರಯಪತ್ರ
		ನಂ. 1019	ಮೈಸೂರ್ ಚಾಮರಾಜಮೊಹಲೆಯಲ್ಲಿರುವ ಶಿವಾಚಾರದ ಶಿದ್ದರಾಮಪ್ಪನ ಮಗ ಕರಿಬಸವಪ್ಪ	ವಾಜಮಂಗಲದಲ್ಲಿರುವ ಜಿವಕಲ್ಲು ಚನ್ನಪ್ಪನ ಕಿರಿಮಗಳು ಕೂಲಿಜೀವನದ ಕೆಂಪಮ್ಮ	27—10—92	28—10—92	30 ರೂಪಾಯಿನ ಭೋಗ್ಯಪತ್ರ
		2ನೇ ಬುಕ್ಕು-ನಂ. 14	ಮೈಸೂರ್ ಯಿಟ್ಟಿಗೆ ಗೂಡಿನಲ್ಲಿರುವ ಸ್ಮಾರ್ತಬ್ರಾಹ್ಮಣ ಶ್ರೀಕಂಠಪಂಡಿತರ ಮಗ ಮರ್ಸಿಫ' ಕೋರ್ಟ್ ಕ್ಲೆರ್ಕ್ ಸಾಂಬಯ್ಯ	ಮೈಸೂರ್ ಹೊಸಅಗ್ರಹಾರದಲ್ಲಿರುವ ಕುಂಚಿಗರ ಜಾತಿ ರಂಗಂಣನವರಮಗ ಸಾಹುಕಾರ ಚಿಕ್ಕ ಮುದ್ದಪ್ಪ	17—2—92	ತಿರಸ್ಕರಿಸಿದ್ದು 14—9—92	100 ರೂಪಾಯಿನ ಕ್ರಯಪತ್ರ
		ನಂ. 15	ಮೈಸೂರ್ ಹಳೆಅಗ್ರಹಾರದಲ್ಲಿರುವ ಕಿರಗಾಣಿಗರಜಾತಿ ಹೊನ್ನಯ್ಯನ ಮಗ ಈರಯ್ಯ	ಮೈಸೂರ್ ಹಳೆಅಗ್ರಹಾರದಲ್ಲಿರುವ ಶಿವಾಚಾರದ ಜಾತಿ ಅಂಗಡಿ ಶಿದ್ದಲಿಂಗಪ್ಪನ ಮಕ್ಕಳು ಮೈನರ್ ಶಿದ್ದಪ್ಪ ಚನ್ನಬಸಪ್ಪ ಇವರ ಗಾರ್ಡಿಯನ್ ತಾಯಿ ಪುಟ್ಟಮ್ಮ	23—4—92	14—9—92	5 ವರುಷದ ಬಾಡಿಗೆಕರಾರು. ಮಾಹೆಯಾನಾ ನಾಲ್ಕು ವರೆ ರೂಪಾಯಿ ಮೇರೆ ಬಾಡಿಗೆ ಕೊಡುವದಾಗಿ
3	ತಿರುಮಕೂಡು ನರಶೀಪುರ ಸಬ್ ರಿಜಿಸ್ಟ್ರಿ ಆಫಿಸ್	1ನೇ ನಂ. ಬುಕ್ಕು—ನಂಬರ್ 1508	ಬನ್ನೂರಲ್ಲಿರುವ ಚಿಕ್ಕರಾಜಗವುಡನ ದೊಡ್ಡ ಕೆಂಪಯ್ಯನ ಮಗ ಕೆಂಪಂಣ	ಬನ್ನೂರಲ್ಲಿರುವ ವೆಂಕಟಾಚಲ ಪಿಳ್ಳೆಯವರ ಮಗ ಕಂಟ್ರಾಕ್ಟುದಾರ ಸಾರಂಗಪಾಣಿಪಿಳ್ಳೆ	16—1—92	19—1—92	150 ರೂಪಾಯಿಗಳ ಆಧಾರಪತ್ರ
		ನಂ. 1631	1 ಗರ್ಗೇಶ್ವರಿಯಲ್ಲಿ ಇರುವ ಗಂಜಾಂ ಮೋರ್ದಿನಸಾಬಿ ಮಗ ಆದಂಸಾಬಿ. 2 ಮೊಳೆಹುಂಡಿ ಮೊದಿಂಸಾಬಿ ಮಗ ಮುಸಮಾನಸಾಬಿ	ತಿರುಮಕೂಡು ನಲ್ಲಿ ಇರುವ ನಾರಣಸ್ವಾಮಿ ಪುರಾಣಿಕರ ಮಗ ನಾರಣಸ್ವಾಮಿ ಪುರಾಣೀಕ	29—3—88	9—2—92	3 ವರುಷ ವಾಯಿದೆವುಳ್ಳ ಗೇಣಿಚೀಟು ಸಾಲಿಯಾನಾ ದರ ಪಲ್ಲ1ಕ್ಕೆ $2\frac{1}{2}$ ರೂಪಾಯಿಕ್ರಯ ಬಾಳುವ $4\frac{1}{2}$ ಖಂಡಿ ಭತ್ತ ಗುತ್ತಿಗೆ ಕೊಡುವದಾಗಿ ಮತ್ತು ಮುದಗಡವಾಗಿ 5 ರೂಪಾಯಿಕೊಟ್ಟಿರುವದಾಗಿ

ನಂಬರ್.	ಆಫೀಸ್ ಹೆಸರು.	ಬುಕ್ಕು ಮತ್ತು ನಂಬರ್.	ದಸ್ತೈವಜು ಬರೆದುಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ಸ್ವಭಾವ.
	ತಿರುಮಕೂಡು ನರಸೀಪುರ ಸಬ್ ರಿಜಿಸ್ಟ್ರಿ ಆಫೀಸ್	ನಂ. 713	1 ಸೋಸಲೆಯಲ್ಲಿರುವ ಬಲಗೈ ಹೊಂಬಾಳೆ ಪುಟ್ಟನ ಮಗ ಸಿದ್ದ, 2 ಇವನ ತಮ್ಮ ಚಿಕ್ಕಸಿದ್ದ	ಸೋಸಲೆಯಲ್ಲಿರುವ ಮುಸಲ್ಮಾನರ ಸಿಲೆಮಾನ್ ಸಾಬಿ ಮಗ ಮೋದಿನ್ ಖಾನ್ ಸಾಬಿ	9—2—92	30—6—92	300 ರೂಪಾಯಿನ ಭೋಗ್ಯಪತ್ರ
		ನಂ. 890	ಬಸವನಕೊಪ್ಪಲ್‌ನಲ್ಲಿ ಇರುವ ಕುರುಬರ ಮಲೂರೆಗವುಡನ ಮಗ ಕೆಂಪೇಗವುಡ ಸದರೀ ಗವುಡನತಮ್ಮ ಕೆಂಜೆಡೆಗವುಡ ಮೈನರ್ ಗಾರ್ಡಿಯನ್ ತಾಯಿ ಮಲವಮ್ಮ ಸಹ	ಮೈಸೂರು ದೊಡ್ಡಪೇಟೆಯಲ್ಲಿರುವ ಕುರುಬರ ಲಕ್ಷ್ಮಮ್ಮನ ಮಗ ರಾಮಂಣ	10—8—92	15—8—92	200 ರೂಪಾಯಿನ ಕ್ರಯಪತ್ರ
		ನಂ. 920	ಕೆಂಪಿನಪುರದಲ್ಲಿರುವ ಮೊಂತ ಗವುಡನ ಮಾದಯ್ಯನ ಮಗ ಮಾದಯ್ಯ	ಕೆಂಪಿನಪುರದಲ್ಲಿರುವ ಮೊಂತಗವುಡನ ಮಾದಯ್ಯನ ಮಗ ಬಸವಯ್ಯ	13–8–92	17–8–92	50 ರೂಪಾಯಿನ ಆಧಾರಪತ್ರ
		ನಂ. 1102	ಚಾಮರಾಜನಗರದ ತಾಲ್ಲೂಕು ಹೊಮ್ಮದಲ್ಲಿರುವ ಗುರಿಕಾರ ಚಿಕ್ಕವೀರಪ್ಪನ ಮಗ ವೀರತಪ್ಪ	ಕೆಂಪಿನಪುರದಲ್ಲಿರುವ ದೇವಯ್ಯನ ಮಗ ನಾಗಪ್ಪ	10–10–92	11–10–92	250 ರೂಪಾಯಿನ ಕ್ರಯಪತ್ರ
		ನಂ. 1351	ನರಸೀಪುರದಲ್ಲಿರುವ ಯಾಗನಹಳ್ಳಿ ಹುಚ್ಚನ ಮಗ ಯಾಗನಹಳ್ಳಿ ಚನ್ನಪ್ಪ	ನರಸೀಪುರದಲ್ಲಿ ಇರುವ ಚಿದರವಳ್ಳಿ ಶಿದ್ದಲಿಂಗಪ್ಪನ ಮಗ ತೋಟದಪ್ಪ	24–11–92	26–11–92	100 ರೂಪಾಯಿನ ಭೋಗ್ಯಪತ್ರ
4	ಶ್ರೀರಂಗಪಟ್ಟಣ ಸಬ್ ರಿಜಿಸ್ಟ್ರಿ ಆಫೀಸ್	2ನೇ ನಂಬರ್ ಬುಕ್ಕು—ನಂ. 14	ಹುಣಸೂರಲ್ಲಿರುವ ಚಲವಾಚಾರಿ ಮಗ ಕೆಂಚಾಚಾರಿ	ನರಶೀಪುರದ ದಳವಾಯಿ ಅಗ್ರಹಾರದಲ್ಲಿ ಇರುವ ಲಕ್ಷ್ಮೀನರಸಿಂಹ ಶಾಸ್ತ್ರಿಗಳ ಹೆಂಡತಿ ಗಿರಿಯಮ್ಮ ಮತ್ತು ವೆಂಕಟಸುಬ್ಬಾಭಟ್ಟ ವುರಫ್ ಅಂಗಾಣಿಭಟ್ಟ	15—4—91	ತಿರಸ್ಕರಿಸಿದ್ದು. 25–1—92	100 ರೂಪಾಯಿನ ಆಧಾರ ಪತ್ರ
		1ನೇ ನಂಬರ್ ಬುಕ್ಕು—ನಂ. 900	ಶ್ರೀರಂಗಪಟ್ಟಣದ ಖಿಲ್ಲೆಯಲ್ಲಿ ಇರುವ ಬೆಸ್ತರ ಜಾತಿ ವೆಂಕಟರಮಣಯ್ಯನವರ ಮಗ ವೆಂಕಟರಮಣಯ್ಯ	ಮೈಸೂರು ದೇವರಾಜ ಮೊಹಲೆಯಲ್ಲಿರುವ ಮೈಸೂರು ಡಿಸ್ಟ್ರಿಕ್ಟು ಡಿಪ್ಟಿ ಸರಾಫ್ ನಾಮಂ ಗೋಪಿಂದಶೆಟ್ಟಿ	1—2—92	2—2—92	ಶ್ರೀರಂಗಪಟ್ಟಣದ ಖಿಲ್ಲೆಯಲ್ಲಿರುವ ತೋಟದ ಗುತ್ತಿಗೆ ಕರಾರು
		ನಂಬರ್ 926	ತಾಲ್ಲೂಕು ಮಜಕೂರು ಬಳಗುಳದ ಹೋಬಳಿ ಹೊಸಹಳ್ಳಿಯಲ್ಲಿರುವ ಗಂಗಡಿಕಾರ್ರ ಜಾತಿ ದೊಡ್ಡೇಗವುಡನ ಮಗ ಚನ್ನೇಗವುಡ	ಶ್ರೀರಂಗಪಟ್ಟಣದಲ್ಲಿರುವ ಶ್ರೀವೈಷ್ಣವ ಬ್ರಾಹ್ಮಣ ಶಾಮಯ್ಯಂಗಾರ್ರ ಮಕ್ಕಳು ಚಂದಗಾಲ್ ಹೋಬಳಿ ಶೇಕದಾರ್ ರಾಮಸ್ವಾಮಯ್ಯಂಗಾರು	4—2—92	6—2—92	ಬಳಗುಳ ಗ್ರಾಮದ ಜಮೀನ್ ಗುತ್ತಿಗೆ ಕರಾರು
		ನಂ. 1063	ತಾಲ್ಲೂಕು ಮಜಕೂರು ಯಂಣೆಹೊಳೆ ಕೊಪ್ಪಲ್‌ನಲ್ಲಿರುವ ಗಾರೆಹಟ್ಟಿ ದಾಸೇಗವುಡನ ಮಗ ರಾಮೇಗವುಡ	ತಾಲ್ಲೂಕು ಮಜಕೂರು ಯಂಣೆಹೊಳೆ ಕೊಪ್ಪಲ್‌ನಲ್ಲಿ ಇರುವ ತಿಮ್ಮೇಗವುಡನ ಮಗ ದೊಡ್ಡ ತಿಮ್ಮೇಗವುಡ ವುರಫ್ ಜೋಗಯ್ಯ	7—3—92	9—3—92	200 ರೂಪಾಯಿನ ಕ್ರಯಪತ್ರ
		ನಂ. 1094	ತಾಲ್ಲೂಕು ಮಜಕೂರು ನೀಲನಕೊಪ್ಪಲ್‌ನಲ್ಲಿರುವ ಕೊರಮರ ಜಾತಿ ಶಿಂಗಿ ಮಗ ವೈಕುಂಠಶೆಟ್ಟಿ	ತಾಲ್ಲೂಕು ಮಜಕೂರು ಬಂಗಿಗವುಡನ ಕೊಪ್ಪಲ್‌ನಲ್ಲಿರುವ ವಕ್ಕಲಿಗರ ಜಾತಿ ವೆಂಕಟೇಗವುಡನ ಮಗ ಶಿದ್ದಯ್ಯ	15–3–92	16–3–92	25 ರೂಪಾಯಿನ ಕ್ರಯಪತ್ರ

ನಂಬರ್.	ಆಫೀಸ್ ಹೆಸರು.	ಬುಕ್ಕು ಮತ್ತು ನಂಬರ್.	ದಸ್ತೈವಜು ಬರದುಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ಸ್ವಭಾವ.
	ಶ್ರೀರಂಗಪಟ್ಟಣ ಸಬ್ ರಿಜಿಸ್ಟ್ರಿ ಆಫೀಸ್	ನಂ. 1125	ಗಂಜಾಂನಲ್ಲಿರುವ ಮುಸಲ್ಮಾನರ ಪಟವೇಗಾರ್ ಮೀರಾಸಾಬರು	ಗಂಜಾಂನಲ್ಲಿ ಇರುವ ಮುಸಲ್ಮಾನರ ಪಟವೇಗಾರ್ ಸೈಬರಿಬಿ	23—3—92	26—3—92	100 ರೂಪಾಯಿನ ಕ್ರಯಪತ್ರ
		ನಂ. 347	ಶ್ರೀರಂಗಪಟ್ಟಣದಲ್ಲಿರುವ ವಡಿಯಾಂಡಹಳ್ಳಿ ಶಾಮಾಚಾರ್ಯರ ದತ್ತುಮಗ ಅಹೋಬಲರಾವ್	ಯಡತೊರೆ ತಾಲ್ಲೂಕು ತಿಪ್ಪೂರಲ್ಲಿರುವ ಲೇಟ ಮಣೇಗಾರ್ ಶಾಮಣ್ಣನವರ ಹೆಂಡತಿ ಭಾಗೀರತಮ್ಮ	20—7—92	21—7—92	100 ರೂಪಾಯಿನ ಭೋಗ್ಯಪತ್ರ
		ನಂ. 593	ತಾಲ್ಲೂಕು ಮಜಕೂರು ಕ್ಯಾತನಹಳ್ಳಿ ಹೋಬಳಿ ಹಾರೋಹಳ್ಳಿ ಗ್ರಾಮದಲ್ಲಿರುವ ಹಾಲುಕುರುಬರ ಜಾತಿ ಕೆಂಪದೊಡ್ಡನ ಮಗ ಹುಚ್ಚ	ತಾಲ್ಲೂಕು ಮಜಕೂರು ಹಾರೋಹಳ್ಳಿ ಗ್ರಾಮದಲ್ಲಿರುವ ಹಾಲ್‌ಕುರುಬರ ಜಾತಿ ಮಗ್ಗದ ಚಿಕ್ಕನ ಮಗ ಚಿಕ್ಕಮರಿಯ ವುರಫ್ ಕಚ್ಚಿ	29—10—92	29—10—92	100 ರೂಪಾಯಿನ ಕ್ರಯಪತ್ರ
		ನಂ. 595	ತಾಲ್ಲೂಕು ಮಜಕೂರು ಹಾರೋಹಳ್ಳಿ ಗ್ರಾಮದಲ್ಲಿರುವ ಲಿಂಗಾಚಾರಿ ಮಗ ಜಿರಾಯಿತ್ ಕಸಬಿನ ಲಕ್ಷ್ಮಾಚಾರಿ	ಡಿಟ್ಟೋ ಗ್ರಾಮದಲ್ಲಿರುವ ಹಾಲ್‌ಕುರುಬರ ಮುದಿಯನ ಮಗ ಜಿರಾಯಿತ್ ಕಸಬಿನ ಚಿಕ್ಕೇಗವುಡ	29—10—92	29—10—92	50 ರೂಪಾಯಿನ ಕ್ರಯಪತ್ರ
		2ನೇ ನಂಬರ್ ಬುಕ್ಕು—ನಂ. 6	ಯಡತೊರೆ ತಾಲ್ಲೂಕು ತಿಪ್ಪೂರಿಂದ ಬಂದಿರುವ ಶೇಷಾಚಾರ್ಯರ ಮಗ ವೈದೀಕವೃತ್ತಿ ನರಸಿಂಹಾಚಾರ್	ತಾಲ್ಲೂಕು ಮಜಕೂರು ಬಳ್ಳಕೆರೆ ಗಂಗಡಿಕಾರ ದೊಡ್ಡದೇವೆಗವುಡನ ಮಗ ಜಿರಾಯಿತ್ ಕಸಬಿನ ಗೂಳಿಗವುಡ	10—7—91	ತಿರಸ್ಕರಿಸಿದ್ದು 10—3—92	95 ರೂಪಾಯಿನ ಕ್ರಯಪತ್ರ
5	ಕೃಷ್ಣರಾಜಪೇಟೆ ಸಬ್ ರಿಜಿಸ್ಟ್ರಿ ಆಫೀಸ್	1ನೇ ನಂಬರ್ ಬುಕ್ಕು—ನಂ. 727	ಸಂತೆಬಾಚಹಳ್ಳಿ ಗ್ರಾಮದಲ್ಲಿರುವ ಸ್ಮಾರ್ತಬ್ರಾಹ್ಮಣ ಶಾನುಭೋಗ ಶ್ರೀಕಂಠಯ್ಯ	ಅಂಕನಹಳ್ಳಿ ಗ್ರಾಮದಲ್ಲಿರುವ ವಕ್ಕಲಿಗರ ಜಾತಿ ಪಟೇಲ್ ಬೀರಹಟ್ಟಿತಿಮ್ಮೇಗವುಡನ ಮಗ ಗೋವಿಂದಗವುಡ	17—3—92	19—3—92	50 ರೂಪಾಯಿನ ಕ್ರಯಪತ್ರ
6	ಮಳವಳ್ಳಿ ಸಬ್ ರಿಜಿಸ್ಟ್ರಿ ಆಫೀಸ್	1ನೇ ನಂಬರ್ ಬುಕ್ಕು—ನಂ. 15	ಮಳವಳ್ಳಿ ತಾಲ್ಲೂಕು ಹಣಕೊಳದಲ್ಲಿರುವ ಶಿವಾಚಾರದ ಚನ್ನಪ್ಪನ ಮಗ ಮಾದಪ್ಪ	ಮಳವಳ್ಳಿ ತಾಲ್ಲೂಕು ಮಲಿಯೂರು ದಾಖಲೆ ವುಪ್ಪಲಗೆರೆ ಕೊಪ್ಪಲ್‌ನಲ್ಲಿರುವ ಗಂಗಡಿಕಾರ ಶಿದ್ದೇಗವುಡನ ಮಗ ಭುಜಂಗೇಗವುಡ	7—4—91	7—4—91	100 ರೂಪಾಯಿನ ಆಧಾರ ಪತ್ರ
		ನಂಬರ್ 103	ಯಳಂದೂರು ತಾಲ್ಲೂಕು ಅಗರದಲ್ಲಿರುವ ಮುಹಂತದೇವರ ಮಗ ಮಲ್ಲಶಟ್ಟಿ	ತಿರುಮಕೂಡ್ಲು ನರಸೀಪುರದ ತಾಲ್ಲೂಕು ತಲಕಾಡಿನಲ್ಲಿರುವ ಶಿವಲಿಂಗಪ್ಪನವರ ಮಗ ಶಿದ್ದಬಸಪ್ಪ	25—5—92	26—5—92	100 ರೂಪಾಯಿನ ಆಧಾರ ಪತ್ರ
		ನಂ. 182	ನಂಜನಗೂಡು ತಾಲ್ಲೂಕು ಸುತ್ತೂರಲ್ಲಿ ಇರುವ ಅಕ್ಕಸಾಲೆ ಮುತ್ತಾಚಾರ್ರ ಮಗ ಕೃಷ್ಣಾಚಾರಿ	ಮಳವಳ್ಳಿ ತಾಲ್ಲೂಕು ರಾಗಿಬೊಮ್ಮನಹಳ್ಳಿ ಗಾಣಿಗರ ಮಾಯಿಶಟ್ಟಿ ಮಗಳು ಪುಟ್ಟಮ್ಮ ವುರಫ್ ಬೋಳಮ್ಮ	4—7—92	5—7—92	70 ರೂಪಾಯಿನ ಕ್ರಯಪತ್ರ
		ನಂ. 183	ಮಳವಳ್ಳಿ ತಾಲ್ಲೂಕು ರಾಗಿಬೊಮ್ಮನಹಳ್ಳಿಯಲ್ಲಿರುವ ಗಾಣಿಗರ ಮಾಯಿಶಟ್ಟಿ ಮಗಳು ಪುಟ್ಟಮ್ಮ ವುರಫ್ ಬೋಳಮ್ಮ	ನಂಜನಗೂಡು ತಾಲ್ಲೂಕು ಸುತ್ತೂರಿನಲ್ಲಿರುವ ಅಕ್ಕಸಾಲೆ ಮುತ್ತಾಚಾರಿ ಮಗ ಕೃಷ್ಣಾಚಾರಿ	6—7—92	6—7—92	70 ರೂಪಾಯನ್ನು ವಾಪಸು ತೆಗದುಕೊಂಡಿರುತ್ತೇನೆ ಅದರ ಮೇಲೆ ಹಕ್ಕು ಇಲ್ಲವೆಂದು

ನಂಬರ.	ಆಫೀಸ್ ಹೆಸರು.	ಬುಕ್ಕು ಮತ್ತು ನಂಬರ್.	ದಸ್ತೈವಜು ಬರದುಕೊಟ್ಟವರ ಹೆಸರು ಮತ್ತು ಅಡ್ರೆಸ್ಸ್.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್ಸ್.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ಸ್ವಭಾವ.
7	ಹುಣಸೂರು ಸಬ್ ರಿಜಿಸ್ಟ್ರಿ ಆಫೀಸ್.	1ನೇ ನಂಬರ್ ಬುಕ್ಕು—ನಂ. 22	ಹುಣಸೂರು ತಾಲ್ಲೂಕು ಬೆಟ್ಟದಪುರದಲ್ಲಿರುವ ಸ್ಮಾರ್ತ ಸಂಕೇತಿ ಬ್ರಾಹ್ಮಣ ಸೂಳೆಕೆರೆ ಚಿಕ್ಕನಾರಣಪ್ಪನವರ ಮಗ ಕೃಷಿಯಿಂದ ಜೀವಿಸುವ ವೆಂಕಟಾಚಲಯ್ಯ	ಹುಣಸೂರು ತಾಲ್ಲೂಕು ಬೆಟ್ಟದಪುರದಲ್ಲಿರುವ ಸಂಕೇತಿ ಬ್ರಾಹ್ಮಣ ವೆಂಕಣಯ್ಯನವರ ಮಗ ವೆಂಕಟರಮಣಯ್ಯ	26—5—92	26—5—92	90 ರೂಪಾಯಿನ ಆಧಾರಪತ್ರ
8	ನಂಜನಗೂಡು ಸಬ್ ರಿಜಿಸ್ಟ್ರಿ ಆಫೀಸ್	1ನೇ ನಂಬರ್ ಬುಕ್ಕು-ನಂ. 776	ಬೆಂಗಳೂರಲ್ಲಿರುವ ಮಾಧ್ವ ಬ್ರಾಹ್ಮಣ ಅನಂತರಾಮಯ್ಯನವರ ಮಗ ರಘುನಾಥರಾವು	ಮೈಸೂರುನಲ್ಲಿರುವ ಶ್ರೀವೈಷ್ಣವ ಬ್ರಾಹ್ಮಣ ಶ್ರೀನಿವಾಸಾಚಾರ್ಯರ ಮಗ ಅಡ್ವೊಕೇಟು ರಾಘವಾಚಾರು	18—1—92	19—1—92	195 ರೂಪಾಯಿನ ಕ್ರಯಪತ್ರ
		ನಂ. 300	ನಂಜನಗೂಡು ತಾಲ್ಲೂಕು ತಗಡೂರಲ್ಲಿರುವ ಪಂಚಾಳದ ಚಿನ್ನದ ಕೆಲಸದ ಮುದ್ವಿರಾಚಾರಿ ಮಗ ತಾಚಂಬಳ್ಳಿ ಚನ್ನಾಚಾರಿ	ನಂಜನಗೂಡು ತಾಲ್ಲೂಕು ತಗಡೂರಲ್ಲಿರುವ ನಾಯಿಕಸಾನಿ ಸುಬ್ಬಾಸಾನಿ ಮಗಳು ಪುಟ್ಟಗೌರಾಸಾನಿ	8—7—92	8—7—92	200 ರೂಪಾಯಿನ ಆಧಾರಪತ್ರ
ಅರ್ಜೀದಾರ್ರು ಪರಿವಾರದ ಕೋಟೆಪ್ಪನು, ಮೃತಪಟ್ಟ ಸದರೀ ಲಿಂಗಪ್ಪನವರಿಗೆ ದೊಡ್ಡಪ್ಪನ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಪರಿವಾರದ ಕೋಟೆಪ್ಪನು, ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಪರಿವಾರದ ಲಿಂಗಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪರಿವಾರದ ಕೋಟೆಪ್ಪನ ಅರ್ಜಿಯನ್ನು 1895ನೇ ಇಸವಿ ಮಾರ್ಚಿ ತಿಂಗಳ ತಾರೀಖು 29ರಲ್ಲು ಕೇಳಿ ಸರ್ಟಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪರಿವಾರದ ಲಿಂಗಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895ನೇ ಇಸವಿ ಮಾರ್ಚಿ ತಿಂಗಳ 19ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

1894—95ನೇ ಇಸವಿ ಅರ್ಜಿ ನಂಬರ 188.

ಮೃತಪಟ್ಟ ಅಯ್ಯಾಜಿಯಾನೆ ಚನ್ನಬಸಪ್ಪಗವುಡರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು 1ನೇ ಗವರಮ್ಮ 2ನೇ ಅಕ್ಕ ನಾಗಮ್ಮ ಕೋಂ ಅಯ್ಯಾಜಿಯಾನೆ ಚನ್ನಬಸಪ್ಪಗವುಡ ಮೃತಪಟ್ಟ ಸದರೀ ಅಯ್ಯಾಜಿಯಾನೆ ಚನ್ನಬಸಪ್ಪಗವುಡರಿಗೆ ಇಬ್ಬರು ಹೆಂಡರು ಆಗಬೇಕೆಂಬ ಹಕ್ಕುದಾರಿ ಮೇಲೆ ಸೊರಬ ತಾಲ್ಲೂಕು ಕಸಬಾ ಮಾಗಣಿ ಮದ್ರಿ ಸ್ಥಳದ 1ನೇ ಗವರಮ್ಮ 2ನೇ ಅಕ್ಕ ನಾಗಮ್ಮ ಇವರು, ಡಿಟೋ ತಾಲ್ಲೂಕು ಮದ್ರಿ ವಾಸಸ್ಥರಾಗಿ ಮೃತಪಟ್ಟ ಅಯ್ಯಾಜಿಯಾನೆ ಚನ್ನಬಸಪ್ಪಗವುಡರ ಜಿಂದಗಿ ಬಗ್ಯಾಗಿ ಬರತಕ್ಕ 10,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಗವರಮ್ಮ 2ನೇ ಅಕ್ಕ ನಾಗಮ್ಮ ಇವರ ಅರ್ಜಿಯನ್ನು 1895ನೇ ಇಸವಿ ಮೇ ತಿಂಗಳ ತಾರೀಖು 31ರಲ್ಲು ಕೇಳಿ ಸರಟಫಿಕೇಟ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸದರೀ ಚನ್ನಬಸಪ್ಪಗವುಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1895ನೇ ಇಸವಿ ಮಾರ್ಚಿ ತಿಂಗಳ 20ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ್.

ನೋಟಿಫಿಕೇಷನ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 11ನೇ ಮಾರ್ಚಿ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮಾಹೆ ಮಜಕೂರು ತಾರೀಖು 15ರಲ್ಲಿ ತರೀಕೆರೆ ಡಿಪೋದಲ್ಲಿ ಆಗಬೇಕೆಂದು ನಿಶ್ಚೈಶಿದ್ದ ನಾಟಾವಗೈರೆ ಹರಾಜನ್ನು 1895ನೇ ಇಸವಿ ಏಪ್ರೆಲ್ 22ಕ್ಕೆ ಅಡ್ಜರ್ನ್ ಮಾಡಿರುತ್ತೆ.

ಸಿ. ಎಂ. ರಸ್ಸೆಲ್,
ಡೆಪ್ಯುಟಿ ಕನ್ಸರವೇಟರ್ ಆಫ್ ಫಾರೆಸ್ಟ್.

ಮಿಶ್ರವಿಲ್ಲದ ಸಲ್ಫೇಟ್ ಆಫ್ ಕ್ವಿನಿಯನ್ ಯಂಬ ಔಷಧ.

ಬಂಗಾಳಾ ಗವರ್ನ್ಮೆಂಟಿನ ಶಿಂಕೋನಾ ಪ್ಲಾಂಟೇಷನಿನಲ್ಲಿ ತಯಾರ್ಮಾಡಲ್ಪಟ್ಟದ್ದು.
ಈ ಕ್ವಿನಿಯನ್ನಿನ ಖರೀದಿಯು ಇದರಡಿ ಕಂಡಂತೆ ಇರುವದು.

ಪೌಂಡ್ ವೆಳ್ಳೆ ಡಬ್ಬಿ 1ಕ್ಕೆ	ರೂ. 16	ಅಥವಾ ಟಪ್ಪಾಲ್ ಹಾಸಲ್ ದೇಖೀಲ್ ರೂ. ..	16–12–0
$\frac{1}{2}$ ಡಿಟೋ	ರೂ. 8	ಡಿಟೋ	8– 8–0
$\frac{1}{4}$ ಡಿಟೋ	ರೂ. 4	ಡಿಟೋ	4– 8–0

ಪರೀಕ್ಷೆಯಲ್ಲಿ ಈ ಕ್ವಿನಿಯನ್ ಕೇವಲ ಶುದ್ಧವಾದದ್ದೆಂಬದಾಗಿ ಕಂಡುಬಂದಿರುತ್ತೆ; ಮತ್ತು ಕೀಳ್ ತರಹೇದ ಕಿಲಬು ಪದಾರ್ಥವನ್ನು ಸಿಂಕೋನಾ ಸಂಬಂಧವಾದ ಕೆಟ್ಟ ಭಸ್ಮಗಳು ಮನಃಪೂರ್ತಿಯಾಗಿ ಮಿಶ್ರ ಮಾಡಲ್ಪಡದೆಯೂ ಖಾತರ್ ಮಾಡಲ್ಪಟ್ಟಿರುತ್ತೆ. ಇದರನ್ನ ಗವರ್ನ್ಮೆಂಟ್ ಆಫಿಸರರುಗಳಿಗೆ ನಗದ್ ಖರೀದಿಗೆ ಮಾತ್ರ ಕಲ್ಕತ್ತಾ ಬಳಿಯಣ ಸೀಬ್ ಪುರದಲ್ಲಿರುವ ಬೊಟಾನಿಕಲ್ ಗಾರ್ಡನ್ ಯಾ ತೋಟದ ಸೂಪರಿಂಟೆಂಡೆಂಟರವರಿಂದ ಸರಬರಾಯಿ ಮಾಡಲ್ಪಡುವದು. ಬಿಳೀ ಬಣ್ಣದ್ದಾಗಲಿ ಅಥವಾ ಕಪ್ಪಿನ ಮೇಲೆ ಮಿಶ್ರಬಣ್ಣದ್ದಾಗಲಿ ಪಡೆಯಬಹುದು.

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ. ಮತ್ತು ಸದರೀ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು.	
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕೂಂ 155ನೇ ನಂಬರ್ ಉಳ್ಳ ಗವರ್ನಮೆಂಟ ಇಸ್ತಿಹಾರ್ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್ ಶಾನುಭೋಗರುಗಳು ಆಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನಭಾವಿಕೆ ಕೆಲಸ ನೋಡುತ್ತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ವಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸ್‌ಗಳು:—

ಮೊದಲನೇ ದಫಾ ಘಾಯಿಷ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸಗಳಿಗೆ :—

ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗೆರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	" ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ	ಡಿಟೋ. ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	.. ..	0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ ಆರ್ಡರ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರು ದಿವಾನರವರ ಚೀಫ್ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್ಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್ನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ಗೆಜೆಟ್ಟನಲ್ಲಿ ಛಾಪಿಸ್ಲಪಡುತ್ತೆಂಬ ಖಾತರ್ ಯಿಲ್ಲ.

ಟಿ. ಟಿ. ಲೆನಾರ್ಡ್,
ಮೈಸೂರ ಗೆಜೆಟ್ ಕಂಪೈಲರ್.

Mysore Govt. Central Press, Bangalore.—1895.

ಮೈಸೂರ ಗೆಜೆಟ್.

ನಂ. 12] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಏಪ್ರಿಲ್ ತಾ|| 4, ಸನ್ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

೧ನೇ ಭಾಗ.

ಮೈಸೂರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 21ನೇ ಮಾರ್ಚಿ 1895.

ನಂ. 15372.—ಜಿ. 4401.—ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ 454ನೇ ಸೆಕ್ಷನ್ ಅನುಸರಿಸಿ, ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಸಿ. ಶ್ರೀಕಂಠೇಶ್ವರಯ್ಯರ್ ಯವರು, 1894ನೇ ಇಸವಿ ಆಗಸ್ಟ್ 25ನೇ ಮಾರ್ಖುಂವುಳ್ಳ 3368.—ಜಿ. 823ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಅವರಿಗೆ ಕೊಡಲ್ಪಟ್ಟ ಮೂರುತಿಂಗಳ ಪ್ರಿವಿಲೀಜ್ ರಜಾವನ್ನು, ಸನ್1895ನೇ ಇಸವಿ ಏಪ್ರೈಲ್ 17ನೇ ತಾರೀಖು ಮೊದಲು ಉಪಯೋಗಿಸಿಕೊಳ್ಳುವದಕ್ಕೆ ಹುಕುಂ ಕೊಡಲ್ಪಟ್ಟಿರುತ್ತಾರೆ.

ತಾರೀಖು 22ನೇ ಮಾರ್ಚಿ 1895.

ನಂ. 15629.—ಜಿ. 4451.—ಮೈಸೂರ ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆಸ್ಟರ್ ಡಿ. ಶಾಮರಾಯರವರಿಗೆ, 1895ನೇ ಇಸವಿ ಫೆಬ್ರುವರಿ 19ನೇ ಮಾರ್ಖುಮುಳ್ಳ 12707.—ಜಿ. 2834ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆ

ಯ ಮೂಲಕ ಕೊಡಲ್ಪಟ್ಟ ಒಂದು ತಿಂಗಳ ಪ್ರಿವಿಲೇಜ್ ರಜಾಪೈಕಿ, 1895ನೇ ಫಿಬ್ರವರಿ 25ನೇ ತಾರೀಖು ಮೊದಲು ಹದಿನಾಲ್ಕು ದಿನಗಳೇ ಉಪಯೋಗಿಸಿಕೊಂಡಿರುತ್ತಾರೆಯಾಗಿ, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ ಅನುಸರಿಸಿ, ಸದರೀ ರಜಾ ಕ್ಯಾಜುಯಲ್ ರಜಾವಿಗೆ ಬದಲಾಯಿಸಲ್ಪಟ್ಟು ಉಳಿದ ಭಾಗವು ರದ್ದು ಮಾಡಲ್ಪಟ್ಟಿದೆ.

ಹುಕುಂ ಬಮೋಜಿಬ್,
ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರಟರಿ.

ತಾರೀಖು 21ನೇ ಮಾರ್ಚಿ 1895.

ನಂ. 15521.—ಜೆ. 943.—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 173ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮೆಸ್ಟರ್ ಪಿ. ಆರ್. ಡಬ್ಲಿಯು. ವೆದರಾಲ್ಡ್ ಯವರು, 1895ನೇ ಇಸವಿ ಏಪ್ರಿಲ್ ಗುರ್ನೇ ತಾರೀಖು ಮೊದಲು 7ನೇ ತಾರೀಖು ವರಿಗೆ ಉಭಯದಿನಗಳೂ ಸೇರಿ ಯೇಳು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 15562.—ಜೆ. 946.—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 203 ಮತ್ತು 204 ಆರ್ಟಿಕಲ್‌ಗಳನ್ನನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ಮುನ್ಸಿಫ್‌ರಾದ ಮೆಸ್ಟರ್ ಬಿ. ಶ್ರೀನಿವಾಸರಾಯರವರು, 1895ನೇ ಇಸವಿ ಮಾರ್ಚಿ 20ನೇ ತಾರೀಖು ಮೊದಲು ಅಥವಾ ಅವರದನ್ನುಪಯೋಗಿಸಿಕೊಳ್ಳುವ ತಾರೀಖು ಮೊದಲು, ಪೂರಾ ತಲಬಿನಮೇಲೆ ಇಪ್ಪತ್ತು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟು ಕೋರ್ಟ್ ಶಿರಸ್ತೇದಾರರಾದ ಮೆಸ್ಟರ್ ವೈದ್ಯಲಿಂಗಮೊದಲಿಯಾರ್ರವರು, ಮೆಸ್ಟರ್ ಶ್ರೀನಿವಾಸರಾಯರವರು, ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತತ್ಕಾಲಕ್ಕೆ ಕಡೇತರಗತಿಯಲ್ಲಿ ನೆಲಮಂಗಲದ ಮುನ್ಸಿಫ್‌ರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜಿಬ್,
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರಟರಿ.

ಮೈಸೂರ ಗೆಜೆಟ್.

ವಿಶೇಷ ಪತ್ರಿಕೆ.

ಸರ್ಕಾರದಿಂದ ಶಾಯಿಷ್ ಆದ್ದು.

ಬೆಂಗಳೂರು, ಗುರುವಾರ, ಜನವರಿ ತಾ|| 3, ಸನ್ 1895.

ಪ್ರಸಿದ್ಧ ಪತ್ರಿಕೆ.

ಬೆಂಗಳೂರು, ಸನ್ 1895ನೇ ಇಸವಿ ಜನವರಿ 3ನೇ ತಾರೀಖು.

ಸನ್ 1894ನೇ ಇಸವಿ ಡಿಸೆಂಬರು 29ನೇ ತಾರೀಖಿನ ಮೈಸೂರು ಗೆಜೆಟ್ ವಿಶೇಷಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ ಅದೇ ತಾರೀಖಿನ ಪ್ರಸಿದ್ಧ ಪತ್ರಿಕೆಯನ್ನು ಅನುಸರಿಸಿ, ಸಂಸ್ಥಾನದ ಎಲ್ಲಾ ಕೋರ್ಟು ವ ಕಛೇರಿಗಳು ತಿಂಗಳು 10ನೇ ಗುರುವಾರದ ವರಿಗೂ, ಆ ತಾರೀಖು ಸಹ, ಮುಚ್ಚಲ್ಪಡತಕ್ಕದ್ದು.

ಹುಕುಂ ಬಮೋಜಿಬ್,

ಎಲ್. ಅನಂತಸ್ವಾಮಿರಾವ್,
ಅ|| ಚೀಫ್ ಸೆಕ್ರೆಟರಿ.

MYSORE GOVERNMENT CENTRAL PRESS, BANGALORE.—1895.

ಮೈಸೂರ ಗೆಜೆಟ್.

ನಂ. 1 ಸರ್ಕಾರದಿಂದ ಫಾಯಿಷ್ ಆದ್ದು. ಸನ್ 1895.

ಬೆಂಗಳೂರು, ಗುರುವಾರ, ಜನವರಿ ತಾ॥ 17, ಸನ್ 1895.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರಾ ಮಹಾರಾಜಾ ರಾಜೇಸ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕ್ಸ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ಸು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು; ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟೆ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರಿಂದ ಮಂಜೂರ್‌ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ಮೈಸೂರು ತಾರೀಖು 14ನೇ ಜನವರಿ 1895.

1895ನೇ ಇಸವಿ ಫಿಬರವರಿ 1ನೇ ತಾರೀಖು ಶುಕ್ರವಾರ ದಿವಿ ಹನ್ನೆರಡುವರೆ ಘಂಟೆಗೆ ಸಲ್ಲುವ ವೃಷಭ ಲಗ್ನದಲ್ಲಿ ಶ್ರೀಮನ್ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ರವರಿಗೆ ಪಟ್ಟಾಭಿಷೇಕ ಮಹೋತ್ಸವವು ಮೈಸೂರು ಅರಮನೆಯಲ್ಲಿ ನಡೆಯುವದೆಂದು ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ತಾರೀಖು 11ನೇ ಡಿಸೆಂಬರ್ 1894.

ನಂ. 9636.—ಆರ್. ಯಫ್'. 215—92. ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರು, XXIIIನೇ ನಂಬರ್ ಲ್ಯಾಂಡ್ ರೆವಿನ್ಯೂ ರೂಲಿನ 6ನೇ ಪ್ಯಾರಾ ಅನಂತರ ಇದರಡಿ ಬರುವದನ್ನು 6Aನೇ ಪ್ಯಾರಾ ಯಂಬದಾಗಿ ಸೇರಿಸಲ್ಪಡತಕ್ಕದ್ದೆಂದು ಆಜ್ಞಾಪಿಸುತ್ತಾರೆ :—

"6 A. 3, 4, 5 ವ 6 ಪ್ಯಾರಾಗಳಲ್ಲಿ ಅಡಗಿರತಕ್ಕ ಹಿಂದಿನ ರೂಲ್ಸ್‌ಗಳು, ಯಾವ ರೈಲ್ವೇ ಸ್ಟೇಷನ್ ಸರಹದ್ದಿನ ಅರ್ಧ ಮೈಲ್ ಒಳಗಾಗಿ ಇರುವಂಥಾ ಜಮೀನುಗಳಿಗೆ ಲಗಾವಾಗತಕ್ಕದ್ದಲ್ಲವು. ಈ ವಿಷಯಗಳಲ್ಲಿ 63 ವ 64ನೇ ಸೆಕ್ಷನ್‌ಗಳ ನಿಯಮಗಳು ಖಂಡಿತವಾಗಿ ಜಾರೀಲಿ ತರಲ್ಪಡತಕ್ಕದ್ದು.

ಮೇಲೆ ನಮೂದ್ಮಾಡಲ್ಪಟ್ಟ ಸರಹದ್ದುಗಳವಳಗಿನ ಯಾವ ಜಮೀನನ್ನು ಹೊಂದುವದಕ್ಕೇ ಆಗಲಿ ಸಾಗುವಳಿಗೆ ಅಲ್ಲದ ಇತರ ಕೆಲಸಗಳಿಗೆ ದರಖಾಸ್ತು ಬಂದ ಸಮಯದಲ್ಲಿ ಲ್ಯಾಂಡ್ ರೆವಿನ್ಯೂ ಕೋಡಿನ 48ನೇ ಸೆಕ್ಷನ್ (ಬಿ) ವ (ಸಿ) ಕ್ಲಾಜುಗಳಿಗನುಸಾರವಾಗಿ ಯಾವದಾದರೂ ಕಂದಾಯವನ್ನು ಹಾಕುವದಕ್ಕೂ ಅಥವಾ ಆ ಜಮೀನನ್ನು ಕೊಡುವದಕ್ಕೂ ಮುಂಚೆ ಡೆಪ್ಯುಟಿ ಕಮಿಷನರವರು ಮುಂದಾಗೇ ಗವರ್ನಮೆಂಟಿನವರ ಮಂಜೂರಾತಿಯನ್ನು "ಪಡಿಯತಕ್ಕದ್ದು."

2. XXನೇ ನಂಬರ್ ಲ್ಯಾಂಡ್ ರೆವಿನ್ಯೂ ರೂಲಿನ 7ನೇ ಪ್ಯಾರಾ ಅನಂತರ ಇದರಡಿ ಬರುವದನ್ನು 7 A. ಪ್ಯಾರಾ ಯಂಬದಾಗಿ ಸೇರಿಸತಕ್ಕದ್ದು.

"7 A, ಯಾವದಾದರೂ ರೈಲ್ವೇ ಸ್ಟೇಷನ್ ಸರಹದ್ದಿನ ಅರ್ಧ ಮೈಲ್ ಒಳಗಾಗಿ ಇರತಕ್ಕ ಹಿಡುವಳೀಲಿ ಇಲ್ಲದ ಸರ್ಕಾರ್ ಜಮೀನು, ಪ್ರತಿ ಸಂದರ್ಭದಲ್ಲಿಯೂ ಗವರ್ನಮೆಂಟಿನವರ ಮಂಜೂರಾತಿಯನ್ನು ಮುಂದಾಗಿ ಪಡಿಯದೇ ಯಾವ ವಿಧವಾದ ಸ್ವಂತ ಹಿಡುವಳಿಗೋಸ್ಕರವಾಗಲಿ, ಕೊಡಲ್ಪಡಕೂಡದು.

ತಾರೀಖು 15ನೇ ಡಿಸೆಂಬರ್ 1894.

ನಂ. 9937.—ಜಿ. 563.—1890ನೇ ಇಸವಿ VIನೇ ನಂಬರ್ ಆರ್ಮ್ಸ್ ರೆಗ್ಯುಲೇಷನಿನ 22ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರು ಸರ್ಕಾರದವರು ಸದರೀ ರೆಗ್ಯುಲೇಷನಿನ 8 ವ 9ನೇ ಸೆಕ್ಷನ್‌ಗಳಲ್ಲಿ ಅಡಗಿರತಕ್ಕ ನಿರೋಧಗಳಿಂದ ಚಿತ್ರದುರ್ಗದ ಮುರ್ಗಿ ಮಠದ ಶ್ರೀ ಮುನಿರಂಜನ ಮುಪ್ಪಿನ [illegible]ಸ್ವಾಮಿಯವರನ್ನು ವಿನಾಯಿಸಿ ತ್ತಾರೆ.

ತಾರೀಖು 18ನೇ ಡಿಸೆಂಬರ್ 1894.

900.—ಯಲ್.—ಯಫ್'. 257—92. 1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ
ಯಮಗಳನುಸರಿಸಿ ಇದರಿಂದ ಪ್ರಕಟ ಪಡಿಸುವದೇನಂದರೆ, ಇದಕ್ಕೆ ಲಗತ್ಮಾಡಲ್ಪಟ್ಟ ಷೆಡ್ಯೂಲಿನಲ್ಲಿ ನಮೂದಾದ
ಸಿಪಲ್ ಕೆಲಸಕ್ಕೆ ಅಂದರೆ ಮೇಗಳ ಕೆರೆಯಿಂದ ಚನ್ನರಾಯಪಟ್ಣದಲ್ಲಿನ ಬಂಡಿಪೇಟಿನ ಪರಿಯಂತ ಒಂದು ರಸ್ತೇ
ೇಕಾಗಿರುತ್ತೆ:—

—ಹಾಸನ.
—ಚನ್ನರಾಯಪಟ್ಣ.
—ಚನ್ನರಾಯಪಟ್ಣ.
—ಚನ್ನರಾಯಪಟ್ಣ.
ದಾರನ ಹೆಸರು—ಚಾಮನಹದ್ದೇಗೌಡ.

ಬೇಕಾದ ವಿಸ್ತೀರ್ಣ—ಸರ್ವೇ ನಂಬರ್ 15—4 ಕುಂಟೆ ಖುಷ್ಕಿ ಜಮೀನು.
ಕಂದಾಯ—2 ಆಣೆ
ಚಕ್ಕುಬಂದೀ—ಪೂರ್ವಕ್ಕೆ ಸರ್ವೇ ನಂಬರ್ 16—17.
ಪಶ್ಚಿಮಕ್ಕೆ ಸರ್ವೇ ನಂಬರ್ 21 ವ ವೋಣಿ.
ಉತ್ತರಕ್ಕೆ ಚನ್ನರಾಯಪಟ್ಣದ ಪ್ಯಾಟಿ.
ದಕ್ಷಿಣಕ್ಕೆ ಮ್ಯುನಿಸಿಪಲ್ ರಸ್ತೆ.
ಷರಾ—ರಸ್ತೇ ಮಾಡುವದಕ್ಕೆ.

ತಾರೀಖು 20ನೇ ಡಿಸೆಂಬರ್ 1894.

ನಂ. 10259.—ಜಿ. 2390.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಮೇರೆ, ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ವೈಸ್ ಪ್ರೆಸಿಡೆಂಟ್, ಮೆಸ್ಟರ್ ಹೆಚ್. ನಂಜುಂಡರಾಜ್ ಅರಸಿನವರಿಗೆ ಕ್ರಿಸ್‌ಮಸ್ ರಜಾಗಳಾದನಂತರ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 20 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೆಸ್ಟರ್ ಹೆಚ್. ನಂಜುಂಡರಾಜ್ ಅರಸಿನವರು ರಜಾದಲ್ಲಿರುವ ಕಾಲದಲ್ಲಿ, ಸಿಟಿ ಮ್ಯುನಿಸಿಪಾಲಿಟಿ ಮ್ಯುನಿಸಿಪಲ್ ಇಂಜನೀರವರು ತಮ್ಮ ಸ್ವಂತ ಕೆಲಸಗಳೊಂದಿಗೆ ವೈಸ್ ಪ್ರೆಸಿಡೆಂಟ್ ಆಫಿಸ್ ಚಾರ್ಜನ್ನು ವಹಿಸಿರತಕ್ಕದ್ದು.

ಮೈಸೂರ ಗೆಜೆಟ್.

ನಂ. 12] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಏಪ್ರೆಲ್ ತಾ|| 4, ಸ್ನ 1895.

೨ನೇ ಭಾಗ.

ಇಂಡ್ಯಾಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ.)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲ್ಯಾಂಡ್ ಪೋರ್ಟರು ಬ್ರದರಸ್ರ ಡಿಟ್ಟೋ	,, 170
1	ಮದ್ರಾಸ್ ಓಕ್ಸರವರ ಡಿಟ್ಟೋ	,, 250
1	ಡಿಟ್ಟೋ ಡಿಟ್ಟೋ ಡಿಟ್ಟೋ	,, 188
1	ಡಿಟ್ಟೋ ಬೋರ್ರ್ಯಾಮ್ರವರ ಡಿಟ್ಟೋ	,, 85

ಖರೀದೀದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ, ಅಸಲ್ ಖರೀದಿಯಲ್ಲಿ ಶೇಕಡಾ $12\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತರಫ್.

ರೂಲ್ ಆಫ್ ಪ್ರಾಕ್ಟಿಸ್ ಎಂಬ ಆಚರಣ ನಿಬಂಧನೆ ನಂಬರ್ 61.

ತಾರೀಖು 16ನೇ ಮಾರ್ಚಿ 1895.

ಗವರ್ನಮೆಂಟಿನವರಾಗಲಿ ಅಥವಾ ಇತರ ಇಲಾಖೆ ಹುದ್ದೇದಾರರಾಗಲಿ ಕ್ರಿಮಿನಲ್ ಮೊಕದ್ದಮೆಗಳಲ್ಲಿ ರೆಕಾರ್ಡುಗಳನ್ನು ಕಳುಹಿಸಬೇಕೆಂದು ಅಪೇಕ್ಷಿಸಿದಾಗ ಆಚರಿಸಬೇಕಾದ ನಡವಳಿಕೆಗಳನ್ನು ಕ್ರಮಪಡಿಸತಕ್ಕಂಥಾ, ಮತ್ತು ಪೋಲೀಸ್ ಇಲಾಖೆ ಹುದ್ದೇದಾರರು ರೆಕಾರ್ಡುಗಳನ್ನು ನೋಡುವ ಭಾಗದಲ್ಲಿ ವಿಧಾಯಕ ಮಾಡತಕ್ಕಂಥಾ, ಈ ಕೆಳಗೆ ಬರೆದಿರುವ ನಿಬಂಧನೆಗಳನ್ನು ಮೈಸೂರು ಚೀಫ್ ಕೋರ್ಟಿನವರು ಗವರ್ನಮೆಂಟಿನವರ ಮಂಜೂರಾತಿಯಿಂದ, ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ 553ನೇ ಸೆಕ್ಷನ್ ಪ್ರಕಾರ ವಿಧಾಯಕ ಮಾಡಿದಾರೆ.

I. ಯಾವದಾದರೂ ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಗವರ್ನಮೆಂಟಿನವರು ರೆಕಾರ್ಡನ್ನು ನೋಡಬೇಕೆಂದು ಅಪೇಕ್ಷಿಸಿದರೆ, ಆ ಕಟ್ಟು ಕಳುಹಿಸಬೇಕೆಂದು ಚೀಫ್ ಸೆಕ್ರೆಟರಿಯಾಗಲಿ ಅಥವಾ ಈ ಭಾಗದಲ್ಲಿ ಸರ್ಕಾರದಿಂದ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯೇ ಆಗಲಿ ತನ್ನ ರುಜೂನಿಶಿ ಸೆಷನ್ ಜಡ್ಜರಿಗಾದರೂ ಸರಿಯೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗಾದರೂ ಸರಿಯೆ, ಯಾರಲ್ಲಿ ವಿಚಾರಣೆ ನಡೆಯುತ್ತೆಯೋ ಅಂಥವರಿಗೆ ಲೆಟರನ್ನು ಕಳುಹಿಸತಕ್ಕದ್ದು. ಅದರಂತೆ ಸೆಷನ್ ಜಡ್ಜರಾಗಲಿ ಡಿಸ್ಟ್ರಿಕ್ಟ ಮಾಜಿಸ್ಟ್ರೇಟರಾಗಲಿ ಅಂಥಾ ರೆಕಾರ್ಡನ್ನು ಕಳುಹಿಸಿಕೊಡತಕ್ಕದ್ದು.

II. ಈ ಮೇಲೆ ಹೇಳಿದ ರೀತಿಯಲ್ಲಿ ವಿನಾ, ಮತ್ತೆ ಯಾವ ಸಂದರ್ಭದಲ್ಲಿಯೂ ಯಾವ ಕ್ರಿಮಿನಲ್ ಕೋರ್ಟಿನವರಾದರೂ ಸರಿಯೆ ಯಾವ ಇತರ ಕೋರ್ಟಿಗಾಗಲಿ, ಅಧಿಕಾರಿಗಾಗಲಿ, ಸರ್ಕಾರದ ಇತರ ಇಲಾಖೆಗಾಗಲಿ ರೆಕಾರ್ಡುಗಳನ್ನು ಕಳುಹಿಸಕೂಡದು. ಆದರೆ ಹಾಗೆ ರೆಕಾರ್ಡುಕಳುಹಿಸಬೇಕೆಂದು ಅಪೇಕ್ಷಿಸತಕ್ಕ ದರಖಾಸ್ತು ಆಗ ಜಾರಿಯಲ್ಲಿರತಕ್ಕ ಲಾ ಅಥವಾ ನಿಬಂಧನೆಯ ಪ್ರಕಾರ ಮಾಡಲ್ಪಟ್ಟದ್ದರೆ ಮಾತ್ರ ರೆಕಾರ್ಡುಗಳನ್ನು ಕಳುಹಿಸಿಕೊಡಬಹುದು.

III. ಸರ್ಕಾರದ ಯಾವ ಇಲಾಖೆಯವರಾದರೂ ಕ್ರಿಮಿನಲ್ ಕೋರ್ಟಿನಲ್ಲಿ ಪ್ರಾಸಿಕ್ಯೂಷನ್ ಮಾಡಿದರೆ, ಅಥವಾ ಸರ್ಕಾರದ ಉದ್ಯೋಗಸ್ತನು ಅಪರಾಧಿಯಾಗಿದ್ದರೆ, ಪ್ರಾಸಿಕ್ಯೂಷನ್ ಮಾಡಿದ ಇಲಾಖೆ ಮೊಖ್ತೇಸರರಿಗಾಗಲಿ ಅಥವಾ ಅಂಥಾ ಅಪರಾಧಿಯು ಯಾರಿಗೆ ತಾಬೇದಾರನಾಗಿ ಇದಾನೆಯೋ ಅಂಥಾ ಇಲಾಖೇ ಮೊಖ್ತೇಸರವರಿಗೆ ಆಗಲಿ, ಆಖೈರ್ ತೀರ್ಮಾನವಾದ ಆರ್ಡರು ಯಾ ಜಡ್ಜ್ಮೆಂಟು ನಕಲನ್ನು ಮುಫತ್ತಾಗಿ ಕಳುಹಿಸತಕ್ಕದ್ದು.

IV. ಹಿಂದಿನ ಪ್ಯಾರಾದಲ್ಲಿ ನಮೂದಾಗಿರುವಂತೆ ಮುಫತ್ತಾಗಿ ಕಳುಹಿಸಬೇಕಾದ ಆಖೈರ್ ಆರ್ಡರು ಯಾ ಜಡ್ಜ್ಮೆಂಟ್ ಕಾಪಿಯನ್ನೇ ಅಲ್ಲದೆ ದರೋಬಸ್ತು ರೆಕಾರ್ಡುಗಳ ಕಾಪಿಗಳನ್ನೂ ಕಳುಹಿಸಬೇಕೆಂದು ಅಂಥಾ ಇಲಾಖಾ ಮೊಖ್ತೇಸರರು ಅಪೇಕ್ಷಿಸಿದರೆ, ಆ ಇಲಾಖಾ ಮೊಖ್ತೇಸರರು ಸದರೀ ಜಡ್ಜು ಅಥವಾ ಮಾಜಿಸ್ಟ್ರೇಟರವರಿಗೆ ಬರೆಯತಕ್ಕದ್ದು; ಮತ್ತು ರೆಕಾರ್ಡಿನ ನಕಲು ಬರೆದುಕೊಂಡು ಬರುವುದಕ್ಕಾಗಿ ತಮ್ಮ ಇಲಾಖೆಯ ಒಬ್ಬ ಅಧಿಕಾರಿ ಅಥವಾ ಮುನಷಿಯನ್ನು ಕಳುಹಿಸಿಕೊಡತಕ್ಕದ್ದು. ಈ ಕೆಲಸಕ್ಕಾಗಿ ನೇಮಕವಾಗಿರುವ ಅಧಿಕಾರಿ ಯಾ ಮುನಷಿಯೂ ಲೈಸೆನ್ಸ್ ಕಾಪಿ ಇಸ್ಟಿನಂತೆ ತಿಳಿಯಲ್ಪಟ್ಟು, ಅಂಥಾ ಕೋರ್ಟಿನಲ್ಲಿಯೇ, ಮತ್ತು ಆ ಕೋರ್ಟಿನ ತಾಬೇದಾರರಲ್ಲಿ ಮುಖಂಡನಾದ ಅಧಿಕಾರಿಯ ಮೇಲ್ ವಿಚಾರಣೆಗೆ ಒಳಪಟ್ಟು, ಆ ಕಾಪಿಯನ್ನು ಮಾಡತಕ್ಕದ್ದು.

V. ಕ್ರಿಮಿನಲ್ ವಿಚಾರಣೆಯ ಅಥವಾ ಅಪ್ಪೀಲಿನ ಕಟ್ಟನ್ನು ನೋಡುವುದು, ನಡೆದ ತಪ್ಪಿತವನ್ನು ಪತ್ತೇ ಮಾಡುವುದಕ್ಕಾದರೂ ಸರಿಯೆ, ನಡೆಯದೆ ಇರುವಾಗ ಅದನ್ನು ನಿಲ್ಲಿಸುವುದಕ್ಕಾದರೂ ಸರಿಯೆ, ಅನುಕೂಲಿಸುವುದೆಂತಲಾಗಲಿ, ಅಥವಾ ಆ ಮೊಕದ್ದಮೆಗೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳ ನಡತೆಯನ್ನು ಕುರಿತು ಮಾಡುವ ವಿಚಾರಣೇ ವಿಷಯದಲ್ಲಿ ಬೇಕಾದ್ದೆಂತಲಾಗಲಿ, ಇನ್ಸ್ಪೆಕ್ಟರ ಅಧಿಕಾರಕ್ಕೆ ಕಡಮೆ ಇಲ್ಲದ ದರ್ಜೆಯುಳ್ಳ ಪೋಲೀಸ್ ಅಧಿಕಾರಿಗೆ ತೋರಿಬಂದರೆ, ಅಂಥಾ ಅಧಿಕಾರಿಯು ಆ ರೆಕಾರ್ಡು ಯಾರ ಕೋರ್ಟಿನಲ್ಲಿ ಇದೆಯೊ ಅಂಥಾ ಸೆಷನ್ ಜಡ್ಜ್ ಅಥವಾ ಇತರ ಮಾಜಿಸ್ಟ್ರೇಟಿಗೆ ಅರ್ಜಿಮಾಡಿಕೊಂಡು, ಆ ರೆಕಾರ್ಡನ್ನು ನೋಡಲು ಅಪ್ಪಣೆಯಾಗಬೇಕೆಂದು ಕೇಳಿ ಕೊಳ್ಳಬಹುದು.

VI. ಮೇಲಿನ ನಿಬಂಧನೆಯಲ್ಲಿ ನಮೂದಿಸಿದ ಅರ್ಜಿಯು ಲಿಖಿತ ಮೂಲಕವಾಗಿರಬೇಕು. ಅದರಲ್ಲಿ ನೋಡಬೇಕೆಂದು ಅಪೇಕ್ಷಿಸುವ ರೆಕಾರ್ಡಿನ ಸ್ವಭಾವವೂ ಮತ್ತು ಅದನ್ನು ನೋಡಬೇಕಾದ ಉದ್ದೇಶವೂ ನಮೂದಾಗಬೇಕು. ಮತ್ತು ಸೆಷನ್ ಜಡ್ಜರು ಅಥವಾ ಮಾಜಿಸ್ಟ್ರೇಟರು ತಮಗೆ ಯುಕ್ತತೋರಿದಂತೆ ಅಂಥಾ ಅರ್ಜಿಯನ್ನು ನಡಿಸಿಕೊಡಬಹುದು, ಅಥವಾ ತಿರಸ್ಕರಿಸಬಹುದು, ಅದನ್ನು ತಿರಸ್ಕರಿಸಿದರೆ, ಸೆಷನ್ ಜಡ್ಜರು ಅಥವಾ ಮಾಜಿಸ್ಟ್ರೇಟರು ಅದನ್ನು ತಿರಸ್ಕರಿಸಿದ್ದಕ್ಕೆ ಕಾರಣವನ್ನು ನಮೂದಿಸತಕ್ಕದ್ದು, ಮತ್ತು ರೆಕಾರ್ಡನ್ನು ನೋಡಬೇಕೆಂದು ಅಪೇಕ್ಷಿಸಿದ ಪೋಲೀಸ್ ಅಧಿಕಾರಿಗೆ ಅಂಥಾ ಕಾರಣವನ್ನು ನಮೂದಿಸಿರತಕ್ಕ ಆರ್ಡರಿನ ನಕಲನ್ನು ಕಳುಹಿಸತಕ್ಕದ್ದು. ಸೆಷನ್ ಜಡ್ಜರು ಅಥವಾ ಮಾಜಿಸ್ಟ್ರೇಟರು ಅಂಥಾ ಅರ್ಜಿಯನ್ನು ನಡೆಯಿಸಿಕೊಡುವದಾದರೆ, ಕೆಳಗೆ ನಮೂದಿಸುವ ನಿಬಂಧನೆಯ ಪ್ರಕಾರ ಅಂಥಾ ರೆಕಾರ್ಡನ್ನು ನೋಡಬಹುದೆಂದು ವಿಧಿಸಿ ಈ ಭಾಗದಲ್ಲಿ ಅಪ್ಪಣೇ ಕೊಡಲು ತಕ್ಕ ಏರ್ಪಾಡನ್ನು ಮಾಡತಕ್ಕದ್ದು.

VII. ಈ ನಿಬಂಧನೆಯ ರೀತ್ಯಾ ರೆಕಾರ್ಡನ್ನು ನೋಡಬೇಕಾದರೆ, ಪೋಲೀಸ್ ಇನ್ಸ್ಪೆಕ್ಟರ ದರ್ಜೆಗೆ ಕಡಮೆಯಿಲ್ಲದ ಪೋಲೀಸ್ ಅಧಿಕಾರಿಯು ನೋಡತಕ್ಕದ್ದು. ಅಂಥಾ ಅವಲೋಕನವು ರೆಕಾರ್ಡು ಇರತಕ್ಕ ಕೋರ್ಟಿನೊಳಗೆ ನಡೆಯತಕ್ಕದ್ದು; ಮತ್ತು ಸೆಷನ್ಸ್‌ಜಡ್ಜಿ ಅಥವಾ ಮಾಜಿಸ್ಟ್ರೇಟರು ಇದಕ್ಕಾಗಿ ನೇಮಿಸಿರುವ ಅಧಿಕಾರಿಯ ರೂಬರೂ ನಡೆಯತಕ್ಕದ್ದು. ಹಾಗೆ ಅವಲೋಕನವನ್ನು ಮಾಡತಕ್ಕ ಅಧಿಕಾರಿಯು ಕೋರ್ಟಿನ ಆವರ್ಣದಿಂದ ಆ ರಿಕಾರ್ಡನ್ನಾಗಲಿ ಅದರಲ್ಲಿ ಯಾವ ಕಾಗದವನ್ನಾಗಲಿ ಹೊರಕ್ಕೆ ತೆಗದುಕೊಂಡು ಹೋಗಕೂಡದು.

ಅಪ್ಪಣೇ ಪ್ರಕಾರ,
ವಿ. ಎ. ರಾಜರತ್ನಮೊದಲಿಯಾರ್,
ಡೆಪ್ಯುಟಿ ರೆಜಿಸ್ಟ್ರಾರಾಗಿದ್ದುಕೊಂಡು ರೆಜಿಸ್ಟ್ರಾರ್ ಕೆಲಸವನ್ನು ನೋಡತಕ್ಕವರು.

ವಿದ್ಯಾಭ್ಯಾಸದ ಇಲಾಖೆ.

E. ನಂಬರ್ 43ನೇ ಪ್ರಕಟನ ಪತ್ರಿಕೆ.

ಸನ್ 1895ನೇ ಇಸವಿ ಫೆಬ್ರವರಿ ತಾರೀಖು 18.

ಇದರಡೀ ಕಂಡ ಭಾಷಾಗ್ರಂಥಗಳು ಮೈಸೂರು ವರ್ನಾಕ್ಯುಲರ್ ಅಪ್ಪರ್ ಸೆಕಂಡೆರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ. ಈ ಪರೀಕ್ಷೆಯು ಸನ್ 1895ನೇ ಡಿಸೆಂಬರ ತಿಂಗಳಿನಿಂದ ಮೈಸೂರು ದೇಶೀಯೋಪಾಧ್ಯಾಯರ ಪರೀಕ್ಷೆಗೆ ಬದಲಾಗಿ ನಡೆಸಲ್ಪಡುವುದು.

ಸನ್ 1895ನೇ ಡಿಸೆಂಬರು ತಿಂಗಳಪರೀಕ್ಷಾ ಭಾಷಾಗಂಥಗಳು.

ಕನ್ನಡ	(1)	ಕಬ್ಬಿಗರಕಾವ .. ಪದ್ಯಗಳು 1—100, ಪುಟಗಳು. 1—23
	(2)	ಕಾದಂಬರಿ ಪದ್ಯಗಳು 377—476.
	(3)	ವಿಕ್ರಮೋರ್ವಶಿನಾಟಕ, ಪಂಡಿತ ಅಯ್ಯಾಶಾಸ್ತ್ರಿಯವರಿಂದ ರಚಿಸಲ್ಪಟ್ಟದ್ದು.
	(4)	ಜಯಸಿಂಹರಾಜ ಚರಿತ್ರೆ
ಸಂಸ್ಕೃತ	(1)	ರಘುವಂಶ ಸರ್ಗಗಳು 2 ಮತ್ತು 3
	(2)	ಪಂಚತಂತ್ರಂ (ಮುಂಬೈ ಛಾಪೆ) ಒಂದನೇ ಭಾಗ ಪುಟಗಳು 1—36
ಫಾರಸಿ	(1)	ಸಿಕಂದರ್‌ನಾಮ (ಬರ್-ರಿ) ಸಿಕಂದರ್ ಎಂಬಾತನಿಗೋಸ್ಕರ ಒಂದು ದರ್ಪಣವನ್ನು ಮಾಡುವ ಭಾಗದವರಿಗೆ
	(2)	ಅನ್ವಾರಿಸೊಹಲಿ .. ಅಧ್ಯಾಯಗಳು 1—3
ಹಿಂದುಸ್ತಾನಿ	(1)	ದಿವಾನಿ ವಜೀರ್ .. ಎರಡನೇ ಅರ್ಧಭಾಗ
	(2)	ಇಬ್‌ನಲ್‌ವಖ್ತ

ಸನ್ 1896ನೇ ಡಿಸೆಂಬರು ತಿಂಗಳ ಪರೀಕ್ಷಾ ಭಾಷಾ ಗ್ರಂಥಗಳು.

ಕನ್ನಡ	(1)	ಕಬ್ಬಿಗರಕಾವ .. ಪದ್ಯಗಳು 135—239
	(2)	ಕಾದಂಬರಿ .. ಪದ್ಯಗಳು 483—583
	(3)	ನಾಗಾನಂದನಾಟಕ (ಪಂಡಿತ ಅನಂತನಾರಾಯಣ ಶಾಸ್ತ್ರಿಯವರಿಂದ ರಚಿಸಲ್ಪಟ್ಟದ್ದು)
	(4)	ಮುದ್ರಾಮಂಜೂಷ ಆಶ್ವಾಸಗಳು 1—4
ಸಂಸ್ಕೃತ	(1)	ರಘುವಂಶ .. ಸರ್ಗಗಳು 4 ಮತ್ತು 5
	(2)	ಮಾಘ .. ಮೊದಲನೇ ಸರ್ಗ
	(3)	ಪಂಚತಂತ್ರಂ (ಮುಂಬೈ ಛಾಪ) ಒಂದನೇ ಭಾಗ, ಪುಟಗಳು 37—67
ಫಾರಸಿ	(1)	ಬಹರಿಸ್ತಾನಿಜಮಿ
	(2)	ದಿವಾನಿ ಘನಿ
ಹಿಂದುಸ್ತಾನಿ	(1)	ಫರೇಜ್—ಇನ್‌ಸಾನಿ ಒಂದನೇ ಮತ್ತು ಎರಡನೇ ಭಾಗಗಳು (ವೀರರಾಜೇಂದ್ರ ಮುದ್ರಾಕ್ಷರ ಶಾಲೆ, ಪಟ್ಟಿಯಾಲ)
	(2)	ದಿವಾನಿ ಮೋಮಿನ್—ಪುಟಗಳು 1—74 ರಡ್ಡಿಫೆ—ಲ್ಯಾಂ, ವರಿಗೆ (ನೋವಲ್‌ಕಿಷೋರ್ ಮುದ್ರಾಕ್ಷರ ಶಾಲೆ)

ಇದರಡೀ ಕಂಡ ಭಾಷಾಗ್ರಂಥಗಳು ಸನ್ 1896ನೇ ಇಸವಿ ಡಿಸೆಂಬರು ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ ಪದ್ಯ	(1)	ರಾಮಾಭ್ಯುದಯ ಕಥಾಕುಸುಮಮಂಜರಿ ಸುಂದರ ಕಾಂಡ ಮೂರನೇ ಸಂಧಿ.
	(2)	ಸೂಕ್ತಿಮಂಜರಿ (ಪಂಡಿತ ಶೀತಾರಾಮಶಾಸ್ತ್ರಿಗಳವರಿಂದ ರಚಿಸಲ್ಪಟ್ಟದ್ದು) ಒಂದನೇ ಭಾಗ
	(3)	ಸುಮತಿಶತಕ (ಪಂಡಿತ ಲಕ್ಷ್ಮೀನರಸಿಂಹ ಶಾಸ್ತ್ರಿಗಳವರಿಂದ ರಚಿಸಲ್ಪಟ್ಟದ್ದು) ಮೊದಲಿನಿಂದ ಆರಿಸಲ್ಪಟ್ಟ 30 ಪದ್ಯಗಳು.
	(4)	ಪದ್ಯಸಾರ—ಪದ್ಯಗಳು 27—77

ಗದ್ಯ—ಸುಮತಿ ಮದನಕುಮಾರನ ಚರಿತ್ರೆ (ಸ್ಯಾಂಡ್ಫರ್ಡ್ ಅಂಡ್ ಮರ್ಟನ್ ಎಂಬ ಗ್ರಂಥದ ಭಾಷಾಂತರ) ಮಿಸ್ಟರ್ ಎಂ. ಎಸ್. ಪುಟ್ಟಣ್ಣ ಬಿ. ಎ. ಯವರಿಂದ ಮಾಡಲ್ಪಟ್ಟದ್ದು. ಪುಟಗಳು 1—100.

ಪದ್ಯಸಾರದಲ್ಲಿನ ಪದ್ಯಗಳು ವಿನಹ ಮೇಲೆ ನಿಯಮಿಸಲ್ಪಟ್ಟಿರುವ ಗ್ರಂಥಗಳೆಲ್ಲಾ ಇಲಾಖೆಯವರಿಂದ ಒಂದೇ ಪುಸ್ತಕವಾಗಿ ಛಾಪಿಸಲ್ಪಡುತ್ತವೆ.

ತೆಲುಗು—(1) ನಳಚರಿತ್ರಮು
(2) ವೇಣೀಸಂಹಾರ ಮತ್ತು ಮಾಳವಿಕಾಗ್ನಿಮಿತ್ರನಾಟಕಗಳ ಕಥೆ (ಮದ್ರಾಸ್ ಸ್ಕೂಲ್ ಬುಕ್ಸು ಮತ್ತು ವರ್ನಾಕ್ಯುಲರ್ ಲಿಟ್ರೇಚರ್ ಸೊಸೈಟಿಯವರಿಂದ ಛಾಪಿಸಲ್ಪಟ್ಟದ್ದು)
(3) ಕಂಠಪಾಠ—ನಳಚರಿತ್ರಮು, ಪುಟಗಳು 16—30.

ಅರವ (1) ಪಂಚತಂತ್ರಂ—ಪ್ರಸ್ತಾವನೆ ಮತ್ತು ಮೊದಲನೇ ಭಾಗ.
(2) ಎರಡನೇ ನಂಬರ್ ನೀತಿಮಂಜರಿ.
(3) ಕಂಠಪಾಠ—ಎರಡನೇ ನಂಬರ್ ನೀತಿಮಂಜರಿ, ಪದ್ಯಗಳು 65—128.

ಹಿಂದುಸ್ತಾನಿ (1) ಮುಬಾದಿ-ಉಲ್-ಇನ್ಷಾ, ನಾಲ್ಕನೇ ಭಾಗ (ಚಷ್ಮೆ ಫೇಯಿಜ್ ಮುದ್ರಾಕ್ಷರಶಾಲೆ, ಡೆಲ್ಲಿ) ಪುಟಗಳು ಸುಮಾರು 100.
(2) ಮುಜ್ಮೂವಾ-ಇ-ಸೊರ್ಖ್ ಎರಡನೇ ಭಾಗದ ಮೊದಲಿನಿಂದ ಅರ್ಧಭಾಗ.

ಸಂಸ್ಕೃತ ಆವಶ್ಯಕ ಭಾಷೆ.
(1) ಚಂಪುರಾಮಾಯಣ, ಒಂದನೇ ಮತ್ತು ಎರಡನೇ ಕಾಂಡಗಳು (ಮಹಾರಾಣಿಯವರ ಸ್ಕೂಲ್ ಛಾಪ)
(2) ಕುಮಾರ ಸಂಭವ ಆರು ಮತ್ತು ಏಳನೇ ಸರ್ಗಗಳು.

ಸಂಸ್ಕೃತ ಐಚ್ಛಿಕ ಭಾಷೆ.
ವಿಕ್ರಮಾರ್ಕ ಚರಿತ್ರಂ ಮೊದಲನೇ ಎಂಟುಕಥೆಗಳು ಪ್ರಸ್ತಾವನೆ ವಿನಹ.

ಫಾರಸಿ ಆವಶ್ಯಕ ಭಾಷೆ.
(1) ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ)
(2) ಸರ್ಮಾಯಿಖಿರಾದ್ (ಪಂಜಾಬ್ ಛಾಪ) ಪುಟಗಳು 1—112.

ಫಾರಸಿ ಐಚ್ಛಿಕ ಭಾಷೆ.
(1) ಎರಡನೇ ಫಾರಸಿ ಪುಸ್ತಕ (ಪಂಜಾಬ್ ಛಾಪ)
(2) ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ) ಪುಟಗಳು 1—48.

ಲ್ಯಾಟಿನ್ ಐಚ್ಛಿಕ ಭಾಷೆ.
ಸಿಸರ್ ಡಿಬೆಲೊಗ್ಯಾಲಿಕೊ—ಎರಡನೇ ಪುಸ್ತಕ.

ಹೆಚ್. ಜೆ. ಭಾಭಾ,
ಎಡ್ಯೂಕೇಷನ್ ಸೆಕ್ರಟರಿ.

ನಂದೀದುರ್ಗ್ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ಬಶಟ್ಟಿಪೇಟೆಯಲ್ಲಿರುವ ಚಿಕ್ಕಣ್ಣನ ವಿಷಯದಲ್ಲಿ—

ಸನ್ 1894—95ನೇ ಇಸವಿ ದಿವಾಳಿ ಕೇಸ್ ನಂಬರ್ 130.

ಹುಕುಂ,

ಮೇಲ್ಕಂಡ ಚಿಕ್ಕಣ್ಣನು, ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟಿನ ರೂಬರೂ ಅರ್ಜಿದಾರನನ್ನೂ ಮತ್ತು ಸದರೀಯವನ ಲೇಣೇದಾರರಾದ 6ನೇ ಬೆಂಗಳೂರು ಪೆಟ್ಟಯ್ಯನಪೇಟೆಯಲ್ಲಿರುವ ದೇವಾಂಗದ ಹೊನ್ನಪ್ಪನ ಯದುರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು, ತಮಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—1ನೇ ಬೆಂಗಳೂರು ಜೋರಿಪೇಟೇಲಿರುವ ದೇವಾಂಗದ ಬಳ್ಳಾಪುರದ ವೆಂಕಟರಮಣಪ್ಪ, 2ನೇ ಬೆಂಗಳೂರು ನಗರ್ತರಪೇಟೇಲಿರುವ ಅಣ್ಣಾಡಿ ಮರಿಯಪ್ಪ, 3ನೇ ಬೆಂಗಳೂರು ದೊಡ್ಡಪೇಟೆಲಿರುವ ನೂಲಿನ ಅಂಗಡಿ ಈಶ್ವರಪ್ಪ, 4ನೇ ಬೆಂಗಳೂರು ತಾರಾಮಂಡ್ಲಪೇಟೇಲಿರುವ ಚಾರುಮಯ್ಯನವರ ನಂಜುಂಡಪ್ಪ, 5ನೇ ಬೆಂಗಳೂರು ಲಿಂಗಶಟ್ಟಿಪೇಟೇಲಿರುವ ದೇವಾಂಗದ ಲಿಂಗಣ್ಣ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಚಿಕ್ಕಣ್ಣನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ತನ್ನ ಸಾಲಗಾರರಿಗೆ ಪಾವತಿಬಗ್ಯೆ ಮಾಹೆಯಾನಾ ತಪ್ಪದೆ ಕೋರ್ಟಿಗೆ (2) ರೂಪಾಯಿ ಹಾಜರ್ಮಾಡುವ ಷರತ್ತಿನಮೇಲೆ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1894ನೇ ಇಸವಿ ಡಿಸೆಂಬರ್ 22ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ.

ನಂಬರ್.	ಲೇಣೆದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ವುಂಟಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	6ನೇ ಬೆಂಗಳೂರು ಪೆಟ್ಟಯ್ಯನ ಪೇಟೇಲಿರುವ ದೇವಾಂಗದ ಹೊನ್ನಪ್ಪ ..	52–8–0	..	ಬೆಂಗಳೂರು ಸಬ್‌ಜಡ್ಜಿಯವರ ಕೋರ್ಟ್ 1892ನೇ ಇಸವಿ ಸ್ಮಾಲ್‌ಕಾಜ್ 1005ನೇ ನಂಬರ್ ಡಿಕರಿ ಮೊಬಲಗು—ಈ ಡಿಕರಿಯು ಈ ಲೇಣೆದಾರ್ ಹೊನ್ನಪ್ಪನು ಈ ದಿವಾಳಿದಾರ್ ಚಿಕ್ಕಂಣನಮೇಲೂ ಮತ್ತು ಇದೆ ನಂದಿದುರ್ಗ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನ 1894–95ನೇ ಇಸವಿ ಮಿಸ್ 116ನೇ ನಂಬರ್ ದಿವಾಳಿದಾರ್ ಚೌಡಪ್ಪನ ಮೇಲೂ ಸಹ ಪಡದ್ದಾಗಿ ಇರುತ್ತೆ.	

ಸನ್ 1895ನೇ ಇಸವಿ ಜನವರಿ 24ನೇ ತಾರೀಖಿನಲ್ಲಿ ಕೋರ್ಟಿನ ಮೊಹರು ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿದೆ.

ನಂಬರ್.	ಲೇಣೇದಾರ್ರ ಹೆಸರು.	ಮೊಬಲಗು.	ಷರಾ.
1	ವೆಂಕಟರಮಣಪ್ಪ ..	60—0—0	ಪತ್ರದ ಬಾಕಿ
2	ಮರಿಯಪ್ಪ ..	60—0—0	ಡಿಕರಿ ಮೊಬಲಗು
3	ಈಶ್ವರಪ್ಪ ..	35—0—0	ತಂಸೂಕು ಬಗೆ
4	ನಂಜುಂಡಪ್ಪ ..	60—0—0	ಡಿಕರಿ ಮೊಬಲಗು
5	ರಂಗಣ್ಣ ..	50—0—0	ತಂಸೂಕು ಬಗೆ
6	ಹೊನ್ನಪ್ಪ ..	52—8—0	ಡಿಕರಿ ಮೊಬಲಗು

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 25ನೇ ಮಾರ್ಚಿ 1895ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಾರ್‌ಗಳ ಆಫೀಸ್‌ಗಳಲ್ಲಿ ಬೇವಾರಸಾಗಿರುವ ದಸ್ತಾವೇಜುಗಳನ್ನು ಹಾಜರು ಮಾಡಿದವರಾಗಲಿ ಅಥವಾ ಅವರಿಂದ ಕ್ರಮವಾದ ಅಧಿಕಾರ ಪಡದುಕೊಂಡ ಮುಖ್ತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಆಯಾ ಸಬ್ ರಿಜಿಸ್ಟ್ರಾರ್ ಮುಂದೆ ಹಾಜರಾಗಿ ವಾಪಸು ತೆಗದುಕೊಂಡು ಹೋಗಬಹುದು. ಇಲ್ಲವಾದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅವುಗಳನ್ನು ನಾಶಪಡಿಸಲಾದೀತು.

ಆಫೀಸ್ ಹೆಸರು.	ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ಅಡ್ಡಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಂಮತು.
ಚಿಂತಾಮಣಿ	23 1892—93	ಚಿಕ್ಕಬಳ್ಳಾಪುರದಲ್ಲಿರುವ ಸ್ಮಾರ್ತ ಬ್ರಾಹ್ಮಣ ದೇಶಕುಲಕರಣಿ ನೂರಪ್ಪನವರ ಕೊಮಾರ ಶೀತಾರಾಮಪ್ಪ	ಚಿತ್ತೂರು ಜಿಲ್ಲಾ ಪುಂಗನೂರು ತಾಲ್ಲೂಕು ಚಂಬುಕೂರುನಲ್ಲಿರುವ ಬ್ರಾಹ್ಮಣ ಭಾಸ್ಕರಪ್ಪನವರ ಕೊಮಾರ ಲಕ್ಷ್ಮೀನಾರಣಪ್ಪ	1892ನೇ ಇಸವಿ ಫಿಬ್ರವರಿ ತಾರೀಖು 6ರಲ್ಲು	1892ನೇ ಇಸವಿ ಜೂನ್ ತಾರೀಖು 3ರಲ್ಲು ರಿಜಿಸ್ಟರ್ ಆಗಿಧೆ	999 ರೂಪಾಯಿನ ಜಮೀನ್ ಆಧಾರ ಪತ್ರ
ಬಾಗೇಪಲ್ಲಿ	2 1892—93	ಚೇಳೂರು ಹೋಬಳಿ ಪಾತೂರು ವಾಸಸ್ಥರಾದ 1 ಗೆರಿಗೆ ಅಪ್ಪೋನು ಮಗ ಗಂಗಪ್ಪ 2 ಗೆರಿಗೆ ವೆಂಕಟಪ್ಪನಹೆಂಡತಿ ರಾಮಕ್ಕ 3 ಗೆರಿಗೆ ಸುಬ್ಬರೆಡ್ಡಿ ಮಗ ಅಯ್ಯಪ್ಪ 4 ವೇಮಂಣ 5 ಮದ್ದಂಣ	ಚೇಳೂರು ಹೋಬಳಿ ಶೇರುಖಾನ್ ಕೋಟೆ ವಾಸಸ್ಥನಾದ ವಕ್ಕಲಿಗ ದೊಡ್ಡಬಂಟ್ರೋತನ ಮಗ ತಿಮ್ಮಣ್ಣ	1892ನೇ ಇಸವಿ ಜುಲೈ ತಾರೀಖು 7ರಲ್ಲು	ಈ ದಸ್ತೈವಜು ತಿರಸ್ಕರಿಸಿ ಇಧೆ 31ನೇ ಆಗಸ್ಟ್ 92ನೇ ಇಸವಿ	ಚೇಳೂರು ಹೋಬಳಿ ಶೇರಖಾನ್ ಕೋಟೆ ದೊಡ್ಡಕೆರೇಲಿ ಕಲ್ಲುಕಟ್ಟಿದ ಕಪಿಲೆ ಬಾವಿಯನ್ನ 65 ರೂಪಾಯಿಗೆ ಖರೀದಿ ಮಾಡಿರುವದಾಗಿ
ಗುಡಿಬಂಡೆ	28 1892—93	ಗುಡಿಬಂಡೆ ಹೋಬಳಿ ಬತ್ತಲಹಳ್ಳೀಲಿರುವ ಅಂಚೆಪೋತಲಯ್ಯನ ಮಗ ತಳವಾರ ನರಶಿಗ	ಚಿಕ್ಕತಮ್ಮನಹಳ್ಳಿಯಲ್ಲಿರುವ ವರದರಡ್ಡಿ ಮಗ ವಕ್ಕಲಿಗ ಗೋರ್ಲರಡ್ಡಿ	1892ನೇ ಇಸವಿ ಅಕ್ಟೋಬರ್ ತಾರೀಖು 13ರಲ್ಲು	1892ನೇ ಇಸವಿ ನವಂಬರು ತಾ॥ 11ರಲ್ಲು ರಿಜಿಸ್ಟರ್ ಆಗಿಧೆ	200 ರೂಪಾಯಿನ ಭೂಸ್ಥಿತಿ ಕ್ರಯದ ದಸ್ತೈವಜು

ಅಬ್ದುಲ್‌ಅಜೀಜ್,
ಫಾರ್ ರಿಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 27ನೇ ಫಿಬ್ರವರಿ 1895.

ಬೆಂಗಳೂರು ಮುನವಾರ್ತೆಪ್ಯಾಟೆ ವಾಸಸ್ಥನಾದ ಹಕೀಂ ಮಹಮ್ಮದ್ ಇಸೂಫ್‌ಸಾಹೆಬ್ ಎಂಬುವರ ನಿಕಾ ಹೆಂಡತಿಯಾದ ಇಮಾಂಬಿ ಯಂಬುವಳು 1895ನೇ ಇಸವಿ ಫೆಬ್ರವರಿ ಮಾಹೆ 17ನೇ ತಾರೀಖು ಭಾನುವಾರದ ರಾತ್ರಿ 10 ಘಂಟೆ ಮೇಲೆ ಬೆಳಗಿನ 6 ಘಂಟೆ ವಳಗಾಗಿ ಈ ಕೆಳಗೆ ನಮೂದಿಸಲ್ಪಟ್ಟ ಹುಡುಗಿಯರನ್ನು ಮತ್ತು ಸುಮಾರು ಆರುಸಾವಿರ ರೂಪಾಯಿ ಕ್ರಯಬಾಳತಕ್ಕ ಬೆಳ್ಳಿ ಭಂಗಾರದ ವಡವೆಗಳನ್ನು ನೋಟುಗಳನ್ನು ಕಳವು ಮಾಡಿಕೊಂಡು ಯಲ್ಲಿಯೋ ಹೋಗಿರುತ್ತಾಳೆಂದು ಫಿರ್ಯಾದ್ ಆಗಿರುವ ಸಂಗತಿಯಲ್ಲಿ ಪತ್ತೆ ಮಾಡುವದಕ್ಕೆ ಸರಿಯಾದ ಬಾತ್ಮಿ ಕೊಟ್ಟವರಿಗೆ 300 ರೂಪಾಯಿಗಳ ಇನಾಮನ್ನು ಕೊಡಲು ಫಿರ್ಯಾದಿ ಹಕೀಂ ಮಹಮ್ಮದ್ ಇಸೂಫ್ ಸಾಹೆಬರು ವಪ್ಪಿರುತ್ತಾರೆ.

1ನೇ ಇಮಾಂಬಿ ಎಂಬುವಳ ಚಹರೆಪಟ್ಟಿ.

ಮಹಮ್ಮದ್ ಇಸೂಫ್ ಸಾಹೆಬರವರ 2ನೇ ನಿಕಾ ಹೆಂಡತಿ—45 ವರುಷ ವಯಸ್ಸು ಕೆಂಪು ಬಣ್ಣ ಕುಳ್ಳಗೆ ದಪ್ಪವಾಗಿದ್ದಾಳೆ ಸುಮಾರು 5 ಅಡಿ ಎತ್ತರ ಹಣೆ ಮೇಲೆ ಅವರೇಬೇಳೆ ಅಗಲ ಘಾಯದ ಗುರ್ತು ಇಧೆ. ಯಡಗಡೆ ಕಿವಿಯು ಹರದುಹೋಗಿ ಪುನಹ ಶೇರಿಕೊಂಡು ಮೋಟಾಗಿ ಕಾಣುತ್ತೆ, ನೋಟಕ್ಕೆ ಕಮ್ಮಿ ವಯಸ್ಸಿನವಳಂತೆ ಕಾಣುತ್ತಾಳೆ ತಲೆಕೂದಲು ನರತಿಲ್ಲಾ ಕನ್ನಡ, ತೆಲುಗು, ಹಿಂದುಸ್ಥಾನಿ, ತಮಿಳು ಮಾತನಾಡುತ್ತಾಳೆ ಕೆಲವು ವ್ಯಾಳೆಗಳಲ್ಲಿ ಹಿಂದು ಜನಗಳ ಡ್ರೆಸ್ಸುಗಳನ್ನು ಧರಿಸಿಕೊಳ್ಳುತ್ತಾಳೆ, ಈಕೆಯು ದಂಡಿನಲ್ಲಿ ಮಿಠಾಯಿ ಅಂಗಡಿ ಇಟ್ಟಿದ್ದ ಖಾದರ್‌ಸಾಬ್ ಯಂಬುವನ ಮದುವೆಯಾದ ಹೆಂಡತಿಯಾಗಿದ್ದಳು, ಈತನು ಸುಮಾರು 30 ವರುಷದ ಹಿಂದೆ ಮೃತಪಟ್ಟು ಹೋದನು, ಈತನ ನಂತರ ಹಿಂದುಸ್ಥಾನಿ ಸೈಯದ್ ಇನಾಯತ್ ಅಲ್ಲಿ ಯಂಬವನು ಇವಳನ್ನು ಯರಡು ಮೂರು ವರುಷ ಮಾಡಗಿಕೊಂಡಿದ್ದನು, ನಂತರ ಇವನು ಸತ್ತುಹೋದನು, ತರುವಾಯ ಹಕೀಂ ಮಹಮ್ಮದ್ ಇಸೂಫ್ ಸಾಹೆಬರು ನಿಕಾಮಾ

ಡಿಕ್ಕೊಂಡು ಆ ಲಾಗಾಯತು ಮನೆಯಲ್ಲಿ ಇಟ್ಟುಕೊಂಡು ಇದ್ದರು. ಇವಳಿಗೆ 1—2ನೇ ಗಂಡಂದರಿಗಾಗಲಿ ಅಥವಾ ಇಸೂಫ್ ಸಾಹೆಬರವರಿಗೆ ಆಗಲಿ ಮಕ್ಕಳು ಹುಟ್ಟಲಿಲ್ಲ, ಮತ್ತು ಮಕ್ಕಳೇ ಆಗಿಲ್ಲ. ಈಕೆಯು ಹಕೀಂ ಮಹಮ್ಮದ್ ಇಸೂಫ್ ಸಾಹೆಬರವರ ಮನೆಯಲ್ಲಿರುವಾಗ್ಯೆ ಹೈದರಾಬಾದಿಗೆ ಹೋಗಿ ವಾಸಮಾಡಬೇಕೆಂದು ಆಗಾಗ್ಯೆ ಹೇಳುತ್ತಿದ್ದಳು.

2ನೇ ಸೈದಾಬಿ ಅಡ್ಡಹೆಸರು "ಮನ್ನಿಯ" ಎಂಬುವಳ ಚಹರೆಪಟ್ಟಿ.

ಈಕೆಯು ಹಕೀಂ ಮಹಮ್ಮದ್ ಇಸೂಫ್ ಸಾಹೆಬರಿಗೆ ಸೊಸೆ, ಇವರ ಹಿರೆ ಹೆಂಡತಿಯ 2ನೇ ಮಗನಾದ ಮಹಮ್ಮದ್‌ಖಾಸಿಂ ಎಂಬವನ ಹೆಂಡತಿ, ಸುಮಾರು 12—13 ವರುಷ ವಯಸ್ಸು ಕೆಂಪು ಬಣ್ಣ ಮುಖದ ಮೇಲೆ ಸುಮಾರಾಗಿ ಸಿಡಬಿನ ಗುರ್ತಿಧೆ ಗುಂಡು ಮುಖ ಕುಳ್ಳಗಿದ್ಧಾಳೆ—ಬೆಳವಿಗೆ ಹುಡಗಿಯಾಗಿದ್ಧಾಳೆ, ಈ ಹುಡಗಿಯ ತಂದೆ ತಾಯಿಗಳು ಬೆಂಗಳೂರು ತಾಲ್ಲೂಕು ಪರಪನಗರುವೆಂಬ ಗ್ರಾಮದಲ್ಲಿ ವಾಸವಾಗಿದ್ಧಾರೆ, ತಂದೆ ಹೆಸರು ಸೈಯದ್ ಹರ್ಷೆ, ಹುಡುಗಿ ಮನೆಬಿಟ್ಟು ಹೋಗುವಾಗ್ಯೆ ರುತುಮತಿಯಾಗಿರಲಿಲ್ಲ ನೋಡಿದರೆ ದೊಡ್ಡವಳಾದ ಹಾಗೆ ಕಾಣುತ್ತಾಳೆ, ಕನ್ನಡ, ತೆಲುಗು, ಹಿಂದುಸ್ಥಾನಿ ಮಾತನಾಡುತ್ತಾಳೆ.

3ನೇ ಖಮರು ಎಂಬುವಳ ಚಹರೆಪಟ್ಟಿ.

ಇವಳು ತಂದೆತಾಯಿ ಇಲ್ಲದ ಪರದೇಶಿ ಹುಡುಗಿಯು, ಇವಳನ್ನ ಹಕೀಂ ಮಹಮ್ಮದ್ ಇಸೂಫ್ ಸಾಹೆಬರು ಸಾಕಿಕೊಂಡಿದ್ದರು ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದಳು, ವಯಸ್ಸು 10 ವರುಷ, ಯಣಗೆಂಪು, ತೆಳ್ಳಗೆ ಇದ್ಧಾಳೆ ಕೋಲು ಮುಖ ಹಿಂದಗಡೆ ಕೂದಲು ಕತ್ತರಿಸಿದೆ; ಸೊಂಟದಲ್ಲಿ ಹುಣ್ಣಿನಕಲೆ ಬೆಳ್ಳಗೆ ಕಾಣುತ್ತೆ, ತೆಲಗು, ಕನ್ನಡ, ಹಿಂದುಸ್ಥಾನಿ ಮಾತನಾಡುತ್ತಾಳೆ, ಇವಳನ್ನು 2 ವರುಷದ ಕೆಳಗೆ ವಾಗಟಪ್ಪ ವಗೈರೆ ಜನರು ಚೋರಿಮಾಡಿಕೊಂಡು ಹೋಗಿದ್ದರು, ನಂತರ ಹುಡಿಗಿಯು ಕೋಲಾರದಲ್ಲಿ ಸಿಕ್ಕಿ ತಪ್ಪಿತಸ್ಥರು ನ್ಯಾಯಕ್ಕೆ ಗುರಿಮಾಡಲ್ಪಟ್ಟರು.

ಎಸ್. ನರಸಿಂಹಯ್ಯಂಗಾರ್,
ಫಾರ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್.

ತಮುಕೂರು ಡಿಸ್ಟ್ರಿಕ್ಟು, ಡಿಸ್ಟಿಕ್ಟು ಫಂಡ್ ಬೋರ್ಡ್ ಮೇಂಬರುಗಳ ಪ್ರೊಸೀಡಿಂಗ್ಸ್.

1895ನೇ ಇಸವಿ ಫಿಬ್ರುವರಿ ತಾರೀಖು 12ರಲ್ಲು ಹಾಜರಾಗಿದ್ದವರು.

ಸರ್ಕಾರದ ಉದ್ಯೋಗಸ್ಥರು.		ಇತರರು.
1. ಪ್ರೆಸಿಡೆಂಟ್—ಬಿ. ಕೆ. ವೆಂಕಟವರದಯ್ಯಂಗಾರ್ರು		1. ಮಿಸ್ಟರ್ ಎ. ರಾಮದಾಸಪ್ಪನವರ
2. ಎಗ್ಸಿಕ್ಯುಟಿವ್ ಇಂಜಿನೀಯರ್	ಸಿ. ಟಿ. ಡಲಾಲ್, ಎಸ್‌ಕ್ವಯರ್, ಎಲ್. ಸಿ. ಇ.	2. ಮಿಸ್ಟರ್ ಗಂಗಂಣಶೆಟ್ಟರು
3. ತುಮಕೂರು ತಾಲ್ಲೂಕು ಅಮಲ್ದಾರ್ರು	ಮಿಸ್ಟರ್ ಬಿ. ರಾಮಸ್ವಾಮಯ್ಯನವರು, ಬಿ. ಏ.	3. ಮಿಸ್ಟರ್ ಚಿಕ್ಕಂಣಶೆಟ್ಟರು
4. ಮದ್ದಗಿರಿ ತಾಲ್ಲೂಕು ಅಮಲ್ದಾರ್ರು	ಮಿಸ್ಟರ್ ಕೆ. ಶ್ರೀಕಂಠಯ್ಯನವರು	4. ಮಿಸ್ಟರ್ ಶ್ರೀನಿವಾಸತಾತಾಚಾರ್ರವರು
5. ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಅಮಲ್ದಾರ್	ಮಿಸ್ಟರ್ ಶಿ. ಕಂಠೀರವಾಚಾರ್ರವರು	5. ಮಿಸ್ಟರ್ ಅಬೀದಲ್ಲಿಸಾಹೇಬರವರು
6. ಗುಬ್ಬಿ ತಾಲ್ಲೂಕು ಅಮಲ್ದಾರ್ರವರು	ಮಿಸ್ಟರ್ ಪಿ. ಶೀತಾರಾಮಯ್ಯನವರು	6. ಮಿಸ್ಟರ್ ಆಗಳಿಕೃಷ್ಣಪ್ಪನವರು
7. ಶಿರಾ ತಾಲ್ಲೂಕು ಅಮಲ್ದಾರ್ರು	ಮಿಸ್ಟರ್ ಎ. ವೇದಾಂತದೇಶಿಗಂ ಅಯ್ಯಂಗಾರ್ರವರು	
8. ಕುಣಿಗಲ್ ತಾಲ್ಲೂಕು ಅಮಲ್ದಾರ್ರು	ಮಿಸ್ಟರ್ ವಿ. ಪಾರ್ಥಸಾರಥಯ್ಯಂಗಾರ್ರವರು	
9. ಜನರಲ್ ಅಸಿಸ್ಟೆಂಟ್ ಕಮ್ಮಿಷನರವರು	ಎ. ರಾಘವೇಂದ್ರರಾವ್ ಎಸ್‌ಕ್ವಯರ್	
10. ತುಮಕೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರ್ಜನ್ ಸಾಹೇಬರವರು	ಶಿ. ಟಿ. ನಂಜಪ್ಪ ಎಸ್‌ಕ್ವಯರ್ ಎಮ್. ಬಿ., ಸಿ. ಎಮ್.	
11. ತಿಪಟೂರು ತಾಲ್ಲೂಕು ಅಮಲ್ದಾರ್ರು	ಮಿಸ್ಟರ್ ವೈ. ನರಸಿಹ್ಮಯ್ಯನವರು	

ಗೈರ್‌ಹಾಜರ್.

12. ಪಾವಗಡ ತಾಲ್ಲೂಕು ಅಮಲ್ದಾರ್ರು	ಮಿಸ್ಟರ್ ಆರ್. ರಾಘವೇಂದ್ರರಾಯರವರು, ಜಮಾಬಂದಿ ಕೆಲಸದಲ್ಲಿ ವುದ್ಯುಕ್ತರಾಗಿರುತ್ತಾರೆ	7. ಮಿಸ್ಟರ್ ಸೈಯದ್ ಮುಸ್ತಫಾಸಾಹೇಬರವರು ಕಾಯಿಲೆಯಾಗಿರುವದಾಗಿ ಬರಸಿರುತ್ತಾರೆ.

1. ತುಮಕೂರು ಆಸ್ಪತ್ರೆಯಲ್ಲಿ ಕಂಪೌಂಡರ್ ತಲಬಿಗೆ 2 ರೂಪಾಯಿ ಇಜಾಫೆ ಆಗಬೇಕೆಂತ ಶಿಫಾರಸುನಿಸಿ ಅಸಿಸ್ಟೆಂಟ್ ಸರ್ಜನ್‌ರವರು ಬರಸಿದ್ದ ಯಿದೇ ಇಸವಿ ಜನವರಿ 27ನೇ ಮುರಕೂಂ 438ನೇ ನಂಬರ್ ಲೆಟರು ಓದಲ್ಪಟ್ಟಿತು.

ಈ ವಿಚಾರದಲ್ಲಿ ಪ್ರೆಸಿಡೆಂಟರವರಿಂದ ಮಾಡಲ್ಪಟ್ಟ ಷರಾ—ಈ ನೌಕರ್ರ ಹಾಲಿ ತಲಬು 8 ರೂಪಾಯಿ. ಡಿಸ್ಟ್ರಿಕ್ಟು ಫಂಡು ಬಡ್ಜಟ್‌ನಲ್ಲಿ ಹತ್ತು ರೂಪಾಯಿ ದಾಖಲಾಗಿದೆ. 1892ನೇ ಸಾಲ್‌ನಲ್ಲಿ ಬದಸ್ತೂರು ಶಿಫಾರಸು ಆಗಿದ್ದಾಗ್ಯೆ ಆದೇ ಇಸವಿ ಡಿಸೆಂಬರು 23ನೇ

ಮರ್ಕೂಂ 7752.—ಎಲ್. ಎಫ್. 95—92ನೇ ನಂಬರು ಗವರ್ನ್‌ಮೆಂಟ್ ಆರ್ಡರ್‌ನಲ್ಲಿ ಇತರ ಕಡೆಯಲ್ಲಿರತಕ್ಕ ಈ ನೌಕರರಿಗೆ 7 ರೂಪಾಯಿ ಮಾತ್ರವೆ ತಲಬು ಸಲ್ಲುತ್ತಾ ಯಿರುವಕಾರಣ ಸದರೀ ಯಿಜಾಫೆಯನ್ನು ಮಂಜೂರ್ಮಾಡಲು ಗವರ್ನ್‌ಮೆಂಟಿನವರು ಮನಸ್ಕರಿಸಲಿಲ್ಲ.

ಈ ಭಾಗದಲ್ಲಿ ತಾವು ಕೊಡತಕ್ಕ ಅಭಿಪ್ರಾಯವೇನೂ ಯಿಲ್ಲವೆಂದು ಎಗ್ಜಿಕ್ಯುಟಿವ್ ಇಂಜಿನೀಯರ್ ಮೆಸ್ಟರ್ ಡಲಾಲ್ ಸಾಹೇಬರವರು ಹೇಳಿದರು. ಸದರೀ ಯಿಜಾಫೆ ಅನವಶ್ಯಕವೆಂದು ಆರುಜನ ಅಂದರೆ ಮೆಸ್ಟರ್ ಕಂಠೀರವಾಚಾರ್ರವರು, ಮೆಸ್ಟರ್ ಶ್ರೀಕಂಠಯ್ಯನವರು, ಮೆಸ್ಟರ್ ಗಂಗಣ್ಣಶಟ್ಟರು, ಮೆಸ್ಟರ್ ಚಿಕ್ಕಣ್ಣ ಶಟ್ಟರು, ಮೆಸ್ಟರ್ ಕೃಷ್ಣಪ್ಪನವರು, ಮೆಸ್ಟರ್ ಶೀತಾರಾಮಯ್ಯನವರು ಅಭಿಪ್ರಾಯಪಟ್ಟರು. ಸದರೀ ಇಜಾಫೆಯನ್ನು ಕೊಡಬೇಕೆಂತ ಏಳು ಜನ ಅಂದರೆ, ಮೆಸ್ಟರ್ ವೇದಾಂತದೇಶಿಗಂಅಯ್ಯಂಗಾರ್ರವರು, ಮೆಸ್ಟರ್ ನರಸಿಹ್ಮಯ್ಯನವರು, ಮೆಸ್ಟರ್ ಶ್ರೀನಿವಾಸತಾತಾಚಾರ್ರವರು, ಮೆಸ್ಟರ್ ರಾಮದಾಸಪ್ಪನವರು, ಮೆಸ್ಟರ್ ಪಾರ್ಥಸಾರಥಯ್ಯಂಗಾರ್ರವರು, ಮೆಸ್ಟರ್ ರಾಮಸ್ವಾಮಯ್ಯನವರು, ಮೆಸ್ಟರ್ ರಾಘವೇಂದ್ರರಾಯರವರು ಸಹ ಹೇಳಿದರು.

2. ಇದಕ್ಕೆ ಪೂರ್ವಮೀಟಿಂಗ್‌ನಲ್ಲಿ ಮಂಜೂರಾಗಿದ್ದ ಹೆಂಗಸರ ಆಸ್ಪತ್ರೆಯು, ಶ್ರೀಕೃಷ್ಣರಾಜಡೆಯರ್ ಬಹದ್ದೂರ್ರವರ ಪಟ್ಟಾಭಿಷೇಕಮಹೋತ್ಸವದ ಶುಭದಿವಸ ಅಂದರೆ ಈ ತಿಂಗಳ 1ನೇ ತಾರೀಖಿನಲ್ಲಿ ಸ್ಥಾಪಿಸಲ್ಪಟ್ಟಿತೆಂದು ಅಸಿಸ್ಟೆಂಟ್ ಸರ್ಜನಸಾಹೇಬರವರು ಬರಸಿದ ಮಾಹೆ ಮಜಕೂರು 3ನೇ ಮರ್ಕೂಂ 442ನೇ ನಂಬರು ಲೆಟರನ್ನ ವೋದಿ ರಿಕಾರಡು ಮಾಡಲ್ಪಟ್ಟಿತು.

3. ಡಾಬ್ಸ್‌ಪೇಟೆ—ಕೊರಟಗೆರೆ ರಸ್ತೆ ಸಾಲುಬಾದು ಕಾಮಗಾರಿ ಬಗೆ ಹಾಲಿ ದರ ಮೈಲಿ ಒಂದಕ್ಕೆ 30 ರೂಪಾಯಿಗೆ ಬದಲಾಗಿ 50 ರೂಪಾಯಿಗಳು ಆಗಬೇಕೆಂದು ಅಪೇಕ್ಷಿಸಿದ ಎಗ್ಜಿಕ್ಯುಟಿವ್ ಇಂಜಿನೀಯರ್ ಸಾಹೇಬರವರ ಮಾಹೆ ಮಜಕೂರು 9ನೇ ಮರ್ಕೂಂ 104ನೇ ನಂಬರು ಡಾಕೆಟು ವೋದಲಾಯಿತು.

ಮೆಂಬರುಗಳ ಪೈಕಿ ಬಹುಜನರಿಂದ ಸದರೀ ಜಾಸ್ತಿ ದರವು ಕೊಡತಕ್ಕದ್ದೆಂದು ತೀರ್ಮಾನವಾಗಲ್ಪಟ್ಟಿತು.

4. ಕೊಡಗೆಹಳ್ಳಿಯಿಂದ ತಿಪಟೂರಿಗೆ ಆಗುವ ಹತ್ತು ಮೈಲಿ ರಸ್ತೆ ಮಾಡಿಸಿ ಕೊಡಬೇಕೆಂದು ರೈತರು ಬರದುಕೊಂಡಿದ್ದ ಅರ್ಜಿಯನ್ನು ವೋದಲಾಯಿತು, ಕ್ರಮವಾಗಿ ಸದರೀ ರಸ್ತೆ ಆಗಬೇಕಾದರೆ ಹತ್ತುಸಾವಿರ ರೂಪಾಯಿಗಳ ಖರ್ಚು ತಗಲುವದೆಂತ ಬರಸಿದ ಎಗ್ಜಿಕ್ಯುಟಿವ್ ಇಂಜಿನೀಯರ್ ಸಾಹೇಬರವರ ಇದೇ ಇಸವಿ ಜನವರಿ 13ನೇ ಮರಕುಂ 21ನೇ ನಂಬರ್ ಯಾದಿಯನ್ನು ಸಹ ವೋದಲಾಯಿತು. ಸದರೀ ರಸ್ತೆಯಲ್ಲಿ ಜಿನಸಿ ಆಮದ್ ರಫ್ತು ಬಹಳವಾಗಿದೆ ಯೆಂದು ತಿಪಟೂರು ತಾಲ್ಲೂಕು ಅಮಲ್‌ದಾರ್ರವರು ಮತ್ತು ಮೆಂಬರು ಚಿಕ್ಕಣ್ಣಶಟ್ರು ತಿಳಿಯಪಡಿಸಿದ್ದನ್ನ ಕೇಳಲಾಯಿತು.

ಈ ರಸ್ತೆ ಆಗಬೇಕೆಂದು ಮೆಂಬರುಗಳ ಪೈಕಿ ಬಹುಮಂದಿ ತೀರ್ಮಾನಿಸಿದರು.

5. ಡಿಸ್ಟ್ರಿಕ್ಟ್ ಫಂಡ್ ಬೋರ್ಡು ಪ್ರೊಸೀಡಿಂಗ್ಸಿನ ಕನ್ನಡ ತರ್ಜುಮೆಯನ್ನು ಕಳುಹಿಸಿದಲ್ಲಿ ಛಾಪಿಸಲ್ಪಡುತ್ತೆಂದು ಸಾದರಾದ ಇದೇ ಇಸವಿ ಜನವರಿ 28ನೇ ಮರಕುಂ 11576.—84—ಎಲ್. ಎಫ್. 122–94ನೇ ನಂಬರ್ ಗವರ್ನ್‌ಮೆಂಟ್ ಆರ್ಡರ್ ವೋದಲಾಯಿತು. ಸದರೀ ಮೇರಿಗೆ ಪ್ರೊಸೀಡಿಂಗ್ಸಿನ ಕನ್ನಡ ತರ್ಜುಮೆ ಮಾಡಬೇಕೆಂತ ತೀರ್ಮಾನವಾಯಿತು.

6. ತಮ್ಮ ಹಾತ್ ಲಾಗವಡುನಿಂದ ಹಿರೇಹಳ್ಳಿ ರೈಲ್ ಸ್ಟೇಷನ್ನಿಂದ ಗೌರಿಪುರಕ್ಕೆ ರಸ್ತೆ ಮಾಡುತ್ತೇವೆ. ರಸ್ತೆಗೆ ಆಗಬೇಕಾದ ಜಮೀನು ತಮಿಗೆ ಮುಫತ್ತಾಗಿ ಕೊಡಿಸಿಕೊಡಬೇಕೆಂದು ಮೆಸ್ಟರ್ ಮೀನಾಕ್ಷಯ್ಯನವರು ಕೇಳಿಕೊಂಡದ್ದರ ಮೇಲೆ ಇದಕ್ಕೆ ಬೇಕಾಗುವ ಜಮೀನಿನ ಪರಿಹಾರದ್ರವ್ಯ 120 ರೂಪಾಯಿಗಳು ಆಗುವದೆಂತ ಬರಸಿದ ತುಮಕೂರು ಅಮಲ್‌ದಾರ್ರವರ ಮಾಹೆ ಮಜಕೂರ್ 12ನೇ ಮರಕುಂ 1057ನೇ ನಂಬರ್ ರಿಪೋರ್ಟನ್ನ ಓದಲಾಯಿತು.

ಹಿರೇಹಳ್ಳಿ ರೈಲ್ವೆ ಸ್ಟೇಷನ್‌ಗೆ ಹೋಗಿ ಬರುವರಿಗೆ ಸದರೀ ರಸ್ತೆಯು ವುಪಯುಕ್ತವಾಗಿರುವದ್ದರಿಂದ ಸದರೀ ಮೊಬಲಗು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡತಕ್ಕದ್ದೆಂದು ತೀರ್ಮಾನವಾಯಿತು.

7. ಕೆಳಗೆ ನಮೂದಾಗುವ ರಸ್ತೆಗಳ ಸಾಲುಬಾದು ಕಾಮಗಾರಿಗೆ ಮೊದಲು ಮೊಕರರಾಗಿದ್ದ ಮೈಲಿ ದರಗಳಿಗಿಂತ ಹೆಚ್ಚಾದರ ಅಪೇಕ್ಷಿಸಿ ಬರದ ಎಗ್ಜಿಕ್ಯುಟಿವ್ ಇಂಜಿನೀಯರ್ ಸಾಹೇಬರವರ 1894ನೇ ಇಸವಿ ಡಿಸೆಂಬರ್ 31ನೇ ಮರಕುಂ 1659ನೇ ನಂಬರ್ ಲೆಟರ್ ಓದಲಾಯಿತು.

ಚೇಳೂರು, ಹಾಗಲ್ವಾಡಿ ರಸ್ತೆಗೆ ..	50 ರೂಪಾಯಿನಿಂದ 70 ರೂಪಾಯಿಗೆ ಹೆಚ್ಚಿಕೆ.
ಶಿರಾ, ಮದ್ದಗಿರಿ ರಸ್ತೆಗೆ ..	30 ರೂಪಾಯಿನಿಂದ 50 ರೂಪಾಯಿಗೆ ಹೆಚ್ಚಿಕೆ.

ಹೆಚ್ಚಿಕೆ ದರ ಕೊಡತಕ್ಕದ್ದೆಂತಲೂ, ಮಂಜೂರಿ ಬಗ್ಗೆ ಗವರ್ನ್‌ಮೆಂಟಿಗೆ ಬರಿಸತಕ್ಕದ್ದೆಂತಲೂ ಸಹ ತೀರ್ಮಾನವಾಯಿತು:—

8. ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ, ಹುಳಿಯಾರು, ಶಿರಾ, ಮತ್ತು ಪಾವಗಡದಲ್ಲಿರತಕ್ಕ ಆಸ್ಪತ್ರೆಗಳಲ್ಲಿ ರೋಗಿಗಳಿಗಾಗಿ ಕಟ್ಟಡಗಳನ್ನ ಕಟ್ಟಿಸತಕ್ಕದ್ದಕ್ಕೋಸ್ಕರ 1895—96ನೇ ಇಸವಿ ಬಡ್ಜೆಟ್‌ನಲ್ಲಿ 2,000 ಸಾವಿರ ರೂಪಾಯಿಗಳು ದಾಖಲ್ಮಾಡಬೇಕೆಂತ ತೀರ್ಮಾನವಾಯಿತು.

9. ಕುಣಿಗಲ್ ಮುಸಾಫರ್‌ಖಾನೆ ಅನ್‌ಕರೀಬ್ ಪೂರೈಸುವದ್ದರಿಂದ 5 ರೂಪಾಯಿ ತಲಬುನಿಶಿ ಒಬ್ಬ ಝಾಡುಮಾಲಿ ಇಸಂಗೆ ಬಡ್ಜೆಟ್‌ನಲ್ಲಿ ಮೊಬಲಗು ದಾಖಲ್ಮಾಡಪೇಕೆಂದು ತೀರ್ಮಾನವಾಯಿತು.

10. ಚಾಲ್ತಿಸಾಲ್ ಡಿಸ್ಟ್ರಿಕ್ಟ್ ಫಂಡ್ ಬಡ್ಜೆಟ್‌ನಲ್ಲಿ ಕೊಟ್ಟಿರುವ ಮೊಬಲಗಿನಲ್ಲಿ ಸುಮಾರು ಒಂದುನೂರು ರೂಪಾಯಿನ ವಳಗಾಗಿ ಯಡಿಯೂರು, ತಿಪಟೂರು ರಸ್ತೆಯಲ್ಲಿ ನಾಗರಘಟ್ಟದ ಬಳಿಯಲ್ಲಿರುವ ಮೊಹರಿಯನ್ನ ಅಗಲಪಡಿಸಬೇಕೆಂದು ತೀರ್ಮಾನವಾಯಿತು.

11. ಚೇಳೂರು ಹಾಗಲ್ವಾಡಿ ರಸ್ತೆಯ ಪಕ್ಕಗಳು ಹೊಸಕೆರೆ ಭಳಿ ಬಹಳ ಯಿಳಿಜಾರಾಗಿರುವ ಪ್ರಯುಕ್ತ ಸ್ವಲ್ಪಧೂರದ ವರಿಗೂ 150 ರೂಪಾಯಿ ವಳಗಾಗಿ ಕೈಪಿಡಿ ಗೋಡೆಗಳನ್ನ ಕಟ್ಟಬೇಕೆಂತ ತೀರ್ಮಾನವಾಯಿತು.

12. ಹುಳಿಯಾರು ಹೊಸದುರ್ಗದ ರಸ್ತೆಯಲ್ಲಿ ಯಿರತಕ್ಕ ಅಡ್ಡಹಳ್ಳಗಳಿಗೆ ಶೇತುವೆಗಳನ್ನು ಕಟ್ಟಬೇಕೆಂತಲೂ ಅದಕ್ಕಾಗಿ 1895—96ನೇ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಡ್ಜೆಟಿನಲ್ಲಿ 2,000 ಸಾವಿರ ರೂಪಾಯಿಗಳು ದಾಖಲ್ಮಾಡತಕ್ಕದ್ದೆಂದು ತೀರ್ಮಾನವಾಯಿತು.

13. ಚಾಲ್ತಿಸಾಲ್ ಡಿಸ್ಟ್ರಿಕ್ಟು ಫಂಡ್ ಬಡ್ಜೆಟಿನಲ್ಲಿ ಕೊಟ್ಟಿರತಕ್ಕ ಮೊಬಲಗಿನಿಂದ 400 ರೂಪಾಯಿಗಳ ವೊಳಗಾಗಿ ತುಮಕೂರು ತಾಲ್ಲೂಕು ಕೋರದಲ್ಲಿ ವಂದು ಚಿಕ್ಕ ಮುಸಾಫರ್‌ಖಾನೆ ಕಟ್ಟತಕ್ಕದ್ದೆಂದು ತೀರ್ಮಾನವಾಯಿತು.

14. ಹುಲಿಯೂರುದುರ್ಗದಲ್ಲಿ 2,000 ಸಾವಿರ ರೂಪಾಯಿಗಳ ವಳಗಾಗಿ ಒಂದು ಮುಸಾಫರ್‌ಖಾನೆ ಕಟ್ಟತಕ್ಕದ್ದೆಂದು ತೀರ್ಮಾನವಾಯಿತು.

15. ಹುಳಿಯಾರಿನಲ್ಲಿ 3,000 ರೂಪಾಯಿಗಳ ವಳಗಾಗಿ ಒಂದು ಮುಸಾಫರ್‌ಖಾನೆ ಕಟ್ಟತಕ್ಕದ್ದೆಂದು ತೀರ್ಮಾನವಾಯಿತು.

16. ಶಿರಾದಲ್ಲಿ 2,000 ಸಾವಿರ ರೂಪಾಯಿಗಳೊಳಗಾಗಿ ಒಂದು ಮುಸಾಫರ್‌ಖಾನೆ ಕಟ್ಟತಕ್ಕದ್ದೆಂತ ತೀರ್ಮಾನವಾಯಿತು.

17. ಪಾವಗಡ, ಶಿರಾ, ಮದ್ದಗಿರಿ ಮತ್ತು ತುರ್ವೇಕೆರೆ ಆಸ್ಪತ್ರೆಗಳಲ್ಲಿ ನೀರಿನ ವರಿಗೆ ಯಿದುವರೆಗೂ 2 ರೂಪಾಯಿ ಸಂಬಳ ಪಾವತಿಯಾಗುತ್ತಾ ಇದೆ. ಇವರಿಗೆ ಫೀ ಇಸಂ 3 ರೂಪಾಯಿ ಜಾಸ್ತಿಯಿಂದ 5 ರೂಪಾಯಿ ತಲಬು ಕೊಟ್ಟಲ್ಲಿ ಇವರಿಂದ ನೀರಿನ ಕೆಲಸವು ಮತ್ತು ಅಡಿಗೆ ಕೆಲಸವನ್ನು ಸಹ ಮಾಡಿಸಲು ಅನುಕೂಲ ವುಂಟಾಗುವದೆಂದು ಅಸಿಸ್ಟೆಂಟ್ ಸರ್ಜನ್ ಸಾಹೇಬರವರು ಹೇಳಿದ್ದಕ್ಕೆ ಅದರಂತೆ ಸದರೀ ನೀರಿನ ಚಾಕರಿಯವರಿಗೆ ಫೀ ಇಸಂ 5 ರೂಪಾಯಿನಂತೆ ತಲಬು ಹೆಚ್ಚಿಸಿ ಅವರಿಂದ ಕಾಯಿಲೆ ಜನಗಳಿಗೆ ಅಡಿಗೆಯನ್ನ ಸಹ ಮಾಡಿಸತಕ್ಕದ್ದೆಂದು ತೀರ್ಮಾನವಾಯಿತು.

18. ತುಮಕೂರಲ್ಲಿ ಹೆಂಗಸರ ಆಸ್ಪತ್ರೆ ಕಟ್ಟತಕ್ಕ ಬಗ್ಯೆ ತಗಲುವ ಲಾಗವಡುನಲ್ಲಿ ಮೂರರಲ್ಲಿ ವಂದು ಹಿಸ್ಸೆ ಅಂದರೆ ಸುಮಾರು ಒಂದು ಸಾವಿರ ರೂಪಾಯಿ ಚಾಲ್ತಿಸಾಲ್ ಡಿಸ್ಟ್ರಿಕ್ಟು ಫಂಡ್ ಬಡ್ಜೆಟಿನ ಮೊಬಲಗಿನಲ್ಲಿ ಕೊಡತಕ್ಕದ್ದೆಂದು ತೀರ್ಮಾನವಾಯಿತು.

ಬಿ. ಕೆ. ವೆಂಕಟವರದಯ್ಯಂಗಾರ್,
ತುಮಕೂರ್ ಡಿಸ್ಟ್ರಿಕ್ಟ್ ಫಂಡ್‌ಬೋರ್ಡ್ ಪ್ರೆಸಿಡೆಂಟ್.

ಮೈಸೂರ್ ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣಿದಾರ ಮೈಸೂರು ಕಿಲ್ಲೆಯಲ್ಲಿ ಇರುವ ಮೈಸೂರು ಮುನ್ಸಿಫ್ ಕೋರ್ಟಿನ ಸರ್ವಾ ಪ್ಯಾದೆ ಸುಬ್ಬಣ್ಣನವರ ವಿಷಯದಲ್ಲಿ—

ಸನ್ 1894—95ನೇ ಇಸವಿ ದಿವಾಳಿ ಕೇಸ್ ನಂಬರು 320.

ಹಕುಂ,

ಮೇಲ್ಕಂಡ ಸುಬ್ಬಣ್ಣನುನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜಿದಾರರಾದ ಸುಬ್ಬಣ್ಣನ ಪರವಾಗಿ ಖುದ್ದು ಹಾಜರುನ್ನೂ ಮತ್ತು ಸದರೀಯವರ ಲೇಣೇದಾರರಾದ 7ನೇ ವೆಂಕಟಕೃಷ್ಣಪ್ಪನವರ ತರಫ್ ಆಡ್ವೊಕೇಟ್ ಮಿಸ್ಟರ್ ಚಂದ್ರಶೇಖರಯ್ಯನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ-1ನೇ ಜರ್ಗಮೊಹರ್ಬ್ಯಾಂಕ್ ಏಜಂಟ್, 2ನೇ ತಿರುಮಲಾಚಾರ್, 3ನೇ ಕೃಷ್ಣಯ್ಯಂಗಾರ್, 4ನೇ ಆಳಶಿಂಗ್ರಾಚಾರ್, 5ನೇ ಏಜಂಟ್ ಅಪ್ಪೂರಾವ್, 6ನೇ ಕೃಷ್ಣಯ್ಯಂಗಾರ್, 8ನೇ ದೊಡ್ಡರಾಜಯ್ಯ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಸರ್ವಾಪ್ಯಾದೆ ಸುಬ್ಬಣ್ಣನವರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1895ನೇ ಇಸವಿ ಮಾರ್ಚಿ 20ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರು ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯ ಬಂದ ಅವರಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿ ವುಂಟಾದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
7	ಮೈಸೂರು ಕಿಲ್ಲೆಯಲ್ಲಿ ಇರುವ ವೆಂಕಟಕೃಷ್ಣಯ್ಯ	50-0-6	..	ಡಿಕ್ರಿ ಬಾಬತು.	

ದಿವಾಳಿಯಾದ ಡಿಕ್ರಿ ದೇಣೆದಾರ ಮೈಸೂರು ಮಂಡಿ ಮೊಹಲಾದಲ್ಲಿರುವ ಬುರಾನೊರ್ದಿನ್‌ಸಾಬರ ವಿಷಯದಲ್ಲಿ—

ಸನ್ 1894—95ನೇ ಇಸವಿ ದಿವಾಳಿ ಕೇಸ್ ನಂಬರು 38.

ಹುಕುಂ,

ಮೇಲ್ಕಂಡ ಬುರಾನೊರ್ದಿನ್‌ಸಾಬರು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟಿನ ರೂಬರೂ ಅರ್ಜಿದಾರರಾದ ಬುರಾನೊರ್ದಿನ್‌ಸಾಬರ ಪರವಾಗಿ ಅಡ್ವೊಕೇಟ್ ಮೆಸ್ಟರ್ ರಾಜಾರಾಯರನ್ನೂ ಮತ್ತು ಸದರೀಯವರ ಲೇಣೇದಾರರಾದ 1 ಸಾವಲ್‌ದಾಸ್ ಜಟಾನಂದಸೇಟರ ತರಫ್ ಅಡ್ವೊಕೇಟ್ ಮೆಸ್ಟರ್ ಚಂದ್ರಶೇಖರಯ್ಯನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾಕಂದರೆ—2ನೇ ಲೈಫ್ ಇನ್‌ಷೂರೆನ್ಸ್ ಬ್ಯಾಂಕ್, 3ನೇ ಸಾಹುಕಾರ್ ವೀರಣ್ಣ, 4ನೇ ಸಾಲೆಮಹಮ್ಮದ್‌ಸೇಟ್, 5ನೇ ದೇವೀರಮ್ಮ, 6ನೇ ಚವುಡಪ್ಪ, 7ನೇ ದಮಾಜಿಕಾರ್ಜಿಸೇಟ್, 8ನೇ ಅನಂತರಾಮಯ್ಯಂಗಾರ್, 9ನೇ ಜಮಾಲ್‌ಸಾಬ್, 10ನೇ ವೀರಪ್ಪ, 11ನೇ ಸುಬ್ಬರಾಜೆಅರಸ್, 12ನೇ ವರದಾಚಾರ್.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಬುರಾನೊರ್ದಿನ್‌ಸಾಬರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1895ನೇ ಇಸವಿ ಮಾರ್ಚಿ 20ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತುನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಬಾಕಿ ಬಿದ್ದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಮೈಸೂರಲ್ಲಿರುವ ಸಾವಲ್‌ದಾಸ್ ಜಟಾನಂದಸೇಟರು ..	1,100—0—0			
2	ಮೈಸೂರ್ ಲೈಫ್‌ಇನ್‌ಷೂರೆನ್ಸ್ ಬ್ಯಾಂಕ್ ..	1,100—0—0			
4	ಡಿಟೋ ಸಾಲೆಮಹಮ್ಮದ್‌ಸೇಟರು ..	300—0—0			
5	ಡಿಟೋ ದೇವೀರಮ್ಮ ..	350—0—0			
		2,850—0—0			

ಎಂ. ರಾಮಸ್ವಾಮಯ್ಯರ್,
ಸಬ್ ಜಡ್ಜ್.

ಹಾಸನ ಡಿಸ್ಟ್ರಿಕ್ಟು.

ಮಂಜರಾಬಾದ್ ತಾಲ್ಲೂಕು.

ತಾರೀಖು 20ನೇ ಮಾರ್ಚಿ ಸನ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಂಜರಾಬಾದ್ ತಾಲ್ಲೂಕು ಉದೇವಾರ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸನ್ 1895ನೇ ಇಸವಿ ಮೇ ತಾರೀಖು 27ನೇ ಸೋಮವಾರ ಹಗಲು 11 ಘಂಟೆಗೆ ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಡಿಸಿ ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ರೂಬರೂ ಸಕಲೇಶಪುರ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ಒಳಪಟ್ಟು ಬಹಿರಂಗವಾದ ಹರ್ರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು, ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಅಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ

ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್‌ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈಮಾದವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕೀ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕೀ ಮೊಬಲಗನ್ನು ಕೊಡದೆ ತಪ್ಪಿದರೆ ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು, ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು. ನಂತರ ನಡದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನ ಸವಾಲ್ ಮೊಬಲಗುಗಿಂತಲೂ ಕಮ್ಮಿಯಾದಲ್ಲಿ ಆ ಮೇರೆ ಕಮ್ಮಿಯಾದಷ್ಟು ಮೊಬಲಗನ್ನ ಅವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುವದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬಗಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ್ನ		ಷರಾ.
				ವಿಸ್ತೀರ್ಣ.	ಆಕಾರ.	
197ನೇ ನಂಬರಿನಲ್ಲಿ ಫೋಡಾದ ಹೊಸ ನಂಬರ್ 420	ಮಹಮದ್ ಹಬಿಬುಲ್ಲಾಸಾಬಿ	ಉದೇವಾರದ ಗ್ರಾಮದ ಗೋಮಾಳದಲ್ಲಿ	(1) ಪೂರ್ವಕ್ಕೆ—ಸರ್ವೆ ನಂಬರ್ 224ನೇ ಜಮೀನ (2) ಪಶ್ಚಿಮಕ್ಕೆ—ಬಾಳಗೋಡು ಗಡಿ (3) ದಕ್ಷಿಣಕ್ಕೆ—ಸರ್ವೆ ನಂಬರ್ 197ನೇ ಗೋಮಾಳ (4) ಉತ್ತರಕ್ಕೆ—ಅರೇಹಳ್ಳಿ ಗಡಿ	ಎಕರೆ 82 ಗುಂಟೆ 27	..	ಖಾಯಂದರ 1-8-0 ಎಕರೆ 1ಕ್ಕೆ ಹಂಗಾಮಿ ದರ 1—0—0 ಡಿಟ್ಟೊ ಹರಾಜಾದನಂತರ ಚಡದರಖಾಸ್ತುದಾರನ ಇಷ್ಟದಂತೆ ಕಂದಾಯ ದಾಖಿಲ್ಮಾಡಿಕೊಡುತ್ತೆ.

ತಿಳುವಳಿಕೆ ಷರಾ,—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೇ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್‌ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯ್ಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್‌ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ ಹಿಡುವಳೀ ದಾರನು ಬದ್ಧ ವ ಅರ್ಹನಾಗಿರಬೇಕು.

ಪಿ. ಎನ್. ಪೂರ್ಣಯ್ಯ,
ಡೆಪ್ಯುಟಿ ಕಮ್ಮಿಷನರ್.

ಹಾಸನ ಡಿಸ್ಟ್ರಿಕ್ಟು—ಇದರಲ್ಲಿ ನಮೂದಾಗುವ ಸಬ್ ರಿಜಿಸ್ಟ್ರಾರ್ ಆಫಿಸುಗಳಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತೈವಜುಗಳನ್ನು ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕ್ದಾರ್ರಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ಆಫಿಸುಗಳಲ್ಲಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ನಂಬರು.	ಆಫಿಸ್.	ಬುಕ್ಕು ಮತ್ತು ನಂಬರ್.	ದಸ್ತೈವಜು ಬರದುಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತೈವಜು ಬರಶಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಸ್ಟರಿಗೆ ಹಾಜರಾದ ಸಾಲ್ ಮಾಹೇ ತಾರೀಖು.	ರಿಜಸ್ಟ್ರ್ಯದ ಅಥವಾ ತಿರಸ್ಕರಿಸಿದ ಸಾಲ್ ಮಾಹೇ ತಾರೀಖು.	ದಸ್ತೈವಜಿನ ಸ್ವಭಾವ.
1	ಹಾಸನ	1ನೇ ಬುಕ್ಕು 199ನೆ ನಂಬರ್	ಹಾಸನ ತಾಲ್ಲೂಕು ಹಾಸನದ ಹೋಬಳಿ ಹಾಲಿವಾಗಲ್ ಗ್ರಾಮದಲ್ಲಿ ಯಿರುವ ಚನ್ನಕೇಶವಯ್ಯನವರ ಮಗ ಚನ್ನಕೇಶವಯ್ಯ ಮತ್ತು ಈತನ ತಮ್ಮ ನಾರಣಪ್ಪ ಮೈನರ್ ಗಾರ್ಡಿಯನ್ ಡಿಟ್ಟೋ ಚನ್ನಕೇಶವಯ್ಯ	ಮಂಜರಾಬಾದ್ ತಾಲ್ಲೂಕು ಹೊಸಕೋಟೆ ಹೋಬಳಿ ಕಾರ್ಯಗೋಡು ಗ್ರಾಮದಲ್ಲಿ ಇರುವ ನಾಡು ಪಟೇಲ್ ನಂಜೇಗವುಡರು ವುರಫ್ ದೊಡ್ಡಣ್ಣಗವುಡರ ಮಕ್ಕಳು ಅಪ್ಪಾಜಿಗವುಡ	8—9—92	9—9—92	ಹಾಸನದ ಹೋಬಳಿ ಕಿರಗಡು ಗ್ರಾಮದಲ್ಲಿರುವದು ಸರ್ವೆ ನಂ. 118ರ ಲಾಗಾಯತು 128ರ ವರಿಗೆ ವಟ್ಟು ಹತ್ತು ನಂಬರ್ ಎಕರೆ 66–29 ಗುಂಟೆ ಆಕಾರ 74–8–0 ಈ ಸ್ವತ್ತುಗಳು 180–0–0 ರೂಪಾಯಿನ ಕ್ರಯಪತ್ರ.
1	ಅರ್ಕಲ್‌ಗೂಡು	1ನೇ ನಂಬರ್ ಬುಕ್ಕು ನಂಬರ್ 840	ಅರ್ಕಲ್‌ಗೂಡು ತಾಲ್ಲೂಕು ಮೂಲೆ ಹೊಸಹಳ್ಳಿ, ಗ್ರಾಮದಲ್ಲಿ ಇರುವ ಕುರುಬರ ಲಕ್ಕನ ಮಗ ರಂಗಾ	ಅರ್ಕಲ್‌ಗೂಡು ತಾಲ್ಲೂಕು ಬಸವಾಪಟ್ಟಣದಲ್ಲಿ ಇರುವ ಮಗ್ಗಿ ಶಾನುಭಾಗ ಸುಬ್ರಾಯರ ಇವರ ಮಗ ಸುಬ್ರಹೇಜಯ್ಯ	1892–7–30	1893–2–3	ಸಾಲ್ ವಂದಕ್ಕೆ 5-8-0 ಆಣೆ ಕೊಡುತ್ತಾ ಬರುವದಾಗಿ ನಮೂದುವುಳ್ಳ ಮಾಡತ್ತೊಟದ ಕರಾರು.
2	ಡಿಟ್ಟೋ	2ನೇ ಬುಕ್ಕು ನಂಬರ್ 25	ಅರ್ಕಲ್‌ಗೂಡು ತಾಲ್ಲೂಕು ಕೋಣನೂರು ಹೊಲಗೇರಿಯಲ್ಲಿ ಇರುವ ಬಲಗೈ ಗುತ್ತಿ ಮಗ ಬಸವಾ ವುರಫ್ ಕೊಂಡ	ಅರ್ಕಲ್‌ಗೂಡು ತಾಲ್ಲೂಕು ಕೋಣನೂರು ಹೊಲಗೇರಿಯಲ್ಲಿ ಇರುವ ಬಲಗೈ ಕೆಂಗದಾಸಿ ಮಗ ತಿಮ್ಮಯ್ಯ	1892–11–18	ತಿರಸ್ಕರಿಶಿದ್ದು 1892–11–18	16 ರೂಪಾಯಿನ ಕ್ರಯ
3	ಡಿಟ್ಟೋ	2ನೇ ಬುಕ್ಕು ನಂಬರ್ 31	ಅರ್ಕಲ್‌ಗೂಡು ತಾಲ್ಲೂಕು ಕೋಣನೂರು ಕಸಬಾದಲ್ಲಿ ಇರುವ ಗಂಗಡಿಕಾರ ವೊಕ್ಕಲಿಗರ ಜಾತಿ ಮಲ್ಲನಾಯಕನ ಮಗಳು ನಿಂಗಾಜಿ 1 ಇವಳತಂಗಿ ನೀಲ್ 1 ಬಸವಿ 1 ಲಕ್ಷ್ಮಿ 1 ನಾಲ್ಕು ಜನಗಳು	ಅರ್ಕಲ್‌ಗೂಡು ತಾಲ್ಲೂಕು ಕೋಣನೂರಿನಲ್ಲಿ ಇರುವ ಅಗಸಾಲೆ ಕೆರೆಕೋಡಿ ನಿಂಗಾಚಾರಿ ಮಗ ಹೊನ್ನಾಚಾರಿ 1 ಹನುಮಚಾರಿ ಮಗ ಸಂಜೀವಾಚಾರಿ ವುರಫ್ ಸಂಣಪ್ಪ	1892–12–29	ತಿರಸ್ಕರಿಶಿದ್ದು 1892–12–29	265 ರೂಪಾಯಿನ ಕ್ರಯ

ವಿ. ಶ್ರೀನಿವಾಸಾಚಾರ್ಲು, ರಿಜಿಸ್ಟ್ರಾರ್.

ತಾರೀಖು ನೇ ಮಾಹೆ ಮಾರ್ಚಿ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಗವರ್ನಮೆಂಟ್ ಹುಕುಂ ಬಮೋಜಿಬ್ ಹಾಸನ ಡಿಸ್ಟ್ರಿಕ್ಟಿನ ಪೈಕಿ ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮಾರ್ನಹಳ್ಳಿ ಘಾಟಿಯಲ್ಲಿ ಟೋಲ್ ಗೇಟ್ ಯಂಬ ಸುಂಕದ ಕಟ್ಟೆ ವಳಗೆ ಸರ್ 1895ನೇ ಇಸವಿ ಜುಲೈ ಮಾಹೆ 1ನೇ ಮುರ್ಕ್ಕಂ ಲಾಗಾಯತು 1896ನೇ ಇಸವಿ ಜೂನ್ 30ರ ವರಿಗಿನ 12 ತಿಂಗಳ ಕಾಲದಲ್ಲಿ ಸುಂಕಾ ವಸೂಲ್ ಮಾಡುವ ಸ್ವಾತಂತ್ರ್ಯವೂ ಸರ್ 1895ನೇ ಇಸವಿ ಏಪ್ರೆಲ್ ತಾರೀಖು 25ನೇ ಗುರುವಾರ ಸಕಲೇಶಪುರದ ಮೊಕ್ಕಾಮಿನಲ್ಲಿ ತಾಲ್ಲೂಕು ಕಚೇರಿ ವಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲಿ ಹಕನ್ನು ಕೊಂಡುಕೊಳ್ಳುವ ಕಂಟ್ರ್ಯಾಕ್ಟುದಾರನು ಇದಕ್ಕೆ ಲಗತ್ತಾಗಿ ಇರುವ ಷಡ್ಯೂಲಿನಲ್ಲಿ ನಮೂದಾಗಿರುವ ದರಗಳ ಮೇರಿಗೇನೇ ಟೋಲ್ ವಸೂಲ್ ಮಾಡಬೇಕು. ಮತ್ತು ಸರ್ 1876ನೇ ಇಸವಿ ನವಂಬರ್ 4ನೇ ಮುರ್ಕ್ಕಂ 274ನೇ ನಂಬರುವುಳ್ಳ ಲೇಟ್ ಚೀಫ್ ಕಮ್ಮಿಷನರ್ ಸಾಹೇಬರವರ ನೋಟಿಫಿಕೇಷನಿನಲ್ಲಿ ಫಾಯಿಷ್ ಆಗಿರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

3. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸನ ಡಿಸ್ಟ್ರಿಕ್ಟು ಆಫಿಸರವರು ಅಧಿಕಾರ ವುಳಿಸಿಕೊಂಡಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದೋ ಅವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ 4ರಲ್ಲಿ ವಂದು ಅಂಶ ಮೊಬಲಗನ್ನ ಅಡ್ವಾನ್ಸಾಗಿ ಠೇವಣಿ ಯಿಟ್ಟು ಬಾಕಿ ಮೊಬಲಗನ್ನು 1895ನೇ ಇಸವಿ ಜುಲೈ 20ರ ಲಾಗಾಯತು ಸಮನಾದ 3 ಖಿಸ್ತುಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತಿ ಮಾಡಬೇಕು. ದರಖಾಸ್ತುದಾರನು ಪ್ರತಿ ಮಾಹೆವಾರಿ ಖಿಸ್ತು ಮೊಬಲಗನ್ನು ತಪ್ಪದೇ ಕೊಡುತ್ತಾ ಬರುವದಕ್ಕೆ ಲಾಯಖಾದ ಒಬ್ಬನನ್ನು ಜಾಮೀನ್ ಕೊಡಬೇಕು. ಸದರೀ ಜಾಮೀನ್ ದಸ್ತೈವಜು ಕ್ರಮವಾಗಿ ರಿಜಸ್ಟ್ರು ಮಾಡಿಸಿ ಹಾಜರ್ ಪಡಿಸಬೇಕು.

5. ಠೇವಣಿ ಇಡದೆ ಇದ್ದರೆ ಅಥವಾ ಜಾಮೀನ್ ಕೊಡದೆ ಇದ್ದರೆ ದರಖಾಸ್ತುದಾರನಿಗೆ ಲುಕ್ಸಾನುಕರವಾಗಿ ಕಂಟ್ರ್ಯಾಕ್ಟು 2ನೇ ಹರಾಜು ಮಾಡಲ್ಪಡುವದು. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿಯಾದ ಮೊಬಲಗಿಗೆ ಪಾವತಿ ತಾರೀಖಿನ ವರಿ

ಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ 1 ಕಾಸಿನಂತೆ ಬಡ್ಡಿ ವಸೂಲ್ಮಾಡಲ್ಪಡುವದು, ಮತ್ತು ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋರುವ ಪ್ರಕಾರ ಅಥವಾ ಜಾಮೀನ್ದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು 2ನೇ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಆದರಿಂದ ಯೇನಾದರೂ ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀನ್ದಾರನಿಂದ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಶಿವಾಯಿ 4 ಮತ್ತು 5ನೇ ಕಲಂನಲ್ಲಿ ನಮೂದಾಗುವ ಷರತ್ತಿಗೆ ವಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ವಂದಾಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿರುತ್ತಾನೆ.

7. ಪ್ರತಿ ದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಕರಾರುವಾಕವಾದ ಲೆಖ್ಖವನ್ನು ಇಡಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿ ಇರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ಥರ ಇನ್ಸ್ಪೆಷನಿಗೆ ಲೆಖ್ಖ ವಳಗಿರತಕ್ಕದ್ದು.

8. ಕಂಟ್ರಾಕ್ಟುದಾರನು ಆಮದ್ ರಫ್ತಿನ ಲೆಖ್ಖ ಯಿಡಲೋಸ್ಕರ ಶಿಬ್ಬಂದಿ ಅಂದರೆ ಮುತ್ಸದ್ದಿ ಖರ್ಚನ್ನು ವಹಿಸಲು ಬದ್ಧನಾಗಿ ಇರತಕ್ಕದ್ದು.

9. ಗವರ್ನಮೆಂಟ್ ಟೋಲ್‌ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು. ಮತ್ತು ಅವುಗಳನ್ನು ಆತನು ಪೂರಾ ದುರಸ್ತಿನಲ್ಲಿ ಇಟ್ಟುಕೊಂಡಿರತಕ್ಕದ್ದು.

10. ಕಂಟ್ರಾಕ್ಟುದಾರನು ಪ್ರತಿ ತಿಂಗಳ ಗುರ್ರೇ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲ್ ಲೆಖ್ಖವನ್ನು ಮಂಜರಾಬಾದ್ ತಾಲ್ಲೂಕಿಗೆ ಕಳುಹಿಸತಕ್ಕದ್ದು.

11. ದರಗಳ ಪಟ್ಟಿ ಈ ಕೆಳಗೆ ವಿವರಿಸಿ ಇದೆ:—

		ರೂ.	ಆ.	ಪೈ.
1.	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2.	ಪ್ರತಿ ಯರಡು ಡಿಟೋ	1	0	0
3.	ಪ್ರತಿ ಯಕ್ಕಾ ಮೇಲೂ	0	4	0
4.	ಸ್ಪ್ರಿಂಗ್‌ಯಾನೆ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ ವಂದಕ್ಕೆ	0	2	0
5.	ಯಂಟ್ಟು ಯತ್ತುಗಳಿಂದ ಕೋಣಗಳಿಂದ ಕುದುರೆಗಳಿಂದ ಟಾಕಣಗಳಿಂದ ಕತ್ತೆಗಳಿಂದ ಯಾ ಹೇಸರ ಕತ್ತೆಗಳಿಂದ ಯಳ್ಳೆಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿ ಇದ್ದರೆ	1	8	0
6.	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	8	0
7.	ಆರು ಯತ್ತುಗಳು ವಗೈರೆಗಳಿಂದ ಯಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ	0	12	0
8.	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	6	0
9.	ನಾಲ್ಕು ಯತ್ತುಗಳಿಂದ ಕೋಣಗಳಿಂದ ಕುದುರೆಗಳಿಂದ ಟಾಕಣಗಳಿಂದ ಕತ್ತೆಗಳಿಂದ ಹೇಸರ ಕತ್ತೆಗಳಿಂದ ಯಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿ ಇದ್ದರೆ	0	8	0
10.	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	4	0
11.	ಯರಡು ಯತ್ತುಗಳಿಂದ ಕೋಣಗಳಿಂದ ಕುದುರೆಗಳಿಂದ ಟಾಕಣಗಳಿಂದ ಕತ್ತೆಗಂಳಿದ ಹೇಸರ ಕತ್ತೆಗಳಿಂದ ಯಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿ ಇದ್ದರೆ	0	4	0
12.	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	2	0
13.	ಕೋಣಗಳು ಯಾ ಯತ್ತುಗಳು ರಾಸು ವಂದಕ್ಕೆ ಹೊರಿಸಲ್ಪಟ್ಟು ಇದ್ದರೆ	0	1	0
14.	ಡಿಟೋ ಡಿಟೋ ಹೊರೆ ಇಲ್ಲದಿದ್ದರೆ	0	0	3
15.	ಪ್ರತಿ ಆನೆಗೂ	1	8	0
16.	ಪ್ರತಿ ವಂಟೆಗೂ ಹೊರಿಸಲ್ಪಟ್ಟು ಇದ್ದರೆ	0	8	0
17.	ಡಿಟೋ ಡಿಟೋ ಹೊರೆ ಇಲ್ಲದಿದ್ದರೆ	0	4	0
18.	ಡಿಟೋ ಕುದುರೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19.	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ವಂದು ಕುದುರೆಗೂ	0	0	9
20.	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಹೊರಿಸಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ.	0	0	9
21.	ಡಿಟೋ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22.	ಪ್ರತಿ ಕತ್ತೆಗೂ ಹೊರೆ ಹೊರಿಸಿದ್ದರೆ ಯಾ ಸವಾರಿ ಮಾಡುತ್ತಿದ್ದರೆ	0	0	6
23.	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24.	ಪ್ರತಿ ಕುರಿ ಮೇಕೆ ಯಾ ಹಂದಿ	0	0	1
25.	ಯಂಟು ಬೋಯಿಗಳೊಡನೆ ಪ್ರತಿ ಡೋಲಿ ಪಾಲಕಿ ಯಾ ಟಾಂಜಾನಿಗೂ	1	0	0
26.	ಆರು ಬೋಯಿಗಳೊಡನೆ ಡಿಟೋ	0	12	0
27.	ನಾಲ್ಕು ಬೋಯಿಗಳೊಡನೆ ಡಿಟೋ	0	8	0
28.	ಇಬ್ಬರು ಬೋಯಿಗಳೊಡನೆ ಡಿಟೋ	0	4	0

ನಡದು ಬರುವ ಮಾರ್ಗಸ್ಥರ ಮೇಲೆ ಟೋಲ್ ವಸೂಲ್ ಮಾಡತಕ್ಕದ್ದಲ್ಲ.

211

ಮಂಜರಾಬಾದು ತಾಲ್ಲೂಕು.

ತಾರೀಖು 20ನೇ ಮಾರ್ಚಿ ಸರ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವದೇನಂದರೆ,—ಮಂಜರಾಬಾದು ತಾಲ್ಲೂಕು ಜಂಬರಡಿ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಗಾಗಿ ದರಖಾಸ್ತು ಬಂದಿರೋಣಾದರಿಂದ ಸರ್ 1895ನೇ ಇಸವಿ ಏಪ್ರೈಲ್ ತಾರೀಖು 26ನೇ ಶುಕ್ರವಾರ ಹಗಲು 11 ಘಂಟೆಗೆ ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಮಂಜರಾಬಾದು ತಾಲ್ಲೂಕು ಅಮಲ್ದಾರ್‍ರ ರೂಬರೂ ಸಕಲೇಶಪುರ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್‍ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮನ್ನಾಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜು ದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನಿನ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಸಡಿ.	ದರಖಾಸ್ತು ಜಮೀನಿನ,		ಷರಾ.
				ವಿಸ್ತೀರ್ಣ.	ಆಕಾರ.	
39ನೇ ನಂಬರಿನಲ್ಲಿ ಫೋಡಾದ ನಂಬರು 215	ಹಾಲೆಕಾಡು ಎಸ್ಟೇಟ್ ಮೆಸ್ಟರ್ ಥಾಮಸ್‌ಹಂಟ್ ಸಾಹೇಬರು	ಜಂಬರಡಿ ಗ್ರಾಮ	..	ಎಕರೆ 71 ಗುಂ. 25	..	ಖಾಯಂದರ 1—8—0 ಹಂಗಾಮಿದರ 1—0—0 ಹರಾಜಾದ ನಂತರ ಚಡದರಖಾಸ್ತುದಾರನ ಇಷ್ಟದಂತೆ ಕಂದಾಯ ದಾಖಲ್ಮಾಡಿಕೊಡುತ್ತೆ.

ತಿಳುವಳಿಕೆ ಷರಾ,—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಛಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರೆಗೆ ಗಣನೀಯ್ಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ್ ಹಿಡುವಳೀ ದಾರನು ಬದ್ಧ ವ ಅರ್ಹನಾಗಿರಬೇಕು.

ಕೆ. ರಾಮಾನುಜಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್.

Mysore Government Central Press, Bangalore—1895.

ಮೈಸೂರ ಗೆಜೆಟ್.

ವಿಶೇಷ ಪತ್ರಿಕೆ.

ಸರ್ಕಾರದಿಂದ ಶಾಯಿಷ್ ಆದ್ದು.

ಬೆಂಗಳೂರು, ಬುಧವಾರ, ಏಪ್ರೈಲ್ ತಾ|| 10, ಸನ್ 1895.

ರೆವಿನ್ಯೂ.

ಸನ್ 1895—96ನೇ ಸಾಲಿಗೆ ಶೇಂದಿ ಫಿರ್ಕಾಗಳ ಹರಾಜು.

ನಂಬರ್ 15931—R. F. 210—92, ತಾರೀಖು 29ನೇ ಮಾರ್ಚಿ 1895.

ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಆಯಾ ತರಗತಿಗಳ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ ಸನ್ 1895ನೇ ಇಸವಿ ಜುಲೈ ಗುರ್ರೇ ಲಾಗಾಯತು 1896ನೇ ಇಸವಿ ಜೂನ್ 30ನೇ 'ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಈಚಲಮರದ ಶೇಂದಿಯನ್ನು ಬಿಕರಿ ಮಾಡುವ ಒಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡಿಪ್ಯುಟಿ ಕಮ್ಮಿಷನರುಗಳಿಂದ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮ್ಮಿಷನರುಗಳಿಂದ ಪ್ರತಿ ತಾಲ್ಲೂಕು ಕಸಬಾಗಳಲ್ಲಿಯೂ ಮೇಲ್ಕಂಡ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಹರಾಜು ಹಾಕಲ್ಪಡಲು ಮೈಸೂರು ಸರ್ಕಾರದಿಂದ ಈ ಇಸ್ತಿಹಾರುಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳಿಗೆ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಯಾ ಹಾಲಿ ಫಿರ್ಕಾಗಳ ಪೈಕಿ ಯಾವದಾದರೂ ಕೇವಲ ದೊಡ್ಡದಾಗಿರುವ ಪಕ್ಷದಲ್ಲಿ ಹರಾಜು ಹಾಕುವ ಆಫಿಸರರು ಎಕ್ಸೈಜ್ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಅಂಥಾ ಫಿರ್ಕಾಗಳನ್ನು ಬದಲಾಯಿಸಲೂ, ವಿಭಾಗ ಮಾಡಲೂ ಯಾ ಇತ್ತರ ವಿಧವಾಗಿ ವಿಂಗಡಿಸಲೂಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಒಟ್ಟು ಸ್ವಾತಂತ್ರ್ಯದ ಹಕ್ಕು ಹರಾಜು ಮಾಡಲ್ಪಡುತ್ತೆ. ಅಂಗೀಕರಿಸಲ್ಪಡತಕ್ಕ ಭಡ ಸವಾಲ್ದಾರನಿಗೆ ಡಿಪ್ಯುಟಿಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಸದರೀ ಹಕ್ಕು ಕೊಡಲ್ಪಡುವದು. ಡಿಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಡೋಣವು ಸವಾಲನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

(3) ಪ್ರತಿ ಮಾಹೆಯ ಗುತ್ತಿಗೆ ಮೊಬಲಗನ್ನು ಆ ಮಾಹೆಯ 20ನೇ ತಾರೀಖು ಯಾ ಅದಕ್ಕೆ ಪೂರ್ವ ಪಾವತಿ ಮಾಡದೆ ತಪ್ಪಿದಲ್ಲಿ ಲೈಸೆನ್ಸ್‌ದಾರನು ಇಟ್ಟಿರುವ ಎರಡು ತಿಂಗಳ ಡಿಪಾಜಿಟ್‌ಯಾನೆ ಠೇವಣಿ ಮೊಬಲಗು ಮೇಲಿನ ಷರತ್ತು 2ರ ಪ್ರಕಾರ ದುಸರೆ ಹರಾಜಿನಲ್ಲಿ ನಷ್ಟವೇನಾದರು ಉಂಟಾದಲ್ಲಿ ಅದರ ಭರ್ತಿಗಾಗಿ ಬೇಕಾಗುವ ಮೊಬಲಗು ಜಾತಾ ಉಳಿದ ಮೊಬಲಗು ಗವರ್ನಮೆಂಟಿಗೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೆ 2 ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು.

(4) (*a*) ಈ ಸರ್ಕಾರಕ್ಕೆ ಸಾರಾಯಿಯನ್ನೂ ಒಳದೇಶದ ಇತರ ಷರಾಬುಗಳನ್ನೂ ತಯಾರ್‌ಮಾಡಲಿಕ್ಕೆ ಮೊಕರರ್‌ಮಾಡಲ್ಪಟ್ಟಿರುವ ಭಟ್ಟಿದಾರ್ರಾದ ಪ್ಯಾರಿ ಅಂಡ್‌ಕೋ ಎಂಬ ವರ್ತಕರಿಂದಾಗಲಿ ಯಾ ಸರ್ಕಾರದ ಅಪ್ಪಣೆ ಮೇರೆ ಏರ್ಪಾಡಾಗುವ ಯಾವದಾದರೊಂದು ಬಾಂಡೆಡ್ ಡಿಪೋ ಯಿಂದಲಾಗಲಿ ಲೈಸೆನ್ಸ್‌ದಾರನು ತನ್ನ ಫಿರ್ಕಾ ಅಂಗಡಿಗಳಿಗೆ ಸರಬರಾಯಿಗೋಸ್ಕರ ಸಾರಾಯಿಯನ್ನ ಕೊಂಡುಕೊಳ್ಳತಕ್ಕದ್ದು. ಅಂಥಾ ಭಟ್ಟಿದಾರ್ರಿಂದ ಸರಬರಾಯಿ ಆಗುವ ಸಾರಾಯಿನ ದರವು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ $10\frac{1}{2}$ ಆಣೆ ಪ್ರಕಾರವೂ ಮತ್ತು ಸದರೀ ಜೋರಿಗಿಂತ ಕಮ್ಮಿ ಜೋರುಳ್ಳ ಸಾರಾಯಿಗಳಿಗೆ ಕ್ಯಾಸೆಲ್ಲಾ ಎಂಬುವರ ಸೂತ್ರಗಳನ್ನನುಸರಿಸಿ ಅದೇ ದಾಮಾಷಾಯಿ ದರಗಳ ಪ್ರಕಾರವೂ ಇರತಕ್ಕದ್ದು. ಲೈಸೆನ್ಸ್‌ದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ 5—5—0 ದರದ ಪ್ರಕಾರವೂ ಸದರೀ ಜೋರಿಗಿಂತ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನಗಳಿಗೆ ಮಾರತಕ್ಕದ್ದು.

(*b*) ಮೇಲ್ಕಂಡ ಖರೀದಿ ದರ ಶಿವಾಯಿ ಡಿಸ್ಟಿಲೇರಿಯಾನೆ ಭಟ್ಟೀ ಗಡಂಗಿನಿಂದ ಯಾ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಜೋರುಳ್ಳ ಸಾರಾಯಿಯ ಗ್ಯಾಲನ್ 1ಕ್ಕೆ 4 ರೂಪಾಯಿ ದರದಂತೆ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಸ್ಥಳೀಯ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(5) ಲೈಸೆನ್ಸದಾರನು ಮೇಲ್ಕಂಡ ಡ್ಯೂಟೀ ಮೊಬಲಗನ್ನ ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಿ ವಿಧಿಸೋಣಾಗಿರುವ ನಮೂನೆಯಲ್ಲಿ ಒಂದು ರಶೀತಿಯನ್ನ ಪಡಿಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿ ಸರಬರಾಯಿಗೆ ಒಂದು ದರಖಾಸ್ತನ್ನೂ ಹಾಜರ್‌ಪಡಿಸಿ ಅಂಥಾ ಷರಾಬಿಗೆ ವಿಧಿಸಿರುವ ಖರೀದಿಯನ್ನ ಭಟ್ಟಿದಾರರಿಗಾಗಲಿ ಯಾ ಅವರ ಏಜಂಟಿಗಾಗಲಿ ಯಾ ಈ ಬಗ್ಯೆ ಸರ್ಕಾರದಿಂದ ನೇಮಿಸಲ್ಪಡುವ ಯಾವ ಮನುಷ್ಯನಿಗಾಗಲಿ ಪಾವತಿ ಮಾಡಿದ ನಂತರ ಡಿಸ್ಟಿಲೇರಿ ಜಿಮ್ಮೇಲಿರುವ ಅಸಿಸ್ಟೆಂಟ್ ಸೂಪರ್‌ವೈಜರ್ ಅಥವಾ ಇತರ ಆಫಿಸರರು ಯಾ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಜರಿ ಆಫಿಸರ್ರ ರಶೀತಿಯಲ್ಲಿ ನಮೂದ್‌ಮಾಡಿರುವ ಡ್ಯೂಟಿ ಮೊಬಲಗ್ಯೆ ಸರಿಯಾದ ಸಾರಾಯಿಯನ್ನ ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿರುವ ತಾರೀಖು ಮತ್ತು ಘಂಟೆ ನಮೂದ್‌ಮಾಡಿ ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಫಿಸಿಗೆ ಆ ರಶೀತಿಯನ್ನ ರವಾನಿಸತಕ್ಕದ್ದು. ಅಸಿಸ್ಟೆಂಟ್ ಸೂಪರ್‌ವೈಜರವರು ಅಥವಾ ಮೇಲೆ ಹೇಳಲ್ಪಟ್ಟ ಇತರ ಆಫಿಸರರು ಯಾ ಬಾಂಡೆಡ್ ಡಿಪೋ ಜಿಮ್ಮೇದಾರನು ವಿಧಾಯಕ

ವಾಗಿರುವ ನಮೂನೆಯಲ್ಲಿ ಡಿಸ್ಟಿಲೇರಿ ಅಥವಾ ವೇರ್ ಹೌಸಿನಿಂದ ಸಾರಾಯಿ ರವಾನೆ ಮಾಡುವದಕ್ಕೋಸ್ಕರ ಜಾರೀಲಿರುವ ನಿಬಂಧನೆಗಳ ಪ್ರಕಾರ ವಿಧಾಯಕವಾದ ನಮೂನೆಯಲ್ಲಿ ದ್ವಿಪ್ರತಿಯಾಗಿ ರಹದಾರಿಯನ್ನು ಕಳುಹಿಸತಕ್ಕದ್ದು. ಬಾಂಡೆಡ್ ಡಿಪೋಯಿಂದ ಸಾರಾಯಿಯನ್ನು ಪಡಿಯುವಂಥಾ ಲೈಸೆನ್ಸ್‌ದಾರನು ಅಂಥಾ ಸಾರಾಯಿಯ ಖರೀದಿಯನ್ನೂ ಮತ್ತು ಡ್ಯೂಟಿ ಮೊಬಲಗನ್ನೂ ಸಹ ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಬೇಕು.

(6) ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿನ ಲೈಸೆನ್ಸ್‌ದಾರನು ತನ್ನ ಫಿರ್ಕಾ ಸರಹದ್ದಿನಲ್ಲಿ ಡೆಪ್ಯುಟಿ ಕಮಿಷನರವರಿಂದಲೂ ಮತ್ತು ತನ್ನಿಂದಲೂ ಅವಶ್ಯಕವೆಂದು ಎಣಿಸಲ್ಪಡತಕ್ಕ ಸ್ಥಳ ಯಾ ಸ್ಥಳಗಳಲ್ಲಿ ಕೋಠಿ ಯಾ ಕೋಠಿಗಳನ್ನು ಸ್ಥಾಪಿಸತಕ್ಕದ್ದು. ಈ ಕೋಠಿಗಳಿಗೆ ತಾನು ಖರೀದಿಗೆ ಪಡೆದ ಸಾರಾಯಿಯನ್ನು ಅಂಗಡಿಕಾರರಿಗೆ ಕೊಡುವದಕ್ಕೆ ತತ್ಪೂರ್ವವೇ ಹಾಲಿ ಜಾರೀಲಿರುವ ನಿಬಂಧನೆಗಳನ್ನನುಸರಿಸಿ ರವಾನಿಸಿದ ಸರಕನ್ನು ಮೊಕಾಬಿಲೆ ವಗೈರೆ ಮಾಡತಕ್ಕ ಬಗ್ಯೆ ತೆಗದುಕೊಂಡು ಹೋಗತಕ್ಕದ್ದು. ಸದರೀ ಕೋಠಿಗಳು ಡೆಪ್ಯುಟಿ ಕಮಿಷನರವರ ಯಾ ಎಕ್ಸೈಜ್ ಇಲಾಖೆ ಇತರ ಆಫೀಸರರ ತನಿಖೆ ಬಗ್ಯೆ ಸದಾ ಖುಲ್ಲಾವಾಗಿರತಕ್ಕದ್ದು. ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮಿಷನರಿಂದ ಲೈಸೆನ್ಸ್ ಹೊಂದದೆ ಅಂಥಾ ಕೋಠಿಯು ಇಡಲ್ಪಡಲಾಗದು. ಉಳಿದ 7 ಡಿಸ್ಟ್ರಿಕ್ಟುಗಳ ಲೈಸೆನ್ಸ್‌ದಾರರಿಂದ ಈಗಿನ ಹಾಗೆ ಶಿಬ್ಬಂದೀ ವ ಬಾಡಿಗೆ ಖರ್ಚುಗಳು ಭರಿಸಲ್ಪಟ್ಟು ಅವರು ಹಾಲಿ ಜಾರೀಲಿರುವ ಬಾಂಡೆಡ್ ಡಿಪೋಗಳಿಂದಲೇ ಸಾರಾಯಿ ಸರಬರಾಯಿ ಪಡಿಯಬೇಕಲ್ಲದೆ ಅವರ ಅಂಗಡಿಗಳಿಗೆ ರವಾನೆ ಮಾಡಲು ಸದರೀ ಡಿಪೋಗಳಲ್ಲಿ ಅದನ್ನು ಇಡತಕ್ಕದ್ದು.

(7) ಡಿಸ್ಟಿಲೇರಿ ಯಾ ಬಾಂಡೆಡ್ ಡಿಪೋಯಿಂದ ಯಾ ಫಿರ್ಕಾ ಕೋಠಿಯಿಂದ ರವಾನಿಸಲ್ಪಟ್ಟ ಸ್ಥಿತಿಯಲ್ಲಿ ಸಾರಾಯಿಯು ಮಾರಲ್ಪಡತಕ್ಕದ್ದು. ಮತ್ತು ಅಂಗಡಿಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಕೆಡಿಸಲ್ಪಡಲಾಗದು ಯಾ ನೀರಿನಿಂದ ಮಿಶ್ರಮಾಡಲಾಗದು.

(8) ಲೈಸೆನ್ಸ್‌ದಾರನು ತನ್ನಿಂದ ಖರೀದಿಗೆ ತೆಗದುಕೊಳ್ಳಲ್ಪಟ್ಟ ಮತ್ತು ಅಂಗಡಿಕಾರರಿಗೆ ಕೊಟ್ಟ ಸಾರಾಯಿಯ ಪರಿಮಾಣವನ್ನೂ ಮತ್ತು ಜೋರನ್ನೂ ಕುರಿತು ಸರಿಯಾದ ಲೆಖ್ಖಗಳನ್ನಿಡಬೇಕು. ಆತನಿಂದ ಕೊಂಡುಕೊಳ್ಳಲ್ಪಟ್ಟ ಸಾರಾಯಿಯೊಡನೆ ರವಾನಿಸಿದ ರಹದಾರಿಗಳು ಹಾಲಿ ಜಾರೀಲಿರುವ ಯಾ ಮುಂದೆ ಆಗಿಂದಾಗ್ಯೆ ಸರ್ಕಾರದಿಂದ ಸಾದರ್ಮಾಡಲ್ಪಡಬಹುದಾದ ನಿಬಂಧನೆಗಳನ್ನನುಸರಿಸಿ ಅಜಮಾಯಿಷಿಗೂ ವ ತನಿಖೆಗೂ ಗುರಿಯಾಗತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮಿಷನರಿಂದ ಕ್ರಮವಾಗಿ ಲೈಸೆನ್ಸ್ ಪಡೆದ ದುಕಾನ್‌ಗಳಲ್ಲಿ ವಿನಹಾ ಮತ್ತೆಲ್ಲಿಯೂ ಸಾರಾಯಿ ಬಿಕರಿ ಮಾಡಲಾಗದು ಮತ್ತು ಎಕ್ಸೈಜ್ ಕಮಿಷನರವರ ಮುಂಚಿತವಾದ ಮಂಜೂರಾತಿ ಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು.

(10) ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾನ್‌ಗಳನ್ನಾಗಲಿ ಮುಚ್ಚಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಲು ಅಪ್ಪಣೆ ಕೊಡಬಹುದು.

(11) ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ವಾಯಿದೆ ವಳಗೆ ಲೈಸೆನ್ಸಿನಲ್ಲಿ ವ್ಯಕ್ತಪಟ್ಟಿರುವ ಫಿರಕಾವಿನ ಯಾವ ಭಾಗದಲ್ಲಾದರೂ ಶೇಂದಿ ಮಾರತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅವನ ಫಿರ್ಕಾವಿನ ಯಾವ ಭಾಗದಲ್ಲಾದರೂ ಶೇಂದಿ ಬಿಕರಿ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನೂ ಒಳದೇಶದ ಸಾರಾಯಿ ಮಾರುವ ತನ್ನ ಬಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು. ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂದರ್‌ವಾರ್ ಎಕ್ಸೈಜ್ ಕಮಿಷನರವರ ಲಿಖಿತ ಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈ ಕೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿ ದೇಶದ ಯಾ ಶೀಮೆಯಲ್ಲಾಗಲಿ ಲೈಸೆನ್ಸ್‌ದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನ ಇಟ್ಟುಕೊಂಡಿರಕೂಡದು.

(12) ಲೈಸೆನ್ಸ್‌ದಾರನು 1895ನೇ ಇಸವಿ ಜುಲೈ ಗುರ್ರೆಯಲ್ಲಿ ತನ್ನ ಫಿರ್ಕಾದೊಳಗಿರುವ ಹಾಲೀ ಬಾಂಡೆಡ್ ಡಿಪೋದಲ್ಲಿ ಯಾ ಫಿರ್ಕಾ ಕೋಠಿಯಲ್ಲಿ ಯಾ ಆತನ ಅಂಗಡಿಗಳಲ್ಲಿ ಹಾಜರಿರತಕ್ಕ ವಾಯಿದೆ ಮೀರದ ಗುತ್ತಿಗೆದಾರನ ಬಾಬತು ದಾಸ್ತಾನ್ ಸಾರಾಯಿಯನ್ನು ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತುಮಾಡಬಹುದಾದ ಪರಿಹಾರ ದ್ರವ್ಯವನ್ನು ಪೂರ್ವದ ಗುತ್ತಿಗೆದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಲು ಗುರಿಯಾಗಿರತಕ್ಕದ್ದು.

(13) ಲೈಸೆನ್ಸ್‌ದಾರನು ಹಾಲೀ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ನಿಬಂಧನೆಗಳಿಗೂ ಅಥವಾ ಆಗಿಂದಾಗ್ಯೆ ಎಕ್ಸೈಜ್ ಕಾನೂನುಗಳ ಪ್ರಕಾರ ವಿಧಿಸೋಣಾಗುವ ಹೆಚ್ಚು ನಿಬಂಧನೆಗಳಿಗೂ ಅನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನೆಗಳನ್ನ ಉಪಯೋಗಿಸತಕ್ಕದ್ದು. ಮತ್ತು ಸಾರಾಯಿಯನ್ನು ಸಾಗಿಸುವ ಬಗ್ಯೆ ಬೇಕಾದ ಲೆಖ್ಖ, ರಹದಾರಿ ಅಥವಾ ಪ್ಯಾಸ್ ಇವುಗಳಿಗೆ ವಿಧಾಯಕವಾದ ನಮೂನೆಗಳನ್ನು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೆ ವದಗಿಸಿಕೊಳ್ಳತಕ್ಕದ್ದು.

(14) ಈ ಗುತ್ತಿಗೆಯು ಎಕ್ಸೈಜ್ ಕಮಿಷನರ್ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(15) ತೆಗದುಕೊಳ್ಳಲ್ಪಟ್ಟದ್ದ ಫಿರ್ಕಾಗಳ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮಿಷನರವರು ವಿಚಾರ ಮಾಡದೆ ತಿರಸ್ಕರಿಸುವರು.

8. ಲೈಸೆನ್ಸ್‌ದಾರನಿಂದಲಾಗಲೀ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಿಂದಲಾಗಲೀ ಮೇಲ್ಕಂಡ ಷರತ್ತುಗಳು, ಯಾ ಲೈಸೆನ್ಸಿನ ಕರಾರುಗಳು ಉಲ್ಲಂಘಿಸಲ್ಪಟ್ಟ ಪಕ್ಷದಲ್ಲಿ ಯಾ ಆತನು ಅಂಗಡಿಗಳನ್ನು ತೆಗಿಯುವದರಲ್ಲಿ ಅಸ್ರದ್ಧೆಯಾಗಿದ್ದಲ್ಲಿ ಯಾ ಗುತ್ತಿಗೆ ಕೆಲಸದಲ್ಲಿ ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಕೊಡಲು ತಪ್ಪಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಪ್ರತಿಯೊಂದು ಉಲ್ಲಂಘನೆಗೆ 50 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಠೇವಣಿ ಇಡಲ್ಪಟ್ಟಿರುವ ಮೊಬಲಗು ದಂಡವಾಗಿ ದಾಖಲ್ಮಾಡಿ ಕೊಳ್ಳಲ್ಪಟ್ಟಿರುತ್ತೆಂದು ಹುಕುಂ ಮಾಡಲಿಕ್ಕೂ, ಲೈಸೆನ್ಸನ್ನ ರದ್ದು ಮಾಡಿ ಸದರೀ ಲೈಸೆನ್ಸ್‌ದಾರನ ಜವಾಬುದಾರಿ ಮೇಲೆ ಸದರೀ ಸರ್ವ ಸ್ವತಂತ್ರದ ಹಕ್ಕನ್ನ ಪುನಃ ಹರಾಜು ಮಾಡಲಿಕ್ಕೂ, ಯಾ ಅಂಥಾ ಗುತ್ತಿಗೆ ಫಿರ್ಕಾವನ್ನ ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾದ ಎಲ್ಲಾ ನಷ್ಟವನ್ನೂ 1895ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಗಳನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ಎಲ್ಲಾ ನಷ್ಟಗಳೂ ದೇಖೀಲ್ ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೆ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗುತ್ತೆ. ಅಂಥಾ ಎಲ್ಲಾ ದಂಡದ ವ ನಷ್ಟದ ಮೊಬಲಗುಗಳು ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ವಿಧಿಸೋಣ, ಠೇವಣಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸ್ ರದ್ದು ಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸ್‌ದಾರನನ್ನಾಗಲೀ, ಯಾ ಆತನ ಏಜಂಟನ್ನಾಗಲಿ, ಯಾ ಆತನ ನವುಕರರನ್ನಾಗಲೀ ಆಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕ ಪಡಿಸುವದೆಂದು ಭಾವಿಸಲ್ಪಡಕೂಡದು.

ಹುಕುಂ ಬಮೋಜೀಬ್,
ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರೆಟೇರಿ.

ಷೆಡ್ಯೂಲ್‌ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬ್ ತಪಸೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1393—94	1894—95	1892—93	1893—94	1894—95 ಏಳು ತಿಂಗಳ್ ವಿನಃ.		
			ಬೆಂಗಳೂರು ಡಿ||	ರೂ.	ರೂ.	ರೂ.	ಗ್ಯಾಲಾ.	ಗ್ಯಾಲಾ	ಗ್ಯಾಲಾ.		
ಬೆಂಗಳೂರು.	I	ಕೆಂಗೇರಿ ..	ಕೆಂಗೇರಿ	786	560	560	1616	1589	866	1ನೇ ಮತ್ತು 2ನೇ ಮೇ 1895.	
	II	ಬೇಗೂರು ..	ಬೇಗೂರು	661	400	770	2325	2327	1108		
	III	ಹಲಸೂರು ..	ಹಲಸೂರು	711	756	1330	3329	3316	2241		
	IV	ಯಸವಂಚಪುರ ..	ಯಸವಂಚಪುರ	1834	1088	1215	3703	3227	1953		
	V	ಅಗರ ..	ಅಗರ	1504	1120	1710	4070	4498	2229		
	VI	ಯಲಹಂಕ ..	ಯಲಹಂಕ	851	804	1000	2385	2454	1434		
	VII	ಕೃಷ್ಣರಾಜಪುರ ..	ಕೃಷ್ಣರಾಜಪುರ	534	524	620	1701	1765	963		
	VIII	ವರ್ತೂರು ..	ವರ್ತೂರು	600	440	520	1706	1757	928		
ಆನೇಕಲ್.	IX	ಆನೇಕಲ್ಲು .. ಇಗ್ಗಲೂರು .. ಅತ್ತಿಬೆಲೆ ..	ಆನೇಕಲ್ಲು	1281	1052	1404	3477	3427	1967	15ನೇ ಮೇ 1895	
	X	ಜಿಗಣಿ .. ಹಾರಗದ್ದೆ ..	ಜಿಗಣಿ	342	244	396	1229	1268	664		
	XI	ಸರ್ಜಾಪುರ ..	ಸರ್ಜಾಪುರ	701	1140	1692	4190	4232	2203		
	XII	ಬಿದರಗುಪ್ಪೆ ..	ಬಿದರಗುಪ್ಪೆ	701							
ಚನ್ನಪಟ್ಣ.	XIII	ಕ್ಲೋಸ್‌ಪೇಟೆ .. ಮಾಕ್ಳಿ .. ಬಿಡದಿ .. ಕೂಂಗಲ್ .. ಬೈರಮಂಗಲ ..	ಕ್ಲೋಸ್‌ಪೇಟೆ	1600	1332	1632	3812	3820	1797	17ನೇ ಮೇ 1895	
	XIV	ಚನ್ನಪಟ್ಣ ..	ಚನ್ನಪಟ್ಣ	1422	1440	1740	3401	3531	2248		
	XV	ಮಳೂರು .. ಹೊಂಗನೂರು .. ಮುದಿಗೆರೆ .. ವಿರುಪಾಕ್ಷಿಪುರ ..	ಹೊಂಗನೂರು	160			881	1138	722		
ಮಾಗಡಿ.	XVI	ಮಾಗಡಿ .. ಸಾತನೂರು ..	ಮಾಗಡಿ	156	384	642	1073	1034	504	22ನೇ ಮೇ 1895	
	XVII	ಗುಡೇಮಾರನಹಳ್ಳಿ .. ಸೋಲೂರು ಕುದೂರು .. ತಿಪ್ಪಸಂದ್ರ .. ನಾರಸಂದ್ರ .. ಹುಲಿಕಲ್ಲು ..	ಗುಡೇಮಾರನಹಳ್ಳಿ	80	60		317	308	180		
	XVIII	ತಾವರೇಕೆರೆ .. ಮಡಬಾಳ್ ..	ತಾವರೇಕೆರೆ	200	204	204	694	2020	387		
ದೊಡ್ಡಬಳ್ಳಾಪುರ.	XIX	ದೊಡ್ಡಬಳ್ಳಾಪುರ .. ಕಾಕೋಳ್ .. ಕೋಡಿಹಳ್ಳಿ .. ತೂಬಗೆರೆ ... ರಾಜಘಟ್ಟ .. ಹೊನ್ನಾವಾರ .. ಹುಲಿಕುಂಟೆ .. ತಿಪ್ಪೂರು ..	ದೊಡ್ಡಬಳ್ಳಾಪುರ	1480	1240	1325	3158	2481	1210	8ನೇ ಮೇ 1895	

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಶರಾಬಿನ ತಪಶೀಲ್			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892-93	1893-94	1894-95	1892-93	1893-94	1894—95 ಆರು ತಿಂಗಳ ಬಿಕರಿ.		
				ರೂ.	ರೂ.	ರೂ.	ಗ್ಯಾಲಾ.	ಗ್ಯಾಲಾ	ಗ್ಯಾಲಾ		
ನೆಲಮಂಗಲ.	XX	ನೆಲಮಂಗಲ ..	ನೆಲಮಂಗಲ	810	728	860	1737	1803	1134	6ನೇ ಮೆ 1895	
		ಸೊಂಡೇಕೊಪ್ಪ ..									
	XXI	ಮೈಲ್ನ ಹಳ್ಳಿ ...	ಮೈಲ್ನ ಹಳ್ಳಿ	560	400	1700	1686	4554	1624		
		ಬೇಗೂರು ..									
		ದೊಡ್ಡ ಬೆಲೆ ..									
		ನಿಜಗಲ್ ...									
ಹೊಸಕೋಟೆ.	XXII	ಹೊಸಕೋಟೆ ...	ಹೊಸಕೋಟೆ	1263	1224	1296	3688	3725	1973	13ನೇ ಮೆ 1895	
		ಸೂಲಿಬೆಲೆ ...									
	XXIII	ವಾಗಟ ..									
		ಕಾಡ್ಗೋಡಿ ...	ವಾಗಟ	565	808	888	1756	1868	1023		
		ಗುಬ್ಬಿ ...									
	XXIV	ಮುಗಳೂರು ..	ಮುಗಳೂರು	226			900	970	507		
	XXV	ನಂದಗುಡಿ ...	ನಂದಗುಡಿ	412	428	480	1237	1171	708		
	XXVI	ಹುಲ್ಲೂರು ..	ಹುಲ್ಲೂರ	55	40	60	621	771	392		
ದೇವನಹಳ್ಳಿ.	XXVII	ದೇವನಹಳ್ಳಿ ..	ದೇವನಹಳ್ಳಿ	1,090	884	1175	2699	2735	1146	10ನೇ ಮೆ 1895	
		ಕುಂದಾಣ ..									
		ಚನ್ನರಾಯಪಟ್ಣ ..									
	XXVIII	ಜಾಲ ..	ಜಾಲ	441	404	480	1465	1376	795		
		ಬೂದಿಗೆರೆ ..									
	XXIX	ವಡಿಗೇನಹಳ್ಳಿ ..	ವಡಿಗೇನಹಳ್ಳಿ	601	524	706	1830	1599	1064		
ಕಾರ್ಕಾಹಳ್ಳಿ.	XXX	ಕಾರ್ಕಾಹಳ್ಳಿ ..	ಕಾರ್ಕಾಹಳ್ಳಿ	620	720	984	1791	1889	959	20ನೇ ಮೆ 1895	
		ಮರ್ಲ ವಾಡಿ ..									
		ಮುದವಾಡಿ ..									
		ತುಂಗಣಿ ..									
	XXXI	ಕೋಡಿಹಳ್ಳಿ ..	ಕೋಡಿಹಳ್ಳಿ				983	1176	610		
		ಸಾತನೂರು ..									
		ಉಯ್ಯಂಬಳ್ಳಿ ..									
	XXXII	ಹಾರೋಹಳ್ಳಿ ..	ಸೋಮನಹಳ್ಳಿ		156	180	659	628	315		
		ಸೋಮನಹಳ್ಳಿ ..									

ಕೋಲಾರ ಡಿಸ್ಟ್ರಿಕ್ಟ್.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892-93	1893-94	1894-95	1892-93	1893-94	1894—95 ಆರು ತಿಂಗಳ ಬಿಕರಿ.	ಹರಾಜು ತಾರೀಖು.	ಷರಾ.
ಕೋಲಾರ್.	I	ಕೋಲಾರ ...	ಕೋಲಾರ	2,165	2960	4080	7766	7661	3145	1ನೇ ಮೆ 1895	*ದಾಸರಹೊಸಹಳ್ಳಿ ಫಿರ್ಕಾ ಬಿಕರಿಶೇರಿಧೆ.
		ವಕ್ಕಲೇರಿ ...									
		ಹುತ್ತೂರು ...									
	II	ವೇಂಗಲ್ ..									
	III	ಸುಗಟೂರು ...									
		ದಳಸನೂರು ..									
		ಹೊಳೂರು ..									
ಬೌರಿಂಗ್‌ಪೇಟೆ.	IV	ಬೌರಿಂಗ್‌ಪೇಟೆ ..	ಬೌರಿಂಗಪೇಟೆ	840	1212	1505	2856	2762	*2075	6ನೇ ಮೆ 1895	
		ಬೂದಿಕೋಟೆ ..									
	V	ಕಾಮಸಂದ್ರ ..									

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892 93	1893·94	1894 95	1892·93	1893·94	1894—95 ಆರು ತಿಂಗಳ ಬಿಕರಿ.		
			ಕೋಲಾರ್ ಡಿ||	ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ		
ಬೌರಿಂಗಪೇಟೆ.	VI	ಬೇತಮಂಗಲ	ಬೇತಮಂಗಲ	300	604	1330	1050	1554	1200	6ನೇ ಮೆ 1895	
		ಕ್ಯಾಸಂಬಳ್ಳಿ									
		ರಾಮಸಾಗರ									
	VII	ದಾಸರ ಹೊಸಹಳ್ಳಿ	ದಾಸರಹೊಸಹಳ್ಳಿ	185	584	850	984	1073	0		
ಮಾಲೂರು.	VIII	ಮಾಲೂರು	ಮಾಲೂರು	975	992	1660	3203	3226	1788	3ನೇ ಮೆ 1895	
	IX	ನರಸಾಪುರ	ನರಸಾಪುರ	395	528	1030	1895	1728	963		
	X	ಲಕ್ಕೂರು	ಮಾಸ್ತಿ	290	324	450	1062	1418	574		
	XI	ಮಾಸ್ತಿ									
		ಹುಳದೇನಹಳ್ಳಿ									
		ತ್ಯಾಕಲ್ಲು									
ಮುಳಬಾಗಲ್.	XII	ಮುಳಬಾಗಲ್	ಮುಳಬಾಗಲು	550	644	800	2329	2336	1524	8ನೇ ಮೆ 1895	
		ಬೈರಕೂರು									
		ಮಲ್ಲನಾಯಿಕನಹಳ್ಳಿ									
		ಆವನಿ									
	XIII	ಯಲ್ದೂರು	ಯಲ್ದೂರು	65	164	200	741	870	362		
		ದುಗ್ಗಸಂದ್ರ									
ಚಿಕ್ಕಬಳ್ಳಾಪುರ.	XIV	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	2705	1908	3350	4198	5339	2343	13ನೇ ಮೆ 1895	
	XV	ನಂದಿ									
	XVI	ಮಂಡಿಕಲ್ಲು	ಪೆರೇಸಂದ್ರ	125	112	220	711	754	484		
		ಪೆರೇಸಂದ್ರ									
		ಪೂರ್ಣಸಾಗರ									
ಶಿಡ್ಲಘಟ್ಟ.	XVII	ಶಿಡ್ಲಘಟ್ಟ	ಶಿಡ್ಲಘಟ್ಟ	1000	992	1620	2181	2443	979	17ನೇ ಮೆ 1895	
	XVIII	ಜಂಗಂಕೋಟೆ	ಜಂಗಂಕೋಟೆ	200	280	380	952	970	418		
	XIX	ಕೈವಾರ	ಕೈವಾರ	160	260	450	779	810	362		
	XX	ಬಶೆಟ್ಟಿಹಳ್ಳಿ	ಬಶೆಟ್ಟಿಹಳ್ಳಿ	75	68	361	786	866	406		
		ಸಾದ್ಲಿ									
	XXI	ಗಂಜಿಗುಂಟೆ	ಗಂಜಿಗುಂಟೆ	85	188	365	815	984	466		
		ಚಿಲಕಬನೆರ್ಪು									
ಬಾಗೇಪಲ್ಲಿ.	XXII	ಬಾಗೇಪಲ್ಲಿ	ಬಾಗೇಪಲ್ಲಿ	80	100	110	926	922	669	15ನೇ ಮೆ 1895	
		ಗೂಳೂರು									
		ಮಿಟ್ಟೆಮರಿ									
	XXIII	ಬಿಳ್ಳೂರು	ಪಾಳ್ಯ	45	62	65	619	764	445		
		ಚೇಲೂರು									
		ಪಾಳ್ಯ									
	XXIV	ಗುಡಿಬಂಡ	ಗುಡಿಬಂಡ	30	48	54	504	584	302		
		ಸೋಮನಹಳ್ಳಿ									
ಗೋರೀಬಿದನೂರು.	XXV	ಗೋರೀಬಿದನೂರು	ಗೋರೀಬಿದನೂರು	450	404	762	1737	1664	818	20ನೇ ಮೆ 1895	
		ಮಂಚೇನಹಳ್ಳಿ									
		ತೊಂಡೇಭಾವಿ									
		ಹೊಮ್ಮಸಂದ್ರ									
		ಹೊಸೂರು									
		ದೊಡ್ಡನಾಯಕನಪಾಳ್ಯ.									
		ನಾಗರಗೆರೆ									

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892·93	1893-94	1894·95	1892·93	1893·94	1894—95 ಆರು ತಿಂಗಳ ಬಿಕರಿ.		
			ಕೋಲಾರ್ ಡಿ||	ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗಾಲಾ.		
ಚಿಂತಾಮಣಿ.	XXVI	ಚಿಂತಾಮಣಿ .. ಅಂಬಾಜಿದುರ್ಗ ..	ಚಿಂತಾಮಣಿ	800	1244	1250	1385	2249	1238	10ನೇ ಮೆ 1895.	
	XXVII	ಮುರಗಮಲೆ .. ಇರಗಂಪಲ್ಲಿ .. ಮಂಗನಹಳ್ಳಿ .. ಅಡ್ಡಗಲ್ ..	ಅಡ್ಡಗಲ್	135	320	365	771	918	644		
	XXVIII	ಶ್ರೀನಿವಾಸಪುರ ..	ಶ್ರೀನಿವಾಸಪುರ	260	316	405	756	775	473		
	XXIX	ಸೋಮಯಾಜನಪಲ್ಲಿ .. ನೆಲವಂಕಿ .. ರಾಯಲ್ಪಾಡು ...	ರೋಣೂರು	230	388	515	1148	1059	529		
			ತುಮಕೂರು ಡಿ||								
ತುಮಕೂರು.	I	ತುಮಕೂರು .. ಬೆಳ್ಳಾವಿ .. ಹೊನ್ನುಡಿಕೆ .. ಹೆಬ್ಬೂರು .. ಕೊಳಲ ... ಉರಡಗೆರೆ ... ಗೂಳೂರು ... ಕೋರಾ .. ತೊಟ್ಲಗೆರೆ ...	ತುಮಕೂರು	1610	1824	1824	4929	4979	2555	1ನೇ ಮೆ 1895.	
ಮದ್ದಗಿರಿ.	II	ಮದ್ದಗಿರಿ .. ಕೊರಟಗೆರೆ .. ದೊಡ್ಡೇರಿ ... ರಂಟವಳಲು .. ಮಿಡಗೇಶಿ .. ಇಟ್ಟಿಗೇದಿಬ್ಬನಹಳ್ಳಿ .. ತೆರಿಯೂರು .. ಕೊಡಿಗೇನಹಳ್ಳಿ ... ಪುರವಾರ .. ಚನ್ರಾಯದುರ್ಗ .. ಹೊಳವನಹಳ್ಳಿ ..	ಮದ್ದಗಿರಿ	110	132	330	926	1003	853	9ನೇ ಮೆ 1895.	
ಪಾವಗಡ.	III	ಪಾವಗಡ .. ಮುಗ್ದಲ್ಪೆಟ್ಟ .. ಗೂಂಗಟ್ಟ .. ನಿಡಗಲ್ .. ಹೊಸಕೋಟೆ .. ಪೊನ್ನಸಮುದ್ರ .. ರಾಜರ್ಲ ...	ಪಾವಗಡ	30	32	80	420	461	294	13ನೇ ಮೆ 1895.	

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್.		ಪ್ರತಿಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—95 ಅರು ತಿಂಗಳ ಬಿಕರಿ		
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.		
ತಿಪಟೂರು.	IV	ತಿಪಟೂರು .. ಮಾಯಸಂದ್ರ .. ತುರುವೆಕೆರೆ .. ಹೊನ್ನವಳ್ಳಿ .. ಹುಲಿಕುರ್ಕೆ .. ನೊಣವಿನಕೆರೆ .. ಈಚನೂರು .. ಕಿಬ್ಬೆನಹಳ್ಳಿ .. ದಬ್ಬಗಟ್ಟ ..	ತಿಪಟೂರು ..	240	140	402	1204	1456	802	3ನೇ ಜು 1895.	
ಚಿಕ್ಕನಾಯಕನಹಳ್ಳಿ.	V	ಚಿಕ್ಕನಾಯಕನಹಳ್ಳಿ .. ಹುಳಿಯೂರು .. ಶೆಟ್ಟಿಕೆರೆ .. ಖಂಡಿಕೆರೆ .. ಹಂದಿನಕೆರೆ .. ಬೂದಿಹಾಳು .. ಯಲನೋಡು ..	ಚಿಕ್ಕನಾಯಕನಹಳ್ಳಿ	155	80	120	1356	903	413	20ನೇ ಜು 1895.	
ಶೀರಾ.	VI	ಶೀರಾ .. ತಾವರೆಕೆರೆ .. ಕಲ್ಲಂಬೆಳ್ಳ .. ಅಗ್ರಹಾರ .. ಬುಕ್ಕಾಪಟ್ಣ ..	ಶೀರಾ ..	205	480	636	2042	2140	1142	16ನೇ ಜು 1895.	
	VII	ನಾದೂರು .. ಹುಲಿಕುಂಟೆ .. ಬರಗೂರು ..	ನಾದೂರು ..	270							
ಗುಬ್ಬಿ.	VIII	ಗುಬ್ಬಿ .. ಚೇಲೂರು .. ಹಾಗಲ್ವಾಡಿ ..	ಗುಬ್ಬಿ ..	370	464	480	1640	1550	773	4ನೇ ಜು 1895.	
	IX	ನಿಟ್ಟೂರು .. ಕಡಬ .. ಕಲ್ಲೂರು .. ಚಿಟ್ನಹಳ್ಳಿ .. ದಂಡಿನಶಿವರ ..	ನಿಟ್ಟೂರು ..	185							
ಕುಣಿಗಲ್.	X	ಕುಣಿಗಲ್ .. ಹುಲಿಯೂರುದುರ್ಗ .. ಅಮೃತೂರು .. ಎಡಿಯೂರು .. ಕೊತ್ತಗೆರೆ .. ಹುತ್ರಿದುರ್ಗ .. ಬ್ಯಾಡ್ರಹಳ್ಳಿ ..	ಕುಣಿಗಲ್ ..	255	240	307	943	950	447	6ನೇ ಜು 1895.	

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪಶೀಲು. ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರು.	ಸಾರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪಶೀಲು. ಗುತ್ತಿಗೆ ಫಿರ್ಕಾದ ಹೆಸರುಗಳು.	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1892—93	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1893—94	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1894—95	ಪ್ರತಿ ವಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್. 1892—93	ಪ್ರತಿ ವಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್. 1894—95	ಪ್ರತಿ ವಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್. 1894—95 ಆರುತಿಂಗಳ ಬಾಕಿ	ಹರಾಜು ತಾರೀಖು.	ಷರಾ.
				ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ		
			ಮೈಸೂರು ಡಿಸ್ಟ್ರಿಕ್ಟ್.								
ಮೈಸೂರು.	I	ಕಡಕೋಳ ಇಲವಾಲ ವರಕೋಡು ಕಸಾರಿ ಯಾ ನವಾಷಹರ್ ಕೂಡನಹಳ್ಳಿ ಲಿಂಗಾಂಬುಧಿ ಸಿಂದವಳ್ಳಿ ಮೈಸೂರು ಆನಂದೂರು	ಮೈಸೂರು	55	24	2	120	77	48	1ನೇ ಮೇ 1895.	
ನಂಜನಗೂಡು.	II	ನಂಜನಗೂಡು ಕಳಲಿ ಹೆಡತಲೆ ಹದಿನಾರು ದೇವನೂರು ಹುರ ರಾಂಪುರ ತಾಯೂರು ದಾಸನೂರು	ನಂಜನಗೂಡು	550	540	*775	6020	1755	750	22ನೇ ಮೇ 1895.	*ಕಾಜು ಕೋಳದ ಅಂಗಡಿಯ ಗ ತ್ತಾ ಮೊಬಲಗು ಸೇರಿದೆ.
ಗುಂಡ್ಲು.	III	ಗುಂಡ್ಲು ರಾಘವಾಪುರ ಕೆಲಸೂರು ತಿರಕಣಾಂಬಿ ಹಂಗಳ ಕುತ್ತನೂರ	ಗುಂಡ್ಲು			305	639	618	447	13ನೇ ಮೇ 1895.	
ಹುಣಸೂರು.	IV	ಕಿರಜಾಜಿ ಪೆರಿಯಾಪಟ್ಣ ಬಿಳಕೆರೆ ಗಾಡಕೆರ ಚಿಲಕುಂಡ ರಾವಂದೂರು ಚಟ್ಟದಪುರ ಹಾರ್ನಹಳ್ಳಿ ಕಗುಂದಿ ಹೆಗ್ಗಂದೂರು	ಹುಣಸೂರು	700	922	1200	3316	3424	1567	6ನೇ ಮೇ 1895.	
ಯಡತೊರೆ.	V	ಯಡತೊರೆ ಸಾಲಿಗ್ರಾಮ ಬ್ಯಾಡರಹಳ್ಳಿ ಹರದನಹಳ್ಳಿ ಮಿರಲೆ ತಿಪ್ಪೂರು ಹನಸೋಗೆ	ಯಡತೊರೆ		15	292	610	1000	570	4ನೇ ಮೇ 1895.	

ಸಕಲೇಶಪುರ .. 1700 3200 2800 5118 5960 3110

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರ್.	ಸಾರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪ್ಸೀಲ್.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ವಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪ್ಸೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—95 (6ತಿಂಗಳಬಿಕ್)		
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.		
ಶ್ರೀರಂಗಪಟ್ಣ.	VI	ಕಸಬ ವ ಶ್ರೀರಂಗಪಟ್ಣ .. ಪಾಲಹಳ್ಳಿ .. ಕ್ಯಾತನಹಳ್ಳಿ .. ಹರವು .. ಶೆಟ್ಟಿಹಳ್ಳಿ .. ಅರಕೆರೆ .. ಬೆಳಗೋಳಾ .. ಚಂದಗಲ್ ...	ಶ್ರೀರಂಗಪಟ್ಣ ..	760	920	1666	2112	2527	2270	25ನೇ ಮೇ 1895.	
	VII	ಕಿರಂಗೂರು .. ಮೇಲ್ಕೋಟೆ ... ತಿರುಮಲಸಾಗರಛತ್ರ ..									
ಹೆಗ್ಗಡದೇವನಕೋಟೆ.	VIII	ಹೆಗ್ಗಡದೇವನಕೋಟೆ .. ಅಂತರಸಂತೆ .. ಸರಗೂರು .. ನೆಮ್ಮನಹಳ್ಳಿ .. ಜಕ್ಕಹಳ್ಳಿ ..	ಹೆಗ್ಗಡದೇವನಕೋಟೆ	105	96	167	826	868	532	9ನೇ ಮೇ 1895.	
ಮಂಡ್ಯ.	IX	ಮಂಡ್ಯ .. ಯಲಿಯೂರು .. ಕೊತ್ತತ್ತಿ .. ಬಸರಾಳ್ .. ಮುತ್ತಗೆರೆ ... ದುದ್ದ ..	ಮಂಡ್ಯ ..	260	270	513	1388	1634	1014	29ನೇ ಮೇ 1895.	
	X	ಮದ್ದೂರು .. ಕೊಪ್ಪ .. ಆಣೆ ಅಥವ ಹೊಸಕೆರೆ .. ಆಟಿಗೂರು .. ತಿಪ್ಪೂರು .. ಕುದುರೆಗುಂಡಿ ..									
ನಾಗಮಂಗಲ.	XI	ನಾಗಮಂಗಲ .. ನೆಲ್ಲಿಗೆರೆ .. ಬೆಂಡಿಗನವಲೆ .. ಹೊಣಕೆರೆ .. ದೇವಲಾಪುರ ..	ನಾಗಮಂಗಲ ..	110		245	557	690	355	1ನೇ ಜೂನ್ 1895.	
ಮಳವಳ್ಳಿ.	XII	ಮಳವಳ್ಳಿ .. ಪೂರಿಗಾಲ್ .. ಹಲಗೂರು .. ದೊಡ್ಡಅರಸಿನಕೆರೆ ... ಕುಳಗೆರೆ ... ಗೌಡಗೆರೆ .. ಕಿರಗಾವಲು ..	ಮಳವಳ್ಳಿ .	270	192	570	1338	1716	979	27ನೇ ಮೇ 1895.	

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕ್ರಿ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್.			ಹರಾಜು ತಾರೀಖು.	ಸ್ಥಳ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—95 ಆರು ತಿಂಗಳ ಕರಿ		
				ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ		
ತಿರುಮಕೂಡ್ಲು ನರಶೀಪುರ.	XIII	ತಿರುಮಕೂಡ್ಲು ನರಶೀಪುರ	ಟ. ನರಸೀಪುರ ಮತ್ತು	200	171	372	1019	1026	564	20ನೇ ಮೇ 1895.	ಟ. ನರಸೀಪುರದ ತಾಲ್ಲೂಕು ಕಚೇರಿಯಲ್ಲಿ ಹರಾಜು ಹಾಕಲ್ಪಡುವದು.
		ಬನ್ನೂರು ..									
		ತಲಕಾಡು ..									
		ಸೋಸಲೆ ..									
		ರಂಗಸಮುದ್ರ ..									
		ಮೂಗೂರು ..									
		ಬೇವಿನಹಳ್ಳಿ ..									
ಚಾಮರಾಜನಗರ.	XIV	ಚಾಮರಾಜನಗರ ..	ಚಾಮರಾಜನಗರ ..	..	..	100	260	333	215	16ನೇ ಮೇ 1895.	
		ಸಂತೆಮಾರ್‍ನಹಳ್ಳಿ ..									
		ಆಲೂರು ..									
		ಕಾಗಲ್‌ವಾಡಿ ..									
		ಹರದ್ನಹಳ್ಳಿ ..									
		ಉಡಿಗ್ಯಾಲ ..									
		ಉಮ್ಮತ್ತೂರು ..									
		ಬ್ಯಾಡರಪುರ ..									
		ಹೊಂಗನೂರು ..									
		ಕೊತ್ತಲ್‌ವಾಡಿ ..									
ಎಳಂದೂರ್	XV	ಅಗರ ..	ಯಳಂದೂರು ..	210	122	230	574	761	554	20ನೇ ಮೇ 1895.	
		ಯಳಂದೂರು ..									
		ಯರಗಂಬಳ್ಳಿ ..									
ಅತ್ತಿಕುಪ್ಪೆ	XVI	ಅತ್ತಿಕುಪ್ಪೆ ಯಾ ಕೃಷ್ಣರಾಜಪೇಟೆ ..	ಅತ್ತಿಕುಪ್ಪೆ ಯಾ ಕೃಷ್ಣರಾಜಪೇಟೆ ..	40	5	101	..	125	171	3ನೇ ಜೂನ್ 1895.	
		ಕಿಕ್ಕೇರಿ ..									
		ಚಿಣಕುರುಳಿ ..									
		ಸಂತೆಬಾಚಹಳ್ಳಿ ..									
		ಅಕ್ಕಿಹೆಬ್ಬಾಳು ..									
		ಕನ್ನಂಬಾಡಿ ..									
		ಚಾಮುಂಡಿಜಾತ್ರೆ ..		..	4	10	..	..	..		
		ಸುಬ್ರಾಯನ ಜಾತ್ರೆ ..		..	..	5					
			ಹಾಸನ ಡಿಸ್ಟ್ರಿಕ್ಟು.								
ಹಾಸನ.	I	ಹಾಸನ ..	ಹಾಸನ ..	1950	2529	2400	4601	4953	2245	1ನೇ ಮೇ 1895.	
		ಸಾಲಗಾಮೆ ..									
		ದುದ್ದ ..									
		ಗ್ರಾಮ ..									
	II	ಆಲೂರು ..	ಆಲೂರು ..	350	677	620	1385	1371	714		
		ಪಾಳ್ಯ ..									
		ಕಟಾಯಿ ..									
		ಬೈಲಹಳ್ಳಿ ..									
		ಪೊನ್ನಾಥಪುರ ..									
ಮಂಜರಾಬಾದು	III	ಸಕಲೇಶಪುರ ..	ಸಕಲೇಶಪುರ ..	1700	3200	2800	5118	5960	3110	13ನೇ ಮೇ 1895.	
		ಬೆಳಗೋಡು ..									
		ಹಾನಬಾಳ್ ..									
		ಮಾರ್‍ನಹಳ್ಳಿ ..									
	IV	ಯಸಲೂರು ..	ಯಸಲೂರು ..	450	1040	855	1734	1902	1021		
		ಬ್ಯಾಗಡಹಳ್ಳಿ ..									

388

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕ್ರಿ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪ್ಸೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—95 ಆರುತಿಂಗಳ ಬಿಕರಿ.		
				ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ.		
ಮಂಜರಾಬಾದು.	V	ಹೊಸಕೋಟೆ ಯಾ ಮುತ್ತಗಿ ಶುಕ್ರವಾರಸಂತೆ ವ ಬೆಳ್ಳೂರು	ಶುಕ್ರವಾರ ಸಂತೆ ಅಥವ ಬೆಳ್ಳೂರು ..	250	1040	1800	1513	1579	1266		
ಬೇಲೂರು.	VI	ಬೇಲೂರು ..	ಬೇಲೂರು ..	1425	2180	2000	3651	3839	2253	15ನೇ ಮೇ 1895	
		ಶನಿವಾರಸಂತೆ ..									
		ತೊಗರೆ ..									
		ಅರೆಹಳ್ಳಿ ...									
		ಬಿಕೋಡು ..									
	VII	ಮಾದಿಹಳ್ಳಿ ..									
		ಹಳೇಬೀಡು ..									
ಅರಕಲಗೂಡು.	VIII	ಅರಕಲಗೂಡು ..	ಅರಕಲಗೂಡು ..	85	505	706	881	671	629	10ನೇ ಮೇ 1895	
		ಕೋಣನೂರು ..									
		ಮರೂರು ..									
		ಮಲ್ಲಾಪಟ್ಟ ...									
		ಬಸವಾಪಟ್ಣ ..									
		ಕ್ರಿಷ್ಣರಾಜಕಟ್ಟೆ ..									
ಹೊಳೇನರಸೀಪುರ.	IX	ಹೊಳೇನರಸೀಪುರ ..	ಹೊಳೇನರಸೀಪುರ ..	110	256	562	752	673	424	8ನೇ ಮೇ 1895	
		ದೊಡ್ಡಕಾಡನೂರು ..									
		ಹಳೇಕೋಟೆ ...									
		ಗುಬ್ಬಿ ..									
ಚನ್ನರಾಯಪಟ್ಣ.	X	ಚನ್ನರಾಯಪಟ್ಟಣ ..	ಚನ್ನರಾಯಪಟ್ಣ ..	35	106	250	215	549	419	6ನೇ ಮೇ 1895	
		ಹಿರೇಸಾವೆ ..									
		ನುಗ್ಗಿಹಳ್ಳಿ ..									
		ಶ್ರಾವಣಬೆಳಗೊಳ ..									
		ದಂಡಿಗಾನಹಳ್ಳಿ ..									
		ಆನತಿ ..									
		ಬಾಗೂರು ..									
ಅರಸೀಕೆರೆ.	XI	ಅರಸೀಕೆರೆ ..	ಅರಸೀಕೆರೆ ..	800	650	700	2098	2242	1172	3ನೇ ಮೇ 1895	
		ಹಾರನಹಳ್ಳಿ ..									
		ಬಾಣಾವಾರ ..									
		ಗಂಡಸಿ ..									
		ಜಾವಗಲ್ ..									
		ಕಂಗಟ್ಟ ..									
		ಕಡೂರು ಡಿಸ್ಟ್ರಿಕ್ಟ್.									
ಕಡೂರು.	I	ಕಡೂರು ..	ಕಡೂರು ..	255	496	650	1925	2431	919	3ನೇ ಮೇ 1895	
		ಸಕ್ರೆಪಟ್ಣ ..									
		ಯಾಗಟಿ ..									
		ಬಿದರೆ ..									
	II	ಬೀರೂರು ..	ಬೀರೂರು ..	255	441	420					
		ಹಿರೇನಲ್ಲೂರು ..									

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರ್.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಸೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪ್ಸೀಲ್.			ಹರಾಜ ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93.	1893—94.	1894—95.	1892—93.	1893—94.	1894—95. ಆರುತಿಂಗಳ ಬಿಕರಿ.		
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.		
ಚಿಕ್ಕಮಗಳೂರು.	III	ಚಿಕ್ಕಮಗಳೂರು	ಚಿಕ್ಕಮಗಳೂರು	3100	5600	5350	9521	11300	6162	1ನೇ ಮೇ 1895.	
	IV	ಮಾರ್ಲೆ									
		ಲಾಖ್ಯ									
		ಜಾಗ್ರ									
	V	ವಸ್ತಾರ	ವಸ್ತಾರ	635	2256	2840	4548	5581	2965		
	VI	ಬಿದರನಾಡು									
		ಕಡಗಲ್ನಾಡು	ಆಲ್ದೂರು	410	1920	1955	3347	3813	2042		
		ಖಾಂಡ್ಯ									
ಮೂಡಗೆರೆ.	VII	ಮೂಡಗೆರೆ	ಮೂಡಗೆರೆ							11ನೇ ಮೇ 1895.	
		ಗೋಣೀಬೀಡು			2068	2330	4357	5890	3420		
	VIII	ಬಾಂಕಲ್ಲು		690							
		ಮೇಲ್ಭಂಗಾಡಿ	ಬಾಂಕಲ್ಲು		1208	1502	2586	3253	2046		
		ಕಲಸ									
ತರೀಕೆರೆ.	IX	ತರೀಕೆರೆ								6ನೇ ಮೇ 1895.	
		ಅಜಂಪುರ									
		ಶಿವನೆ	ತರೀಕೆರೆ	710	1800	1800	2404	2533	1278		
	X	ಅಮೃತಪುರ									
		ಲಿಂಗದಹಳ್ಳಿ	ಲಿಂಗದಹಳ್ಳಿ	805	1808	2200	2886	3966	1983		
	XI	ಲಕ್ಕವಳ್ಳಿ	ಲಕ್ಕವಳ್ಳಿ	100	188	250	407	49	322		
ಕೊಪ್ಪ.	XII	ಕೊಪ್ಪ	ಕೊಪ್ಪ	510	2400	1586	3137	4764	2241	9ನೇ ಮೇ 1895.	
	XIII	ಹೊಸಕೆರೆ									
		ಬಿಳೇರಿ	ಹರಿಹರಪುರ	325	704	526	1997	1593	858		
		ಕಿಗ್ಗ									
	XIV	ಬಗುಂಜಿ	ಸೊಳ್ಳೆಬೈಲು	290	840	780	1713	2094	1037		
		ಮೇಗುಂದ									
	XV	ಎಡೆಹಳ್ಳಿ	ಎಡೆಹಳ್ಳಿ	110	608	526	1363	1090	628		
	XVI	ಬಾಳೇಹೊನ್ನೂರು	ಬಾಳೇಹೊನ್ನೂರು	115	400	350	855	872	485		
	XVII	ಶ್ರಿಂಗೇರಿ	ಶ್ರಿಂಗೇರಿ	400	552	841	1503	1836	939		

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರ್.	ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93.	1893—94.	1894—95.	1892—93.	1893—94.	1894—95. ಆರುತಿಂಗಳ ಬಿಕರಿ.	ಹರಾಜ ತಾರೀಖು.	ಷರಾ.
ಶಿವಮೊಗ್ಗ.	I	ಶಿವಮೊಗ್ಗ	ಶಿವಮೊಗ್ಗ	4965	5008	4350	8136	8865	4871	1ನೇ ಮೇ 1895.	
	II	ಹೊಳಲೂರು	ಹೊಳಲೂರು	95	93	81	306	485	172		
	III	ಭಿದರೆ	ಬಿದರೆ	200	522	560	1326	1412	688		
	IV	ಹೊಳೇಹೊನ್ನೂರು	ಹೊಳೇಹೊನ್ನೂರು	300	348	365	765	903	388		
	V	ಬೆಂಕೀಪುರ	ಬೆಂಕೀಪುರ	870	826	732	1593	1792	909		
	VI	ಹಾರ್ನಹಳ್ಳಿ									
		ಕುಂಸಿ	ಐನೂರು	810	856	720	1942	1894	953		
ಹೊನ್ನಾಳಿ.	VII	ಹೊನ್ನಾಳಿ	ಹೊನ್ನಾಳಿ	780	672	500	1620	2019	924		
		ಸಾಸುವೆಹಳ್ಳಿ									
	VIII	ಬೆಲಗುತ್ತಿ	ನ್ಯಾಮತಿ	1395	1057	775	2176	2311	1194		

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮಸಂಖ್ಯೆ.	ಸಾರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲು.			ಜಾರಿ ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—85 ಆರುತಿಂಗಳ ಖರ್ಚು.		
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲಾ.		
ಚನ್ನಗಿರಿ.	IX	ಚನ್ನಗಿರಿ .. ನಲ್ಲೂರು .. ಬಸವಾಪಟ್ಟಣ ಹೊಸಕೆರೆ. ಸಂತೆಬೆನ್ನೂರು .. ಉಬ್ರಾಣಿ ..	ಚನ್ನಗಿರಿ ..	335	306	260	916	1111	555	1ನೇ ಜೂ 1895.	
ಶಿಕಾರಿಪುರ.	X	ಶಿಕಾರಿಪುರ ..	ಶಿಕಾರಿಪುರ ..	1205	1106	846	2023	1992	943		
	XI	ಮುಗಳಗೆರೆ .. ಹೊಸೂರೂ .. ಉಡುಗಣಿ .. ತಲಗುಂದ ..	ಮುಗಳಗೆರೆ ..	710	705	721	1703	1787	1043		
	XII	ಬಿಳಂದೂರು ..	ಬಿಳಂದೂರು ..	115	208	152	634	691	445		
ನಗರ.	XIII	ಹುಂಚ .. ಕರೇಹಳ್ಳಿ .. ನಗರ .. ಪುಟ್ಟಗುಪ್ಪಿ .. ಹರತಲ್ ..	ನಗರ ..	65	160	85	735	885	480		
ಸಾಗರ.	XIV	ಜಾಲ .. ಸಾಗರ .. ಅನಂತಪುರ .. ಇಕ್ಕೇರಿ ..	ಸಾಗರ ..	1350	1205	720	2316	2565	1899		
	XV	ತಲಗೊಪ್ಪ .. ಕರೂರು .. ಭಾರಂಗಿ ..	ತಲಗೊಪ್ಪ ..	165	80	42	898	1085	226		
ಸೊರಬ.	XVI	ಸೊರಬ .. ಕ್ಯಾಸನೂರು .. ಚಂದ್ರಗುತ್ತಿ ..	ಸೊರಬ ..	560	764	530	1607	1734	919		
	XVII	ತವನಂದಿ .. ಅಣವಟ್ಟಿ .. ತಲಗುಡ್ಡೆ ..	ಅಣವಟ್ಟಿ ..	350	696	380	1320	1531	648		
ತೀರ್ಥಹಳ್ಳಿ.	XVIII	ಅರಗ ..	ತೀರ್ಥಹಳ್ಳಿ ..	1055	1141	1120	2227	2148	1154		
	XIX	ಅಗ್ರಹಾರ ..	ಅಗ್ರಹಾರ ..	205	392	400	1074	1346	822		
	XX	ಮಿಟ್ಟೂರು ..	ಹಿರೇಮತ್ತೂರು ..	235	385	375	1008	1072	598		
	XXI	ಆಗುಂಬಿ ..	ಆಗುಂಬಿ ..	141	385	300	851	1086	686		
	XXII	ಮಂಡಗದ್ದೆ ..	ಮಂಡಗದ್ದೆ ..	485	617	460	6547	1267	743		
ಚಿತ್ರದುರ್ಗ.		ಚಿತ್ರದುರ್ಗ ಡಿಸ್ಟ್ರಿಕ್ಟು.									
	I	ಚಿತ್ರದುರ್ಗ .. ತುರನೂರು .. ಭರಮಸಾಗರ .. ಹಿರೆಗುಂಟನೂರು ..	ಚಿತ್ರದುರ್ಗ ..	910	640	690	1429	1636	1020	1ನೇ ಜೂ 1895.	

391

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರ.	ಸಾರಾಯಿ ಬಿಕರಿ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ವೊಬಲಗು.			ಪ್ರತಿ ಬಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93.	1893—94.	1894—95.	1892—93.	1893—94.	1894—95. ಅರುತಿಂಗಳ ಬಿಕರಿ.		
				ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ.		
ಜಗಲೂರು.	II	ಜಗಲೂರು ಬಿಳಚೋಡು ಸೊಕ್ಕಿ	ಜಗಲೂರು	46	37	40	197	198	92	20ನೇ ಮೇ 1895	
ದಾವಣಗೆರೆ.	III	ದಾವಣಗೆರೆ ಮಾಯಕೊಂಡ ಹದಡಿ ಅಣಿಗೋಡು ಅಣಜಿ	ದಾವಣಗೆರೆ	905	724	1052	1322	1246	648	4ನೇ ಮೇ 1895.	
	IV	ಹರಿಹರ ಮಳೇಬೆನ್ನೂರು ಕೊಂಡಜ್ಜಿ	ಹರಿಹರ	1310	762	755	1581	1836	811		
ಮೊಳಕಾಲ್ಮುರು.	V	ವೊಳಕಾಲ್ಮುರು ದೇವಸಮುದ್ರ	ವೊಳಕಾಲ್ಮುರು	100	68	215	712	687	460	10ನೇ ಮೇ 1895.	
ಹೊಳಲ್ ಕೆರೆ.	VI	ಹೊಳಲ್ಕೆರೆ ಭರಮನಾಯಕನದುರ್ಗ. ತಾಳ್ಯ ರಾಮಗಿರಿ ಹೊಸದುರ್ಗ ಬಾಗೂರು	ಹೊಳಲ್ಕೆರೆ	130	87	90	566	684	441	6ನೇ ಮೆ 1895.	
ಚಳ್ಳಕೆರೆ.	VII	ಚಳ್ಳಕೆರೆ ತಳಕ ನಾಯಕನಹಟ್ಟಿ ಪರಶುರಾಮಪುರ	ಚಳ್ಳಕೆರೆ	110	78	140	686	629	414	13ನೇ ಮೇ 1885.	
ಹಿರಿಯೂರು.	VIII	ಹಿರಿಯೂರು ಐಮಂಗಲ ಜಾವನಗೊಂಡನಹಳ್ಳಿ ಧರ್ಮಾಪುರ ಲಕ್ಕಿಹಳ್ಳಿ	ಹಿರಿಯೂರು	155	160	163	495	409	227	16ನೇ ಮೇ 1895.	

1895—96ನೇ ವರುಷಕ್ಕಾಗಿ ಪ್ರತ್ಯೇಕ ಸರಾಯಿ ಅಂಗಡಿಗಳ ಹರಾಜು.

ನಂಬರು 15941 A·R·F· 210—92· ತಾರೀಖು 29ನೇ ಮಾರ್ಚಿ 1895.

1. ಇದಕ್ಕೆ ಲಗತ್ತು ಮಾಡಿರುವ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಾಗುವ ಜಾಗಗಳಲ್ಲಿರುವ
ಪ್ರತ್ಯೇಕ ಸಾರಾಯಿ ಅಂಗಡಿಗಳಲ್ಲಿ 1895ನೇ ಇಸವಿ ಜುಲೈ ಗುರ್ರೆ ತಾರೀಖಿಗೆ ಪ್ರಾರಂಭವಾಗಿ 1896ನೇ
ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12ತಿಂಗಳು ಕಾಲಕ್ಕಾಗಿ ಸಾರಾಯಿ ಬಿಕರೀ ಮಾಡತಕ್ಕ ಹಕ್ಕನ್ನು
ಸದರೀ ಪಟ್ಟಿಯಲ್ಲಿ ಕಂಡ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ಡೆಪ್ಯುಟಿಕಮಿಷನರ್ ಯಾ ಅವರಿಂದ ನೇಮಿ
ಸಲ್ಪಟ್ಟ ಆಫೀಸರು ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಹರಾಜಿನಲ್ಲಿ ಪ್ರತಿ ಸವಾಲುದಾರನೂ ಸವಾಲು ಮಾಡುವುದಕ್ಕೆ ಮುಂಚಿತವಾಗಿ 60 ರೂಪಾಯಿ
ಯಾ ಹರಾಜು ಮಾಡತಕ್ಕ ಆಫೀಸರರು ಗೊತ್ತುಮಾಡುವ ಬೇರೇ ಇತರ ನ್ಯಾಯವಾದ ಮೊಬಲಗನ್ನು
ಠೇವಣಾತಿ ಇಡತಕ್ಕದ್ದು. ಸದರೀ ಅಂಗಡಿಗಳಿಗೆ ಯಾರ ಚಡದರಖಾಸ್ತು ಅಂಗೀಕರಿಸಲ್ಪಡತ್ತೋ ಅಂಥಾ
ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ
ಬಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತತೋರು
ವಂತೆ ತಕ್ಕಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ.
ಹಾಗೆ ಕ್ರಮವಾಗಿ ಮಂಜೂರುಮಾಡಲ್ಪಟ್ಟ ದರಖಾಸ್ತನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರ
ಖಾಸ್ತುಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು, ಅಥವಾ ಅವರಿಂದ ಕ್ರಮವಾಗಿ
ಅಪ್ಪಣೆಪಡೆದು ಇರುವ ಅವರ ತರಫ್ ಮುತಾಲೀಕರನ್ನು ಕಳುಹಿಸಬೇಕು.

3. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣೀ ಮೊಬಲಗುಗಳು ಈ
ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿ ಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರು
ಗಳಿಗೆ ವಾಪಸು ಮಾಡಲ್ಪಡುತ್ತವೆ. ಹರಾಜು ನಡಿಯುತ್ತಾ ಬಂದಹಾಗೆಲ್ಲಾ ಪ್ರತಿ ಅಂಗಡಿಗೆ ಯಾ
ರ್ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರವರು ತಕ್ಷಣವೇ ಆಯಾಯ ಅಂಗಡಿಯ ಒಂದು ತಿಂಗಳ ಗು
ತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನು ಠೇವಣಿ ಇಡಬೇಕು. ಇದಕ್ಕೆ ಯಾರಾ
ದರೂ ತಪ್ಪಿದಲ್ಲಿ ಮೇಲೆ 2ನೇಕಲಮಿನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣೀ ಮೊಬಲಗು ಸರ್ಕಾರ
ಕ್ಕೆ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾ
ಜಾಗುವದಲ್ಲದೆ ಆತನು ಈ ಅಂಗಡಿಗಾಗಲೀ ಅಥವ ಮತ್ಯಾವ ಅಂಗಡಿಗೋಸ್ಕರವಾಗಿ ಆಗಲೀ ಸವಾಲ್
ಮಾಡಕೂಡದು.

4. ಯಾರ್ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಮೇಲಿನ 2 ವ 3ನೇ ಕಲಂಗಳಲ್ಲಿ ಕಂ
ಡಂತೆ ಠೇವಣಿ ಮೊಬಲಗುಗಳನ್ನು ಕಟ್ಟಿರುತ್ತಾರೋ ಆ ಜನಗಳು ಹರಾಜು ತಾರೀಖು ಲಾಗಾಯಿತು 7 ದಿನ
ಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟಿರುವ ಪ್ರತಿ ಒಂದು ಅಂಗಡಿಯ ಎರಡು ತಿಂಗಳ ಗುತ್ತಿಗೇ
ಹಣಕ್ಕೆ ಸರಿಯಾಗುವಹಾಗೆ ಎಷ್ಟು ಮೊಬಲಗನ್ನು ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ
ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣೀ ಕಟ್ಟಿ ವಿಧಾಯಕವಾದ ನಮೂನೆ
ಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಬಳಪಟ್ಟು ಲೈಸೆನ್ಸಗಳನ್ನು ಪಡಿಯತಕ್ಕದ್ದು, ಮತ್ತು
ಎದರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣೀ ಇಡುವುದಕ್ಕೆ ಯಾ
ಲೈಸೆನ್ಸು ಪಡಿಯಲಿಕ್ಕೆ ಯಾ ಎದರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ಯಾವ ಮನುಷ್ಯನಾದ
ರೂ ತಪ್ಪಿದರೆ ಸವರೀ ಅಂಗಡಿಯು ಯಾ ಅಂಗಡಿಗಳು ಅಂಥಾಮನುಷ್ಯರ ಜವಾಬ್‌ದಾರಿ ಮೇಲೆ ಪುನಹ
ಹರಾಜ್ ಮಾಡಲ್ಪಡುತ್ತವೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿಹೋಗಿರುವ
ಪಕ್ಷಕ್ಕೆ ಡೆಪ್ಯುಟಿಕಮ್ಮಿಷನರವರು ಅವರಿಗೆ ಯುಕ್ತತೋರುವಂತೆ ಬೇರೇ ವಿಧವಾಗಿ ವ್ಯವಸ್ಥೆಮಾಡು
ತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ
ವಾರಸದಾರರು ಅಥವಾ ಆತನಿಂದ ವರ್ಗಪಡೆದವರನ್ನು ಹೊಂದಿರುತ್ತೆ.

5. ಮೇಲಿನ 4ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ
ದರಖಾಸ್ತುದಾರನ ಜವಾಬ್ದಾರೀಮೇಲೆ ನಡೆಯುತ್ತವೆ. ಇದರಿಂದ ಆತನು ಆದಾಯುವನ್ನೆಲ್ಲಾ ಕಳೆದು

ಕೊಂಡವನಾಗುತಾನೆ ಮತ್ತು ದುಸರೇ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಿಗಿನ ಪೈಕೀ ದುಸರೇ ಹರಾಜಾದ್ದರಲ್ಲಿ ಜಡ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕೀ ಉಳಿಯುವದರನ್ನು ಆತನು ಭರ್ತಿ ಮಾಡಿಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಿಗಿನಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿಕೊಂಡಿರುವ ಠೇವಣೀ ಮೊಬಲಗುಗಳನ್ನು ವಜಾಮಾಡಿ ಬಾಕೀ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನ್ ಕಂದಾಯದ ಬಾಕೀಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಸದರೀ ಠೇವಣೀ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣೀ ಮೊಬಲಗನ್ನೆಲ್ಲಾ ಸರಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು.

6. ಹರಾಜು ಕಾಲದಲ್ಲಿ ಸವಾಲ್ಮಾಡಲು ಇಚ್ಛೆಯುಳ್ಳವರಿಗೆ ಪ್ರತಿ ಅಂಗಡಿಯಲ್ಲಿ ಖರ್ಚಾದ ಸಾರಾಯಿಯು ತಪಶೀಲನ್ನು ತಿಳಿಸುವ ಒಂದು ತಖ್ತೆಯು ತೋರಿಸಲ್ಪಡುವದು. 1892—93—1893—94 ಮತ್ತು 1894-95ನೇ ವರುಷಗಳ ಬಾಬತು ಪ್ರತಿ ಅಂಗಡಿಯ ಗುತ್ತಿಗೆಮೊಬಲಗು ಮತ್ತು ಖರ್ಚಾದ ಸಾರಾಯಿಯು ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಮೇಲಿನ 4ನೇ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು 20° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ. ಪರಂತು ಬೆಂಗಳೂರು ಸೆಂಟ್ರಲ್ ಡಿಸ್ಟಿಲೆರಿಯಲ್ಲಿ ತಯಾರಾಗುವ ಯಾವ ಜೋರಿನದೇ ಆಗಲೀ ಡಬ್ಬಲ್ ಡಿಸ್ಟಿಲ್ಡ್ಯಾನೆ ದುಗುಣಿ ಬಟ್ಟಿ ಇಳಿಸಲ್ಪಟ್ಟ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ಮಾರಲಿಕ್ಕೆ ಹಕ್ಕು ಇರಲಾರದು. ಈಬಾಬತು ಷರಾಬನ್ನು ವ ಮದ್ಯಗಳನ್ನು ಮಾರುವದಕ್ಕೆ ಅನ್ಯದೇಶದ ಸಾರಾಯಿಗಳ ಅಂಗಡಿಕಾರ್ರಿಗೆಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವತಂತ್ರದ ಹಕ್ಕನ್ನು ಪಡದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸ್ಥಳೀಯವಾದ ಸರ್ಕಾರದ ಖಜಾನೆಗೆ 1895ನೇ ಇಸವಿ ಜುಲೈ ಮಾಹೆ ಲಾಗಾಯಿತು ಸರಿಯಾದ ತಿಂಗಳುಗಟ್ಲೇ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತೂ ಯಾವ ತಿಂಗಳಿಗೆ ಪಾವತೀಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಆ ತಿಂಗಳ 20ನೇ ತಾರೀಖು ಯಾ ತತ್ಪೂರ್ವ ಪಾವತಿಯಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ತಾಲ್ಲೂಕು ಅಮಲ್ದಾರರು ಬರಹರೂಪಕವಾದ ಆರಡರ್ ಮೂಲಕ ಲೈಸೆನ್ಸನ್ನು ರದ್ದು ಮಾಡಿ ಷಾಪನ್ನು ಆ ತಿಂಗಳ ಆಖೈರಿನೊಳಗೆ ಪುನಹ ಹರಾಜು ಮಾಡುವರು. ಪ್ರತಿ ಮಾಹೆಯ ಗುತ್ತಿಗೆ ಮೊಬಲಗನ್ನು ಆ ಮಾಹೆಯ 20ನೇ ತಾರೀಖು ಯಾ ಅದಕ್ಕೆ ಪೂರ್ವ ಪಾವತಿ ಮಾಡದೆ ಒಪ್ಪಿದಲ್ಲಿ ಲೈಸೆನ್ಸದಾರನು ಇಟ್ಟಿರುವ ಡಿಪಾಜಿಟ್ಯಾನೆ 2 ತಿಂಗಳ ಗುತ್ತಿಗೆ ಮೊಬಲಗು ಪೈಕಿ ದುಸರೆ ಹರಾಜಿನಲ್ಲಿ ನಷ್ಟವೇನಾದರು ಉಂಟಾದಲ್ಲಿ ಅದರ ಭರ್ತಿಗಾಗಿ ಬೇಕಾಗುವ ಮೊಬಲಗು ಜಾತಾ ಉಳಿದ ಮೊಬಲಗು ಗವರ್ನಮೆಂಟಿಗೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು.

(3) ಈ ಸರ್ಕಾರಕ್ಕೆ ಸಾರಾಯಿಯನ್ನು ವ ಇತರ ಒಳದೇಶದ ಷರಾಬನ್ನು ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟೀದಾರ್ರಾದ ಪ್ಯಾರಿ ಅಂಡ್ ಕೋ. ಎಂಬ ವರ್ತಕರಿಂದ ಲೈಸೆನ್ಸದಾರನು ತನ್ನ ಅಂಗಡಿಯಲ್ಲಿ ಮಾರುವದಕ್ಕೋಸ್ಕರ ಡಿಸ್ಟಿಲೆರಿಯಲ್ಲಿ ಯಾ ಸರ್ಕಾರದ ಅಪ್ಪಣೇ ಮೇರೆ ಏರ್ಪಾಡಾಗಿರುವ ಬಾಂಡೆಡ್ ಡಿಪೋಯಿಂದ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ 10½ ಆಣೆ ದರದ ಮ್ಯಾರೆ ಕ್ರಯವನ್ನು ಪಾವತೀ ಮಾಡಿ ಕೊಂಡುಕೊಳ್ಳಬೇಕು. ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ 5—5—0 ದರದ ಪ್ರಕಾರ ಜನಗಳಿಗೆ ಮಾರತಕ್ಕದ್ದು.

(4) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನೂ ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 180 ರೂಪಾಯಿ ದರದಮೇರಿಗೆ ಮ್ಯುನಿಸಿಪಲ್ ಕಾನೂನ್ ಪ್ರಕಾರ ರೆಜಿಸ್ಟರ್ ಫಿ ಯಾ ರುಸುಮನ್ನು ಕೊಡಬೇಕು; ಮತ್ತು ಆತನು ಪ್ರತಿ ತಿಂಗಳಲ್ಲಿಯೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ್ ಫೀಯನ್ನು ಸಹ ಕೊಡಬೇಕು.

(5) ಮೇಲ್ಕಂಡ ಖರೀದಿ ದರ ಮತ್ತು ರುಸುಂಗಳು ಶಿವಾಯಿ ಸರ್ಕಾರದ ಅಪ್ಪಣೇ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ವಿಧಾಯಕವಾಗಿರುವ 4 ರೂಪಾಯಿ ದರದ ಮೇರೆ ಎಕ್ಸೈಜ್ ಡ್ಯೂಟೀ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಮುಂಗಡವಾಗಿ ಪಾವತೀ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನೂ ವ ಖರೀದಿ ಮೊಬಲಗನ್ನೂ ಪ್ರತ್ಯೇಕ ಅಂಗಡಿಗಳ ಅನುಕೂಲತೆಗೋಸ್ಕರ ಸ್ಥಾಪಿಸಲ್ಪಟ್ಟಿರುವ ಬಾಂಡೆಡ್ ಡಿಪೋನಲ್ಲಿ ಲೈಸೆನ್ಸದಾರರುಗಳ ಖರ್ಚಿನಿಂದ ನೇಮಿಸಲ್ಪಡುವ ಷರಾಫನ ವಶಕ್ಕೆ ಪಾವತಿ ಮಾಡಿ ಗೊತ್ತು ಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಮಾಡಿದರೆ ಬಾಂಡೆಡ್ ಡಿಪೋ ಜಮ್ಮೇದಾರನು ಟ್ರೆಜರೀ ಆಫೀಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟೀ ಮೊಬಲಗಿಗೆ ಸರಿಯಾದ ಸಾರಾಯಿಯನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿದ ತಾರೀಖು ಮತ್ತು ಘಂಟೆಯನ್ನು ನಮೂದುಮಾಡಿ ಎಕ್ಸೈಜ್ ಕಮ್ಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜಮ್ಮೇದಾರನು ಬಾಂಡೆಡ್ ಡಿಪೋಯಿಂದ ಸಾರಾಯಿ ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು.

(7) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಖ್ಖ, ಸಾರಾಯಿಯು ಸಾಗಿಸುವ ಬಗ್ಗೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ವದಗಿಸಿಕೊಳ್ಳತಕ್ಕದ್ದು.

(8) ತೆಗದುಕೊಳ್ಳಲ್ಪಟ್ಟಿದ್ದ ಷಾಪುಗಳ ಪೈಕಿ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರ್ರವರು ವಿಚಾರವಮಾಡದೆ ತಿರಸ್ಕರಿಸುವರು.

(9) ಲೈಸೆನ್ಸದಾರನು ಹಾಲೀ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(9) ಬಾಕೀ ಕರಾರುಗಳು ವ ಷರತ್ತುಗಳು ವಿಧಾಯಕವಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

(8) ಲೈಸೆನ್ಸುದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಶೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸುದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣೀ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂಬ ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದು ಮಾಡಿ ಸದರೀ ಲೈಸೆನ್ಸುದಾರನ ಜವಾಬ್ದಾರೀಮೇಲೆ ಮೇಲ್ಕಂಡ ಹಕ್ಕನ್ನು ಪುನಹ ಹರಾಜು ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1894ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟವ ದೇಖೀಲು ಸದರೀ ಲೈಸೆನ್ಸುದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೇ ಹಣವು ಕೂಡ್ಲೆ ಪಾವತಿಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

(9) ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸುದಾರನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಪ್ತೀ ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಹುಕುಂ ಬಮೋಜಿಬ್,
ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರೆಟರಿ.

ಷೆಡ್ಯೂಲ್ ಪಟ್ಟಿ.

ಫಿರ್ಕಾ ಡ ಹಸಬು.	ಅಂಗಡಿಯ ಕ್ರಮ ನಂಬರು.	ಅಂಗಡಿ ಇರುವ ಸ್ಥಳ.	ಪ್ರತಿ ಅಂಗಡಿಯ ಗುತ್ತಿಗೆ ಮೊಬಲಗು.			ಪ್ರತಿ ಅಂಗಡಿಯಲ್ಲಿ ಬಿಕರಿ ಯಾದ ಷರಾಬಿನ ತಪಶೀಲ್.			ಹರಾಜ್ ಸ್ಥಳ.	ಹರಾಜು ತಾರೀಖು.	ಷರಾ.
			1892-93	1893-94	1894-95	1892-93	1893-94	1894-95 ಆರುತಿಂಗಳಬಿಕರಿ.			
			ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.			
ಬೆಂಗಳೂರು ಷಹರ್.	1	ನಂಬರ್ 168 ಮರಿಯಮ್ಮನ ದೇವಸ್ಥಾನದ ಬೀದಿ, ರಂಗಸ್ವಾಮಿ ದೇವಸ್ಥಾನದ ಬೀದಿ ..	515	483	480	1946	1880	898	ಬೆಂಗಳೂರು ತಾಲ್ಲೂಕು ಕಚೇರಿ.	1895ನೇ ಮೇ 1ನೇ—2ನೇ ತಾರೀಖು.	
	2	,, 40 ರಂಗಸ್ವಾಮಿದೇವಸ್ಥಾನದ ಬೀದಿ ..	477	408	635	2441	2463	1022			
	3	,, 8 ಬಸೆಟ್ಟಿಪೇಟೆ ಕಟ್ಟಿಗರವರ ಬೀದಿ ..	770	560	690	2170	2308	1282			
	4	,, 680 ಧರ್ಮರಾಯನ ದೇವಸ್ಥಾನ, ಹಲಸೂರುಪೇಟೆ	801	748	950	2630	2828	1512			
	5	,, 23 ಅವೆನ್ಯೂರಸ್ತೆ ..	800	564	610	2092	2063	1430			
	6	,, 45 ಬಬ್ಬೂರು ರಂಸಗ್ವಾಮಿ ಬೀದಿ, ತಾರಾಮಂಡಲದ ಬೀದಿ ..	686	604	720	2708	2788	1490			
	7	,, 26 ಶೆಟ್ಟಿ ಸಿದ್ದಣ್ಣನಬೀದಿ ನಂಬರ ಯಫ್. 3ನೇ ಡಿವೀಜನ್ ರಾಮಣ್ಣನಪೇಟೆ ..	456	408	510	1633	1574	766			
	8	,, 112 ಲ್ಯಾಸ್ಕರ್ ಲೈನ್ಸ್ ಹೈರೋಡ್ ..	518	516	720	2247	2539	1375			
	9	,, 6 ಮಾರ್ಕೆಟ್ ರಸ್ತೆ ನಂಬರ್ 2ನೇ ಡಿವೀಜನ್ ..	1010	684	750	2318	2649	1517			
	10	,, 65 ಕುರುವಿನಪೇಟೆ, ರಂಗಯ್ಯಶೆಟ್ಟಿ ಬೀದಿ	768	684	805	2505	2677	1483			
	11	,, 30 ತೆಲುಗರಪೇಟೆಬೀದಿ, ಗುಡುಮಯ್ಯನಪೇಟೆ ..	800	584	805	2155	2586	1450			
	12	,, 128 ಅಕ್ಕಿಪೇಟೆ ತರಗಿನಪೇಟೆ ರಸ್ತೆ	686	764	980	2945	3183	1616			
	13	,, 21 ನಂ.2ನೇಸಂದಿ3ನೇ ಡಿವೀಜನ್ ಕಬ್ಬನ್ಪೇಟೆರಸ್ತೆ	464	408	460	1566	1435	907			
	14	,, 36 ನಂಬರ್ ಬಿ. 4ನೇ ಡಿವೀಜನ್ ಕುಂಬಾರಪೇಟೆ	641	548	700	2117	2248	1198			
	15	,, 104 ಕುರುವಿನಪೇಟೆ, ನಂಬರ 9, 2ನೇ ಡಿವೀಜನ್ ಅಕ್ಕೀಪೇಟೆ ..	761	672	715	2273	1983	1392			
	16	,, 136 ಲ್ಯಾಸ್ಕರ್ ಲೈನ್ಸ್ ಹೈರೋಡ್	638	560	740	2021	1980	988			
	17	,, 24 ಜಂಕಾರ್ಪೇಟೆ, ಕಾಶೀವಿಶ್ವೇಶ್ವರ ದೇವಸ್ಥಾನ ರಬೀದಿ ..	801	572	950	2577	2938	1674			
	18	,, 10 ನರಸಪ್ಪನಗಲ್ಲಿ ಹೊಸಮಾರ್ಕೆಟ ರಸ್ತೆ ಬೀದಿ ..	867	724	965	2874	3482	1314			
	19	,, 79 ರಾಗೀಪೇಟೆ ಕಟಿಕರ ಹಳೇ ಮಾರ್ಕೆಟ ಬೀದಿ	738	788	805	2672	1871	1668			
	20	,, 6 ಸಿದ್ದೀಕಟ್ಟೆ ಜೊಂಬೂಬಜಾರ್ ..	626	684	960	2499	2719	1702			
	21	,, 11 ಸೀ. ಗಲ್ಲಿ ತೆಲುಗರಪೇಟೆ ಬೀದಿ ಬಳೇಪೇಟೆ ..	785	592	815	1892	2512	1398			
	22	,, 55 ಹೊಸಮಾದಿಗರಪಾಳ್ಯ .	555	480	270	1267	621	480			
	3	,, 56 ಮೈಸೂರು ರಸ್ತೆ ತಟ್ಟನಬಾಗಲು ..	660	760	995	3044	2805	1482			
	4	,, 28 ಲ್ಯಾಸ್ಕರ್ ಲೈನ್ಸ್ ಹೈರೋಡ್ ..	501	464	455	1469	1024	780			
	25	,, 72 ನಾಲ್ಬಂದ್ವಾಡಿಪೇಟೆ ಕೆಂಗೇರಿ ಪೊಲೀಸ್ ಸ್ಟೇಷನ್ ..	553	524	725	1765	2216	1048			
	26	,, 5 ಡಾಬಸ್ಪೇಟೆ ಪಿ. ಬೀದಿ ..	360	365	560	1936	2086	1300			
ಮೈಸೂರು ಷಹರ್.	1	ಲಷ್ಕರ್ ಮೊಹಲ್ಲಾ .	260	268	355	1383	1489	803	ಮೈಸೂರು ತಾಲ್ಲೂಕು ಕಚೇರಿ.	1895ನೇ 1ನೇ ಮೇ ತಾರೀಖು.	
	2	ದೇವರಾಜಮೊಹಲ್ಲಾ ..	405	440	480	1647	1532	774			
	3	ಮಂಡೀ ಮೊಹಲ್ಲಾ, ರಾಗಿಮಂಡಿ ..	405	320	405	1252	1504	833			
	4	ದೇವರಾಜ ಮೊಹಲ್ಲಾ, ಶಿವರಾಮಪೇಟೆ ..	650	508	720	1870	2750	1256			
	5	ಆನೇತೇರುಬೀದಿ ಡಿ॥ ..	425	292	315	1438	1067	470			
	6	ಕಾಳೀಮಂಡಿ, ಮಂಡಿ ಮೊಹಲ್ಲಾ ..	610	496	670	2590	2231	1119			
	7	ಮೋಚಿ ಬೀದಿ ಡಿ॥ .	355	320	560	1591	2097	943			
	8	ದೇವರಾಜಮೊಹಲ್ಲಾ	370	240	405	1097	992	519			
	9	ಬಸವನ ಮೊಹಲ್ಲಾ .	320	232	330	1126	1203	878			
	10	ಲಷ್ಕರ್ ಮೊಹಲ್ಲಾ .	495	280	365	1402	1537	881			
	11	ಆನೇತೇರು ಬೀದಿ, ದೇವರಾಜಮೊಹಲ್ಲಾ ..	250	292	675	1619	2087	1156			
	12	ಬಸವನಮೊಹಲ್ಲಾ, ಕುಂಬಾರಗಿರಿ .	305	188	270	1007	1263	677			
	13	ದೇವರಾಜಮೊಹಲ್ಲಾ, ಹೊಸಅಗ್ರಹಾರದಬಳಿ ..	250	144	162	750	644	320			
	14	ಕೃಷ್ಣರಾಜಮೊಹಲ್ಲಾ, ಹಳೇಅಗ್ರಹಾರ ..	485	228	355	1229	1224	581			
	15	ಆನ ತೇರುಬೀದಿ, ದೇವರಾಜಮೊಹಲ್ಲಾ ..	500	272	290	1104	854	1026			
	16	ಲಷ್ಕರ್ ಮೊಹಲ್ಲಾ ..	365	256	257	1151	918	416			
	17	ನಜರ್ಬಾದ್ ಮೊಹಲ್ಲಾ ..	355	188	220	991	1020	534			
	18	ನಜರ್ಬಾದ್ ಮೊಹಲ್ಲಾ ..	430	188	220	992	911	580			
	9	ಕೃಷ್ಣರಾಜಮೊಹಲ್ಲಾ, ಹಳೇಅಗ್ರಹಾರ ..	425	208	390	1117	1300	911			

ಷೆಡ್ಯೂಲ್ ಪಟ್ಟಿ.

ಫಿರ್ಕಾದ ಹೆಸರು.		ಅಂಗಡಿಯಕ್ರಮ ನಂಬರು.	ಅಂಗಡಿ ಇರುವ ಸ್ಥಳ	ಪ್ರತಿಅಂಗಡಿಯು ಗುತ್ತಿಗೆ ಮೊಬಲಗು.			ಪ್ರತಿ ಅಂಗಡಿಯಲ್ಲಿ ಬಿಕರಿಯಾದ ಷರಾಬಿನ ತಪಸೀಲ್.			ಹರಾಜು ಸ್ಥಳ.	ಹರಾಜು ತಾರೀಖು.	ಷರಾ.
				1892-93	1893-94	1894-95	1892-93	1893-94	1894-95			
				ರೂ.	ರೂ.	ರೂ.	ಗ್ಯಾಲಾ.	ಗ್ಯಾಲಾ.	ಗ್ಯಾಲಾ.			
ಭಂಗಾರದ ಗಣಿಗಳು.	ಬೌರಿಂಗ್ಪೇಟೆ.	1	ಬೌರಿಂಗ್ಪ್ಯೇಟೆ ..	1840	832	1500	1549	1479	88[illegible]	ಭಂಗಾರದಗಣಿ ಮ್ಯಾಜಿಸ್ಟ್ರೇಟರ ಆಫೀಸಿನಲ್ಲಿ.	1895ನೇ 4ನೇ ಮೇ ತಾರೀಖು.	
		2	ಡಿಟ್ಟೋ ..		904	1365	1546	1564	64[illegible]			
		3	ಡಿಟ್ಟೋ ..		968	1265	881	1325	664			
		4	ಡಿಟ್ಟೋ ..		840	1415	1583	1501	671			
		5	ಉರಿಗಂ ..	890	1520	2370	2820	3906	1630			
		6	ಡಿಟ್ಟೋ ..	805	1508	2345	2300	2694	1206			
		7	ಸೋರ್ಣಕೊಪ್ಪ ..	655	1472	2335	2049	2380	1688			
		8	ಸೂರೇಪಲ್ಲಿ ..	880	2420	4250	2336	4613	2154			
	ಬೇತಮಂಗಲ.	1	ಉರಿಗಂ ..	780	1512	2415	1889	2547	2584			
		2	ಡಿಟ್ಟೋ ..	705	1516	2405	1930	2094	1670			
		3	ಡಿಟ್ಟೋ ..	705	1516	2360	2287	2961	1362			
		4	ಸೂರೆಪಲ್ಲಿ ..	895	2640	4200	3400	4071	1984			
		5	ಮಾದಮಂಗಲ ..	310	480	600	747	810	399			
		6	ಚಿನ್ನಾಗನಹಳ್ಳಿ ..	280	440	705	704	819	548			
		7	ಘಟ್ಟಿರ್ಯಾಗಡಹಳ್ಳಿ ..	755	1520	2410	1972	2572	1192			
		8	ಮಾಸಿಕ ..	1030	1616	4000	3999	4648	2139			
		9	ಡಿಟ್ಟೋ ..	1010	1612	4000	4186	3506	2534			
		10	ಲಕ್ಕಿನಾಯುಕನಹಳ್ಳಿ ..	0	0	1330	..	..	608			

ತಾರೀಖು 11ನೇ ಮಾರ್ಚಿ 1895.

ನಂ. 14468.— ಆರ್. ಎಫ್‌. 41–93.—1894ನೇ ಇಸವಿ VIIನೇ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡಿ ಕಂಡ ಜಮೀನು ಸರ್ಕಾರದ ಕೆಲಸಕ್ಕೆ ಅಂದರೆ ಮದ್ದಗಿರಿ ತಾಲ್ಲೂಕು ಗೊದ್ದನಪಾಳ್ಯ ಗ್ರಾಮವನ್ನ ಬಡಾಯಿಸುವದಕ್ಕಾಗಿ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು ತುಮುಕೂರು.
ತಾಲ್ಲೂಕು ಮದ್ದಗಿರಿ.
ಹಿಡುವಳಿದಾರರುಗಳ ಹೆಸರುಗಳು—ಪಟ್ಟಾದಾರ್ ಚಿಕ್ಕನಾಗ ಈತನ ಚಿಕ್ಕಪ್ಪ ಚಿಕ್ಕನಾಗನೆಂಬುವನ ಅನುಭವದಲ್ಲಿ ಈ ಜಮೀನು ಇದೆ.
ಜಮೀನಿನ ತಪಶೀಲು:—
ಸರ್ವೆ ನಂಬರ್ 4 ಪೈಕಿ ವಿವರ—ಖುಷ್ಕಿ

ಬೇಕಾದ ವಿಸ್ತೀರ್ಣ—22 ಗುಂಟೆ.
ದಾಮಾಷಾಯಿ ಕಂದಾಯ 0—8—9
ಚಕ್ಕು ಬಂದಿ.
ಪೂರ್ವಕ್ಕೆ—ಸರ್ವೆ ನಂಬರ್ 5
ಪಶ್ಚಿಮಕ್ಕೆ—ಗ್ರಾಮ ನಿವೇಶನ
ಉತ್ತರಕ್ಕೆ—ಸರ್ವೆ ನಂಬರು 3
ದಕ್ಷಿಣಕ್ಕೆ—ಸರ್ವೆ ನಂಬರು 6

ತಾರೀಖು 23ನೇ ಮಾರ್ಚಿ 1895.

ನಂ. 15696.—ಆರ್. 2261–ಬೆಂಗಳೂರು ಡಿಸ್ಟ್ರಿಕ್ಟು ಚನ್ನಪಟ್ಣ ತಾಲ್ಲೂಕಿನಲ್ಲಿ ಸೇರಿದ ಗ್ರಾಮಗಳನ್ನು ತೋರಿಸುವ ಇದರಡಿ ಬರುವ ಸ್ಟೇಟ್ಮೆಂಟ್ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ:—

ಮಾಗಣಿ	ನಂ.	ಕಾಯಂ ಇರಬೇಕಾದ ಗ್ರಾಮಗಳು.	ನಂ.	3ನೇ ಕಲಮಿನಲ್ಲಿ ಕಂಡ ಗ್ರಾಮಗಳಲ್ಲಿ ಸೇರಬೇಕಾದ ಗ್ರಾಮಗಳು.
ಮಾಕಳಿ	1	ಚಿಕ್ಕಗಂಗವಾಡಿ	1	ಯಲಚಹಳ್ಳಿ
	2	ಕ್ಲೋಸ್‌ಪ್ಯೇಟೆ	1	ಶೆಟ್ಟಿಹಳ್ಳಿ
			2	ಹೊಸಹಳ್ಳಿ
ಭೈರಮಂಗಲ	3	ಅಳ್ಳಾಳಸಂದ್ರ	1	ಹಂಗರಪಾಳ್ಯ
	4	ಕೆಂಚಗಾರಹಳ್ಳಿ	1	ಗರುಬಾಯಿದೊಡ್ಡಿ
ಕುಣಿಗಲು	5	ವೀಭೂತಿಗೆರೆ	1	ನರಸಾಪುರ
ಮುದಿಗೆರೆ	6	ದ್ಯಾವರಹಳ್ಳಿ	1	ಒಡ್ಡರದೊಡ್ಡಿ
ಹೊಂಗನೂರು	7	ಕೋಡಿಪುರ	1	ಪರಕನಪುರ
ವಿರೂಪಾಕ್ಷಪುರ	8	ಮಂಗಡ್ಡಹಳ್ಳಿ	1	ತಿರುಮಲಪುರ

ತಾರೀಖು 2ನೇ ಏಪ್ರೈಲ್ 1895.

ನಂ. 16250.—ಜಿ. 4561.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟ್ 1ನೇ ಅಸಿಸ್ಟೆಂಟ್ ಕಮಿಷನರಾದ ಮೆಸ್ಟರ್ ಕೆ. ರಾಮಚಂದ್ರರಾಯರವರು, ಅವರುಪಯೋಗಿಸಿಕೊಳ್ಳುವ ತಾರೀಖು ಮೊದಲು ಆರುದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 4ನೇ ಏಪ್ರೈಲ್ 1895.

ನಂ. 16449.—ಜಿ. 4600.—ಸಾಗರ ಸಬ್ ಡಿವಿಜನ್ ಆಫಿಸರಾದ ಮೆಸ್ಟರ್ ಡಿ. ನಾಮಕಲ್ ರಾಯರವರು, ಸನ್1895ನೇ ಇಸವಿ ಮಾರ್ಚಿ 14ನೇ ತಾರೀಖಿನ ಪೂರ್ವಾಹ್ನದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಚಾರ್ಜನ್ನೂ, ಅದೇ ತಿಂಗಳ 20ನೇ ತಾರೀಖಿನ ಪೂರ್ವಾಹ್ನದಲ್ಲಿ ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜನ್ನೂ ವಹಿಸಿದರು.

ನಂ. 16450.—ಜಿ. 4598.—ಮಾಲೂರು ತಾಲ್ಲೂಕು ಅಮಲ್ದಾರ್ ವಿ. ಎನ್. ಗೋಪಾಲರಾಯರವರಿಗೆ 1895ನೇ ಇಸವಿ ಫಿಬ್ರುವರಿ 21ನೇ ಮುರ್ಕುಮುಳ್ಳ 12807.—ಜಿ. 2870ನೇ ನಂಬರ್ ಇಸ್ತಿಹಾರ್ನಾಮೆಯ ಮೂಲಕ ಕೊಡಲ್ಪಟ್ಟು, ಅದೇ ತಿಂಗಳ 26ನೇ ತಾರೀಖು ಮೊದಲು ಅವರುಪಯೋಗಿಸಿಕೊಂಡ ಒಂದು ತಿಂಗಳ ಪ್ರಿವಿಲೀಜ್ ರಜಾ ಇದರಿಂದ 12 ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿದೆ.

ನಂ. 16713.—ಜಿ. ಎಫ್. 33—93.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ಪಿ. ಶ್ರೀನಿವಾಸರಾಯರವರು, 1895ನೇ ಇಸವಿ ಮಾರ್ಚಿ 21ನೇ ತಾರೀಖು ಮೊದಲು ಆರು ವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 8ನೇ ಏಪ್ರೈಲ್ 1895.

ನಂ. 16715.—ಜಿ. 4653.—ಮದ್ದಗಿರಿ ತಾಲ್ಲೂಕು ಅಮಲ್ದಾರ್ ಶ್ರೀಕಂಠಯ್ಯನವರಿಗೆ, 95ನೇ ಇಸವಿ ಫಿಬ್ರುವರಿ 28ನೇ ಮುರ್ಕುಮುಳ್ಳ 13275—ಜಿ. 3039ನೇ ನಂಬರ್ ಗವರ್ನ್‌ಮೆಂಟ್ ಇಸ್ತಿಹಾರ್ನಾಮೆಯ ಮೂಲಕ ಕೊಡಲ್ಪಟ್ಟ ಇಪ್ಪತ್ತು ದಿನಗಳ ಪ್ರಿವಿಲೀಜ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿದೆ.

ತಾರೀಖು 9ನೇ ಏಪ್ರೈಲ್ 1895.

ನಂ. 16852.—ಜಿ. 4688.—ಘನವನ್ನು ಹೊಂದಿದ ಶ್ರೀಮನ್ ಮಹಾರಾಣೀ ರೀಜಂಟರವರು, ರಾಜಕಾರ್ಯ ಪ್ರಸಕ್ತ ರಾಯ ಬಹದೂರ್ ಮೆಸ್ಟರ್ ಎ. ನರಶಿಹ್ಮಯ್ಯಂಗಾರ್ ದರ್ಬಾರ್ ಬಕ್ಷಿಯವರಿಗೆ, 1895ನೇ ಇಸವಿ ಏಪ್ರೈಲ್ 4ನೇ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಟ್ಟಿರುತ್ತಾರೆ.

ಹುಕುಂ ಬಮೋಜಿಬ್,
ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರಿಟರಿ.

ತಾರೀಖು 1ನೇ ಏಪ್ರೈಲ್ 1895.

ನಂ. 16346.—ಜೆ. 998.—ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ರಾಮಸ್ವಾಮಯ್ಯರ್ ಬಿ. ಎ. ಯವರು, ಶಿವಮೊಗ್ಗಾ ಡಿಸ್ಟ್ರಿಕ್ಟ್ ಪೊಲೀಸ್ ಆಫಿಸ್ ಚಾರ್ಜನ್ನು 95ನೇ ಇಸವಿ ಮಾರ್ಚಿ 21ನೇ ತಾರೀಖಿನ ಪೂರ್ವಾಹ್ನದಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಟರ್ ವಿ. ಎನ್. ಗೋಪಾಲಯ್ಯಂಗಾರ್ರಿಗೆ ಒಪ್ಪಿಸಿರುತ್ತಾರೆ.

ತಾರೀಖು 4ನೇ ಏಪ್ರೈಲ್ 1895.

ನಂ. 16211.—ಎಲ್. ಎಫ್. 197—92.—ಮೈಸೂರ್ ಸಿಟಿ ಮ್ಯೂನಿಸಿಪಲ್ ಬೋರ್ಡ್ ವೈಸ್ ಪ್ರೆಸಿಡೆಂಟ್ ಮೆಸ್ಟರ್ ಹೆಚ್. ನಂಜುಂಡರಾಜ ಅರಸರವರಿಗೆ, 1894ನೇ ಇಸವಿ ಡಿಸೆಂಬರ್ 20ನೇ ಮುರ್ಕುಮುಳ್ಳ 10259—ಜಿ. 2390ನೇ ನಂಬರ್ ಇಸ್ತಿಹಾರ್ನಾಮೆಯ ಮೂಲಕ ಕೊಡಲ್ಪಟ್ಟಿದ್ದ 20 ದಿವಸಗಳ ಪ್ರಿವಿಲೀಜ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ನಂ. 16371.—ಜೆ. 1007.—ಬೇಸಿಗೆ ಪ್ರಯುಕ್ತವಾದ ರಜಾ ಪೂರೈಸಿ ಕೋರ್ಟ್‌ಗಳು ಮರಳಿ ತೆಗೆಯಲ್ಪಡುವ ತಾರೀಖಾದ 1895ನೇ ಇಸವಿ ಮೇ 29ನೇ ತಾರೀಖು ಮೊದಲು ಇದರಡಿ ತಿಳಿಸಲ್ಪಡುವ ಮುನ್ಸಿಫರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತಿವೆ:—

ಮುನ್ಸಿಫರ ಹೆಸರು.	ಯಲ್ಲಿಂದ.	ಯಲ್ಲಿಗೆ.
ಮೆಸ್ಟರ್ ಪಿ. ರಂಗರಾಚಾರ್ಯರು,	ಬೆಂಗಳೂರಿಂದ	ಶಿವಮೊಗ್ಗಿಗೆ.
,, ಟಿ. ವಾಂಡರ್ಲೋರ್ವ್,	ಕೋಲಾರದಿಂದ	ಬೆಂಗಳೂರಿಗೆ.
,, ಎಸ್. ವರದರಾಜಯ್ಯಂಗಾರ್,	ಶಿವಮೊಗ್ಗೆಯಿಂದ	ಕೋಲಾರ.
,, ಬಿ. ವೆಂಕಟಾಚಾರ್,	ನಂಜನಗೂಡಿನಿಂದ	ಚಿಕ್ಕಬಳ್ಳಾಪುರ.
,, ಬಿ. ಎಸ್. ಕೃಷ್ಣಸ್ವಾಮಯ್ಯಂಗಾರ್,	ಚಿಕ್ಕಬಳ್ಳಾಪುರದಿಂದ	ನೆಲವಂಗಲಕ್ಕೆ.
,, ಜೆ. ಹೋಲ್ಟ್,	ಚಿಕ್ಕಮಗಳೂರಿಂದ	ನಂಜನಗೂಡಿಗೆ.
,, ಬಿ. ಶ್ರೀನಿವಾಸರಾವ್,	ನೆಲವಂಗಲದಿಂದ	ಚಿಕ್ಕಮಗಳೂರು.
,, ಎ. ಆನಂದರಾವ್,	ತುಮಕೂರಿಂದ	ಚಿತ್ರದುರ್ಗಕ್ಕೆ.
,, ಸಿ. ಸುಬ್ಬರಾವ್,	ಚಿತ್ರದುರ್ಗದಿಂದ	ತುಮಕೂರಿಗೆ.

ಹುಕುಂ ಬಮೋಜಿಬ್,
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರಿಟರಿ.

ಮೈಸೂರ ಗೆಜೆಟ್.

ನಂ. 14] ಸರ್ಕಾರದಿಂದ ಘಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 18, ಸ್ನ 1895.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್‌ನಾಮೆ.

ನಂ. 5.

ತಾರೀಖು 9ನೇ ಏಪ್ರೈಲ್ ಸ್ನ 1895.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಲೇಟ್ ವಸ್ತಾರಾ, ಹಾಲಿ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಇರತಕ್ಕ ಚಿಲ್ಲರೆ ಇನಾಂಗಳ ಬಾಬತು (304) ಫೈನಲ್ ಟೈಟಲ್ ಡೀಡ್‌ಯಾನೆ ಕಾಯಂಪಟ್ಟೆಗಳು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ದ್ವಾರಾ ಬಟವಾಡೆ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟಿವೆ.

2. ಸದರೀ ತಾಲ್ಲೂಕಿನ ಅಮಲ್‌ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಗೆ ಸದರೀ ಇನಾಂದಾರ್ರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸುಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಯಿರುತ್ತಾರೆ.

3. ಸದರೀ ಚಿಲ್ಲರೆ ಇನಾಂಗಳ ಬಗ್ಗೆ ಈ ಆಫಿಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಶೆಯಿಂದ ಪ್ರಕಟಿಸಲ್ಪಟ್ಟು ಯಿರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಇನಾಂ ಸೆಟ್ಲ್‌ಮೆಂಟ್.

ವಿದ್ಯಾಭ್ಯಾಸದ ಇಲಾಖೆ.

E. ನಂಬರ್ 43ನೇ ಪ್ರಕಟನ ಪತ್ರಿಕೆ.

ಸನ್ 1895ನೇ ಇಸವಿ ಫಿಬ್ರವರಿ ತಾರೀಖು 18.

ಇದರಡೀ ಕಂಡ ಭಾಷಾಗ್ರಂಥಗಳು ಮೈಸೂರು ವರ್ನಾಕ್ಯುಲರ್ ಅಪ್ಪರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ. ಈ ಪರೀಕ್ಷೆಯು ಸನ್ 1895ನೇ ಡಿಸೆಂಬರ ತಿಂಗಳಿನಿಂದ ಮೈಸೂರು ದೇಶೀಯೋಪಾಧ್ಯಾಯರ ಪರೀಕ್ಷೆಗೆ ಬದಲಾಗಿ ನಡೆಸಲ್ಪಡುವುದು.

ಸನ್ 1895ನೇ ಡಿಸೆಂಬರು ತಿಂಗಳಪರೀಕ್ಷಾ ಭಾಷಾಗಂಥಗಳು.

ಕನ್ನಡ (1) ಕಬ್ಬಿಗರಕಾವ .. ಪದ್ಯಗಳು 1—100, ಪುಟಗಳು. 1—23
(2) ಕಾದಂಬರಿ ಪದ್ಯಗಳು 377—476.
(3) ವಿಕ್ರಮೋರ್ವಶಿನಾಟಕ, ಪಂಡಿತ ಅಯ್ಯಾಶಾಸ್ತ್ರಿಯವರಿಂದ ರಚಿಸಲ್ಪಟ್ಟದ್ದು.
(4) ಜಯಸಿಂಹರಾಜ ಚರಿತ್ರೆ

ಸಂಸ್ಕೃತ (1) ರಘುವಂಶ ಸರ್ಗಗಳು 2 ಮತ್ತು 3
(2) ಪಂಚತಂತ್ರಂ (ಮುಂಬೈ ಛಾ) ಒಂದನೇ ಭಾಗ ಪುಟಗಳು 1—36

ಫಾರಸಿ, (1) ಸಿಕಂದರ್‌ನಾಮ (ಬುರ್-ರಿ) ಸಿಕಂಡರ್ ಎಂಬಾತನಿಗೋಸ್ಕರ ಒಂದು ದರ್ಪಣವನ್ನು ಮಾಡುವ ಭಾಗದವರೆಗೆ
(2) ಅನ್ವಾರಿಸೊಹಲಿ .. ಅಧ್ಯಾಯಗಳು 1—3

ಹಿಂದುಸ್ತಾನಿ (1) ದಿವಾನಿ ವಜೀರ್ .. ಎರಡನೇ ಅರ್ಧಭಾಗ
(2) ಇಬ್‌ನಲ್‌ವಖ್ತ

ಸನ್ 1896ನೇ ಡಿಸೆಂಬರು ತಿಂಗಳ ಪರೀಕ್ಷಾ ಭಾಷಾ ಗ್ರಂಥಗಳು.

ಕನ್ನಡ (1) ಕಬ್ಬಿಗರಕಾವ .. ಪದ್ಯಗಳು 135—239
(2) ಕಾದಂಬರಿ .. ಪದ್ಯಗಳು 483—583
(3) ನಾಗಾನಂದನಾಟಕ (ಪಂಡಿತ ಅನಂತನಾರಾಯಣ ಶಾಸ್ತ್ರಿಯವರಿಂದ ರಚಿಸಲ್ಪಟ್ಟದ್ದು)
(4) ಮುದ್ರಾಮಂಜೂಷ ಆಶ್ವಾಸಗಳು 1—4

ಸಂಸ್ಕೃತ (1) ರಘುವಂಶ .. ಸರ್ಗಗಳು 4 ಮತ್ತು 5
(2) ಮಾಘ .. ಮೊದಲನೇ ಸರ್ಗ
(3) ಪಂಚತಂತ್ರಂ (ಮುಂಬೈ ಛಾಪ) ಒಂದನೇ ಭಾಗ, ಪುಟಗಳು 37—67

ಫಾರಸಿ (1) ಬಹರಿಸ್ತಾನಿಜಮಿ
(2) ದಿವಾನಿ ಘನಿ

ಹಿಂದುಸ್ತಾನಿ (1) ಫರೇಜ್—ಇರ್ಸಾನಿ ಒಂದನೇ ಮತ್ತು ಎರಡನೇ ಭಾಗಗಳು (ವೀರರಾಜೇಂದ ಮುದ್ರಾಕ್ಷರ ಶಾಲೆ, ಪಟ್ಟಿಯೂಲ)
(2) ದಿವಾನಿ ಮೋಮಿನ್—ಪುಟಗಳು 1—74 ರದ್ದಿಫೆ—ಲ್ಯಾಂ, ವರಿಗೆ (ನೋವಲ್‌ಕಿಶೋರ್ ಮುದ್ರಾಕ್ಷರ ಶಾಲೆ)

ಇದರಡಿ ಕಂಡ ಭಾಷಾಗ್ರಂಥಗಳು ಸನ್ 1896ನೇ ಇಸವಿ ಡಿಸೆಂಬರು ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ ಪದ್ಯ (1) ರಾಮಾಭ್ಯುದಯ ಕಥಾಕುಸುಮಮಂಜರಿ ಸುಂದರ ಕಾಂಡ ಮೂರನೇ ಸಂಧಿ.
(2) ಸೂಕ್ತಿಮಂಜರಿ (ಪಂಡಿತ ಶೀತಾರಾಮಶಾಸ್ತ್ರಿಗಳವರಿಂದ ರಚಿಸಲ್ಪಟ್ಟದ್ದು) ಒಂದನೇ ಭಾಗ
(3) ಸುಮತಿಶತಕ (ಪಂಡಿತ ಲಕ್ಷ್ಮೀನರಸಿಂಹ ಶಾಸ್ತ್ರಿಗಳವರಿಂದ ರಚಿಸಲ್ಪಟ್ಟದ್ದು) ಮೊದಲಿನಿಂದ ಆರಿಸಲ್ಪಟ್ಟ 30 ಪದ್ಯಗಳು.
(4) ಪದ್ಯಸಾರ—ಪದ್ಯಗಳು 27—77

ಗದ್ಯ—ಸುಮತಿ ಮದನಕುಮಾರನ ಚರಿತ್ರೆ (ಸ್ಯಾಂಡ್‌ಫರ್ಡ್ ಅಂಡ್ ಮರ್ಟನ್ ಎಂಬ ಗ್ರಂಥದ ಭಾಷಾಂತರ) ಮೆಸ್ಟರ್ ಎಂ. ಎಸ್. ಪುಟ್ಟಂಣ ಬಿ. ಎ. ಯವರಿಂದ ಮಾಡಲ್ಪಟ್ಟದ್ದು. ಪುಟಗಳು 1—100.

ಪದ್ಯಸಾರದಲ್ಲಿನ ಪದ್ಯಗಳು ವಿನಹ ಮೇಲೆ ನಿಯಮಿಸಲ್ಪಟ್ಟಿರುವ ಗ್ರಂಥಗಳೆಲ್ಲಾ ಇಲಾಖೆಯವರಿಂದ ಒಂಧೇ ಪುಸ್ತಕವಾಗಿ ಛಾಪಿಸಲ್ಪಡುತ್ತವೆ.

ತೆಲುಗು—(1) ನಳಚರಿತ್ರಮು
(2) ವೇಣೀಸಂಹಾರ ಮತ್ತು ಮಾಳವಿಕಾಗ್ನಿಮಿತ್ರನಾಟಕಗಳ ಕಥೆ (ಮದ್ರಾಸ್ ಸ್ಕೂಲ್ ಬುಕ್ಕು ಮತ್ತು ವರ್ನಾಕ್ಯುಲರ್ ಲಿಟ್ರೇಚರ್ ಸೊಸೈಟಿಯವರಿಂದ ಛಾಪಿಸಲ್ಪಟ್ಟದ್ದು)
(3) ಕಂಠಪಾಠ—ನಳಚರಿತ್ರಮು, ಪುಟಗಳು 16—30.

ಅರವ (1) ಪಂಚತಂತ್ರಂ—ಪ್ರಸ್ತಾವನೆ ಮತ್ತು ಮೊದಲನೇ ಭಾಗ.
(2) ಎರಡನೇ ನಂಬರ್ ನೀತಿಮಂಜರಿ.
(3) ಕಂಠಪಾಠ—ಎರಡನೇ ನಂಬರ್ ನೀತಿಮಂಜರಿ, ಪದ್ಯಗಳು 65—128.

ಹಿಂದುಸ್ತಾನಿ (1) ಮುಬಾದಿ-ಉಲ್—ಇರ್ಷಾ, ನಾಲ್ಕನೇ ಭಾಗ (ಚಷ್ಮೆ ಫೇಯಿಜ್ ಮುದ್ರಾಕ್ಷರಶಾಲೆ, ಡೆಲ್ಲಿ) ಪುಟಗಳು ಸುಮಾರು 100.
(2) ಮುಜ್ಮೂವಾ—ಇ-ಸೊರ್ಖ ಎರಡನೇ ಭಾಗದ ಮೊದಲಿನಿಂದ ಅರ್ಧಭಾಗ.

ಸಂಸ್ಕೃತ ಆವಶ್ಯಕ ಭಾಷೆ.
(1) ಚಂಪುರಾಮಾಯಣ, ಒಂದನೇ ಮತ್ತು ಎರಡನೇ ಕಾಂಡಗಳು (ಮಹಾರಾಣಿಯವರ ಸ್ಕೂಲ್ ಛಾಪ)
(2) ಕುಮಾರ ಸಂಭವ ಆರು ಮತ್ತು ಏಳನೇ ಸರ್ಗಗಳು.

ಸಂಸ್ಕೃತ ಐಚ್ಛಿಕ ಭಾಷೆ.
ವಿಕ್ರಮಾರ್ಕ ಚರಿತ್ರಂ ಮೊದಲನೇ ಎಂಟುಕಥೆಗಳು ಪ್ರಸ್ತಾವನೆ ವಿನಹ.

ಫಾರಸಿ ಆವಶ್ಯಕ ಭಾಷೆ.
(1) ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ)
(2) ಸರ್ಮಾಯಿಖಿರಾದ್ (ಪಂಜಾಬ್ ಛಾಪ) ಪುಟಗಳು 1—112.

ಫಾರಸಿ ಐಚ್ಛಿಕ ಭಾಷೆ.
(1) ಎರಡನೇ ಫಾರಸಿ ಪುಸ್ತಕ (ಪಂಜಾಬ್ ಛಾಪ)
(2) ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ) ಪುಟಗಳು 1—48.

ಲ್ಯಾಟಿನ್ ಐಚ್ಛಿಕ ಭಾಷೆ.
ಸಿಸರ್ ಡಿಬೆಲೊಗ್ಯಾಲಿಕೊ—ಎರಡನೇ ಪುಸ್ತಕ.

ಹೆಚ್. ಜೆ. ಭಾಭಾ,
ಎಡ್ಯೂಕೇಷನ್ ಸೆಕ್ರೆಟರಿ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ತಾರೀಖು 1ನೇ ಏಪ್ರೈಲ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಟವನ್ ಮಜಕೂರಿನಲ್ಲಿ ಇರತಕ್ಕ ಅಂದರೆ, ಮಾಮೂಲ್ ಅನುಸರಿಸಿ ಮಾಫೀಲಿ ನಡಿಯತಕ್ಕ ತೆಂಗಿನ ಮರಗಳು ಶಿವಾಯಿ ಬೋರ್ಡಿಗೆ ಶೇರಿದ ತೆಂಗಿನ ಮರಗಳ ಫಸಲ್ ಪೈಕಿ ಆಯಾಯ ಮನೆ ಅಥವಾ ಅಂಗಡೀ ಮಾಲೀಕರಿಗೆ ಸಲ್ಲತಕ್ಕ ಅರ್ಧ ಹಿಸ್ಸೇ ಜಾತಾ ಉಳಿದ ಅರ್ಧಹಿಸ್ಸೇ ಫಸಲನ್ನು 1895ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1896ನೇ ಇಸವಿ ಜೂನ್ ಆಖೈರ್ ವರಿಗೂ ಒಂದು ಸಾಲ್ ಪೂರ್ತಿ ರೂಢಿಸಿಕೊಳ್ಳುವದಕ್ಕೆ ಮೊಹರು ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 95ನೇ ಇಸವಿ ಮೇ 20ನೇ ತಾರೀಖು ಸೋಮವಾರ 3 ಘಂಟೆಯೊಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಷಹರ್ ಮಜಕೂರಿಗೆ ಶೇರಿದ ತೆಂಗಿನಫಸಲ್ ರೂಢಿಸಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರೆದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸೀ ನೋಟುಗಳಾಗಲಿ, 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ, ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣೀ ಹಣವು ಉಳಿಸಿಕೊಳ್ಳಲ್ಪಡುವದು. ಮತ್ತು ಮಂಜೂರಾದ ದರಖಾಸ್ತುದಾರನು ಆತನ ದರಖಾಸ್ತು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಕಂಟ್ರಾಕ್ಟಿನ ವಿಸಿಷ್ಟ ಹಣವನ್ನೂ ಹಾಜರ್ಮಾಡಿ ಕಂಟ್ರಾಕ್ಟನ್ನು ಸರಿಯಾಗಿ ನೇರವೇರಿಸುತ್ತೇನೆಂಬುವದಕ್ಕೆ ಛಾಪಾಕಾಗದದಲ್ಲಿ ಇಜಾರೆ ಮುಚ್ಚಳಿಕೆಯನ್ನು ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಆ ಠೇವಣೀ ಹಣವು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

6. ಕಡಮೇ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಕೋಟೇ ಮುಂದಿನ ಮೈದಾನ್ನಲ್ಲಿ ಹಾಲಿ ಭಂಡಿಗಳು ನಿಲ್ಲುವದಕ್ಕೆ ಹದ್ದು ಮಾಡಿರುವ ಸ್ಥಳದಲ್ಲಿ ಬಂದು ನಿಲ್ಲುವ ಕಲ್ಲು ಭರ್ತೀ ಪ್ರತಿ ಭಂಡಿಗೂ, 1895ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1896ನೇ ಇಸವಿ ಜೂನ್ ಆಖೈರು ವರಿಗೂ ರೋಜೇನಾ ದರ ಭಂಡಿ 1ಕ್ಕೆ (6) ಆರು ಪೈ ಮೇರಿಗೆ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಅದರಲ್ಲಿ ಬೀಳುವ ಕಚರಾವನ್ನು ರೂಢಿಸಿಕೊಳ್ಳುವದಕ್ಕೂ ಸಹ ಮೊಹರುಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ ಮೇ 20ನೇ ತಾರೀಖು ಸೋಮವಾರ 3 ಘಂಟೆಯೊಳಗಾಗಿ ಕೊಡಬಹುದು. (ಸದರೀ ಸ್ಥಳದ ಪ್ಲಾನ್ ಮ್ಯುನಿಸಿಪಲ್ ಆಫೀಸಿನಲ್ಲಿ ನೋಡಬಹುದು.)

2. ದರಖಾಸ್ತುಗಳ ಮೇಲ್ಭಾಗದಲ್ಲಿ ,,ಕೋಟೆ ಮುಂದಿನ ಬೈಲು ಜಮೀನಿನಲ್ಲಿ ಕಲ್ಲುಭಂಡೀ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ, ಮತ್ತು ಕಚರಾ ರೂಢಿಸಿಕೊಳ್ಳುವದಕ್ಕೂ ದರಖಾಸ್ತು ಎಂಬದಾಗಿ ಬರೆದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ, ಅಥವಾ ಕರ್ರೆನ್ಸೀ ನೋಟುಗಳಾಗಲಿ, 50 ರೂಪಾಯಿನ ಠೇವಣೀ ಹಣವನ್ನ ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತಾ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ, ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಅವನ ಕಂಟ್ರಾಕ್ಟ್ ಮೊಬಲಗಿನ ಪೈಕಿ ಒಂದು ತಿಂಗಳ ಮೊಬಲಗನ್ನ ಅಮಾನತ್ತು ಯಿಡಬೇಕು.

6. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟ್ ಮೊಬಲಗನ್ನ ಪ್ರತಿ ತಿಂಗಳ 5ನೇ ತಾರೀಖಿನ ಒಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಶೀದಿ ಪಡೆಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನ ಸರಿಯಾಗಿ ನೆರವೇರಿಸುವಬಗ್ಯೆ, ಆತನ ಕಂಟ್ರಾಕ್ಟ್ ಮಂಜೂರಾದ 7 ದಿವಸದೊಳಗಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರೆದು ಕೊಡಬೇಕು. ಇವುಗಳ ಪೈಕಿ ಯಾವ ಷರತ್ತಾಗಲಿ ತಪ್ಪಿ ನಡಕೊಂಡರೆ ತಕ್ಷಣ ಕಂಟ್ರಾಕ್ಟನ್ನ ಬೇರೆ ಜನರಿಗೆ ಕೊಟ್ಟು ಲುಕ್ಸಾನ್ ಮೊಬಲಗ್ಯೆ ಕಂಟ್ರಾಕ್ಟುದಾರರನನ್ನ ಗುರಿಮಾಡುವದಲ್ಲದೆ ಠೇವಣೀ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

7. ಕಡಮೇ ವಿಷಯುಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

8. ಸರಕಾರಿ ವುಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾಗುವಲ್ಲಿ ಬ್ಯಾರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಶೇಷನೂ ಅಪೇಕ್ಷಿಸದೆ ಕಂಟ್ರಾಕ್ಟ್ ಷರತ್ತಿನಂತೆ ಸ್ಥಳವನ್ನೇ ವುಪಯೋಗಿಸಿಕೊಳ್ಳಬೇಕಾಗಿ ಯಿರುತ್ತೆ.

ತಾರೀಖು   ನೇ ಏಪ್ರೈಲ್ 1895.

ಸಿಟಿ ಮ್ಯುನಿಸಿಪಾಲಿಟಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸಿಟಿ ಮಜಕೂರು ಕಸಾಯಿ ಮಾರ್ಕೆಟ್ಟಿನಲ್ಲಿ ರೋಜೇನಾ ಸಾಯಂಕಾಲದ ವ್ಯಾಳೆ ಕಟಾವಾಗುವ ಕುರಿ ಅಥವಾ ಮೇಕೆ ರಾಸು 1ಕ್ಕೆ ಯರಡು ಆಣೆಮೇರಿಗೆ, 1895ನೇ ಇಸವಿ ಜುಲೈ ಗುರ್ರೇ ಲಾಗಾಯತು ಸನ್ 1896ನೇ ಇಸವಿ ಜೂನ್ ಆಖೈರ್ ಮಿನಹು ವಸೂಲ್ಮಾಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 95ನೇ ಇಸವಿ ಮೇ 20ನೇ ತಾರಿಖು ಸೋಮವಾರ ಮಧ್ಯಾಹ್ನ 3 ಘಂಟೆಯೊಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ “ಮ್ಯುನಿಸಿಪಲ್ ಸ್ಲಾಟರ್‌ಹೌಸ್ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು” ಎಂಬದಾಗಿ ಬರೆದು ಇತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ, ಅಥವಾ ಕರ್ರೆನ್ಸೀ ನೋಟುಗಳಾಗಲಿ 50 ರೂಪಾಯಿನ ಠೇವಣೀ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣೀ ಹಣವು ಉಳಿಸಿಕೊಳ್ಳಲ್ಪಡುವದು. ಮತ್ತು ಮಂಜೂರಾದ ದರಖಾಸ್ತುದಾರನು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಇಜಾರೆ ಮುಚ್ಚಳಿಕೆಯನ್ನು ಬರೆದು ಕೊಡುವದಕ್ಕೆ ತಪ್ಪಿದರೆ ಆತನ ಠೇವಣೀ ಹಣವು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

ಸ್ಲಾಟರ್ ಹೌಸನ್ನ ಪಾಕ್ ಮಾಡಿಸಲು ನೇಮಿಸಲ್ಪಡುವ ಯಸ್ಟಾಬ್ಲಿಷ್‌ಮೆಂಟ್ ಛಾರ್ಜಿಗಾಗಿ ಮಾಹೆಯಾನಾ 25 ರೂಪಾಯಿ ಮೇರಿಗೆ ಹರಯೇಕ್ ತಿಂಗಳ 5ನೇ ತಾರೀಖಿನ ವಳಗಾಗಿ ಕಂಟ್ರಾಕ್ಟು ಮೊಬಲಗಿನ ಸಂಗಡ ಹಾಜರ್ಮಾಡಬೇಕು. ಸ್ಲಾಟರ್ ಹೌಸಿನಲ್ಲಿ ಬೀಳುವ ಕಚರಾ ಕಂಟ್ರಾಕ್ಟುದಾರಗೆ ಶೇರತಕ್ಕದ್ದಿಲ್ಲ.

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖಿನ ವಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾ ತಿಂಗಳ ಮೊಬಲಗನ್ನೂ ಮತ್ತು ಯಸ್ಟಾಬ್ಲಿಷ್‌ಮೆಂಟ್ ಚಾರ್ಜನ್ನ ಮುಂದಾಗಿಯೇ ಹಾಜರ್ಮಾಡಿ ರಸೀದಿಪಡಿಯಬೇಕಾಗಿದೆ.

8. ಮಾರ್ಕೆಟ್ ಷೋ ಯಂಬ ವಿನೋದವು ಯಾವ ದಿವಸ ನಡಿಸಲ್ಪಡುತ್ತೋ ಆ ದಿನ ಆ ಮಾರ್ಕೆಟಿನಲ್ಲಿ ಯಾರಿಂದಲೂ ರುಸುಂ ವಸೂಲ್ ಮಾಡಕೂಡದು. ಇದಕ್ಕಾಗಿ ಬೋರ್ಡಿನವರು ರಿಮಿಷನ್ ಕೊಡತಕ್ಕದ್ದಿಲ್ಲ.

9. ಲೇವಣೀ ಮೊಬಲಗು ಕಡೇ ತಿಂಗಳಲ್ಲಿ ವಸೂಲ್ ಬೀಳತಕ್ಕದ್ದೇ ಹೊರ್ತು ಮುಂದಾಗಿ ಯಾವ ತಿಂಗಳಿಗೂ ವಸೂಲ್ ಬೀಳತಕ್ಕದ್ದಿಲ್ಲ.

10. ಮೇಲೆ ನಮೂದಾಗುವ ಷರತ್ತಿನ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡಕೊಂಡರೂ ಮೇಲಿನ ರೇಟಿಗಿಂತ ಜಾಸ್ತಿಯಾಗಿಯೂ ಮತ್ತು ಸ್ಲಾಟರ್‌ಹೌಸ್ ವಿನಹ ಇತರ ಯಾವ ಸ್ಥಳಗಳಲ್ಲಿ ಆಗಲಿ ರುಸುಂ ವಸೂಲ್ಮಾಡಿಕೊಂಡರೂ ಕೂಡ್ಲೆ ಕಂಟ್ರಾಕ್ಟನ್ನ ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಲೇವಣೀ ಮೊಬಲಗನ್ನ ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನ್ನ ಜವಾಬ್‌ದಾರನ್ನಾಗಿ ಮಾಡಿ ಅವನ ಜಿಂದಗಿ ಜಪ್ತಿ ಮೂಲಕ ವಸೂಲ್ಮಾಡಲ್ಪಡುತ್ತೆ.

11. ಕಡಿಮೇ ವಿಷಯಗಳನ್ನ ಈ ಕೆಳಗೆ ಸೈನ್ಮಾಡಿರುವವರ ಆಫಿಸಿನಲ್ಲಿ ತಿಳಿದುಕೊಳ್ಳಬಹುದು.

12. ಸದರೀ ಸ್ಲಾಟರ್ ಹೌಸ್ ಕಂಟ್ರಾಕ್ಟಿನ ಕಾಲದಲ್ಲಿ ಬೇರೇ ಸ್ಥಳಕ್ಕೆ ವರ್ಗಮಾಡಿದ್ದೇ ಆದರೆ ಬಿನ್ ತಕರಾರ್ ಅಲ್ಲಿಗೆ ಹೋಬೇಕು.

ತಾರೀಖು 1ನೇ ಏಪ್ರೆಲ್ 1895.

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಟವನ್ ಸರಹದ್ದಿನಲ್ಲಿ ಜಮಾಯಿಸತಕ್ಕ ಕಚಕರಾವನ್ನ ಡಿವಿಜನ್ ವಾರ್ ರೂಢಿಸಿಕೊಳ್ಳುವ ಬಗ್ಯೆ ಸನ್ 1895ನೇ ಇಸವಿ ಜುಲೈ ಗುರ್ರೇ ಲಾಗಾಯತು 1896ನೇ ಇಸವಿ ಜೂನ್ ಆಖೈರ್ ವಿನಹು ಇದರಡಿ ಕಂಡಿರುವ ಷರತ್ತುಗಳನ್ನ ಅನುಸರಿಸಿ ಮೇ 20ನೇ ತಾರೀಖು ಸೋಮವಾರ ದಿವಿ 2 ಘಂಟೆಗೆ ಬೋರ್ಡು ಆಫಿಸಿನಲ್ಲಿ ಹರಾಜು ಮಾಡಲ್ಪಡುತ್ತಾಗಿ ಇದನ್ನ ದರಖಾಸ್ತುಮಾಡಿ ತೆಗದುಕೊಳ್ಳತಕ್ಕ ಇಷ್ಟವುಳ್ಳವರು ಹಾಜರಾಗಿ ಸವಾಲ್ ಮಾಡಿ ತೆಗದುಕೊಳ್ಳಬಹುದು. ಛಡ ಸವಾಲ್‌ದಾರನ ಸವಾಲ್ ಖೈದಾದ ಕೂಡ್ಲೆ ಶೇಕಡಾ 25 ರೂಪಾಯಿ ಮೇರಿಗೆ ಆಗುವ ಮೊಬಲಗನ್ನ ಡಿಪಾಜಿಟ್ ಹಾಜರ್ಮಾಡಬೇಕು ತಪ್ಪಿದಲ್ಲಿ ಸದರೀ ಸವಾಲ್ ಕ್ಯಾನ್ಸಲ್ ಮಾಡಲ್ಪಟ್ಟು ಬಾಬು ಪುನಹ ಹರಾಜ್ ಮಾಡಿಸುವದರಲ್ಲಿ ಉಂಟಾಗುವ ಲುಕ್ಸಾನು ಅವ್ವಲ್ ದರಖಾಸ್ತುದಾರನಿಂದಲೇ ವಸೂಲ್ಮಾಡಲ್ಪಡುತ್ತೆ. (4ನೇ ಡಿವಿಜನ್ ಮನವಾರ್ತೆಪೇಟೆ ಪೈಕಿ ಸುಲ್ತಾನ್‌ಪೇಟೆ ಮೇನ್ ರೋಡು ತರಗುಪೇಟೆ ರೋಡು ಈ ಯರಡು ರೋಡು ಗೊಬ್ರ ಬೇರೆ ಹರಾಜ್ ಮಾಡಿಸುತ್ತೆಯಾಗಿ 4ನೇ ಡಿವಿಜನ್ ಕಂಟ್ರಾಕ್ಟುದಾರಗೆ ಈ ಯರಡು ರೋಡು ಗೊಬ್ರ ಶೇರೋದಿಲ್ಲ.)

ಷರತ್ತುಗಳು.

1. ಆಯಾಯ ಡಿವಿಜನ್‌ಗೆ ಸೇರಿದ ರೋಡುಗಳಲ್ಲಿಯೂ ಗಲ್ಲಿಗಳಲ್ಲಿಯೂ ಸಹ ಸ್ವೀಪರ್‌ಗಳಿಂದ ಗುಡಿಸಿ ತೊಟ್ಟಿಗಳಲ್ಲಿ ಮತ್ತು ರಸ್ತೆ ಬಾಜೂದಲ್ಲಿ ಜಮಾಯಿಸಲ್ಪಡುವ ಕಚಕರಾವನ್ನ ಮಳೆಕಾಲದಲ್ಲಿಯೂ ಬೇಸಿಗೆ ಕಾಲದಲ್ಲಿಯೂ ಸಹ ಬೆಳಿಗ್ಯೆ 5 ಘಂಟೆ ಲಾಗಾಯತು 10 ಘಂಟೆ ವರಿಗೂ, ಮಧ್ಯಾನ್ಹ 2 ಘಂಟೆ ಲಾಗಾಯತು 5 ಘಂಟೆ ವರಿಗೂ ಒಂದು ದಿನವೂ ತಪ್ಪದೆ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಆಯಾಯ ದಿವಸವೇ ಟೌನ್ ಸರಹದ್ದಿನಿಂದ ಹೊರಕ್ಕೆ ಸಾಗಿಸಿಕೊಂಡು ಹೋಗಬೇಕು. ತಪ್ಪಿದಲ್ಲಿ ರೋಜೀನಾ ಮ್ಯುನಿಸಿಪಲ್ ಪ್ರಸಿಡೆಂಟರು ಅಥವಾ ವೈಸ್ ಪ್ರಸಿಡೆಂಟರು ನೇಮಿಸತಕ್ಕ 5 ರೂಪಾಯಿಗೆ ಮೀರದ ಜುರ್ಮಾನೆ ಕೊಡುವದಕ್ಕೆ ಬದ್ಧರಾಗಿರಬೇಕು. ಮತ್ತು ಆ ಪ್ರಕಾರ ಕಚಕರಾವನ್ನ ಸಾಗಿಸುವದಕ್ಕೆ ತಪ್ಪಿಹೋದ ದಿವಸದಲ್ಲಿ ಇತರ ಭಂಡಿಗಳನ್ನ ಇಡಿಸಿ ಮ್ಯುನಿಸಿಪಲ್ ಅಧಿಕಾರಸ್ಥರು ತೆಗದುಹಾಕುವದಕ್ಕೆ ತಗಲುವ ಲಾಗವಡು ಎಷ್ಟು ಆಗುತ್ತದೆಯೋ ಅದನ್ನ ಕೊಡುವದಕ್ಕೆ ಸಹ ಬದ್ಧರಾಗಿರಬೇಕು.

2. ಆಯಾ ಡಿವಿಜನಿನ ಸರಹದ್ದಿನಲ್ಲಿ ಮ್ಯುನಿಸಿಪಲ್ ಮಾರೀಫತ್ತು ಮನೆಗಳ ಪಾಯಿಖಾನೆ ಗೊಬ್ಬರವನ್ನ ಪ್ರತಿ ದಿವಸವೂ ಸಾಗಿಸತಕ್ಕ ಬಗ್ಯೆ ಹಾಲಿ ಗೊತ್ತಾಗಿರುವ ಮತ್ತು ಆಗಿಂದಾಗ್ಯೆ ಗೊತ್ತು ಮಾಡಲ್ಪಡುವ ಮನೆಗಳ ಪಾಯಿಖಾನೆಯನ್ನ ಪ್ರತಿ ದಿವಸವೂ ಸಾಗಿಸಿ ಪಾಕ್ ಮಾಡಬೇಕು. ತಿಂಗಳಿಗೊಂದಾವರ್ತಿ ಸಾಗಿಸುವ ಬಗ್ಯೆ ಹಾಲಿ ನೇಮಕವಾಗಿರತಕ್ಕ ಮನೆಗಳ ಪಾಯಿಖಾನೆ ಗೊಬ್ಬರವೂ ಐಯಿಂದ ನೇಮಕವಾಗುತ್ತಾ ಬರುವ ಮನೆಗಳ ಪಾಯಿಖಾನೆ ಗೊಬ್ಬರವೂ ತಪ್ಪದೆ ತಿಂಗಳಿಗೊಂದಾವರ್ತಿ ಸಾಗಿಸಿಕೊಂಡು ಪಾಕ್‌ಮಾಡಿಸುತ್ತಾ ಬರಬೇಕು. ಇದಕ್ಕೆ ತಪ್ಪಿದರೆ ಮೇಲೆ ಕಂಡ 1ನೇ ಕಲಂನಲ್ಲಿ ಗೊತ್ತುಮಾಡಿರುವ ಮೇರಿಗೆ ಜುರ್ಮಾನೆಗೂ ಮತ್ತು ಲುಕ್ಸಾನ್ ಮೊಬಲಗು ಕೊಡುವದಕ್ಕೂ ಕಂಟ್ರಾಕ್ಟುದಾರ ಒಳಪಟ್ಟಿರಬೇಕು.

3. ಹಾಗೆ ಪಾಯಿಖಾನೆ ಗೊಬ್ಬರ ಸಾಗಿಸುವಲ್ಲಿ ಭಂಡಿ ಮುಕ್ಕರಿಗಳಲ್ಲಿ ಮೊದಲು ಕಚಕರಾ ಹಾಕಿ ಮಧ್ಯೆಭಾಗದಲ್ಲಿ ಪಾಯಿಖಾನೆ ಗೊಬ್ಬರ ಭರ್ತೀ ಮಾಡಿ ಅದರ ಮೇಲ್ಕೆ ಪುನಹ ಕಸ ಹಾಕಿ ಅದರ ದುರ್ಗಂಧ ಹೊರಗೆ ಬಾರದಂತೆಯೂ, ದಾರಿಗಳಲ್ಲಿ ಚಲ್ಲದಂತೆಯೂ ಮುಕ್ಕರಿ ಹಿಂಭಾಗದಲ್ಲಿ ಜಾಕಾಯಿ ಹಲಿಗೆಯಿಂದ ತಡೆ ಕಟ್ಟಿರಬೇಕು.

4. ಭಂಡಿಗಳು ಮತ್ತು ಅವುಗಳ ಮೇಲೆ ಇಡತಕ್ಕ ಭಂಡಿ ಮುಕ್ಕರಿಗಳೂ ಸಹ ದೊಡ್ಡವಾಗಿಯೂ ಮಜಬೂತಾಗಿಯೂ, ಸಗಣಿಯಿಂದ ಸಾರಿಸಲ್ಪಟ್ಟಂತಾವಾಗಿಯೂ ಇರಬೇಕು. ಎತ್ತುಗಳು ಎಳೇ ಪ್ರಾಯವುಳ್ಳವಾಗಿ ದೃಢತರವಾಗಿ ಇರಬೇಕು.

5. ದರಖಾಸ್ತು ಮಂಜೂರು ಆದನಂತರ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ನಾಲ್ಕು ಖಿಸ್ತಿನಲ್ಲಿ ಅಂದರೆ ಮೊದಲನೇ ಖಿಸ್ತು 1895ನೇ ಸೆಪಟಂಬರ್ ಆಖೈರ್ ವರಿಗಿನದು 95ನೇ ಜುಲೈ 1ನೇ ತಾರೀಖಿನಲ್ಲಿಯೂ 2ನೇ ಖಿಸ್ತು ಡಿಸೆಂಬರ್ ಆಖೈರ್‌ವರಿಗಿನದು 95ನೇ ಇಸವಿ ಅಕ್ಟೋಬರ್ 5ನೇ ತಾರೀಖಿನಲ್ಲಿಯೂ 3ನೇ ಖಿಸ್ತು 96ನೇ ಇಸವಿ ಮಾರ್ಚಿ ಆಖೈರ್‌ವರಿಗಿನದು 96ನೇ ಇಸವಿ

403

ಜನವರಿ 5ನೇ ತಾರೀಖಿನಲ್ಲಿಯೂ 4ನೇ ಖಿಸ್ತು 96ನೇ ಇಸವಿ ಜೂನ್ ಆಖೈರ್ವರಿಗಿನದು 96ನೇ ಇಸವಿ ಏಪ್ರೆಲ್ 5ನೇ ತಾರೀಖಿನಲ್ಲಿಯೂ ಈ ಮೇರೆ ತಪ್ಪದೆ ಅಡ್ವಾನ್ಸಾಗಿ ಹಾಜರ್ಮಾಡಿ ರಸೀದಿ ಪಡದುಕೊಳ್ಳುತ್ತಾ ಬರಬೇಕು. ಈ ರೀತಿ ಯಾವ ಖಿಸ್ತಿನಲ್ಲಾಗಲಿ ಮೇಲೆ ನಮೂದಾಗಿರುವ ತಾರೀಖಿನಲ್ಲಿ ಮೊಬಲಗು ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟಿನ ಒಟ್ಟು ಮೊಬಲಗನ್ನು ಒಂದೇ ಗಂಟಿನಲ್ಲಿ ಡಿಮ್ಯಾಂಡ್ ಮಾಡಿದ ಒಡನೆ ಬಿನ್ ತಕರಾರ್ ಪಾವತಿ ಮಾಡಬೇಕು ಇದಕ್ಕಾಗಿ ಸ್ಟ್ಯಾಂಪು ಕಾಗದ್ದಲ್ಲಿ ಕಂಟ್ರಾಕ್ಟುದಾರನು ಮೇಲೆ ಹೇಳಿದ ಯಲ್ಲಾ ಷರತ್ತುಗಳನ್ನೂ ಕಾಣಿಸಿ ಕಂಟ್ರಾಕ್ಟು ಮಂಜೂರಾದ 3 ದಿವಸದಲ್ಲಿ ಮುಚ್ಚಳಿಕೆ ಬರದುಕೊಡಬೇಕು. ಈ ಷರತ್ತುಗಳ ಪೈಕಿ ಯಾವದಕ್ಕೇ ಆಗಲಿ ವಿರೋಧವಾಗಿ ನಡಕೊಂಡರೆ ಆ ಕೂಡ್ಲೆ ಅವನ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನರಿಗೆ ಕಂಟ್ರಾಕ್ಟು ಕೊಡುವದಲ್ಲದೆ ಲುಕ್ಸಾನ್ ಮೊಬಲಗಿಗೆ ಅವ್ವಲ್ ಕಂಟ್ರಾಕ್ಟುದಾರನನ್ನು ಗುರಿಮಾಡಿ ಜಫ್ತಿ ಹರಾಜು ಮೂಲಕ ಹಣ ವಸೂಲ್ಮಾಡಿಕೊಳ್ಳಲ್ಪಡುತ್ತೆ.

ತಾರೀಖು ನೇ ಏಪ್ರೆಲ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿನಲ್ಲಿ ಇರುವ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ಸನ್ 1895ನೇ ಇಸವಿ ಜುಲೈ 1ನೇ ತಾರೀಖು ಲಾಗಾಯತು 1896ನೇ ಇಸವಿ ಜೂನ್ 30ನೇ ತಾರೀಖಿನ ವರಿವಿಗೆ ಮಂಜೂರಾಗಿರುವ ದರಗಳ ಮೇರಿಗೆ ತೆರಿಗೆಯನ್ನು ವಸೂಲ್ ಮಾಡುವದಕ್ಕೆ ಮೊಹರ್ನಿಸಿ ದರಖಾಸ್ತುಗಳು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ ಚಾಲತಿ ಇಸವಿ ಮೇ 20ನೇ ತಾರೀಖು ಸೋಮವಾರ 3 ಘಂಟೆ ವಳಗಾಗಿ ಕೊಡಬಹುದು.

I. ಸಿಟಿ ಮಾರ್ಕೆಟ್ ಒಳಗೆ ಬರುವ ತರಕಾರಿ ಗೂಡೆಗಳಿಗೂ ಮತ್ತು ತರಕಾರಿ ಗಾಡಿಗಳಿಗೂ ಗೊತ್ತು ಮಾಡಿರುವ ಸ್ಥಳಗಳಲ್ಲಿ ಅಂದರೆ ಮ್ಯುನಿಸಿಪಾಲಿಟಿಗೆ ಸೇರಿದ ಜಾಗಾಗಳಲ್ಲಿ ಹಂಗಾಮಿಯಾಗಿ ಬಿಕರಿ ಮಾಡುವವರಿಂದ ತೆರಿಗೆ ವಸೂಲ್ಮಾಡುವದಕ್ಕೆ.

II. ಸೆಂಟ್ರಲ್ ಮಾರ್ಕೆಟ್ ಅಲ್ಲದೆ ಈ ಕೆಳಗೆ ನಮೂದಿಸಿರುವ ಮಾರ್ಕೆಟ್ಟುಗಳಲ್ಲಿ ತರಕಾರಿ ಮಾರುವವರಿಂದ (ರುಸುಂ) ವಸೂಲ್ಮಾಡುವದಕ್ಕೆ.

ರಂಗಸ್ವಾಮಿ ದೇವಸ್ಥಾನದ ಬಳಿ ಇರುವ ಬೈಲು	ಮಾರ್ಕೆಟ್
ಅಕ್ಕಿ ಪೇಟೆಯಲ್ಲಿರುವ	ಡಿಟ್ಟೋ
ಉಪ್ಪಾರಪೇಟೆ	ಡಿಟ್ಟೋ
ತಿಗಳರಪೇಟೆ ಧರ್ಮರಾಯನ ಗುಡಿ ಬಳಿ	ಡಿಟ್ಟೋ
ಕಲಾಸಿಪಾಳ್ಯ	ಡಿಟ್ಟೋ

III. ಗುಜರಿಯಲ್ಲಿ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಬಿಕರೀ ಮಾಡುವವರಿಂದ ತೆರಿಗೆ ವಸೂಲ್ ಮಾಡುವದಕ್ಕೆ.

IV. ತಗರದ ಸೂರುಗಳ ಕೆಳಗೆ ತಾವಾರದಲ್ಲಿ ಬಿಕರಿ ಮಾಡುವವರಿಂದ ತೆರಿಗೆ ವಸೂಲ್ ಮಾಡುವದಕ್ಕೆ.

V. ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ತೆರಿಗೆ ವಸೂಲ್ಮಾಡುವದಕ್ಕೆ. ಮೇಲ್ಕಂಡ ಮಾರ್ಕೆಟ್ಟುಗಳಲ್ಲಿ ತಿಂಗಳಗಟ್ಲೆ ತೆರಿಗೆ ಕೊಡುವವರಿಂದ ತೆರಿಗೆಯನ್ನು ವಸೂಲ್ ಮಾಡಕೂಡದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮ್ಯುನಿಸಿಪಲ್ ತರಕಾರಿ, ಮೀನು, ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ತೆರಿಗೆ ವಸೂಲ್ ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಕೂಡಾ ನಗದಾಗಲಿ, ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣೀ ಹಣವನ್ನು ಹಾಜರ್ ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ, ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣೀ ಹಣವು ಅವನ ದರಖಾಸ್ತಿನ 1 ತಿಂಗಳ ಕಂಟ್ರಾಕ್ಟ್ ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನು ಒಡನೆ ಹಾಜರ್ಮಾಡಬೇಕು. ಮತ್ತು ಅಂಥಾ ದರಖಾಸ್ತುದಾರನು ಅವನ ದರಖಾಸ್ತನ್ನು ಅಂಗೀಕರಿಸಿದ್ದನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವಶ್ಯಕವಾದ ಇಜಾರೆ ಮುಚ್ಚಳಿಕೆಯನ್ನು ಬರೆದು ಕೊಡಬೇಕು. ಹಾಗೆ ತಪ್ಪಿದರೆ ಆ ಠೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

6. ಕಂಟ್ರಾಕ್ಟುದಾರನು ಇದರ ಮಾರ್ಜಿನ್ನಲ್ಲಿ ಕಾಣಿಸಿದ ಪ್ರಕಾರ ಹಣ ವಸೂಲ್ ತೆಕ್ಕೊಳ್ಳತಕ್ಕದ್ದಾಗಿದೆ. ಇದರ ತಪ್ಸೀಲ್ ನಮೂದಿನಿಂದ ಇವನು ಇವನ ಕಂಟ್ರಾಕ್ಟಿಗೆ ಸಂಬಂಧಪಟ್ಟ ಪ್ರತಿ ಒಂದು ಸ್ಥಳದಲ್ಲಿಯೂ ಇವನ ಸ್ವಂತ ಲಾಗವಡಿನಿಂದ ಒಂದು ಬೋರ್ಡು ಹಾಕಿರಬೇಕು.

1. ಸಿದ್ದೀಕಟ್ಟೆಯಲ್ಲಿರುವ ಯಕ್ಸ್ಕ್ಲೋಜಡ್ ವೆಜಟೆಬಿಲ್ ಮಾರ್ಕೆಟ್ನಲ್ಲಿ:—

A. 1. ದೊಡ್ಡ ಮಂಕ್ರಿ 1ಕ್ಕೆ ತರಕಾರಿ ..	0—0—2
B. 2. ಸೊಪ್ಪುಗಳ ಮಂಕ್ರಿ 1ಕ್ಕೆ ..	0—0—1
C. 3. ಭಂಡಿ ತುಂಬಾ ತರಕಾರಿ ಹಣ್ಣು ಹಂಪಲಿಗೆ ಹೋಟಲಿಗೆ ಬಂದರೆ	0—2—0
D. 4. ಮಾರ್ಕೆಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ಬರುವ ತರಕಾರಿ ಭಂಡಿ 1ಕ್ಕೆ	0—1—0

E. 5. 5÷5 ಅಡಿಯುಳ್ಳ ಪ್ರತಿ ಜಮೀನಿನಲ್ಲಿ ಸಾಯಂಕಾಲದ ಅಂಗಡಿಗೆ	0—0—3
F. 6. ಸದರೀ ಅಳತೆಯುಳ್ಳ ಜಮೀನನ್ನು ಉಪಯೋಗಿಸಿಕೊಂಡು ಹರಾಜ್ ಮಾಡಿಸುವ ಜಾಗಾಕ್ಕೆ	0—1—0
G. 7. ವೆಜಿಟೆಬಿಲ್ ಮಾರ್ಕೆಟ್ ಒಳಗಾಗಿ ಟೆಂಪೊರೆರಿಯಾಗಿ ಇಟ್ಟುಕೊಳ್ಳುವ ಸದರೀ ಅಳತೆಯುಳ್ಳ ಜಾಗಾಕ್ಕೆ ತರಕಾರಿ ಮಾರಾಟಕ್ಕೆ	0—0—2

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾ ತಿಂಗಳ ಮೊಬಲಗನ್ನು ಮುಂದಾಗಿಯೇ ಹಾಜರ್ಮಾಡಿ ರಶೀತಿ ಪಡಕೊಳ್ಳಬೇಕು.

8. ಮಾರ್ಕೆಟ್ ಷೋ ಎಂಬ ವಿನೋದವು ಯಾವ ದಿವಸ ನಡೆಸಲ್ಪಡುತ್ತೋ ಆದಿನ ಆ ಮಾರ್ಕೆಟಿನಲ್ಲಿ ಯಾರಿಂದಲೂ ರುಸುಂ ವಸೂಲ್ಮಾಡಕೂಡದು. ಅದಕ್ಕಾಗಿ ಬೋರ್ಡಿನವರು ರಿಮಿಷನ್ ಕೊಡತಕ್ಕದ್ದಿಲ್ಲ.

9. ಶೇವಣೀ ಮೊಬಲಗು ಕಡೇ ತಿಂಗಳಲ್ಲಿ ವಸೂಲ್ ಬೀಳತಕ್ಕದ್ದೇ ಹೊರ್ತು ಮುಂದಾಗಿ ಯಾವ ತಿಂಗಳಿಗೂ ವಸೂಲ್ ಬೀಳತಕ್ಕದ್ದಿಲ್ಲ.

10. ಮಾರ್ಕೆಟ್ ಹಿಂಭಾಗದಲ್ಲಿರುವ ಅಂಗಡಿಗಳು, ಮತ್ತು ಮುಂಭಾಗದ ಗೇಟ್ ಉಭಯಪಾರ್ಶ್ವದಲ್ಲಿರುವ ಸರಾಫ್ ಅಂಗಡಿಗಳು ಸಹ ಇಜಾರೆಗೆ ಒಳಪಟ್ಟುವಲ್ಲ ಎರಡನೇ ಪ್ಯಾರಾದಲ್ಲಿ ನಮೂದಿಸಿರುವ ಸ್ಥಳಗಳಲ್ಲಿ ಮಾಮೂಲ್ ಮೇರಿಗೂ, ಇದುವರಿವಿಗೆ ಇಜಾರೆಗೆ ಸೇರದೆ ಇರುವ ಇತರ ಸ್ಥಳಗಳಲ್ಲಿ ತರಕಾರಿ ಮತ್ತು ಹಣ್ಣುಗಳ ವ್ಯಾಪಾರ ನಡಿಸುವವರಿಂದ, ಇಜಾರೇದಾರು ಅಂಗಡಿ ಒಂದಕ್ಕೆ ಎರಡು ಕಾಸಿನ ಮೇರಿಗೆ ವಸೂಲ್ಮಾಡಿಕೊಳ್ಳಬಹುದು.

11. ಈ ಷರತ್ತಿಗೆ ವಿರೋಧವಾಗಿ ನಡೆದುಕೊಳ್ಳುವ ಪಕ್ಷಕ್ಕೆ ಕೂಡ್ಲೆ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಶೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕಿ ಭರ್ತಿಯಾಗಿ ತೆಗೆದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬ್ದಾರಿ ಮಾಡಿ ಅವನ ಜಿಂದಗಿ ಜಪ್ತಿ ಹರಾಜ್ ಮೂಲಕ ವಸೂಲ್ಮಾಡಲ್ಪಡುತ್ತೆ.

12. ಮಿಕ್ಕ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬೇಕು.

13. ಕೋಟೆ ಗ್ಲಿಸಸ್ ಬಳಿ ಇರತಕ್ಕ ಕಬ್ಬಿನ ಅಂಗಡಿಗಳು ಮತ್ತು ಇತರ ಅಂಗಡಿಗಳವರಿಂದ ರುಸುಂ ವಸೂಲ್ ಮಾಡತಕ್ಕ ಬಾಬ್ ಈ ಕಂಟ್ರಾಕ್ಟಿಗೆ ಸೇರಿ ಇರುವದಿಲ್ಲ.

ಕೆ. ಶ್ರೀನಿವಾಸರಾವ್,
ವೈಸ್ ಪ್ರೆಸಿಡೆಂಟ್ ಸಿಟಿ ಮ್ಯುನಿಸಿಪಲ್ ಕಮ್ಮಿಷನರ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1894—95ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 313.

ಮೃತಪಟ್ಟ ಪಟೇಲ್ ಶಿದ್ದಾರಡ್ಡೀರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ಕೊತ್ತನೂರಿನಲ್ಲಿರುವ ಮಾಜಿ ಪಟೇಲ್ ಶಿದ್ದಾರಡ್ಡಿ ಹೆಂಡತಿ ಗಂಗಮ್ಮ, ಮೃತಪಟ್ಟ ಸದರೀ ಶಿದ್ದಾರಡ್ಡೀರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಕೊತ್ತನೂರು ಸ್ಥಳದ ಗಂಗಮ್ಮನು, ಕೊತ್ತನೂರು ವಾಸಸ್ಥರಾಗಿ ಮೃತಪಟ್ಟ ಶಿದ್ದಾರಡ್ಡೀರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗಂಗಮ್ಮನ ಅರ್ಜಿಯನ್ನು ಸನ್ 1895ನೇ ಇಸವಿ ಜೂನ್ ತಿಂಗಳ ತಾರೀಖು 4ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದಾರಡ್ಡೀರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895ನೇ ಇಸವಿ ಏಪ್ರಿಲ್ ತಿಂಗಳ 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ಸಹಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ತಾರೀಖು 1ನೇ ಏಪ್ರೆಲ್ 1895.

ಈ ಕೆಳಗೆ ತೋರಿಸಿರುವ ವಿದ್ಯಾರ್ಥಿಗಳು 1895ನೇ ಇಸವಿ ಜನವರಿ ತಿಂಗಳಲ್ಲಿ ಬೆಂಗಳೂರಲ್ಲಿ ನಡದ ಪೊಲೀಸ್ ಇನ್ಸ್ಪೆಕ್ಟರ್, ಜಮಾದಾರರ ಪರೀಕ್ಷೆಯಲ್ಲಿ ಡ್ರಾಯಿಂಗ್ ಸರ್ವೆಯಿಂಗ್ ಯಸ್ಟಿಮೇಟಿಂಗ್‌ಗಳಲ್ಲಿ ತೇರ್ಗಡೆಯಾಗಿರುತ್ತಾರೆ.

ದರ್ಜೆ.	ಹೆಸರು.	ಹುದ್ದೆ.	ನವುಕರಿ ಇರುವ ಸ್ಥಳ.	ಷರಾ.
1	ಸಿ. ಇವರಾರ್ಡ್	ಪ್ರಯಿವಿಟ್ ವಿದ್ಯಾರ್ಥಿ		ಒಂದನೇ ತರಗತಿ.
2	ಲಾರೆನ್ಸ್. ಕೊಯಿಲೋ			
3	ಯಂ. ಯನ್. ಹಿರಣ್ಯಯ್ಯ			
4	ಎ. ಲಕ್ಷ್ಮೀನಾರಾಣರಾವ್			
5	ವಿ. ಏಕಾಂಬ್ರಂಮೊದಲಿಯಾರ್			
6	ಯಂ. ಅಹಲುಲ್ಲಾಖಾನ್			
7	ವಿ. ಬಾಲಕೃಷ್ಣನಾಯುಡು	ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮುನಷಿ	ಶಿವಮೊಗ್ಗಾ ಡಿಸ್ಟ್ರಿಕ್ಟು	
8	ಜಲಾಲುದ್ದೀನ್	ಪ್ರಯಿವಿಟ್ ವಿದ್ಯಾರ್ಥಿ		ಎರಡನೇ ತರಗತಿ.
9	ಪಿ. ಸಿ. ರಂಗನಾಯಕಲು			
10	ಬಿ. ಹೇರಂಬರಾವ್	ಮುನಿಷಿ ಸಾಗರ ಸಬ್ ಡಿವಿಜನ್		
11	ಪಿ. ರಾಮಸ್ವಾಮಿ ನಾಯಿಡು	ಪ್ರಯಿವಿಟ್ ವಿದ್ಯಾರ್ಥಿ		
12	ಹೆಚ್. ಯನ್ ಶ್ರೀನಿವಾಸರಾವ	ತಿಪಟೂರು ಮ್ಯುನಿಸಿಪಲ್ ಸ್ಕೂಲ್ ಮ್ಯಾಸ್ಟರ್		
13	ಕೆ. ದುಮ್ಮಯ್ಯ	91ನೇ ನಂ. 2ನೇ ಕ್ಲಾಸ್ ದಫೇದಾರ್	ಶಿವಮೊಗ್ಗಾ ಡಿಸ್ಟ್ರಿಕ್ಟು ರಿಜರ್ವ್ ಪೊಲೀಸ್	
14	ಪಿ. ಭುಜಂಗರಾವ್	ಪ್ರಯಿಟ್ ವಿದ್ಯಾರ್ಥಿ		
15	ಸೈದ್ಮಾಸುಂ	ಡಿಟೋ		
16	ಪಿ. ದೇವಯ್ಯ	ಪೊಲೀಸ್ ಇನ್ಸ್ಪೆಕ್ಟರ್	ಕೊಡಗು	
17	ಯಂ. ರಾಮಚಂದ್ರರಾವ್	ಪ್ರಯಿವಿಟ್ ವಿದ್ಯಾರ್ಥಿ		
18	ಕೆ. ಸೂರಪ್ಪ	ಡಿಟೋ		
19	ಹೆಚ್. ವಿ. ಶೇಷಗಿರಿರಾವ್	ಯಲಹಂಕ ಮ್ಯುನಿಸಿಪಲ್ ಸ್ಕೂಲ್ ಮ್ಯಾಸ್ಟರ್		
20	ಜೆ. ರಾಜಾರಾಂರಾವ್	ಪ್ರಯಿವಿಟ್ ವಿದ್ಯಾರ್ಥಿ		
21	ಯಸ್. ರಂಗರಾವ್			
22	ಐ. ಯಸ್. ಕುತ್ತಾಲಂಪಿಳ್ಳೆ			
23	ಪಿ. ಬೋಪಯ್ಯ	ಪೊಲೀಸ್ ಇನ್ಸ್ಪೆಕ್ಟರ್	ಕೊಡಗು	
24	ಬಿ. ಕೃಷ್ಣಾಜಿರಾವ್	ಪ್ರಯಿವಿಟ್ ವಿದ್ಯಾರ್ಥಿ		

ಈ ಕೆಳಗೆ ತೋರಿಸಿರುವ ವಿದ್ಯಾರ್ಥಿಗಳು 1895ನೇ ಇಸವಿ ಜನವರಿ ತಿಂಗಳಲ್ಲಿ ಬೆಂಗಳೂರಲ್ಲಿ ನಡದ ಪೊಲೀಸ್ ಇನ್ಸ್ಪೆಕ್ಟರ್, ಜಮಾದಾರರ ಪರೀಕ್ಷೆಯಲ್ಲಿ ಸರ್ವೆಯಿಂಗ್ ಮತ್ತು ಡ್ರಾಯಿಂಗುಗಳಲ್ಲಿ ತೇರ್ಗಡೆಯಾಗಿರುತ್ತಾರೆ.

ದರ್ಜೆ.	ಹೆಸರು.	ಹುದ್ದೆ.	ನವುಕರಿ ಇರುವ ಸ್ಥಳ.	ಷರಾ.
1	ಯನ್. ಕೆ. ಲಕ್ಷ್ಮೀನರಸಯ್ಯ	ಲ್ಯಾನ್ಸ್ ದಫೇದಾರ	ಶಿವಮೊಗ್ಗಾ ಡಿ॥ ರಿಜರ್ವ್ ಪೊಲೀಸ್	1ನೇ ಕ್ಲಾಸ್
2	ಯಂ. ರಂಗಯ್ಯಂಗಾರ್	ಆಕ್ಟಿಂಗ್ ಡಿಟೋ ನಂ. 183	ಟಿ. ನರಶೀಪುರ	
3	ಕೆ. ಸುಬ್ಬರಾವ್	2ನೇ ಕ್ಲಾಸ್ ದಫೇದಾರ ನಂ. 204	ಹೊಳೇನರಶೀಪುರ	
4	ಜಿ. ಸಿ. ಚನ್ನವೀರಪ್ಪ	ಪ್ರಯಿವಿಟ್ ವಿದ್ಯಾರ್ಥಿ		
5	ಮಹಮ್ಮದ್‌ಬೇಗ್	ಡಿಟೋ		
6	ಕೆ. ತಿಮ್ಮಪ್ಪಯ್ಯ	ಡಿಟೋ		
7	ಯಂ. ವೆಂಕಟರಾವ	1ನೇ ಕ್ಲಾಸ್ ಕಾನ್ಸ್ಟೇಬಿಲ್ ನಂ. 365	ಚಿಕ್ಕಬಳ್ಳಾಪುರ	2ನೇ ಕ್ಲಾಸ್
8	ಬಿ. ಲಚ್ಚಿರಾಂಶಿಂಗ್	2ನೇ ಕ್ಲಾಸ್ ದಫೇದಾರ್ ನಂ. 180	ಚಿತ್ರದುರ್ಗದ ಡಿ॥ ರಿಜರ್ವ್ ಪೊಲೀಸ್	
9	ಹೈದರ್‌ಹುಸೇನ್	2ನೇ ಗ್ರೇಡ್ ಜಮಾದಾರ್	ಅರಕಲ್‌ಗೂಡು	
10	ಶೀತಾರಾಮಯ್ಯ	ಲ್ಯಾನ್ಸ್ ದಫೇದಾರ್ ನಂ. 337	ಹರಿಹರ	
11	ಸೂರ್ಯನಾರಣಯ್ಯ	ಡಿಟೋ ನಂ. 436	ಗೋರೀಬಿದನೂರು	
12	ಟಿ. ಯನ್. ಹಸನ್‌ಅಲ್ಲಿಖಾನ್	ಪ್ರಯಿವಿಟ್ ವಿದ್ಯಾರ್ಥಿ		
13	ಸುಬ್ಬಂಣಚಾರ್	1ನೇ ಕ್ಲಾಸ್ ಕಾನ್ಸ್ಟೇಬಿಲ್ ನಂ. 515	ಮಾಲೂರು	
14	ವೆಂಕಟದಾಸಪ್ಪ	1ನೇ ಕ್ಲಾಸ್ ದಫೇದಾರ್ ನಂ. 188	ಯಡತೊರೆ ತಾಲ್ಲೂಕು	
15	ವೆಂಕೋಜಿರಾವ್	ಪೊಲೀಸ್ ಕಾನ್ಸ್ಟೇಬಿಲ್ ರಜಾಮೇಲೆ	ಮಂಜರಾಬಾದ್	
16	ವೆಂಕಟಸಾಮಿನಾಯಿಡು	1ನೇ ಕ್ಲಾಸ್ ಕಾನ್ಸ್ಟೇಬಿಲ್ ನಂ. 137	ಚಿಕ್ಕಬಳ್ಳಾಪುರ	
17	ಯಂ. ದೇವರಾಜಅರಸು	ಪ್ರಯಿವಿಟ್ ವಿದ್ಯಾರ್ಥಿ	ಡಿಟೋ	
18	ಬಿಂದುಮಾಧವರಾವ್	2ನೇ ಗ್ರೇಡ್ ಜಮೇದಾರ್	ಬೇಲೂರು	

ಈ ಕೆಳಗೆ ತೋರಿಸಿರುವ ವಿದ್ಯಾರ್ಥಿಗಳು 1895ನೇ ಇಸವಿ ಜನವರಿ ತಿಂಗಳಲ್ಲಿ ಬೆಂಗಳೂರಲ್ಲಿ ನಡದ ಪೊಲೀಸ್ ಇನ್ಸ್ಪೆಕ್ಟರ್, ಜವಾದ್ಯಾರರ ಪರೀಕ್ಷೆಯಲ್ಲಿ ಪೋಟೋಗ್ರಾಪಿಗಳಲ್ಲಿ ತೇರ್ಗಡೆಯಾಗಿರುತ್ತಾರೆ.

ನಂಬ್ರು	ಹೆಸರು.	ಹುದ್ದೆ.	ನವುಕರಿ ಇರುವ ಸ್ಥಳ.	ಷರಾ.
1	ಲಾರ್ರನ್ಸ್ ಕೋಯಿಲೊ ..	ಪ್ರಯಿವಿಟ್ ವಿದ್ಯಾರ್ಥಿ		1ನೇ ಕ್ಲಾಸು
2	ಟಿ. ಎನ್. ನಾಜತ್ ಅಲ್ಲಿಖಾನ್ ..	ಡಿಟೋ		
3	ಎ. ಲಕ್ಷ್ಮಿನಾರಾಯಣರಾವ್ ..	ಡಿಟೋ		
4	ಟಿ. ಗುರುರಾವ್ ..	ಡಿಟೋ		
5	ಪಿ. ಸಿ. ರಂಗನಾಯಿಕಲು ..	ಡಿಟೋ		2ನೇ ಕ್ಲಾಸು
6	ಹೆಚ್. ಬಿ. ಶೇಷಗಿರಿರಾವ್ ..	ಮ್ಯುನಿಸಿಪಲ್ ಸ್ಕೂಲ್ ಮಾಸ್ಟರ್	ಯಲಹಂಕ	
7	ಎಂ. ಎನ್. ಹಿರಣ್ಯಯ್ಯ ..	ಪ್ರಯಿವಿಟ್ ವಿದ್ಯಾರ್ಥಿ		
8	ಎ. ರಾಜಾರಾವ್ ..	ಮುನಷಿ ದಿವಾನ್ ಆಫಿಸ್		
9	ಹೆಚ್. ಎನ್. ಶ್ರೀನಿವಾಸರಾವ್ ..	ತಿಪಟೂರು ಮ್ಯುನಿಸಿಪಲ್ ಸ್ಕೂಲ್ ಮಾಸ್ಟರ್		
10	ಕೆ. ದುಮ್ಮಯ್ಯ ..	2ನೇ ಕ್ಲಾಸ್ ದಫೇದಾರ್ ನಂ. 91	ಶಿವಮೊಗ್ಗಾ ಡಿಸ್ಟ್ರಿಕ್ಟ್ ರಿಜರ್ವ್ ಪೊಲೀಸ್	
11	ಕೆ. ಸುಬ್ಬರಾವ್ ..	ಡಿಟೋ ನಂ. 204	ಹೊಳೇನರಸೀಪುರ	
12	ಸಿ. ಎವರಾರರ್ಡ್ ..	ಪ್ರಯಿವಿಟ್ ವಿದ್ಯಾರ್ಥಿ		
13	ಮುಹಮ್ಮದ್ಬೇಗ್ ..	ಡಿಟೋ		
14	ಕೆ. ತಿಮ್ಮಪ್ಪಯ್ಯ ..	ಡಿಟೋ		
15	ಪಿ. ಬೋಪಯ್ಯ ..	ಪೊಲೀಸ್ ಇನ್ಸ್ಪೆಕ್ಟರ್	ಕೊಡಗು	
16	ವಿ. ಏಕಾಂಬ್ರ ಮೊದಲಿಯಾರ್ ..	ಪ್ರಯಿವಿಟ್ ವಿದ್ಯಾರ್ಥಿ		
17	ವಿ. ಬಾಲಕೃಷ್ಣನಾಯಿಡು ..	ಫಾರೆಸ್ಟು ಡಿಪಾರ್ಟ್ಮೆಂಟ್ ಮುನಷಿ	ಶಿವಮೊಗ್ಗಾ ಡಿಸ್ಟ್ರಿಕ್ಟು	
18	ಯಂ. ರಾಮಚಂದ್ರರಾವ್ ..	ಪ್ರಯಿವಿಟ್ ವಿದ್ಯಾರ್ಥಿ		
19	ಟಿ. ಯನ್. ಹಿಸಂಅಲ್ಲಿಖಾನ್ ..	ಡಿಟೋ		
20	ಹೆಚ್. ನಂಜರಾಜ ಅರಸು ..	ಡಿಟೋ		
21	ಕೆ. ಬಿ. ಪೂವಯ್ಯ ..	ಪೊಲೀಸ್ ಇನ್ಸ್ಪೆಕ್ಟರ್	ಕೊಡಗು	
22	ಯಂ. ರಂಗಯ್ಯಂಗಾರ್ ..	ಆ. ಲ್ಯಾನ್ಸ್ ದಫೇದಾರ್ ನಂ 183	ಟಿ. ನರಸೀಪುರ	
23	ಸೀತಾರಾಮಯ್ಯ ..	ಲ್ಯಾನ್ಸ್ ದಫೇದಾರ್ ನಂ. 337	ಹರಿಹರ	
24	ಯಂ. ವೆಂಕೋಜಿರಾವ್ ..	ಪೊಲೀಸ್ ಕಾನ್ಸ್ಟೇಬಿಲ್ ರಜಾಮೇಲೆ	ಮಂಜರಾಬಾದ್	
25	ಜೆ. ಸಿ. ಚನ್ನವೀರಪ್ಪ ..	ಪ್ರಯಿವಿಟ್ ವಿದ್ಯಾರ್ಥಿ		
26	ಐ. ಯುಸ್. ಕುತ್ತಾಲಂಪಿಳ್ಳೆ ..	ಡಿಟೋ		
27	ಎ. ನರಸುಹ್ಮಾಚಾರ್ ..	2ನೇ ಕ್ಲಾಸ್ ದಫೇದಾರ್	ಬೆಂಗಳೂರು ರೈಲ್ವೆ ಪೊಲೀಸ್ ಆಫಿಸ್	
28	ಎಸ್. ರಂಗರಾವು ..	ಪ್ರಯಿವಿಟ್ ವಿದ್ಯಾರ್ಥಿ		
29	ಪಿ. ಭುಜಂಗರಾವು ..	ಡಿಟೋ		
30	ಎಸ್. ಕೋದಂಡರಾಮಯ್ಯ ..	ಪೊಲೀಸ್ ರೈಟರ್		
31	ಕೆ. ರಾಮಚಂದ್ರರಾವು ..	2ನೇ ಗ್ರೇಡ್ ಜವೇದಾರ್	ಕೋಲಾರ ಡಿಸ್ಟ್ರಿಕ್ಟು	
32	ಮಹಮ್ಮದ್ ಜಲಾಲುದ್ದಿನ್ ..	ಪ್ರಯಿವಿಟ್ ವಿದ್ಯಾರ್ಥಿ		
33	ಟಿ. ರಾಜರಾಮರಾವು ..	ಡಿಟೋ		
34	ಬಿ. ಕೃಷ್ಣಾಜಿರಾವು ..	ಡಿಟೋ		
35	ಕೆ. ಮಂಜಪ್ಪ ..	ಪೊಲೀಸ್ ಇನ್ಸ್ಪೆಕ್ಟರ್	ಕೊಡಗು	
36	ಯು. ಬಿ. ಪುಟ್ಟಣ್ಣಯ್ಯ ..	ಪ್ರಯಿವಿಟ್ ವಿದ್ಯಾರ್ಥಿ		

ವಿ: ಪಿ. ಮಾಧವರಾವ್, ಪೊಲೀಸ್ ಇನ್ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ಇದರಿಂದ ಯಲ್ಲರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಡಿಸ್ಟ್ರಿಕ್ಟು ಕಾನ್ಖಾನಹಳ್ಳಿ, ಚನ್ನಪಟ್ಣ, ಕ್ಲೋಸ್ಪೇಟೆ, ಮಾಗಡಿ, ದೊಡ್ಡಬಳ್ಳಾಪುರ ಈ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟು ವೈಶಾಖಿ ಪಸಾರೆ ಬಾಬುಗಳನ್ನು 1895—96ನೇ ಸಾಲಿಗೋಸ್ಕರ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಆಯಾ ತಾಲ್ಲೂಕಿನ ಆಮಿಲರನ್ನ ಇಟ್ಟುಕೊಂಡು ಈ ಕೆಳಗೆ ಕಂಡ ತಖ್ತೇಲಿ ನಮೂದಿಸುವ ತಾರೀಖಿನಲ್ಲಿ ಆಯಾಯ ಸ್ಥಳದಲ್ಲಿ ಹರಾಜು ಮಾಡಿಸುತ್ತಾರೆ.

2. ಚಡಸವಾಲ್ದಾರನು ಹರಾಜು ಕೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ $\frac{1}{4}$ ಡಿಪಾಜಿಟ್ ಹಾಜರ್ಮಾಡಬೇಕು ಬಾಕಿ $\frac{3}{4}$ ಹಿಸ್ಸೆ ಮೊಬಲಗನ್ನು ಹರಾಜು ಮಂಜೂರ್ಮಾಡಿ ಅಮಲ್ದಾರರಿಂದ ಬರಹ ಮೂಲಕ ವರ್ತಮಾನ ಕೊಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಹಾಜರ್ಮಾಡಬೇಕು ತಪ್ಪಿದರೆ ಬಾಬನ್ನು ಪುನಹ ಹರಾಜು ಮಾಡಿಸಿ ಲುಕ್ಸಾನಿಗೆ ಅವಲ್ ಹರಾಜುದಾರನನ್ನ ಗುರಿಮಾಡುತ್ತೆ.

ನಂಬರು	ಫಾರೆಸ್ಟಿನ ಹೆಸರು	ಹರಾಜು ತಾರೀಖು	ಹರಾಜಾಗತಕ್ಕ ಸ್ಥಳ
1	ಕುಂಬ್ಲ ಗೋಡು	4—5—95	ಬಿಡದಿ
2	ಹುಲ್ತಾರು	ಡಿಟ್ಟೋ	ಡಿಟ್ಟೋ
3	ಹಂದಿಗೊಂದಿ	ಡಿಟ್ಟೋ	ಡಿಟ್ಟೋ
4	ಅಚಲು	ಡಿಟ್ಟೋ	ಡಿಟ್ಟೋ
5	ತೆಂಗಿನಕಲ್	7—5—95	ಚನ್ನ ಪಟ್ಣ
6	ಮಾಕಳಿ		
7	ಚಿಕ್ಕ ಮಣ್ಣು ಗುಡ್ಡೆ		
8	ದೊಡ್ಡ ಮಣ್ಣು ಗುಡ್ಡೆ		
9	ಕೋಳಿರಾಯನದುರ್ಗ		
10	ಬಾಣಂತಿಮಾರಿ	11—5—95	ಕಾರ್ಖಾನಹಳ್ಳಿ
11	ಕಬ್ಬಾಳು ಮತ್ತು ಭೀಮನಕರಡಿ		
12	ಬಿಳಿಕಲ್		
13	ಚೀಲಂದಾಡಿ ಮತ್ತು ಮೂಗೂರು		
14	ಬಸವನಬೆಟ್ಟ		
15	ರಾಗಿಹಳ್ಳಿ		
16	ಸಾವಂದುರ್ಗ	22—5—95	ಮಾಗಡಿ
17	ಉಜನಿ ಹುಲ್ಕಡಿ ಮತ್ತು ಮಾಕಳಿ	27—5—95	ದೊಡ್ಡಬಳ್ಳಾಪುರ

ಯು. ಶೀತಾರಾಮಯ್ಯ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಇಲಾಖಾ.

ನೋಟಿಫಿಕೇಷನ್.

ತಾರೀಖು 6ನೇ ಏಪ್ರೆಲ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯುಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟು ಬಾಬತು ಈ ಕೆಳಗೆ ವಿವರಿಸಿರುವ ಪಸಾರೆ ಜಿನಸಿಗಳು ಸನ್ 1895ನೇ ಇಸವಿ ಏಪ್ರೆಲ್ ತಾರೀಖು 30ರಲ್ಲು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಮೈಸೂರು ವುಡಿಯಾರಡಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸಿ ತಪ್ಸೀಲ್.	ಸುಮಾರು ಮೊತ್ತ.	
	ಮಣ.	ಪೌನ್.
ಆಳಲೆಕಾಯಿ	3,000	..
ಅರಗು.	130	..

ಷರತ್ತು—ಮೈಸೂರು ಗೆಜೆಟ್ 93ನೇ ಜನವರಿ 12ನೇ ಮುರ್ಕುಮಿನಲ್ಲಿ ಚವಬೀನೆ ಮತ್ತು ಬೊಂಬು ವಿಷಯದಲ್ಲಿ ಫಾಯಿಷ್ ಮಾಡಿರುವ 1892ನೇ ಇಸವಿ ನವಂಬರು 29ನೇ ಮುರ್ಕುಂ 7953-ಆರ್. ಎಫ್. 155—92ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ಮೇರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ಮೈಸೂರ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ನಂಜಪ್ಪನವರ ವಿಷಯದಲ್ಲಿ—

ಸನ್ 1894—95ನೇ ಇಸವಿ ದಿವಾಳಿ ಕೇಸ್ ನಂಬರು 358.

ಹಕುಂ,

ಮೇಲ್ಕಂಡ ನಂಜಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜಿದಾರರಾದ ನಂಜಪ್ಪನ ಪರವಾಗಿ ಖುದ್ದು ಹಾಜರುನ್ನೂ ಮತ್ತು ಸದರೀಯವರ ಲೇಣೇದಾರರಾದ ತರಫ್ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—1ನೇ ಬೆಳತೂರು ಶೀತಮ್ಮ, 2ನೇ

ರಘುನಾಥಗಿರಿಗೋಸಾಯಿ, 3ನೇ ಶ್ರೀರಾಂಚಂದ್ರಬ್ಯಾಂಕ್, 4ನೇ ಟವನ್ ಬ್ಯಾಂಕ್, 5ನೇ ನಾರಣಯ್ಯಂಗಾರ್, 6ನೇ ಜಗನ್ಮೋಹನ ಬ್ಯಾಂಕ್, 7ನೇ ಇನ್ಷ್ಯೂರ್ ಬ್ಯಾಂಕ್, 8ನೇ ಲಕ್ಷ್ಮೀನರಶಿಹ್ಮ ಬ್ಯಾಂಕ್, 9ನೇ ರಾಜರಾಜೇಶ್ವರಿ ಬ್ಯಾಂಕ್, 10ನೇ ಚಿಕ್ಕಮುದ್ದಪ್ಪ, 11ನೇ ರಾಮಂಣ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ನಂಜಪ್ಪನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿವಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1895ನೇ ಇಸವಿ ಏಪ್ರಿಲ್ 10ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ 'ನಿಶಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿ ವುಂಟಾದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1ನೇ	ಬೆಳತೂರು ಶೀತಮ್ಮ ..	320-0—0	..	ಡಿಕ್ರಿ ಬಾಬತು	
2ನೇ	ರಘುನಾಥಗಿರಿಗೋಸಾಯಿ ..	200-0—0	..	ಡಿಟೋ	
3ನೇ	ಶಾಮಾಚಾರಿ ಬ್ಯಾಂಕ್ ..	65-0—0	..	ಡಿಟೋ	
4ನೇ	ಮೈಸೂರ್ ಟವನ್ ಬ್ಯಾಂಕ್ ..	60-0—0	..	ಡಿಟೋ	
5ನೇ	ನಾರಣಯ್ಯಂಗಾರ್ ..	35-0—0	..	ಡಿಟೋ	
6ನೇ	ಜಗನ್ಮೋಹನ ಬ್ಯಾಂಕ್ ..	75-0—0	..	ಡಿಟೋ	
7ನೇ	ಐಯ್ನುಯ್ಯಂಗಾರ್ ..	50-0—0	..	ಡಿಟೋ	
8ನೇ	ಲಕ್ಷ್ಮೀನರಸಿಹ್ಮ ಬ್ಯಾಂಕ್ ..	21-0—0	..	ಡಿಟೋ	
9ನೇ	ರಾಜರಾಜೇಶ್ವರಿ ಬ್ಯಾಂಕ್ ..	30-0—0	..	ಡಿಟೋ	
		838-0—0	..		

ಯಂ. ರಾಮಸ್ವಾಮಯ್ಯರ್,
ಸಬ್ ಜಡ್ಜ್.

1895ನೇ ಇಸವಿ ಮಾರ್ಚಿ ತಾರೀಖು 26ನೇ ಮಧ್ಯಾನ್ಹ 1 ಘಂಟೆಗೆ ಚಿತ್ರದುರ್ಗ ಡಿಸ್ಟ್ರಿಕ್ಟ್ ಆಫಿಸಿನಲ್ಲಿ ನಡದ ಲೋಕಲ್‌ಫಂಡ್ ಬೋರ್ಡ ಮೀಟಿಂಗ್ ನಡವಳಿಕೆ.

ಹಾಜರು—

ಮೆಸ್ಟರ್ ಶಿ. ಶ್ರೀನಿವಾಸಯ್ಯಂಗಾರ್ರವರು ಡೆಪ್ಯುಟಿ ಕಮ್ಮಿಷನರ್ ಮತ್ತು ಪ್ರಸಿಡೆಂಟರು.

ಅಫಿಷಿಯಲ್.

1 ಮೆಸ್ಟರ್ ಕೆ. ಪ್ರಹ್ಲಾದರಾಯರವರು ಎ|| ಇಂಜನಿಯರ್
2 ,, ರಾಮಾನುಜಯ್ಯಂಗಾರ್ರವರು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್
3. ,, ಶ್ರೀನಿವಾಸಯ್ಯಂಗಾರ್ರವರು ಅಸಿಸ್ಟೆಂಟ್ ಸರ್ಜನ್
4. ,, ಶಾಮಯ್ಯಂಗಾರ್ರವರು ಹಿರಿಯೂರುಅಮಲ್‌ದಾರ್
5. ,, ರಾಮಸ್ವಾಮಯ್ಯನವರು ಚಿತ್ರದುರ್ಗಅಮಲ್‌ದಾರ್
6. ,, ನರಸಿಂಗರಾಯರವರು ಜಗಲೂರು ಅಮಲ್‌ದಾರ್
7. ,, ಶ್ರೀನಿವಾಸರಾಯರು ಚಳ್ಳಕೆರೆ ಅಮಲ್‌ದಾರ್
8. ,, ಕೃಷ್ಣಯ್ಯರವರು ಮೊಳಕಾಲ್ಮುರು ಅಮಲ್‌ದಾರ್
9. ,, ಶ್ರೀನಿವಾಸಯ್ಯಂಗಾರ್ರವರು ದಾವಣಗೆರ ಡಿಟೋ

ನಾನ್ ಅಫಿಷಿಯಲ್.

1. ಮೆಸ್ಟರ್ ರಾಮಂಣನವರು ಚಿತ್ರದುರ್ಗ-ತಾ|| ಮೆಂಬರ್
2. ,, ಸುಬ್ಬಂಣನವರು ಚಳ್ಳಕೆರೆ ಮೆಂಬರು
3. ,, ಅಶ್ವತ್ಥಪ್ಪನವರು ಜಗಲೂರು ತಾಲ್ಲೂಕು
4. ,, ಕರಿಯಂಣನವರು ಹಿರಿಯೂರು ತಾಲ್ಲೂಕು
5. ,, ಸಿದ್ದರಾಮಯ್ಯನವರು ಹೊಳಲ್‌ಕೆರೆ ತಾಲ್ಲೂಕು

ಗೈರ್ ಹಾಜರು.

1 ಮೆಸ್ಟರ್ ಕೃಷ್ಣರಾಯರವರು
ಹೊಳಲ್‌ಕೆರೆ ಅಮಲ್‌ದಾರ್
(ಕಾಲರಾ ಡ್ಯೂಟಿ ಮೇಲೆ ಇದಾರೆ)

1 ಮೆಸ್ಟರ್ ಗಡಿಗೆ ಸಂಣವೀರಪ್ಪನವರು
ಮೊಳಕಾಲ್ಮುರು ಮೆಂಬರು
ಈಚಿಗೆ ಮೃತಪಟ್ಟಿಧಾರೆ

I 1894ನೇ ಜುಲೈ ಲಾಗಾಯತು ಡಿಸೆಂಬರ್ ಆಖೈರು ವರಿಗಿನ ಜಮಾಖರ್ಚು ಲೆಖ್ಖ ವೋದಲಾಯಿತು ಇದರ ಗೋಷ್ವಾರೆಯನ್ನು ಇದರಡಿ ನಮೂದಿಸಿಥೆ.

ಜಮಾ—1894ನೇ ಜುಲೈ ಗುರ್ರೆ ಶಿಲ್ಕು	31,412—0—7
ಜಮಾ	5,518—9—0
ಜುಮ್ಲಾ	36,930—9—7
ಖರ್ಚು—(A) ಪಬ್ಲಿಕ್‌ವರ್ಕ್ಸ್ ಇಲಾಖಾ ಮಾರ್ಫತ್ತು ನಡೆಯುವ ಕಾಮಗಾರಿಗಾಗಿ	14,911—12—0
(B) ರೆವಿನ್ಯೂ ಇಲಾಖಾ ಮಾರ್ಫತ್ತು ನಡೆಯುವ ಕಾಮಗಾರಿಗೆ ..	1,037— 2—2
(C) ಶಿವಿಲ್ ಛಾರ್ಜು	3,387—10—5
ಜುಮ್ಲಾ ಖರ್ಚು ..	19,336— 8—7
ಜಾತಾ ಡಿಸೆಂಬರ್ ಆಖೈರ್ ಬಾಕಿ	17,594—1—0

ಇದನ್ನು ಪ್ಯಾಸ್ ಮಾಡಬಹುದೆಂತ ತೀರ್ಮಾನಿಸಲಾಯಿತು.

II (1) ಡಿ|| ಮ|| III ಕ್ಲಾಸ್ ಭಂಗ್ಲೆಗಳಲ್ಲಿರತಕ್ಕ ಕೊತ್ವಾಲರು ದಂಡಿಗಳನ್ನು ಛಾಲ್ತಿ ಸಾಲ್ ಆಖೈರುವರಿಗೆ ನವುಕರಿಮೇಲೆ ಇಟ್ಟುಕೊಳ್ಳಲು ಮಂಜೂರ್ಮಾಡಿರುವದಾಗಿ ಗವರ್ನಮೆಂಟಿನಿಂದ ತಲ್ಪಿದ 15—3—95ನೇ ಮ|| 12335—6—L. F. 76—94ನೇ ನಂಬರ್ ಪ್ರೊಸೀಡಿಂಗ್ಸ್ ಸಂಗತಿ ತಿಳಿಸಿ ರಿಕಾರ್ಡು ಮಾಡಲಾಯಿತು.

(2) ಹೈ ರೋಡುಗಳಿಂದ ಅಲ್ಲಲ್ಲಿ ಅಡ್ಡರಸ್ತೆಗಳನ್ನು ಹೊಸದಾಗಿ ಮಾಡಿಸುವದರಿಂದ ಐಂದಾ ಸಾಲಾಬಾದಿಗೆ ತಗಲುವ ಖರ್ಚು ಡಿಸ್ಟ್ರಿಕ್ಟ್ ಫಂಡ್-ಬೋರ್ಡಿಗೆ ದುಬಾರೆ ಆಗುವ ಪ್ರಯುಕ್ತ ಇಂಥ ಹೊಸ ರಸ್ತೆಗಳನ್ನು ಮಾಡಿಸಕೂಡದೆಂತಲೂ ಹಾಲಿ ಗ್ರಾಮಗಳ ಮಧ್ಯೆ ಇರತಕ್ಕ ಭಂಡಿ ಜಾಡುಗಳನ್ನ ಅವಶ್ಯಕವಾದ ಕಡೆಯಲ್ಲಿ ದುರಸ್ತು ಮಾಡಿಸಿದರೆ ಸಾಕೆಂತ ಚೀಫ್ ಇಂಜನಿಯರ್ ಸಾಹೆಬರವರಿಂದ ತಲ್ಪಿರುವ 12—3—95ನೇ ಮ|| 17ನೇ ಸರ್ಕ್ಯುಲರ್ ಸಂಗತಿ ಓದಿಸಿ ರಿಕಾರ್ಡು ಮಾಡಲಾಯಿತು.

III ಡಿಸ್ಟ್ರಿಕ್ಟು ಮಜಕೂರಲ್ಲಿರತಕ್ಕ ಲೋಕಲ್ ಫಂಡ್ ಮೇಸ್ತ್ರಿಗಳಿಗೆ ಮಾಹೆಯಾನಾ 10 ರೂಪಾಯಿನಂತೆ ಕುದುರೆ ಅಲೋನ್ಸ್ ಕೊಡಿಸುವ ಭಾಗದಲ್ಲಿ ಬೋರ್ಡಿನವರ ತೀರ್ಮಾನವನ್ನು ರಿಪೋರ್ಟು ಮಾಡಪೇಕೆಂತ ತಲ್ಪಿದ 8-2-95ನೇ ಮ|| 11922—L. F. 379—92ನೇ ನಂಬರ್ ಗವರ್ನ್ಮೆಂಟ್ ಪ್ರೊಸೀಡಿಂಗ್ಸ್ ವೋದಲಾಯಿತು. ಇವರಿಗೆ 10 ರೂಪಾಯಿನಂತೆ ಅಲೋನ್ಸ್ ಕೊಡತಕ್ಕದ್ದು ಯುಕ್ತವಾಗಿಯೂ ಅತ್ಯವಶ್ಯಕವಾದ್ದಾಗಿಯೂ ಇರುತ್ತಾದ್ದರಿಂದ ಇದರಂತೇನೇ ಅಲೋನ್ಸ್ ಕೊಡಿಸಬೇಕೆಂತ ಗವರ್ನ್ಮೆಂಟಿಗೆ ಶಿಫಾರಸ್ ಮಾಡಬೇಕೆಂತ ತೀರ್ಮಾನಿಸಲಾಯಿತು.

IV ಹರಿಹರದ ರೇಂಜ್ ಮಲೆಬೆನ್ನೂರಲ್ಲಿರತಕ್ಕ ಹೊನ್ನಪ್ಪನಾಯಿಡರವರ ಛತ್ರವನ್ನು ರಿಪೇರಿ ಮಾಡಲು ಏನು ಖರ್ಚು ತಗಲಬಹುದು ಮತ್ತು ಈ ಕಟ್ಟಡವನ್ನು ಸರ್ಕಾರದ ವಿಚಾರಣೆಗೆ ವಳಪಡಿಸುವ ಭಾಗದಲ್ಲಿ ಬೋರ್ಡಿನವರ ಅಭಿಪ್ರಾಯವನ್ನು ತಿಳಿಸಬೇಕೆಂತ ವಗೈರೆ ಗವರ್ನಮೆಂಟಿನಿಂದ ತಲ್ಪಿದ 20—3—95ನೇ ಮ|| 15271—L. F. 345—92ನೇ ಪ್ರೊಸೀಡಿಂಗ್ಸ್ ಓದಲಾಯಿತು. ಈ ಕಟ್ಟಡವನ್ನು ಡಿಸ್ಟ್ರಿಕ್ಟು ಫಂಡ್ ಬೋರ್ಡಿನ ಆಡಳಿತಕ್ಕೆ ತೆಗದುಕೊಳ್ಳತಕ್ಕದ್ದೆಂತಲೂ, ಇದರ ರಿಪೇರಿಗಾಗಿ ತಯಾರಾಗಿ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರ ಅಭಿಪ್ರಾಯಕ್ಕಾಗಿ ಕಳುಹಿಸತಕ್ಕ ಅಂದಾಜಾವನ್ನು ಸಾಧ್ಯವಾದ ಮಟ್ಟಿಗೂ ಜಾಗ್ರತೆಯಾಗಿ ವಾಪಸ್ ತರಿಸಿಕೊಂಡು ಮಂಜೂರಿ ಬಗ್ಯೆ ಗವರ್ನಮೆಂಟಿಗೆ ಕಳುಹಿಸಿಕೊಡತಕ್ಕದ್ದೆಂತಲೂ, ತೀರ್ಮಾನಿಸಲಾಯಿತು.

V ಮೊಳಕಾಲ್ಮೂರು ತಾಲ್ಲೂಕು ಲೋಕಲ್ ಫಂಡ್ ಮೆಂಬರು ಮೆಸ್ಟರ್ ಗಡಿಗೆ ಸಣ್ಣವೀರಪ್ಪನವರು ಮೃತಪಟ್ಟದ್ದಾಗಿ ಆ ತಾಲ್ಲೂಕು ಅಮಲ್‌ದಾರ್ರಿಂದ ತಲ್ಪಿದ 20-3-95ನೇ ಮ|| 214ನೇ ನಂಬರ್ ರಿಪೋರ್ಟು ಓದಲಾಯಿತು. ಈ ವಿಷಯದಲ್ಲಿ ಬೋರ್ಡಿನವರು ವಿಷಾದಿಸುತ್ತಾರೆ.

VI ಬೋರ್ಡು ಮೆಂಬರುಗಳ ಸ್ಥಾನದಲ್ಲಿ 2 ಹಾಲಿ ಖಾಲಿ ಇರುವದ್ದರಿಂದ ಹರಿಹರದ ಬಸಪ್ಪನವರನ್ನು ದಾವಣಗೆರೆ ತಾಲ್ಲೂಕು ಮೆಂಬರಾಗಿ ನೇಮಿಸಬಹುದಾಗಿ ಶಿಫಾರಸ್ ಮಾಡಿ ಗವರ್ನಮೆಂಟಿಗೆ ಬರಿಯಬೇಕೆಂತಲೂ ಬರುವ ಏಪ್ರೈಲ್ ಆಖೈರೊಳಗಾಗಿ ಒಬ್ಬ ಇನಾಂದಾರ್ ಮೆಂಬರನ್ನು ಚುನಾಯಿಸತಕ್ಕ ಬಗ್ಯೆ ಡಿಸ್ಟ್ರಿಕ್ಟು ಮಜಕೂರಿನಲ್ಲಿರತಕ್ಕ ಇನಾಂದಾರುಗಳಿಗೆ ಅಥವಾ ಅವರ ಏಜಂಟುಗಳಿಗೆ ನೋಟಿಸ್ ಕೊಡಿಸಬೇಕೆಂತಲೂ ತೀರ್ಮಾನಿಸಲಾಯಿತು.

ಸಿ. ಶ್ರೀನಿವಾಸಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್ ಮತ್ತು ಪ್ರಸಿಡೆಂಟರು.

ಸ್ವಂತ ಪ್ರಕಟನೆ.

ಶ್ರೀನಿವಾಸಪುರ ದ್ರವ್ಯಸಹಾಯ ಕಂಪಿನಿ ಆಫಿಷಿಯಲ್ ಲಿಕ್ವಿಡೇಟರವರ ಆಫಿಸಿನಿಂದ—ಈ ಕಂಪಿನಿ ಮೆಂಬರುಗಳಿಗೆ ತಿಳಿಯಪಡಿಸುವದೇನಂದರೆ—ಈ ಕಂಪಿನಿ ಬಾಬತು ಮೊಬಲಗು ದಾಮಾಷಾಯಿಯಲ್ಲಿ ಮೆಂಬರುಗಳು ಕೊಟ್ಟು ಇರುವ ಡೋನೇಷರ್ ಮತ್ತು ಕಾಲ್ಸು ಮೊಬಲಗಿಗೆ ಸಹ ರೂಪಾಯಿ 1ಕ್ಕೆ ರೂ. 0 ಆ. 5 ಪೈ. $8\frac{1}{2}$ ಪ್ರಕಾರ ಚಿಂತಾಮಣಿಯಲ್ಲಿ ಬಟವಾಡೆ ಮಾಡಲ್ಪಡುತ್ತೆ. ಮೆಂಬರುಗಳು ಖುದ್ದಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದವರ ಮೂಲಕವಾಗಲಿ ಹಾಜರಾಗಿ ತಾವು ಹೊಂದಿರುವ ಸರಟಿಫಿಕೇಟ್ ರಶೀತಿಗಳೂ ಸಹ ತಂದು ವಾಪಸ್‌ಕೊಟ್ಟು ಮೊಬಲಗು ತೆಗದುಕೊಳ್ಳಬಹುದು.

ಫಸ್ಟ್‌ಗ್ರೇಡ್ ಪ್ಲೀಡರ್,
ಬಿ. ಶೀತಾರಾಮಪ್ಪ.

ಮೈಸೂರ ಗೆಜೆಟ್.

ನಂ. 1] ಸರ್ಕಾರದಿಂದ ಫಾಂಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಏಪ್ರಿಲ್ ತಾ|| 18, ಸನ್ 1895.

4ನೇ ಭಾಗ.

ಮೈಸೂರು ಗವರ್ನಮೆಂಟ್.

ಲೆಜಿಸ್ಲೇಟಿವ್ ಇಲಾಖಾ.

ತಾರೀಖ್ 4ನೇ ಏಪ್ರಿಲ್ 1895.

ಮೈಸೂರ್ ಗವರ್ನಮೆಂಟಿನವರ ಪರ್ಯಾಲೋಚನೆಯಲ್ಲಿರತಕ್ಕ ಇದರಡಿ ಕಂಡ ಮಸವಿದಾ ರೆಗ್ಯುಲೇಷನ್‌ಗಳು ಸಕಲ ಜನಗಳ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತವೆ.

"ಹುಕುಂ ಬಮೋಜಿಬ್,"
ವಿ. ಎನ್. ನರಸಿಹ್ಮಯ್ಯಂಗಾರ್,
ಜನರಲ್ ಸೆಕ್ರೆಟರಿ.

ಮೈಸೂರ್ ಗವರ್ನಮೆಂಟ್.

ಲೆಜಿಸ್ಲೇಟಿವ್ ಇಲಾಖಾ.

189   ನೇ ಇಸವಿಯ   ನೇ ನಂಬರ್

ಮಸವಿದಾ ರೆಗ್ಯುಲೇಷನ್.

1888ನೇ ಇಸವಿಯ IVನೇ ನಂಬರ್ ರೆಗ್ಯುಲೇಷನ್ ಆದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡನ್ನು ತಿದ್ದುಪಾಡುಮಾಡುವ ಬಗ್ಗೆ ಏರ್ಪಟ್ಟ ರೆಗ್ಯುಲೇಷನ್.

ಪೀಠಿಕೆ.

1888ನೇ ಇಸವಿಯ IVನೇ ನಂಬರ್ ರೆಗ್ಯುಲೇಷನಾದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡನ್ನು ತಿದ್ದುಪಾಡುಮಾಡಬೇಕಾದ್ದು ಯುಕ್ತವಾದದರಿಂದ ಮೈಸೂರ್ ಗವರ್ನಮೆಂಟಿನವರು ಇದರಡಿಕಂಡ ಪ್ರಕಾರ ವಿಧಿಸುತ್ತಾರೆ:—

1. 1ನೇ ಸೆಕ್ಷನಿನಲ್ಲಿ, “ಸನ್ 1888ನೇ ಇಸವಿಯ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್” ಎಂಬ ಮಾತುಗಳಿಗೆ ಬದಲಾಗಿ “ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್,” ಎಂಬ ಮಾತುಗಳು ಸೇರಿಸಲ್ಪಡತಕ್ಕದ್ದು.

ಲೆಖ್ಖಗಳು ಅಥವಾ.

2. 3ನೇ ಸೆಕ್ಷನ್ (1)ನೇ ಕ್ಲಾಜ್‌ನಲ್ಲಿ, “ಅದಕ್ಕೆ ಸಂಬಂಧಪಟ್ಟ ರಿಕಾರ್ಡ್‌ಗಳ ವಿಷಯದಲ್ಲಾಗಲಿ,” ಎಂಬ ಮಾತುಗಳಿಗೆ ಬದಲಾಗಿ ಈ ಕೆಳಗೆ ಬರತಕ್ಕದ್ದನ್ನು ಉಪಯೋಗಿಸತಕ್ಕದ್ದು ; “ಅದಕ್ಕೆ ಸಂಬಂಧಪಟ್ಟ ಲೆಖ್ಖಗಳು ಅಥವಾ ರಿಕಾರ್ಡ್‌ಗಳ ವಿಷಯದಲ್ಲಾಗಲಿ, ಮತ್ತು, ಗವರ್ನಮೆಂಟಿನವರಿಗೆ ಬಾಧ್ಯತೆವುಳ್ಳಂಥಾ ಯಾವದಾದರೂ ಸರ್ಕಾರಿ ನೀರಾವರಿ ಕಾಮಗಾರಿ ಯಾ ಆಸರೆಯಿಂದ ದೊರೆಯತಕ್ಕ ನೀರು ನೀರಾವರಿ ಯಾ ಇತರ ಉದ್ದೇಶಗಳಿಗೋಸ್ಕರ ಬದಗಿ ಉಪಯೋಗಪಡೋಣವನ್ನು ತನಿಖೀ ಮಾಡುವ, ಹಂಚುವ ಯಾ ಕ್ರಮಪಡಿಸುವ ಕೆಲಸಗಳನ್ನು ಮಾಡಲಿಕ್ಕೆ ಯಾರಿಗೆ ವಹಿಸಿರುತ್ತೋ ಆ ಆಫಿಸರ್‌ಗಳೂ ಸಹ ಸೇರಿದವರಾಗಿರುತ್ತಾರೆ.

3. 27ನೇ ಸೆಕ್ಷನಿನಲ್ಲಿ, “ಜಾಮೀನ್‌ದಾರನಾಗಲಿ, ಖೈದಿನಲ್ಲಿದ್ದರೆ” ಯಂಬ ಮಾತುಗಳಿಗೆ ಬದಲಾಗಿ, “ಮೇಲೆ ತಿಳಿಸಲ್ಪಟ್ಟಂತೆ ಇತರ ಮನುಷ್ಯನಾಗಲಿ, ಯಾ ಜಾಮೀನ್‌ದಾರನು ಅಥವಾ ಜಾಮೀನ್‌ದಾರರು, ಖೈದಿನಲ್ಲಿದ್ದರೆ” ಎಂಬ ಮಾತುಗಳನ್ನು ಸೇರಿಸತಕ್ಕದ್ದು.

ಲ್ಯಾಂಡ್ ರೆವಿನ್ಯೂ ಕೋಡಿನ XIVನೇ ಅಧ್ಯಾಯಕ್ಕೆ ಬದಲಾಗಿ.

4. ಹದಿನಾಲ್ಕನೇ ಅಧ್ಯಾಯಕ್ಕೆ ಬದಲಾಗಿ ಇದರಡಿ ಬರತಕ್ಕದ್ದನ್ನು ಉಪಯೋಗಿಸತಕ್ಕದ್ದು;—

“14ನೇ ಅಧ್ಯಾಯ.”

ರೆವಿನ್ಯೂ ಅಧಿಕಾರ.

ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್, ಸೆಕ್ಷನ್, 219.

ಅರ್ಥ ವಿವರಣೆಯ ಕ್ಲಾಜ್.

219. ಈ ಅಧ್ಯಾಯದಲ್ಲಿ ವಿಷಯತಃ ಆಗಲಿ, ಸಂದರ್ಭತಃ ಆಗಲಿ, ಯಾವದಾದರೂ ವಿರುದ್ಧಾಂಶವಿಲ್ಲದಿದ್ದರೆ:—

“ಜಮೀನ್.”

“ಜಮೀನ್” ಎಂಬದು, ಗ್ರಾಮಗಳ, ಷಹರ್‌ಗಳ, ಮತ್ತು ಪಟ್ಟಣಗಳ ನಿವೇಶನಗಳನ್ನು ಅಡಗಿಸಿಕೊಂಡಿರುತಿದೆ. ಸದರೀ ಶಬ್ದವು ಮರಗಳು, ಬೆಳೆಯುವ ಫಸಲ್‌ಗಳು, ಮತ್ತು ಹುಲ್ಲು ಮರಗಳ ಮೇಲಣ ಫಲಗಳು, ಮತ್ತು ಅವುಗಳಲ್ಲಿನ ರಸ, ಮಾರ್ಗದ ಹಕ್ಕುಗಳು, ಹರಿಗೋಲುಗಳು, ಮತ್ತು ಮೀನು ಹಿಡಿಯುವ ಸ್ಥಳಗಳು ಇವುಗಳನ್ನೂ ಸಹ ಅಡಗಿಸಿಕೊಂಡಿರುತಿದೆ.

‘ಜಮೀನ್ ಕಂದಾಯ.”

“ಜಮೀನ್ ಕಂದಾಯ” ಅಂದರೆ ಗವರ್ನಮೆಂಟಿನಿಂದ, ಯಾ ಗವರ್ನಮೆಂಟ್ ತರಫ್‌ನಲ್ಲಿ ಯಾವ ಮನುಷ್ಯನಿಂದಲಾಗಲಿ, ಅವನ ಹಿಡುವಳಿಯಲ್ಲಿವುಳ್ಳ, ಅಥವಾ ಅವನ ವಶಕ್ಕೆ ಕೊಡಲ್ಪಟ್ಟ ಜಮೀನಿಗಾಗಿ, ಹೊಂದಿದ ಅಥವಾ ಬರತಕ್ಕದ್ದೆಂಬ ನಗದ್ ಯಾ ಧಾನ್ಯರೂಪವಾದ ದರೋಬಸ್ತ್ ಮೊಬಲಗುಗಳೂ, ಪಾವತಿಗಳೂ, ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ

ಯಾವದಾದರೂ ಕಾನೂನಿನ ನಿಬಂಧನೆಗಳನ್ನನುಸರಿಸಿ ಗವರ್ನ್ಮೆಂಟಿನವರಿಂದ ನಿಯಮಿಸಲ್ಪಟ್ಟ ಯಾವದಾದರೂ ತೀರ್ವೆ ಯಾ ದರ ಯಂಬದಾಗಿ ಅರ್ಥವಾಗುತ್ತಿದೆ.

ಹೊಸದು. ಸರ್ಮಾರ್ಕ್ ಕಬ್ಬನ್ ಸಾಹೇಬರವರಿಂದ ಕೊಡಲ್ಪಟ್ಟ, 1854ನೇ ಇಸವಿ ಅಕ್ಟೋಬರ 26ನೇ ಮುಕ್ಕಾಂ, 30ನೇ ನಂಬರುಳ್ಳ ಬಟ್ಟು ಹುಕುಂ.

ಪಾರಂಪರ್ಯ ಹಕ್ಕುದಾರಿ ಆಫಿಸರ್.

“ ಪಾರಂಪರ್ಯ ಹಕ್ಕುದಾರನಾದ ಆಫಿಸರ್ ಯಾ ನೌಕರನು ” ಎಂಬ ಮಾತುಗಳು, ಸರ್ಕಾರೀ ಜಮೀನನ್ನು ಕೊಡುವದರ ಮೂಲಕವಾಗಲಿ, ಸರ್ಕಾರ್ ಖಜಾನೆಯಿಂದ ನಗದ್ ರೂಪವಾಗಿ ಕೊಡುವದರ ಮೂಲಕವಾಗಲಿ ಖುಷ್ಬಾಷ್ ಜನರಿಂದ ಗವರ್ನ್ಮೆಂಟಿನವರು ಬಲಾತ್ಕಾರವಾಗಿ ಕೊಡಿಸುವಂತ ನಗದ್ ಯಾ ಧಾನ್ಯರೂಪವಾದ ಸಂದಾಯ ಮೂಲಕವಾಗಲಿ, ರುಸುಂ ಸಲ್ಲತಕ್ಕ ನೌಕರಿಯುಳ್ಳಂಥಾ, ಮತ್ತು, ಅಂಥಾ ನೌಕರಿಯನ್ನು ಹೊಂದಲಿಕ್ಕೆ ಹಕ್ಕುದಾರಿ ಉಳ್ಳವರೆಂದು ಗವರ್ನ್ಮೆಂಟಿನವರು ಮಂಜೂರ್ಮಾಡುವಂಥಾ, ಆಫಿಸರೆಂದು ಅರ್ಥವಾಗತಕ್ಕದ್ದಲ್ಲದೆ ಸರ್ಕಾರ ಮುಜರಾಯಿ ಸ್ಥಾಪನೆಗಳಿಗೆ ಸೇರಿದಂಥಾ ಪಾರಂಪರ್ಯ ಹಕ್ಕುದಾರಿಯುಳ್ಳ ಆಫಿಸರ್ಗಳು ವ ನೌಕರರೂ ಎಂದು ಸಹ ಅರ್ಥವಾಗತಕ್ಕದ್ದು.

ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್, 220.

ಪೆನ್ಷನ್ ಆಕ್ಟಿನ ನಿಬಂಧನೆಗಳ ವಿನಾಯಿತಿ.

“ 220. ಈ ಅಧ್ಯಾಯದಲ್ಲಿರುವ ಯಾವ ಅಂಶವೂ “ (ಪೆನ್ಷನ್ ಆಕ್ಟ್) ” 1871ನೇ ಇಸವಿಯ 23ನೇ ನಂಬರ್ ಆಕ್ಟಿನ ನಿಬಂಧನೆಗಳ ಪೈಕಿ ಯಾವದಕ್ಕೂ ಬಾಧಕವಾಗತಕ್ಕದ್ದಲ್ಲವು.

ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್ 221. (*h*) ಮತ್ತು (*i*) ಕ್ಲಾಜ್ಗಳು ವಿನಾಯಿಸಿ.

ಕೆಲವು ವ್ಯಾಜ್ಯಗಳ ಆತಂಕ.

221. ಇದರಡಿ ಕಂಡ ವಿಷಯಗಳ ಪೈಕಿ ಯಾವದನ್ನು ಕುರಿತಾಗಲಿ, ಅಧಿಕಾರವನ್ನು ಯಾವ ಶಿವಿಲ್ ಕೋರ್ಟಿನವರೂ ಚಲಾಯಿಸಕೂಡದು.

ಪಾರಂಪರ್ಯ ಹಕ್ಕುದಾರಿ ಉಳ್ಳ ಉದ್ಯೋಗಗಳು.

a. ಗವರ್ನ್ಮೆಂಟಿನವರಿಂದ ಮೊಕರರ್ಮಾಡಲ್ಪಟ್ಟ ಅಥವಾ ಮಂಜೂರ್ಮಾಡಲ್ಪಟ್ಟ ವಂಶಪಾರಂಪರ್ಯದ ಯಾರಾದರೂ ಆಫಿಸರ್ ಯಾ ನೌಕರನ ಉದ್ಯೋಗಕ್ಕೆ ಸಂಬಂಧಿಸಿದ ಯಾವದಾದರೂ ಸ್ವತ್ತನ್ನು ಕುರಿತ ದಾವೆಗಳು;

ಅಂಥಾ ಯಾರಾದರೂ ಆಫಿಸರನ ಯಾ ನೌಕರನ ಕೆಲಸಗಳನ್ನು ನಿರ್ವಹಿಸಲಿಕ್ಕೆ ಅಥವಾ ಅಂಥಾ ಉದ್ಯೋಗ ಯಾ ನೌಕರಿಯ ದೆಸೆಯಿಂದ ವಿನಾಯಿಸಿದ್ದರ ಮೂಲಕ ಉಂಟುಮಾಡಲ್ಪಟ್ಟ ಯಾವದಾದರೂ ನುಕ್ಸಾನ್ ವಿಷಯದಲ್ಲಿ ತರಲ್ಪಡುವ ದಾವೆಗಳು ;

ಗವರ್ನ್ಮೆಂಟಿನವರಿಂದ ಕ್ರಮ ಪ್ರಕಾರ ಅಧಿಕಾರ ಕೊಡಲ್ಪಟ್ಟ ಯಾರಾದರೂ ಆಫಿಸರಿಂದ ಕೊಡಲ್ಪಡಬಹುದಾದ, ಅಂಥಾ ಉದ್ಯೋಗ, ಅಥವಾ ನೌಕರಿ, ಅಥವಾ ಅಂಥಾ ಆಫಿಸರ್ ಯಾ ನೌಕರನಿಗೆ ಸಂಬಂಧಿಸಿದ ಯಾವ ಹುಕುಮನ್ನಾಗಲಿ, ವಜಾ ಮಾಡುವದಕ್ಕೆ ಯಾ ತಪ್ಪಿಸಲಿಕ್ಕೆ ತರಲ್ಪಟ್ಟ ದಾವೆಗಳು;

ಗವರ್ನ್ಮೆಂಟಿನವರಿಂದಾಗಲಿ, ಅವರ ತರಫ್ ಕ್ರಮಪ್ರಕಾರ ಅಧಿಕಾರ ಹೊಂದಿದ ಯಾವ ಆಫಿಸರಿಂದಾಗಲಿ, ಯಾವದಾದರೂ ನೌಕರಿಯ ಬಗ್ಗೆವಹಿಸಲ್ಪಡತಕ್ಕದ್ದೆಂಬದಾಗಿ, ಹೇಳಲ್ಪಟ್ಟ ಜಮೀನ್ಗಳ ವಿಷಯದಲ್ಲಿ ತರಲ್ಪಟ್ಟದಾವೆಗಳು:

ತೀರ್ವೆ ಸೆಟಲ್ಮೆಂಟ್.

(*b*) ಆಕ್ಷೇಪಣೆಗಳು—ಗವರ್ನ್ಮೆಂಟಿನಿಂದ ನಿಯಮಿಸಲ್ಪಟ್ಟ ಜಮೀನ್ ಕಂದಾಯದ ಬಗ್ಗೆ ಠರಾಯಿಸಲ್ಪಟ್ಟ ಯಾವದಾದರೂ ಮೊಬಲಗಿಗೆ ಯಾ ಕಂದಾಯ ಹಾಕುವಣಿ, ಅಥವಾ ಕಂದಾಯ ಮೊಕರರರಾತಿಯ ವಿಧ ಅಥವಾ ಯಾವ ಸಿದ್ಧಾಂತದಮೇಲೆ ಅಂಥಾ ಕಂದಾಯ ನಿಶ್ಚೈಸಲ್ಪಟ್ಟಿತೋ ಅದು, ಅಥವಾ

ಸರ್ವೇ ಯಾ ಸೆಟಲ್ಮೆಂಟಿನ ಇಸ್ತಿಹಾರ್ ನಾಮೆಯ, ಅಥವಾ ಸೆಟಲ್ಮೆಂಟಿನ ವಾಯಿದೆಯನ್ನು ನಿಶ್ಚೈಸತಕ್ಕ ಯಾವದಾದರೂ ಇಸ್ತಿಹಾರ್ ನಾಮೆಯ ದೃಢತ್ವ ಅಥವಾ

ಫಲಿತಾಂಶ ಈ ವಿಷಯಗಳಲ್ಲಿ ಆಕ್ಷೇಪಣೆಗಳು,

ಜಮಿರ್ಾ ಕಂದಾಯದ ವಸೂಲಿ.

(*c*) ಜಮಿರ್ಾ ಕಂದಾಯದ ವಸೂಲಾತಿ ಬಗ್ಯೆ ಅಥವಾ ಗವರ್ನಮೆಂಟಿನಿಂದಾಗಲಿ ಆ ಬಗ್ಯೆ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟ ಯಾವ ಆಫಿಸರಿಂದಾಗಲಿ, ಮೇಲ್ಪಟ್ಟ ಹಿಡುವಳೀದಾರರಿಗೆ ಕಮ್ಮಿ ಹಿಡುವಳೀದಾರರಿಂದ ಬರಬೇಕಾದ—ಅವರುಗಳ ಬಾಕೀಗಳನ್ನು ವಸೂಲ್ಮಾಡುವದಕ್ಕೆಕುಮ್ಮಕ್ ಮಾಡುವ ಬಗ್ಯೆ ಯಾವದಾದರೂ ನಡವಳಿತಗಳಿಗೆ ಸಂಬಂಧಿಸಿದ ಅಥವಾ ಅವುಗಳಿಂದುಂಟಾಗುವ ದಾವೆಗಳು; ಅಥವಾ ದಗಾ ಹೊರ್ತು ಅಕ್ರಮ, ಗಲ್ಲತ್, ಅಥವಾ ಮತ್ಯಾವದಾದರೂ ಇತರ ಕಾರಣಕ್ಕಾಗಿ ಜಮಿರ್ಾ ಕಂದಾಯ ಬಾಕಿಗಳಿಗೋಸ್ಕರ ನಡೆಸಲ್ಪಡುವ ವಿಕ್ರಯಗಳನ್ನು ತಳ್ಳಿ ಹಾಕುವ ಬಗ್ಯೆ ದಾವೆಗಳು—

ಸರ್ವೇ ರಿಕಾರ್ಡುಗಳು ವಗೈರೆಗಳಲ್ಲಿ ಖತಾಯಿತಿಗಳು.

(*d*) ದಾವೆಗಳು—(1) ಜಮಿರ್ಾ ಕಂದಾಯಕ್ಕೆ ಗುರಿಯಾಗಿರುವದಾಗಿ ಅಥವಾ ಮೇಲ್ಪಟ್ಟ ಹಿಡುವಳೀದಾರನಂತೆ ಕಮ್ಮಿ ಹಿಡುವಳೀದಾರ, ಅನುಭವದಾರ ಅಥವಾ ಷಿಕ್ಮೀದಾರನಂತೆ ರೆವಿನ್ಯೂ ಸರ್ವೆ ಅಥವಾ ಸೆಟಲ್‌ಮೆಂಟ್ ರಿಕಾರ್ಡುಗಳಲ್ಲಿ ಯಾಗಲಿ, ಗ್ರಾಮದ ಕಾಗದ ಪತ್ರಗಳಲ್ಲಾಗಲಿ, ದಾಖಲ್ಮಾಡಲಿಕ್ಕೆ ಅಥವಾ

(2) ರೆವಿನ್ಯೂ ಸರ್ವೆ ಅಥವಾ ಸೆಟಲ್‌ಮೆಂಟಿನ ಯಾವ ರಿಕಾರ್ಡಿದಲ್ಲಾಗಲಿ, ಯಾವದಾದರೂ ಖತಾಯಿತಿ ಮಾಡಲ್ಪಡಲಿಕ್ಕೆ, ಅಥವಾ

(3) ಅಂಥಾ ಯಾವ ಖತಾಯಿತಿಯನ್ನಾಗಲಿ, ಬಿಡುವದಕ್ಕೆ ಅಥವಾ ತಿದ್ದುಪಾಡು ಮಾಡುವದಕ್ಕೆ.

ಜಮಿರ್ಾಗಳ ಹಂಚಿಕೆ.

(*e*) ಈ ರೆಗ್ಯುಲೇಷನಿನಂತೆ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಕಾನೂನ್ ಮೇರಿಗೆ ಯಾವದಾದರೂ ಎಸ್ಟೇಟಿನ ವಿಭಾಗದಲ್ಲಿ ಜಮಿರ್ಾ ಹಂಚಿಕೆ ಯಾ ಜಮಿರ್ಾ ಕಂದಾಯ ನಿರ್ಣಯ ವಿಷಯದಲ್ಲಿ ತರಲ್ಪಟ್ಟ ದಾವೆಗಳು—

ಕಂದಾಯ ಮಾಫಿಯಾನೇ ಇನಾಂ ಜಮಿರ್ಾಗಳು, ಕಂದಾಯದಿಂದ ಪಾವತಿಗಳು ತೀರ್ವೆಗಳು ಮತ್ತು ದರಗಳು, ಮತ್ತು ಸರ್ಕಾರ್ ಜಮೀನಿನ ಹಿಡುವಳಿ.

(*f*) ಜಮಿರ್ಾ ಕಂದಾಯ ಪೂರಾ ಆಗಲಿ ಕೆಲವು ಮಟ್ಟಿಗಾಗಲಿ ಕೊಡಬೇಕಾದ್ದಿಲ್ಲದೆ ಜಮೀನನ್ನು ವಹಿಸಲಿಕ್ಕೆ ದಾವೆಗಳು. ಅಥವಾ,

ಜಮಿರ್ಾ ಕಂದಾಯ ಯಾ ಇತರ ಹುಟ್ಟುವಳಿಗಳ ಮೇಲೆ ಹಾಕಲ್ಪಟ್ಟ ಅಥವಾ ಅಂತಾ ಕಂದಾಯ ಯಾ ಹುಟ್ಟುವಳಿಗಳ ಪೈಕಿ ಮಾಡಲ್ಪಡತಕ್ಕ ಸಂದಾಯಗಳನ್ನು ಪಡೆಯಲಿಕ್ಕೆ, ಅಥವಾ

ತತ್ಕಾಲದಲ್ಲಿ ಜಾರಿಯೊಳಿರುವ ಯಾವದಾದರೂ ಕಾನೂನಿನ ನಿಬಂಧನೆಗಳನ್ನನುಸರಿಸಿ ಗವರ್ನಮೆಂಟಿನಿಂದ ನಿಯಮಿಸಲ್ಪಟ್ಟ ಯಾವದಾದರೂ ತೆರಿಗೆ ಯಾ ದರವನ್ನು ವಜಾ ಮಾಡಲಿಕ್ಕೆ, ಅಥವಾ,

ಗವರ್ನಮೆಂಟಿಗೆ ಸೇರಿದ ಬಂಜರ್ ಯಾ ಖಾಲೀ ಜಮೀನಿನ ಅನುಭವವನ್ನು ಕುರಿತ ದಾವೆಗಳು.

ಸರಹದ್ದುಗಳು.

(*g*) ಸನ್ 1865ನೇ ಇಸವಿಯ 1ನೇ ನಂಬರ್ ಮುಂಬೈ ಆಕ್ಟ್ ಅನುಸರಿಸಿ ಅಥವಾ ಈ ರೆಗ್ಯುಲೇಷನಿನಂತೆ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ

ಕಾನೂನ್ ಮೇರಿಗೆ ನಿಶ್ಚೈಸಲ್ಪಟ್ಟ ಸರಹದ್ದುಗಳನ್ನು ಕುರಿತು ಅಥವಾ ಎಲ್ಲೇ ಗುರುತುಗಳ ವಿಷಯದಲ್ಲಿ ಅಂತಾ ಯಾವದಾದರೂ ಕಾನೂನ್ ಅನುಸರಿಸಿ, ಲಾಯಖಾದ ಒಬ್ಬ ಆಫಿಸರಿಂದ ಕೊಡಲ್ಪಟ್ಟ ಯಾವ ಹುಕುಮನ್ನಾದರೂ ತಳ್ಳಿ ಹಾಕಲಿಕ್ಕೆ ತರಲ್ಪಟ್ಟ ದಾವೆಗಳು ; ಮತ್ತು

ಹೊಸದು.

“ ಸರ್ಕಾರೀ ನೀರು.”

(*h*) ಸರ್ಕಾರದವರಿಗೆ ಬಾಧ್ಯತೆಯುಳ್ಳ ಸರ್ಕಾರೀ ಜಲಾಧಾರದಿಂದಲಾಗಲಿ, ಇತರ ಆಸರೆಯಿಂದಲಾಗಲಿ, ದೊರೆಯುವ ನೀರನ್ನು ನೀರಾವರಿ ಯಾ ಇತರ ಉದ್ದೇಶಗಳಗಾಗಿ ಒದಗಿಸುವದು ವ ಉಪಯೋಗಿಸಿಕೊಳ್ಳುವದು, ಅಥವಾ ಹಾಗೆ ಒದಗಿಸಲ್ಪಟ್ಟ ಯಾ ಉಪಯೋಗಿಸಲ್ಪಟ್ಟ ಸದರೀ ನೀರಿನ ಪರಿಮಾಣ, ಅದರ ಹಂಚಿಕೆಯ ವಿಧಾನ ಯಾ ಅದರನ್ನು ಕ್ರಮ ಪಡಿಸುವಿಕೆ ಇವುಗಳನ್ನು ಕುರಿತು ತರಲ್ಪಟ್ಟ ದಾವೆಗಳು.

ಗರವರ್ನಮೆಂಟಿನವರ ಫೈಸಲ್‌ಗಳು ಆಖೈರಾಗಿರತಕ್ಕದ್ದು.

“222. ಹಿಂದಿನ ಕಡೇ ಸೆಕ್ಷನಿನಲ್ಲಿ ನಮೂದಿಸಲ್ಪಟ್ಟಿರುವ ವಿಶಿಷ್ಟ ವಿಷಯಗಳಲ್ಲಿಯೂ, ಗವರ್ನಮೆಂಟಿನವರ ಫೈಸಲ್ ಆಖೈರಾಗಿರತಕ್ಕದ್ದು.

ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್ 222. (*b*) ವ (*c*) ಕ್ಲಾಜ್‌ಗಳು, ಮತ್ತು ಕಡೇ ಪ್ಯಾರಾ.

ಕೆಲವು ದಾವೆಗಳ ಆತಂಕ.

“223. 221ನೇ ಸೆಕ್ಷನಿನಲ್ಲಿ ಕಂಡ ಯಾವ ಅಂಶವೂ ಇದರಡಿ ಕಂಡ ವ್ಯಾಜ್ಯಗಳನ್ನು ದಾಖಲ್ಮಾಡುವದರ ದೆಶೆಯಿಂದ ಸಿವಿಲ್ ಕೋರ್ಟಿನವರನ್ನು ಅಡ್ಡೀ ಮಾಡತಕ್ಕದ್ದಾಗಿ ಎಣಿಸತಕ್ಕದ್ದಲ್ಲವು.

(*a*) ಯಾವದಾದರೂ ಸ್ವಂತ ಹಕ್ಕು ರೆವಿನ್ಯೂ ಸರ್ವೇ ಅಥವಾ ಸೆಟಲ್‌ಮೆಂಟಿನ ಯಾವ ರಿಕಾರ್ಡಿನಲ್ಲಾಗಲಿ, ಗ್ರಾಮದ ಯಾವ ಕಾಗದ ಪತ್ರಗಳಲ್ಲಾಗಲಿ, ಯಾವ ದಾಖಲೆಯಿಂದಾದರೂ ಬಾಧಕವಾಗಬಹುದಾದಾಗ್ಯೂ ಅಂತಾ ಹಕ್ಕುದಾರಿಯನ್ನು ಸ್ಥಾಪಿಸುವ ಬಗ್ಯೆ ಜನಗಳಲ್ಲಿ ಪರಸ್ಪರ ದಾವೆಗಳು. ಅಥವಾ, 1865ನೇ ಇಸವಿಯ Iನೇ ನಂಬರ್ ಮುಂಬೈ ಆಕ್ಟನ್ನನುಸರಿಸಿಯಾಗಲಿ, ಈ ರೆಗ್ಯುಲೇಷನ್ ಅನುಸರಿಸಿಯಾಗಲಿ, ತತ್ಕಾಲದೊಳು ಜಾರಿಯಲ್ಲಿರುವ ಯಾವದಾದರೂ ಇತರ ಕಾನೂನ್ ಅನುಸರಿಸಿ ಯಾಗಲಿ, ಮಾಡಲ್ಪಡುವ ಸರಹದ್ದುಗಳ ಫೈಸಲಾತಿಯನ್ನು ಕುರಿತ ದಾವೆಗಳು ; ಮತ್ತು,

(*b*) ಈ ರೆಗ್ಯುಲೇಷನಿನಿಂದ ಸ್ಪಷ್ಟವಾಗಿ ಅನ್ಯಥಾ ವಿಧಿಸಲ್ಪಡದೆ ಇರುವ ವಿಷಯಗಳಲ್ಲಿ ಮೇಲ್ಪಟ್ಟ ಹಿಡುವಳೀದಾರರಿಗೂ ಕಮಿ ಹಿಡುವಳೀದಾರರಿಗೂ ಮಧ್ಯೆ ಉಂಟಾಗುವ ದಾವೆಗಳು.

ಕೆಲವು ಇತರ ದಾವೆಗಳ ಆತಂಕ.

“224. 221ನೇ ಸೆಕ್ಷನಿನಲ್ಲಿ ಕಂಡ ಯಾವ ಅಂಶವೂ ಇದರಡಿ ಕಂಡ ವ್ಯಾಜ್ಯಗಳನ್ನು ದಾಖಲ್ಮಾಡುವದರ ದೆಸೆಯಿಂದ ಸಿವಿಲ್ ಕೋರ್ಟಿನವರನ್ನು ಅಡ್ಡಿ ಮಾಡತಕ್ಕದ್ದಾಗಿ ಎಣಿಸತಕ್ಕದ್ದಲ್ಲವು. ಸರ್ಕಾರ್ ಮೊಬಲಗಿನ ಯಾ ಕಾಗದ ಪತ್ರಗಳ ವಿಷಯದಲ್ಲಾಗಲಿ, ಅಥವಾ ಇತರ ಸರ್ಕಾರೀ ಸ್ವತ್ತನ್ನು ಕುರಿತಾಗಲಿ ಅಥವಾ, ಕಮಿಷನ್ ಪಡೆದಿರುವಂತವರಿಗೆ ಸಲ್ಲಬೇಕಾದ ಜಮೀನ್ ಕಂದಾಯ ಯಾ ತೀರ್ವೆಯ ಬಗ್ಯಾಗಲಿ, ಅಥವಾ, 27,102, ಯಾ 170ನೇ ಸೆಕ್ಷನ್‌ಗಳನ್ನನುಸರಿಸಿ, ಬರೆದು ಕೊಡಲ್ಪಡುವ ಜಾಮೀನ್ ಪತ್ರ ಪ್ರಕಾರ ವಸೂಲಾಗಿ ಗವರ್ನಮೆಂಟಿಗೆ ಸಲ್ಲಬೇಕಾದ ಜಮೀನ್ ಕಂದಾಯದ ಬಗ್ಯಾಗಲಿ, ಅಥವಾ 102 ವ 170ನೇ ಸೆಕ್ಷನ್‌ಗಳನ್ನನುಸರಿಸಿ ತಕರಾರ್ ನಿಶಿಪಾವತಿ ಮಾಡಲ್ಪಟ್ಟ ಯಾವದಾದರೂ ಮೊಬಲಗಿನ ವಸೂಲೀ ವಿಷಯದಲ್ಲಾಗಲಿ, ಅಥವಾ XIನೇ ಅಧ್ಯಾಯವನ್ನನುಸರಿಸಿದ ಕ್ರಮದಿಂದುಂಟಾದ ಹುಟ್ಟುವಳಿಯ ವಿಷಯವಾಗಿಯಾಗಲಿ ತರಲ್ಪಟ್ಟ ದಾವೆಗಳು.

(1) ಅಂತಾ ದಾವೆಗಳು ಯಾವಾಗ ಈ ಕಾರಣವುಳ್ಳದ್ದಾಗಿರುವವೋ ಅಂದರೆ, ಜಮೀನ್ ಕಂದಾಯವೆಂದು ತಗಾದೆ ಮಾಡಲ್ಪಟ್ಟ ಯಾ ತಕರಾರ್‌ನಿಶಿ ಪಾವತಿ ಮಾಡಲ್ಪಟ್ಟ ಯಾ ವಸೂಲ್ಮಾಡಲ್ಪಟ್ಟ ಮೊಬಲಗು ಗವರ್ನ್‌ಮೆಂಟಿನವರಿಂದ ನಿಯಮಿಸಲ್ಪಟ್ಟ ಮೊಬಲಗಿಗೆ ಜಾಸ್ತೀ ಇರುತ್ತೆಂಬದಾಗಿ ದಾವೆ ತರಲ್ಪಟ್ಟದ್ದರೆ.

(2) ಹಾಗೆ ತಗಾದೆ ಮಾಡಲ್ಪಟ್ಟ ಯಾ ತಕರಾರ್‌ನಿಶಿ ಪಾವತಿ ಮಾಡಲ್ಪಟ್ಟ ಯಾ ವಸೂಲ್ಮಾಡಲ್ಪಟ್ಟದ್ದಕ್ಕೆ ಮುಂಚಿತವಾಗಿಯೇ ಸದರೀ ತಗಾದೆ ಮೊಬಲಗು ಕ್ರಮವಾಗಿ ಪಾವತಿಯಾಗಿರುತಿದೆಂಬದಾಗಿ ದಾವೆ ತರಲ್ಪಟ್ಟದ್ದಾದರೆ,

(3) ವಾದಿಯ ಮೇಲಾಗಲಿ, ಅಥವಾ ಅವನು ಯಾರಿಗೆ ಪ್ರತಿನಿಧಿಯಾಗಿರುತ್ತಾನೆಯೋ ಆ ಮನುಷ್ಯನ ಮೇಲಾಗಲಿ ಅಂತಾ ಮೊಬಲಗಿಗಾಗಿ ದಾವೆ ತರಲ್ಪಡಲಿಕ್ಕೆ ಅವನು ಗುರಿಯಾಗಲಾರನೆಂಬ ಸಬಬಿನ ಮೇಲೆ ದಾವೆ ತರಲ್ಪಟ್ಟರೆ.

ಹೊಸದು.

ಡೆಪ್ಯುಟಿ ಕಮ್ಮಿಷನರ್‌ಗಳ ಮೇಲಿನ ದಾವೆಗಳು.

225. ಹಿಂದಿನ ಕಡೇ ಸೆಕ್ಷನ್ ಅನುಸರಿಸಿ ತರಲ್ಪಡತಕ್ಕ ಪ್ರತಿಯೊಂದು ದಾವೆಯಲ್ಲಿಯೂ ವ್ಯಾಜ್ಯಕಾರಣ ಎಲ್ಲಿ ಉಂಟಾಯಿತೋ ಆ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರನ್ನು ಅವರ ಸರ್ಕಾರೀ ಉದ್ಯೋಗ ನಿಮಿತ್ತದಿಂದ ಕಕ್ಷಿಗಾರರನ್ನಾಗಿ ಮಾಡತಕ್ಕದ್ದು.

ಮೈಸೂರ ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್ 223 2ನೇ ಪ್ಯಾರಾ.

ಡೆಪ್ಯುಟಿ ಕಮ್ಮಿಷನರ್‌ಗಳ ಮೇಲೆ ತರಲ್ಪಡುವ ಕೆಲವು ದಾವಗಳ ಆತಂಕ.

"226. ಯಾವ ರೆವಿನ್ಯೂ ಆಫಿಸರಾಗಲಿ, ತನ್ನ ಇಲಾಖಾ ಮೊಖ್ತೇಸರರು ನಿಯಮಿಸಿದಾಗ ಫರಾರಿಯಾದರೆ ಅಥವಾ ಹಾಜರಾಗದೆ ಇದ್ದರೆ, ಮತ್ತು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಈ ರೆಗ್ಯುಲೇಷನಿನ ಅಥವಾ ತತ್ಕಾಲದೊಳಗೆ ಜಾರೀ ಇರುವ ಯಾವದಾದರೂ ಕಾನೂನಿನ ನಿಬಂಧನೆಗಳನ್ನನುಸರಿಸಿ ಸರ್ಕಾರ್ ಹಣಕ್ಕಾಗಿ ಕಾಗದ ಪತ್ರಗಳಿಗಾಗಿ ಅಥವಾ ಸ್ವತ್ತಿಗಾಗಿ ಸದರೀ ರೆವಿನ್ಯೂ ಆಫಿಸರ್ ಮೇಲೆ ಅಥವಾ ಅವನ ಜಾಮೀನ್‌ದಾರರ ಮೇಲೆ ಫಿರ್ಯಾದ್ ಮಾಡಿದರೆ, ಅಂತಾ ಡೆಪ್ಯುಟಿ ಕಮ್ಮಿಷನರ್, ಅಂತಾ ಆಫಿಸರಿಂದ ಅಥವಾ ಜಾಮೀನ್‌ದಾರರಿಂದ ತಮ್ಮ ಮೇಲೆ ತರಲ್ಪಟ್ಟ ಯಾವ ದಾವೆಯಲ್ಲಾಗಲಿ ತಗಾದೆ ಮಾಡಲ್ಪಟ್ಟ ಮೊಬಲಗು ಪೈಕಿ ಆ ಮೇರೆ ತಪ್ಪಿಸಿ ಕೊಂಡು ಹೋದ, ಅಥವಾ ಹಾಜರಾಗಲಿಕ್ಕೆ ತಪ್ಪಿದ ಆಫಿಸರಿಂದ ಒಂದು ಭಾಗ ಮಾತ್ರವೇ ಸಲ್ಲ ಬೇಕಾಗಿತ್ತೆಂದು' ಯಾ ಯಾವ ಭಾಗವೂ ಸಲ್ಲಬೇಕಾದ್ದಿಲ್ಲವೆಂದು ಅಥವಾ ಅವನಿಂದ ತಗಾದೆ ಮಾಡಲ್ಪಟ್ಟ ಪತ್ರಗಳು ಅಥವಾ ಸ್ವತ್ತು ಆತನ ವಶದಲ್ಲಿಲ್ಲವೆಂದು ಕಾಣಬಂದಾಗ್ಯೂ, ನುಕ್ಸಾನ್‌ಗಳನ್ನಾಗಲಿ, ಖರ್ಚುಗಳನ್ನಾಗಲಿ, ಕೊಡಲಿಕ್ಕೆ ಗುರಿಯಾಗತಕ್ಕದ್ದಲ್ಲವು.

ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್ 224

ರೆವಿನ್ಯೂ ಆಫಿಸರ್‌ಗಳ ದಂಡನೆಯಾಗಲಿ ಯಾ ಕ್ರಿಮಿನಲ್ ವಿಚಾರಣೆಯಾಗಲಿ, ಸಿವಿಲ್ ದಾವೆಗಳಿಗೆ ಆತಂಕವಲ್ಲವು.

"227. ಯಾವ ತಕ್ಸೀರ್‌ಗೋಸ್ಕರವಾಗಲಿ, ಕರ್ತವ್ಯದ ಉಲ್ಲಂಘನೆಗೋಸ್ಕರವಾಗಲಿ, ಇಲಾಖಾ ಮೂಲಕವಾದ ದಂಡನೆಯನ್ನು ಯಾರಾದರೂ ಒಬ್ಬ ರೆವಿನ್ಯೂಆಫಿಸರಿಗೆ ವಿಧಿಸುವ ಅಥವಾ ಅಂತಾ ತಕಸೀರಿಗಾಗಿ ಯಾ ಉಲ್ಲಂಘನೆಗಾಗಿ ಕ್ರಿಮಿನಲ್ ತರಫ್ ಫಿರ್ಯಾದ್ ಮಾಡಲ್ಪಡತಕ್ಕದ್ದನ್ನು ಮಂಜೂರ್ಮಾಡುವ, ತತ್ಕಾಲದಲ್ಲಿ ಜಾರಿಯೊಳಿರುವ ಯಾವ ಕಾನೂನ್ನಲ್ಲಿಯಾಗಲಿ, ಇರುವ ಯಾವ ಅಂಶವೂ ಅಂತಾ ಆಫಿಸರರ ಮೇಲೆ ಸಿವಿಲ್ ಕೋರ್ಟ್ನಲ್ಲಿ ಪಡೆಯಬಹುದಾದ ಯಾವ ಪರಿಹಾರವನ್ನಾಗಲಿ, ನಿರೋಧಿಸುವದಾಗಿ ಎಣಿಸತಕ್ಕದ್ದಲ್ಲವು.

ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್ 226.

ಚೀಫ್ ಕೋರ್ಟಿನ ಫೈಸಲ್ ಬಗ್ಗೆ ಅಂಶಗಳನ್ನು ರಿಫರ್‌ಮಾಡಲಿಕ್ಕೆ ಗವರ್ನ್‌ಮೆಂಟಿನವರ ಅಧಿಕಾರ.

“228. ಈ ಅಧ್ಯಾಯದ ನಿಬಂಧನೆಗಳಿಲ್ಲದೇ ಇದ್ದರೆ ಯಾವ ದಾವೆ, ಹಕ್ಕು ಯಾ ಆಕ್ಷೇಪಣೆಯು ಒಂದು ಸಿವಿಲ್ ಕೋರ್ಟಿನಿಂದ ದರ್ಯಾಫ್ತಿ ಯಾ ತನಿಖಿ ಮಾಡಲ್ಪಟ್ಟಿರಬಹುದಾಗಿತ್ತೋ ಅಂತಾ ದರ್ಯಾಫ್ತಿ ಯಾ ತನಿಖಿಯಲ್ಲಿ, ಅಥವಾ ಅಂತಾ ದರ್ಯಾಫ್ತಿ ಯಾ ತನಿಖಿಯಲ್ಲಿ ಕೊಡಲ್ಪಟ್ಟ ಹುಕುಂ ಮೇಲಣ ಯಾವದಾದರೂ ಅಪೀಲ್‌ನಲ್ಲಿ ಗವರ್ನ್‌ಮೆಂಟಿನವರು ತಮ್ಮ ಸ್ವಂತ ಇರಾದೆ ಯಾ ಡೆಪ್ಯುಟಿ ಕಮ್ಮಿಷನರ ಶಿಫಾರಸ್ ಯಾ ಸಂಬಂಧಿಸಿದ ಕಕ್ಷಿಗಾರನ ಖಾಯಿಷ್ ಮೇಲೆ ಚೀಫ್ ಕೋರ್ಟಿನವರ ಫೈಸಲನ್ನು ಪಡೆಯಬೇಕಾದ ಅಂಶವೇನಾದರೂ ತಿಳಿಯಬಂದಲ್ಲಿ ಗವರ್ನ್‌ಮೆಂಟಿನವರು ಸದರೀ ಅಂಶದ ತಪಸೀಲನ್ನು ತಯಾರ್ಮಾಡಿಸಿ ಅಂತಾ ಅಂಶವನ್ನು ಚೀಫ್ ಕೋರ್ಟಿನ ಫೈಸಲ್ ಬಗ್ಗೆ ರಿಫರ್ ಮಾಡಬಹುದು.

ಚೀಫ್ ಕೋರ್ಟಿನವರು ತಮಗೆ ರಿಫರಾದ ಅಂಶದ ವಿಚಾರಣೆಯಬಗ್ಗೆ ಒಂದು ಸಮೀಪ ದಿನವನ್ನು ನಿಶ್ಚೈಸಿ ಅಂತಾ ದಿನದ ನೋಟಿಸನ್ನು ಕೋರ್ಟು ಮಾಡುವ ಸ್ಥಳದಲ್ಲಿ ಚಿಕಟಾಯಿಸತಕ್ಕದ್ದು.

ಮೊಕದ್ದಮೆಯ ಕಕ್ಷಿಗಾರರು ರೂಬರೂ ಆಗಲಿ ಅವರುಗಳ ಅಡ್ವೊಕೇಟ್ ಯಾ ಪ್ಲೀಡರ್‌ಗಳಮೂಲಕವಾಗಲಿ ಚೀಫ್‌ಕೋರ್ಟಿನಲ್ಲಿ ಹಾಜರಾಗಿವಿಚಾರಣೆಮಾಡಲ್ಪಡಬಹುದು.

ಚೀಫ್ ಕೋರ್ಟಿನವರು ಮೊಕದ್ದಮೆಯನ್ನು ಕೇಳಿ ವಿಮರ್ಶಿಸಿದಲ್ಲಿ ಸದರೀ ಕೋರ್ಟಿನ ಫೈಸಲ್ ನಕಲನ್ನು ಅದರ ಕಾರಣಗಳು ಸಹಿತ ಕೋರ್ಟು ಮೊಹರ್‌ನೊಡನೆ ಮೊಕದ್ದಮೆ ರಿಫರ್ ಮಾಡಿದ ಗವರ್ನ್‌ಮೆಂಟಿಗೆ ಕಳುಹಿಸತಕ್ಕದ್ದು. ಮತ್ತು ಸದರೀ ಮೊಕದ್ದಮೆಯು ಅಂತಾ ಫೈಸಲಿಗೆ ಅನುಗುಣವಾಗಿ ವ್ಯವಸ್ಥೆ ಮಾಡಲ್ಪಡತಕ್ಕದ್ದು.

ಅಂತಾ ಯಾವ ತಪಸೀಲಾಗಲಿ ಸಂಪೂರ್ಣ ವಿವರದೊಂದಿಗೆ ತಯಾರ್ಮಾಡಲ್ಪಟ್ಟಿಲ್ಲವೆಂದು ಚೀಫ್ ಕೋರ್ಟಿನವರು ಭಾವಿಸಿದರೆ ಅವರು, ಸದರೀ ತಪಸೀಲನ್ನು ತಿದ್ದುಪಾಟು ಬಗ್ಗೆ ವಾಪಸ್ ಮಾಡಬಹುದು.

ಅಂತಾ ಯಾವ ರೆಫರೆನ್ಸ್‌ಗೋಸ್ಕರವಾಗಲಿ ಖರ್ಚು ಏನಾದರೂ ಉಂಟಾದರೆ ಆ ವಿಷಯದಲ್ಲಿ ಪ್ರತಿ ಮೊಕದ್ದಮೆಯಲ್ಲಿಯೂ, ಚೀಫ್ ಕೋರ್ಟಿನವರು ನಿಯಮಿಸುವ ಪ್ರಕಾರ ನಡಿಸಲ್ಪಡತಕ್ಕದ್ದು.

ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್ 227.

ಯಖ್ತ್ಯಾರಿಯನ್ನು ಕುರಿತ ಸಂಗತಿಗಳನ್ನು ಚೀಫ್ ಕೋರ್ಟಿಗೆ ರಿಫರ ಮಾಡಲಿಕ್ಕೆ ಸಿವಿಲ್ ಜಡ್ಜಿಯವರ ಅಧಿಕಾರ.

“229. ಒಂದು ಸಿವಿಲ್ ಕೋರ್ಟಿನಲ್ಲಿ ದಾಖಲ್ಮಾಡಲ್ಪಟ್ಟ ಯಾವ ದಾವೆಯಲ್ಲಾಗಲಿ ಯಾವ ಅಪೀಲ್‌ನಲ್ಲಾಗಲಿ, ಜಡ್ಜಿಯು ತಾನು ಈ ಅಧ್ಯಾಯದಿಂದ ಸದರೀ ದಾವೆಯನ್ನಾಗಲಿ, ಅಪೀಲನ್ನಾಗಲಿ ಹಿಡಿಯುವದರ ದೆಸೆಯಿಂದ ಅಡ್ಡಿ ಮಾಡಲ್ಪಟ್ಟಿರುವದಾಗಿ ಸಂದೇಹಪಟ್ಟರೆ ಆ ಅಂಶವನ್ನು ಚೀಫ್ ಕೋರ್ಟಿಗೆ ರಿಫರ್ ಮಾಡಬಹುದು. ಚೀಫ್ ಕೋರ್ಟಿನವರು, ರಿಫರ್ ಮಾಡುವ ಜಡ್ಜೀರಿಗೆ ಮೊಕದ್ದಮೆಯನ್ನು ನಡಿಸುವಂತೆಯಾಗಲಿ ದಾವಾ ಅರ್ಜಿಯನ್ನು ವಾಪಸ್ ಮಾಡುವಂತೆಯಾಗಲಿ, ಹುಕುಂ ಮಾಡಬಹುದು.

ಅಂತಾ ಯಾವ ರೆಫರೆನ್ಸಿನ ಮೇಲಾಗಲಿ, ಚೀಫ್ ಕೋರ್ಟಿನ ಹುಕುಂ ಆಖೈರಾದ್ದಾಗಿರತಕ್ಕದ್ದು.

ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್ 228.

ಜಡ್ಜಿಗಳ ಬೆಂಚಿನ ಶೇರಿಕೆ.

“230. ಚೀಫ್ ಕೋರ್ಟಿನಲ್ಲಿ ಮೂವರು ಅಥವಾ ಹೆಚ್ಚುಮಂದಿ ಜಡ್ಜಿಗಳು ಇದ್ದಲ್ಲಿ 228 ಯಾ 229ನೇ ಸೆಕ್ಷನ್ ಅನುಸರಿಸಿ ಮಾಡಲ್ಪಡುವ ಪ್ರತಿ ರೆಫರೆನ್ಸೂ ಅಂದರೆ ವಿಚಾರಣೆಗಾಗಿ ಕಳುಹಿಸಲ್ಪಡುವ ಪ್ರತಿ ಸಂಗತಿಯೂ, ಚೀಫ್ ಜಡ್ಜಿಯವರು ಆಗಿಂದಾಗ್ಗೆ ನಿಯಮಿಸುವಂತೆ ಮೂರುಮಂದಿಗೆ ಕಡಮೆ ಇಲ್ಲದ ಜಡ್ಜಿಗಳುಳ್ಳ ಒಂದು ಬೆಂಚಿನವರಿಂದ ವಿಚಾರಿಸಲ್ಪಡತಕ್ಕದ್ದು.”

5. ಈ ರೆಗ್ಯುಲೇಷನ್ ಮಂಜೂರಾದ ಮೇಲೆ ಜಾರಿಯಲ್ಲಿ ಬರತಕ್ಕದ್ದು.

LEGISLATIVE DEPARTMENT.

ಮೈಸೂರು ಗವರ್ನಮೆಂಟ್.

ಲೆಜಿಸ್ಲೇಟಿವ್ ಇಲಾಖಾ.

189 ನೇ ಇಸವಿಯ ನೇ ನಂಬರ್ ರೆಗ್ಯುಲೇಷನ್.

ಜ್ಯುಡಿಷಿಯಲ್ ಪೋಲೀಸ್ ರೆವಿನ್ಯೂ ವ ಇತರ ಸರ್ಕಾರ್ ಆಫೀಸರ್‌ಗಳ ಸಂರಕ್ಷಣೆಯ ಬಗ್ಯೆ ಏರ್ಪಟ್ಟ ರೆಗ್ಯುಲೇಷನ್.

ಪೀಠಿಕೆ.

ಜ್ಯುಡಿಷಿಯಲ್ ಪೋಲೀಸ್ ರೆವಿನ್ಯೂ ವ ಇತರ ಸರ್ಕಾರ್ ಆಫೀಸರ್‌ಗಳ ವಿಶೇಷ ಸಂರಕ್ಷಣೆಯ ಬಗ್ಯೆ ಮೈಸೂರ್ ಗವರ್ನಮೆಂಟಿನವರು ಇದರಡಿ ಕಂಡ ಪ್ರಕಾರ ವಿಧಿಸಿರುತ್ತಾರೆ.

ಅರ್ಥವಿವರಣೆ.

1. ಈ ರೆಗ್ಯುಲೇಷನಿನಲ್ಲಿ ಕಂಡ "ಪಬ್ಲಿಕ್ ಆಫೀಸರ್" ಎಂಬ ಮಾತುಗಳಿಗೆ, ಸಿವಿಲ್ ಪ್ರೊಸಿಡ್ಯೂರ್ ಕೋಡಿನಲ್ಲಿ ವಿವರಿಸಿರುವಂತೆ ಪಬ್ಲಿಕ್ ಆಫೀಸರೆಂದು ಅರ್ಥವಾಗತಕ್ಕದ್ದಲ್ಲದೆ; "ಮೈಸೂರ್ ಲ್ಯಾಂಡ್ ರೆವಿನ್ಯೂಕೋಡಿನಲ್ಲಿ ವಿವರಿಸಿರುವಂತೆ ಪಬ್ಲಿಕ್ ರೆವಿನ್ಯೂ ಆಫೀಸರೆಂಬ ಅರ್ಥವನ್ನು ಸಹ ಅವು ಅಡಗಿಸಿಕೊಂಡಿರುತಿವೆ.

ಜ್ಯುಡಿಷಿಯಲ್ ಆಫೀಸರ್‌ಗಳ ಸಂರಕ್ಷಣೆಯ ಬಗ್ಯೆ ಹುಟ್ಟಿದ 1850ನೇ ಇಸವಿಯ XVIIIನೇ ನಂಬರ್ ಆಕ್ಟಿನ 1ನೇ ಸೆಕ್ಷನ್.

ನ್ಯಾಯವಾಗಿ ನಡೆಯತಕ್ಕ ಆಫೀಸರ್‌ಗಳು ಒಳ್ಳೇ ನಂಬಿಕೆಯೊಡನೆ ಉದ್ಯೋಗ ಧರ್ಮದಲ್ಲಿ ಮಾಡುವ ಕೃತ್ಯಗಳಿಗಾಗಿ ಸದರೀ ಆಫೀಸರ್‌ಗಳೂ, ವಾರಂಟುಗಳನ್ನು ವ ಹುಕುಂಗಳನ್ನು ಜಾರೀಮಾಡತಕ್ಕ ಆಫೀಸರ್‌ಗಳೂ ದಾವೆಗೆ ಜವಾಬ್ದಾರರಾಗತಕ್ಕದ್ದಲ್ಲವು.

2. ನ್ಯಾಯವಾಗಿ ನಡೆಯುವಂತ ಯಾವ ಜಡ್ಜ್, ಮ್ಯಾಜಿಸ್ಟ್ರೇಟ್, ರೆವಿನ್ಯೂ ಆಫೀಸರ್ ಯಾ ಇತರ ಮನುಷ್ಯನು ತನ್ನ ಅಧಿಕಾರ ಸರಹದ್ದಿನೊಳಾಗಲಿ, ಅಥವಾ ಅನ್ಯತ್ರ ಆಗಲಿ ತನ್ನ ನ್ಯಾಯವಾದ ಕೆಲಸವನ್ನು ನೆರವೇರಿಸುವದರಲ್ಲಿ ತಾನಾಗಿ ಮಾಡಿದಂತಾ ಅಥವಾ ತನ್ನ ಹುಕುಂ ಅನುಸರಿಸಿ ಮಾಡಲ್ಪಟ್ಟಂತಾ ಯಾವ ಕೆಲಸಕ್ಕೋಸ್ಕರವಾಗಲಿ, ಆತನ ಮೇಲೆ ಯಾವ ಸಿವಿಲ್‌ಕೋರ್ಟಿನಲ್ಲೂ ವ್ಯವಹಾರ ನಡೆಸಲ್ಪಡತಕ್ಕದ್ದಲ್ಲವು. ಪರಂತು ಸದರೀ ಆಫೀಸರ್ ಫಿರ್ಯಾದಿಗೆ ಕಾರಣವಾದ ಕೃತ್ಯವನ್ನು ತಾನು ಜರಿಗಿಸಲಿಕ್ಕೆ ಯಾ ಜರಗಲು ಹುಕುಂ ಕೊಡಲಿಕ್ಕೆ ತತ್ಕಾಲದಲ್ಲಿ ತನಗೆ ಅಧಿಕಾರವಿರುವಂತೆ ನಂಬಿರತಕ್ಕದ್ದು. ಅಂತಾ ಮ್ಯಾಜಸ್ಟ್ರೇಟ್ ಯಾ ರೆವಿನ್ಯೂ ಆಫೀಸರ್ ಅಥವಾ ನ್ಯಾಯವಾಗಿ ನಡೆಯುವ ಇತರ ಮನುಷ್ಯನ ನ್ಯಾಯಪ್ರಕಾರವಾದ ವಾರಂಟುಗಳನ್ನು ಯಾ ಹುಕುಂಗಳನ್ನು ಜಾರಿ ಮಾಡಲಿಕ್ಕೆ ಬದ್ಧನಾದ ಯಾವ ಕೋರ್ಟಿನ ಆಫೀಸರಾಗಲಿ, ಯಾ ಇತರ ಮನುಷ್ಯನಾಗಲಿ ಅಂತಾ ವಾರಂಟ್ ಯಾ ಹುಕುಮನ್ನು ಸಾದರ್ ಮಾಡುವ ಮನುಷ್ಯನ ಯಖ್ತ್ಯಾರಿ ಸರಹದ್ದಿನೊಳಗಿದ್ದರೆ ಅದನ್ನು ಜಾರಿ ಮಾಡಲು ತಾನು ಬದ್ಧನಾಗಿರುವ ಯಾವ ವಾರಂಟ್ ಯಾ ಹುಕುಮನ್ನು ಜಾರಿ ಮಾಡಿದ್ದಕ್ಕಾಗಿ ಯಾವ ಸಿವಿಲ್ ಕೋರ್ಟಿನಲ್ಲಿಯೂ ವ್ಯವಹಾರಕ್ಕೆ ಗುರಿಯಾಗತಕ್ಕದ್ದಲ್ಲವು.

1861ನೇ ಇಸವಿಯ Vನೇ ನಂಬರ್ ಆಕ್ಟಿನ 43ನೇ ಸೆಕ್ಷನ್.

ಪೋಲೀಸ್ ಆಫೀಸರ್‌ಗಳ ರಕ್ಷಣೆ.

3. ಯಾವ ಪೋಲೀಸ್ ಉದ್ಯೋಗಸ್ಥನಾದರೂ ಅಂಥಾ ಪೋಲೀಸ್ ಉದ್ಯೋಗದಲ್ಲಿ ಯಾವ ಕೃತ್ಯವನ್ನಾಗಲಿ ಮಾಡಿದ್ದಕ್ಕೋಸ್ಕರ ಅವನ ಮೇಲೆ ಯಾವ ದಾವೆ ಯಾ ಫಿರ್ಯಾದ್, ತರಲ್ಪಡುವ ಪಕ್ಷಕ್ಕೆ ಮ್ಯಾಜಸ್ಟ್ರೇಟಿನಿಂದ ಕೊಡೋಣಾದ ವಾರಂಟಿನ ಅಧಿಕಾರದ ಮೇರೆ ತನ್ನಿಂದ ಅಂಥಾ ಕೃತ್ಯ ನಡಿಸಲ್ಪಟ್ಟಿತೆಂದು ವಾದಿಸುವದು ಅವನಿಗೆ ನ್ಯಾಯವಾಗಿರತಕ್ಕದ್ದು. ಆ ಕೃತ್ಯವನ್ನು ಮಾಡುವಂತೆ ನಿಯಮಿಸುವಂಥಾ ಮತ್ತು ಅಂಥಾ ಮ್ಯಾಜಿಸ್ಟ್ರೇಟಿನಿಂದ ದಸ್ತಖತ್ ಮಾಡಲ್ಪಡತಕ್ಕದ್ದಾಗಿ ಭಾವ ಕೊಡುವಂಥಾ ವಾರಂಟನ್ನು ಹಾಜರ್ಮಾಡೋಣಾದರ ದೆಸೆಯಿಂದ ಅಂಥಾ ಸಬಬು ರುಜುವಾಗತಕ್ಕದ್ದು. ಅಂಥಾ ಮೇಜಿಸ್ಟ್ರೇಟನ ಅಧಿಕಾರಕ್ಕೆ ಯೇನು ನ್ಯೂನತೆ ಇದ್ದಾಗ್ಯೂ ಬಾಧಕವಿಲ್ಲವು. ಅದರ ಮೇಲೆ ಪ್ರತಿವಾದಿಯು ತನ್ನ ಪಕ್ಷದಲ್ಲಿ ಫೈಸಲ್ ಹೊಂದುವದಕ್ಕೆ ಅರ್ಹನಾಗಿರತಕ್ಕದ್ದು ಅಂಥಾ ಮ್ಯಾಜಸ್ಟ್ರೇಟಿನ ದಸ್ತಖತ್ ನಿಜವಾದ್ದೆಂಬುವ ವಿಷಯದಲ್ಲಿ ಕೋರ್ಟಿನವರಿಗೆ ಸಂದೇಹಕ್ಕೆ ಕಾರಣವಿದ್ದ ಹೊರತು ಅಂಥಾ ಮ್ಯಾಜಿಸ್ಟ್ರೇಟಿನ ದಸ್ತಖತ್ತಿನ ರುಜುವಾತ್ ಜರೂರಾಗಿರುವದಿಲ್ಲವು.

ಪರಂತು ಅಂಥಾ ವಾರಂಟನ್ನು ಕೊಟ್ಟ ಅಧಿಕಾರಿಯ ಮೇಲೆ ಕಕ್ಷಿಗಾರನು ಪಡೆಯಬಹುದಾದ ಯಾವ ಪರಿಹಾರವೂ ಈ ಸೆಕ್ಷನಿನಲ್ಲಿ ಅಡಗಿರುವ ಯಾವ ಅಂಶದಿಂದಲೂ ಯಾವಾಗಲೂ ಬಾಧಕಪಡಿಸಲ್ಪಡಲಾರದು.

ನಿಯಮ,

ಮೈಸೂರ್‌ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್ 223, 1ನೇ ಪ್ಯಾರಾ ಮೂರ್ ಎಂಬವರ ಇಂಡಿಯನ್ ಲಾ ರಿಪೋರ್ಟಿನ 4ನೇ ಸಂಚಿಕೆಯ 353ನೇ ಪುಟದಲ್ಲಿ ನಮೂದಿಸಿರುವ ವಾದಿ, ಸ್ಪೂನರ್, ಪ್ರತಿವಾದಿ ಜಡೋಃ ಎಂಬವರ ವ್ಯವಹಾರದಲ್ಲಿ ಮಾಡಲ್ಪಟ್ಟ ತೀರ್ಮಾನ.

ಗವರ್ನಮೆಂಟ್ ಉದ್ಯೋಗಸ್ಥರ ಮೇಲಿನ ದಾವೆಗಳ ಆತಂಕ.

4. ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಕಾನೂನಿನ ನಿಬಂಧನೆಗಳನುಸರಿಸಿ, ಯಾ ಗವರ್ನಮೆಂಟಿನವರ ಸಾಮಾನ್ಯ ಯಾ ವಿಶೇಷ ಹುಕುಂ ಅನುಸರಿಸಿ ಗವರ್ನಮೆಂಟ್ ಆಫಿಸರರು ತಮ್ಮ ಉದ್ಯೋಗ ನಿರ್ವಹಣೆಯಲ್ಲಿ ನಡೆಸುವ ಅಥವಾ ತನ್ನ ಹುಕುಂಪ್ರಕಾರ ನಡೆಸಲ್ಪಡುವ ಯಾವದಾದರೂ ಕೃತ್ಯಕ್ಕಾಗಿ, ಸದರೀ ಕೃತ್ಯ ಮೇಲೆ ಕಂಡ ಕಾನೂನ್ ಯಾ ಗವರ್ನಮೆಂಟ್ ಹುಕುಂ ಅನುಸರಿಸಿ ಇರಲಿ ಯಾ ಇಲ್ಲದೇ ಇರಲಿ ಅವರು ಯಾವ ಸಿವಿಲ್ ಕೋರ್ಟಿನಲ್ಲೂ ವ್ಯವಹಾರಕ್ಕೆ ಗುರಿಯಾಗತಕ್ಕದ್ದಲ್ಲವು.

ಪರಂತು ಅಂಥಾ ಕೃತ್ಯವು ಮೇಲೆ ಕಂಡ ಕಾನೂನ್ ಯಾ ಗವರ್ನಮೆಂಟ್ ಹುಕುಂ ಅನುಸರಿಸಿದ್ದಾಗಿರದ ಪಕ್ಷಕ್ಕೆ ಸದರೀ ಆಫಿಸರ್ ಕೃತ್ಯ ನಡಿಸುವ ಕಾಲದಲ್ಲಿ ಮನಃಪೂರ್ವಕವಾಗಿ ಮೇಲೆ ಕಂಡ ಕಾನೂನ್ ಯಾ ಗವರ್ನಮೆಂಟ್ ಹುಕುಂ ಅನುಸರಿಸಿ ನೆಡೆಸಿದಂತೆ ನಂಬಿರತಕ್ಕದ್ದು.

ಮೈಸೂರ ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್ 225.

ವಾದಿಯು ಅಪೀಲಿನ ಹಕ್ಕನ್ನು ಪೂರೈಸಿಕೊಂಡ ಹೊರ್ತು ದಾವೆಗಳು ದಾಖಲ್ಮಾಡಿಕೊಳ್ಳಲ್ಪಡತಕ್ಕದ್ದಲ್ಲವು.

5. ಯಾವ ಪಬ್ಲಿಕ್ ಆಫಿಸರಿಂದ ನಡೆಸಲ್ಪಟ್ಟ ಸರ್ಕಾರೀ ಕೃತ್ಯ ಯಾ ಲೋಪಕ್ಕಾಗಿ ಆತನ ಮೇಲೆ ತರಲ್ಪಡುವ ದಾವೆಯಾಗಲಿ, ಅಂಥಾ ದಾವೆಯನ್ನು ತರುವ ಬಗ್ಗೆ ಅವಕಾಶ ಕೊಡಲ್ಪಟ್ಟ ಕಾಲದೊಳಗೆ ದಾಖಲ್ಮಾಡಲಿಕ್ಕೆ ಸಾಧ್ಯವಾದಷ್ಟು ಎಲ್ಲಾ ಅಪೀಲ್‌ಗಳನ್ನೂ ಆತನ ಮೇಲ್ಪಟ್ಟ ಅಧಿಕಾರಿಗಳಲ್ಲಿ ದಾಖಲ್ ಮಾಡಿರುವಂತೆ ವಾದಿಯು ತನ್ನ ದಾವೆಯನ್ನು ತರುವದಕ್ಕೆ ಮುಂಚಿತವಾಗಿ ರುಜುವಾತ್ ಕೊಟ್ಟ ಹೊರ್ತು ಯಾವ ಸಿವಿಲ್ ಕೋರ್ಟಿನವರಿಂದಲೂ ಅದು ಹಿಡಿಯಲ್ಪಡತಕ್ಕದ್ದಲ್ಲವು.

ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡ್ ಸೆಕ್ಷನ್ 229 ಮತ್ತು 1869ನೇ ಇಸವಿಯ XIVನೇ ನಂಬರ ಮುಂಬೈ ಮುಫಸಲ್ ಕೋರ್ಟುಗಳ ಆಕ್ಟಿನ 32ನೇ ಸೆಕ್ಷನ್.

ಗವರ್ನಮೆಂಟ್ ವ್ಯಾಜ್ಯಗಳನ್ನು ಡಿಸ್ಟ್ರಿಕ್ಟ್ ಜಡ್ಜಿಗಳಿಗೆ ರಿಫರ್ ಮಾಡುವಣ.

6. ಯಾವ ಗವರ್ನಮೆಂಟ್ ಆಫಿಸರಿಂದ ತಮ್ಮ ಉದ್ಯೋಗ ಧರ್ಮದಲ್ಲಿ ಒಂದು ಕೃತ್ಯ ನಡೆಸಲ್ಪಟ್ಟಿತೆಂದಾಗಲಿ ಅಥವಾ ಸದರೀ ಕೃತ್ಯವನ್ನು ಕುರಿತಾಗಲಿ, ಅವರ ಮೇಲೆ ತರಲ್ಪಡತಕ್ಕ ದಾವೆಯನ್ನು ಮುನ್ಸಫರಾಗಲಿ, ಸಬಾರ್ಡಿನೇಟ್ ಜಡ್ಜಿಯಾಗಲಿ ಸ್ಮಾಲ್‌ಕಾಜ್ ಕೋರ್ಟಿನವರಾಗಲಿ ಅಂಗೀಕರಿಸಲೂ ಕೂಡದು. ಯಾ ರಿಜಿಸ್ಟ್ರ ಮಾಡಿ ಕೊಳ್ಳಲೂ ಕೂಡದು. ಆದರೆ ಅಂಥಾ ಪ್ರತಿ ಮೊಕದ್ದಮೆಯಲ್ಲಿಯೂ ಅಂಥಾ ಮುನ್ಸಫರಾಗಲಿ, ಜಡ್ಜಿಯಾಗಲಿ, ಕೋರ್ಟಿನವರಾಗಲಿ, ಯಾವ ಡಿಸ್ಟ್ರಿಕ್ಟ್ ಜಡ್ಜಿಯ ಕೋರ್ಟಿನಲ್ಲಿ ಮಾತ್ರವೇ ಅಂಥಾ ದಾವೆಯು ದಾಖಲಾಗತಕ್ಕದ್ದೋ ಆ ಡಿಸ್ಟ್ರಿಕ್ಟ್ ಜಡ್ಜಿಗೆ ವಾದಿಯನ್ನು ರಿಫರ್ ಮಾಡತಕ್ಕದ್ದು.

ಮೈಸೂರ್ ಲ್ಯಾಂಡ್ ರೆವಿನ್ಯೂಕೋಡ್ ಸೆಕ್ಷನ್ 230.

ಗವರ್ನಮೆಂಟಿನವರು ಪ್ರತಿವಾದ ಮಾಡಿದ ಮೊಕದ್ದಮೆಗಳಲ್ಲಿ ಅವರ ಸ್ವಾತಂತ್ರ್ಯಗಳು.

7. ಯಾವ ಗವರ್ನಮೆಂಟ್ ಆಫಿಸರಿಂದ ನಡೆಸಲ್ಪಟ್ಟ ಒಂದು ಸರ್ಕಾರೀ ಕೃತ್ಯಕ್ಕಾಗಿ ಆತನ ಮೇಲೆ ತರಲ್ಪಡಬಹುದಾದ ಯಾವದಾದರೂ ದಾವೆಯಲ್ಲಿ ಅದರ ಡಿಫೆನ್ಸ್ ಯಾನೆ ಪ್ರತಿವಾದವು ಗವರ್ನಮೆಂಟಿನವರಿಂದ ನಡೆಸಲ್ಪಡಬಹುದಾದಾಗ ಅಂಥಾ ಯಾವದಾದರೂ ದಾವೆಯ ವಿಚಾರಣೆಯು ಯಾವದಾದರೂ ಇತರ ದಾವೆಯ ಯಾ ಇತರ ಸಿವಿಲ್ ಪ್ರೊಸೀಡಿಂಗ್ಸ್ ಅಂಥಾ ಕೋರ್ಟಿನಲ್ಲಿ ಬಾಕಿಯುಲ್ಲಿರುವದಕ್ಕಿಂತಲು ಮೊದಲನೆಯದಾಗಿರಬೇಕೆಂದು ಅಪೇಕ್ಷಿಸುವದು ಗವರ್ನಮೆಂಟಿನವರಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಅಂಥಾ ಅಪೇಕ್ಷೆಯನ್ನು ಕೋರ್ಟಿನವರು ನೆರವೇರಿತಕ್ಕದ್ದು.

ಈ ಸೆಕ್ಷನಿನಿಂದ ಗವರ್ನಮೆಂಟಿನವರಿಗೆ ಉಂಟು ಮಾಡಲ್ಪಟ್ಟಿರುವ ಸ್ವಾತಂತ್ರ್ಯವು ಆವಶ್ಯಕಗಳಾದ ಬದಲಾವಣಿಗಳೊಡನೆ ಈ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟಿರುವಂಥಾ ಮೊಕದ್ದಮೆಯಲ್ಲಿ ಯಾವದಾದರೂ ಡಿಕ್ರಿ ಮೇಲಣ ಅಪೀಲ್ ಯಾ ಎರಡನೇ ಅಪೀಲಿಗೆ ಅನ್ವೈಸತಕ್ಕದ್ದು.

ಮೈಸೂರ ಗೆಜೆಟ್.

ನಂ. 15] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 25, ಸನ್ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿನ್‌ಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡ್ ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿನ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

೧ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 8ನೇ ಏಪ್ರೈಲ್ 1895.

ನಂ. 16743.—ಜಿ. 4658.—ಸನ್ 1895ನೇ ಇಸವಿ ಫಿಬ್ರುವರಿ 18ನೇ ಮುಕ್ಕಾಂ ಪ್ರಶಿದ್ಧಪತ್ರಿಕೆಯೊಡನೆ ಫಾಯಿಷ್ ಮಾಡಲ್ಪಟ್ಟ ಕೌನ್ಸಿಲ್ ಕೆಲಸಗಳ ರೂಲ್ಸಿನ 7ನೇ ಪ್ಯಾರಾ ಅನುಸರಿಸಿ ಘನವನ್ನು ಹೊಂದಿದ ಶ್ರೀಮನ್ ಮಹಾರಾಣೀ ರೀಜಂಟರವರು ಅಜ್ಞಾಪಿಸುವದೇನೆಂದರೆ, ಕೌನ್ಸಿಲಿನ ವಾರಕಟ್ಲೆ ಮೀಟಿಂಗ್ಸಿಗೆ 1895ನೇ ಇಸವಿ ಏಪ್ರೈಲ್ ತಾರೀಖು 4ರ ಲಾಗಾಯತು ಮೇ 31ನೇ ತಾರೀಖು ಪರಿಯಂತ ರೀಸೆಸ್ ಕಾಲವಾಗಿರತಕ್ಕದ್ದು. ಸದರೀ ರೀಸೆಸ್ ಕಾಲದಲ್ಲಿ ಕೌನ್ಸಿಲರವರಿಂದ ಫೈಸಲಾಗಬೇಕಾದ ಜರೂರಿಯಾತ್ ಕೆಲಸಗಳ ವ್ಯವಸ್ಥೆಯ ಬಗ್ಗೆ ತಕ್ಕ ಯೇರ್ಪಾಟುಗಳು ಮಾಡಲ್ಪಡತಕ್ಕದ್ದು.

ಹುಕುಂ ಬಮೋಜಿಬ್,
ಕೆ. ಶೇಷಾದ್ರಿ ಅಯ್ಯರ್,
ಮೈಸೂರ್ ದಿವಾನ್.

ರೆವಿನ್ಯೂ.

ಸನ್ 1895—96ನೇ ಸಾಲಿಗೆ ಶೇಂದಿ ಫಿರ್ಕಾಗಳ ಹರಾಜು.

ನಂಬರ್ 15931—R. F. 210—92, ತಾರೀಖು 29ನೇ ಮಾರ್ಚಿ 1895.

ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಆಯಾ ತರಗತಿಗಳ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ ಸನ್ 1895ನೇ ಇಸವಿ ಜುಲೈ ಗುರ್ರೇ ಲಾಗಾಯತು 1896ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಈಚಲಮರದ ಶೇಂದಿಯನ್ನ ಬಿಕರಿ ಮಾಡುವ ಒಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮ್ಮಿಷನರುಗಳಿಂದ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮ್ಮಿಷನರುಗಳಿಂದ ಪ್ರತಿ ತಾಲ್ಲೂಕು ಕಸಬಾಗಳಲ್ಲಿಯೂ ಮೇಲ್ಕಂಡ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ. ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಹರಾಜು ಹಾಕಲ್ಪಡಲು ಮೈಸೂರು ಸರ್ಕಾರದಿಂದ ಈ ಇಸ್ತಿಹಾರುಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳಿಗೆ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಯಾ ಹಾಲಿ ಫಿರ್ಕಾಗಳ ಪೈಕಿ ಯಾವದಾದರೂ ಕೇವಲ ದೊಡ್ಡದಾಗಿರುವ ಪಕ್ಷದಲ್ಲಿ ಹರಾಜು ಹಾಕುವ ಆಫಿಸರರು ಎಕ್ಸೈಜ್ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಅಂಥಾ ಫಿರ್ಕಾಗಳನ್ನ ಬದಲಾಯಿಸಲೂ, ವಿಭಾಗ ಮಾಡಲೂ ಯಾ ಇತರ ವಿಧವಾಗಿ ವಿಂಗಡಿಸಲೂಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಒಟ್ಟು ಸ್ವಾತಂತ್ರ್ಯದ ಹಕ್ಕು ಹರಾಜು ಮಾಡಲ್ಪಡುತ್ತೆ. ಅಂಗೀಕರಿಸಲ್ಪಡತಕ್ಕ ಛಡಸವಾಲ್ದಾರನಿಗೆ ಡೆಪ್ಯುಟಿಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಸದರೀ ಹಕ್ಕು ಕೊಡಲ್ಪಡುವದು. ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಡೋಣವು ಸವಾಲನ್ನ ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

3. ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಆಗಲಿ ಹಾಜರಾಗಬೇಕು. ಯಾವದಾದರೊಂದು ಫಿರ್ಕಾದ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಕೊಡಲ್ಪಟ್ಟ ಸವಾಲುದಾರನು ಯರಡನೇ ಫಿರ್ಕಾದ ಹರಾಜು ಷುರುವಾಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲಗಿನಲ್ಲಿ ಇಪ್ಪತ್ತರಲ್ಲಿ ಒಂದು ಭಾಗಕ್ಕೆ ಸರಿಯಾದ ಮೊಬಲಗನ್ನು ಠೇವಣೀ ಇಡಬೇಕು. ಮತ್ತು ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರಾದ ಸಂಗತಿಯು ಆತನಿಗೆ ಲಿಖಿತಮೂಲಕ ತಿಳಿಸಲ್ಪಟ್ಟ ಹದಿನೈದು ದಿವಸಗಳೊಳಗಾಗಿ ಮೊದಲು ಯಿಡೋಣಾದ ಠೇವಣೀ ದೇಖೀಲ್ ಆತನ ಮೂರು ತಿಂಗಳ ಗುತ್ತಿಗೆ ಹಣಕ್ಕೆ ಸಮಾನವಾಗುವಷ್ಟು ಠೇವಣಿಯನ್ನಿಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿರುವ ಠೇವಣೀ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡುವರೀತ್ಯಾ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ತಕ್ಷಣವೇ ಪುನಃ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರೀ ಮಾಡಲ್ಪಡುವದು.

4. ಮೇಲ್ಕಂಡ 3ನೇ ಕಲಂ ಪ್ರಕಾರ ನಡಿಸಲ್ಪಡುವ ಪುನಃ ಹರಾಜುಗಳು ತಪ್ಪಿತಸ್ಥನಾದ ಮೇಲ್ಕಂಡ ಸವಾಲ್ದಾರನ ಜವಾಬ್ದಾರೀ ಮೇಲೆ ನಡಿಸಲ್ಪಡುವವು. ಸದರೀ ಸವಾಲ್ದಾರನು ಯಲ್ಲಾ ಆದಾಯವನ್ನೂ ಕಳೆದುಕೊಳ್ಳತಕ್ಕದ್ದಲ್ಲದೆ ದುಸರಾ ಹರಾಜಿನಿಂದ ಸರ್ಕಾರಕ್ಕೆ ನಷ್ಟವಾದ ಪಕ್ಷದಲ್ಲಿ ಷುರೂ ಹರಾಜಿನ ಷರತ್ತುಗಳನ್ನನುಸರಿಸಿ ಮೇಲ್ಕಂಡ ಪೂರಾ ಕಾಲಕ್ಕೆ ಆತನಿಂದ ಪಾವತಿಯಾಗಬೇಕಾಗಿದ್ದ ಒಟ್ಟು ಮೊಬಲಗಿನಲ್ಲಿ ದುಸರಾ ಹರಾಜಿನಲ್ಲಿ ಪಡದ ಸವಾಲ್ದಾರನಿಂದ ಪಾವತಿಯಾಗತಕ್ಕ ಒಟ್ಟು ಮೊಬಲಗನ್ನು ವಜಾ ಮಾಡಿದರೆ ಉಳಿಯುವ ಶೇಷವನ್ನು ಆತನು ಪಾವತಿ ಮಾಡತಕ್ಕದ್ದು. ಈ ಸಂದರ್ಭದಲ್ಲಿ ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರೆ ಹರಾಜಿನಿಂದುಂಟಾದ ನಷ್ಟಕ್ಕೋಸ್ಕರ ವಜಾಮಾಡಲ್ಪಡತಕ್ಕದ್ದು. ತದನಂತರ ಬಾಕಿ ಯೇನಾದರೂ ನಿಂತಲ್ಲಿ ಆ ಮೊಬಲಗು ಜಮೀನ್ ಕಂದಾಯವು ಯಾವರೀತಿಯಾಗಿ ವಸೂಲ್ಮಾಡಲ್ಪಡುತ್ತೋ ಅದೇರೀತಿಯಾಗಿ ವಸೂಲ್ಮಾಡಲ್ಪಡುವದು. ಪರಂತು ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರಾ ಹರಾಜಿನಿಂದುಂಟಾದ ನಷ್ಟಕ್ಕಿಂತ ಹೆಚ್ಚಾಗಿರುವ ಪಕ್ಷದಲ್ಲಿ ಅಂಥಾ ಪೂರಾ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

5. ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳನ್ನ ಆಚರಿಸುವದಕ್ಕೆ ಬದ್ಧನಾಗಿರಲುಳ್ಳವನೆಂದು ಒಂದು ಕರಾರನ್ನ ಬರೆದು ರುಜುಮಾಡಿ ಕೊಡತಕ್ಕದ್ದು. ಮತ್ತು ಆ ಕರಾರನ್ನು ಮೇಲ್ಕಂಡ 15 ದಿವಸಗಳ ಕಾಲ ಕಳೆದ ತರುವಾಯ 10 ದಿವಸಗಳೊಳಗಾಗಿ ಬರೆದುಕೊಡತಕ್ಕದ್ದು. ಕೊಂಡುಕೊಂಡವನು ಕರಾರನ್ನ ಸೈನ್ ಮಾಡುವದಕ್ಕೆ ತಪ್ಪಿದಲ್ಲಿ ಯಾ ತಿರಸ್ಕರಿಸಿದಲ್ಲಿ ಮೊದಲೇ ಇಡಲ್ಪಟ್ಟ ವಿಸಿಷ್ಟ ಠೇವಣೀ ಮೊಬಲಗೂ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು 3 ಮತ್ತು 4ನೇ ಕಲಂಗಳಲ್ಲಿ ನಮೂದಿಸಿರುವಂತೆ ಸದರೀ ಪ್ರಥಮ ಖರೀದೀದಾರನ ಜವಾಬ್ದಾರಿ ವ ನಷ್ಟಕ್ಕೆ ಗುರಿಯಾಗಿ ದುಸರಾ ಹರಾಜ್ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹರಾಜು ಮಂಜೂರಾದ ಮೇಲೆ ಸದರೀ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನ ಪಡೆದವರು ಸದರೀ ಕರಾರಿಗೆ ಜವಾಬ್ದಾರ್ರಾಗಿರುತ್ತಾರೆ.

6. ಸವಾಲ್ಮಾಡಲು ಇಚ್ಛೆವುಳ್ಳವರಿಗೆ ಪ್ರತಿ ಫಿರ್ಕಾದಲ್ಲಿ ಹಾಲಿ ಇರುವ ಅಂಗಡಿಗಳು ಮತ್ತು ಪ್ರತಿ ಫಿರ್ಕಾಕ್ಕೆ ಶೇರಿದ ವನಗಳು ತಿಳಿಸುವ ಒಂದು ಪಟ್ಟಿಯು ಹರಾಜು ಕಾಲದಲ್ಲಿ ತೋರಿಸಲ್ಪಡುವದು, ಮತ್ತು ಅಂಗೀಕರಿಸಲ್ಪಟ್ಟ ಪ್ರತಿ ಒಬ್ಬ ಛಡಸವಾಲ್ದಾರನಿಗೆ ಆಯಾ ಫಿರ್ಕಾಕ್ಕೆ **ಶೇರಿದ ವನಗಳ** ಬಾಬತು ಸಾರಾಂಶವು ಸದರೀ ಪಟ್ಟಿಯಿಂದ ತಯಾರ್ಮಾಡಲ್ಪಟ್ಟು ಕೊಡಲ್ಪಡುತ್ತೆ. ಸನ್ 1893-94 1894—95ನೇ ಸಾಲು ಬಾಬತು ಪ್ರತಿ ಮಾಹೆ ಗುತ್ತಿಗೆ ಮೊಬಲಗು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಕರಾರು ಬರದುಕೊಟ್ಟ ಕೂಡ್ಲೆ ಖರೀದಿದಾರನಿಗೆ ಡೆಪ್ಯುಟಿ ಕಮ್ಮಿಷನರವರು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟು ವಿಧಾಯುಕವಾದ ನಮೂನೆಯಲ್ಲಿ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕನ್ನ ನಮೂದಿಸಿ ಒಂದು ಲೈಸೆನ್ಸನ್ನ ಕೊಡುವರು;—

(1) ಲೈಸೆನ್ಸ್ದಾರನು ತನ್ನ ದುಕಾನ್ಗಳಿಗೆ ಶೇಂದಿ ಒದಗಿಸಿಕೊಳ್ಳುವದಕ್ಕೆ ತನ್ನ ಫಿರ್ಕಾಕ್ಕೆ ಸೇರಿದ ವನಗಳಲ್ಲಿ ಇರುವ ಈಚಲು ಗಿಡಗಳಿಂದ ಶೇಂದಿಯನ್ನು ತಯಾರ್ಮಾಡಿಕೊಳ್ಳಲು ಸರ್ವಸ್ವತಂತ್ರವುಳ್ಳವನಾಗಿರುತ್ತಾನೆ. ಮತ್ತು ಎಕ್ಸೈಜ್ ಆಕ್ಟ 5ನೇ ಸೆಕ್ಷನ್ ಪ್ರಕಾರ ಮಾಫಿ ಲೈಸೆನ್ಸ್ ಪಡದು ತನ್ನ ಫಿರ್ಕಾದ ಸರಹದ್ದಿನೊಳಗೆ ಅಥವಾ ತನ್ನ ಫಿರ್ಕಾದ ಹೊರಗೆ ಇರುವ ಹಿಡುವಳಿದಾರ್ರ ಜಮೀನುಗಳಲ್ಲಿ ಇರತಕ್ಕ ಈಚಲು, ತಾಳೆ ಯಾ ತೆಂಗಿನ ಮರಗಳಿಂದ ಶೇಂದಿಯನ್ನು ತಯಾರ್ಮಾಡಿಕೊಳ್ಳುವದಕ್ಕೂ ಯಾ ಅಂಥಾ ಜಮೀನುಗಳ ಮಾಲೀಕರೊಡನೆ ಯಾ ಅಂಥಾ ಫಿರ್ಕಾಗಳ ಲೈಸೆನ್ಸ್ದಾರ್ರೊಡನೆ ಸಂಗತ್ಯಾನುಸಾರ, ಆಪಸಿನಲ್ಲಿ ಮಾಡಿಕೊಂಡ ಯೇರ್ಪಾಟುಗಳನ್ನನುಸರಿಸಿ ಇತರ ಫಿರ್ಕಾಗಳಿಂದ ಕೊಂಡುಕೊಳ್ಳುವದಕ್ಕೂ ಸ್ವತಂತ್ರರಾಗಿರತಕ್ಕದ್ದು. ತಾಳೆ ಯಾ ತೆಂಗಿನ ಶೇಂದಿಯ ಬಿಕರಿ ದರಗಳು ಎಕ್ಸೈಜ್ ಕಮ್ಮಿಷನರ್ ಸಾಹೆಬರವರಿಂದ ಆಗಿಂದಾಗ್ಯೆ ಗೊತ್ತು ಮಾಡಲ್ಪಡತಕ್ಕದ್ದು.

(2) ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ ಮತ್ತು ತೆಂಗಿನಮರಗಳ ಶೇಂದಿಯನ್ನು ಮಾರುವದಕ್ಕೆ ಮಾತ್ರವೇ ಲಗತ್ತಾಗುತ್ತೆ. ಬಗನಿ ಶೇಂದಿ ಮಾರಾಟವು ಇದರಲ್ಲಿ ಸೇರಿ ಇರುವದಿಲ್ಲವು.

(3) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರದಿಂದ ಆ ಬಗ್ಯೆ ವಿಧಾಯುಕವಾಗಿ ಅಚ್ಚು ಹಾಕಲ್ಪಟ್ಟಿರುವ ಚಲನ್ಗಳ ಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1895ನೇ ಇಸವಿ ಜುಲೈ ಲಾಗಾಯತು ಸರಿಯಾದ ತಿಂಗಳಗಟ್ಲೆ ಖಿಸ್ತು ಪ್ರಕಾರ ಖಿಸ್ತು ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದು ಆಣೆ ಮೇರೆ ಲೋಕಲ್ ಸೆಸ್ ಸಹಿತವಾಗಿ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಆ ತಿಂಗಳ 20ನೇ ತಾರೀಖು ವ ಅದರೊಳಗೆ ಅದಕ್ಕಾಗುವ ಲೋಕಲ್ ಸೆಸ್ ಸಹಿತ ಪಾವತಿಯಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ತಾಲ್ಲೂಕು ಅಮಲ್ದಾರ್ರು ಲೈಸೆನ್ಸನ್ನು ಬರಹ ರೂಪಕವಾದ ಆರ್ಡರ್ ಮೂಲಕ ರದ್ದು ಮಾಡತಕ್ಕದ್ದು. ಮತ್ತು ಆ ತಿಂಗಳ ಆಖೈರ್ ವಳಗೆ ಫಿರಕಾವನ್ನು ಪುನಹ ಹರಾಜು ಮಾಡತಕ್ಕದ್ದು. ಷರತ್ತುಗಳಂತೆ ನಡಿಯದೆ ತಪ್ಪಿ ಹೋದಂಥಾ ಲೈಸೆನ್ಸ್ದಾರನ ಫಿರಕಾವನ್ನು ಹಾಲಿ ಅದರಲ್ಲಿರುವ ಅಂಗಡಿಗಳ ಸಂಖೆಗೆ ವಡದು ಪ್ರತಿ ಒಂದು ಅಂಗಡಿಕಾರನೂ ವೊಪ್ಪಿಕೊಳ್ಳುವ ಗುತ್ತಿಗೆ ಮೊಬಲಗಿಗೆ ಲೈಸೆನ್ಸ್ಗಳನ್ನು ಕೊಡುವ ಅಧಿಕಾರವು ಅಮಲ್ದಾರ್ರಿಗೆ ಸೇರಿರುತ್ತೆ. ಆದರೆ ಈ ರೀತಿ ಉತ್ಪತ್ತಿಯಾಗುವ ವೊಟ್ಟು ಗುತ್ತಿಗೆ ಮೊಬಲಗು ಮೊದಲು ಫಿರಕಾವನ್ನು ಪಡದು ಇದ್ದವನು ಕೊಡಲು ವೊಪ್ಪಿದ್ದ ಮೊಬಲಗಿಗೆ ಕಮ್ಮಿಯಾಗಿರಕೂಡದು.

(4) ಪ್ರತಿ ಮಾಹೆಯು ಗುತ್ತಿಗೆ ಮೊಬಲಗನ್ನೂ ಆ ಮಾಹೆಯ 20ನೇ ತಾರೀಖು ಯಾ ಅದಕ್ಕೆ ಪೂರ್ವ ಪಾವತಿ ಮಾಡದೆ ತಪ್ಪಿದಲ್ಲಿ ಲೈಸೆನ್ಸ್ದಾರನು ಇಟ್ಟಿರುವ ಡಿಪಾಜಿಟ್ಯಾನೆ ಠೇವಣೀ ಮೊಬಲಗು ಮೇಲಿನ ಷರತ್ತು 3ರ ಪ್ರಕಾರ ದುಸರೆ ಹರಾಜಿನಲ್ಲಿ ನಷ್ಟವೇನಾದರೂ ಉಂಟಾದಲ್ಲಿ ಅದರ ಭರ್ತಿಗಾಗಿ ಬೇಕಾಗುವ ಮೊಬಲಗು ಜಾತಾ ಉಳಿದ ಮೊಬಲಗು ಗವರ್ನಮೆಂಟಿಗೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸ್ದಾರನಿಂದ ಠೇವಣೀ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೆ ಮೂರು ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು.

(5) ಗವರ್ನಮೆಂಟನವರಿಂದ ವಿಧಿಸೋಣವಾದ ದರಗಳ ರೀತ್ಯ ಶೇಂದಿಯು ಜನಗಳಿಗೆ ಮಾರಲ್ಪಡತಕ್ಕದ್ದು.

(6) ಮರಗಳಿಂದ ತೆಗಿಯಲ್ಪಟ್ಟ ಸ್ಥಿತಿಯಲ್ಲಿ ಶೇಂದಿಯು ಬೆರಿಕೆಯಿಲ್ಲದೆ ಮಾರಲ್ಪಡತಕ್ಕದ್ದು, ಮತ್ತು ಅಂಗಡಿಗಳಲ್ಲಿ ಅಥವಾ ಡಿಪೋಗಳಿದ್ದರೆ ಅವುಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಕೆಡಿಸಲ್ಪಡಲಾಗದು ಯಾ ನೀರಿನಿಂದ ಮಿಶ್ರ ಮಾಡಲಾಗದು.

(7) ಲೈಸೆನ್ಸ್ದಾರನು ತನ್ನಿಂದ ತೆಗದುಕೊಳ್ಳಲ್ಪಟ್ಟ ಮತ್ತು ಅಂಗಡಿಕಾರರಿಗೆ ಕೊಟ್ಟ ಶೇಂದಿಯ ಪರಿಮಾಣವನ್ನು ಕುರಿತು ಸರಿಯಾದ ಲೆಖ್ಖಗಳನ್ನಿಡಬೇಕು. ಒಯ್ಯಲ್ಪಡುವ ಶೇಂದಿ ನಿಮಿತ್ತಕವಾದ ರಹದಾರಿಗಳು ಈ ಬಗ್ಯೆ ಅಧಿಕಾರ ಕೊಡಲ್ಪಟ್ಟ ಆಫಿಸರರ ಅಜಮಾಯಿಷಿಗೂ ವ ತನಿಖೆಗೂ ಗುರಿಯಾಗತಕ್ಕದ್ದು.

(2) ಸದರೀ ಸ್ವತಂತ್ರದ ಹಕ್ಕನ್ನು ಪಡದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸ್ಥಳೀಯವಾವ ಸರ್ಕಾರದ ಖಜಾನೆಗೆ 1895ನೇ ಇಸವಿ ಜುಲೈ ಮಾಹೆ ಲಾಗಾಯಿತು ಸರಿಯಾದ ತಿಂಗಳುಗಟ್ಲೇ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತೂ ಯಾವ ತಿಂಗಳಿಗೆ ಪಾವತೀಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಆ ತಿಂಗಳ 20ನೇ ತಾರೀಖು ಯಾ ತತ್ಪೂರ್ವ ಪಾವತಿಯಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ತಾಲ್ಲೂಕು ಅಮಲ್ದಾರರು ಬರಹರೂಪಕವಾದ ಆರಡರ್ ಮೂಲಕ ಲೈಸೆನ್ಸನ್ನು ರದ್ದು ಮಾಡಿ ಷಾಪನ್ನು ಆ ತಿಂಗಳ ಆಖೈರಿನೊಳಗೆ ಪುನಹ ಹರಾಜು ಮಾಡುವರು. ಪ್ರತಿ ಮಾಹೆಯ ಗುತ್ತಿಗೆ ಮೊಬಲಗನ್ನು ಆ ಮಾಹೆಯ 20ನೇ ತಾರೀಖು ಯಾ ಅದಕ್ಕೆ ಪೂರ್ವ ಪಾವತಿ ಮಾಡದೆ ತಪ್ಪಿದಲ್ಲಿ ಲೈಸೆನ್ಸದಾರನು ಇಟ್ಟಿರುವ ಡಿಪಾಜಿಟ್ ಯಾನೆ 2 ತಿಂಗಳ ಗುತ್ತಿಗೆ ಮೊಬಲಗು ಪೈಕಿ ದುಸರೆ ಹರಾಜಿನಲ್ಲಿ ನಷ್ಟವೇನಾದರು ಉಂಟಾದಲ್ಲಿ ಅದರ ಭರ್ತಿಗಾಗಿ ಬೇಕಾಗುವ ಮೊಬಲಗು ಜಾತಾ ಉಳಿದ ಮೊಬಲಗು ಗವರ್ನಮೆಂಟಿಗೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು.

(3) ಈ ಸರ್ಕಾರಕ್ಕೆ ಸಾರಾಯಿಯನ್ನ ವ ಇತರ ಒಳದೇಶದ ಷರಾಬನ್ನ ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟೀದಾರ್ರಾದ ಪ್ಯಾರಿ ಅಂಡ್ ಕೋ ಎಂಬ ವರ್ತಕರಿಂದ ಲೈಸೆನ್ಸದಾರನು ತನ್ನ ಅಂಗಡಿಯಲ್ಲಿ ಮಾರುವದಕ್ಕೋಸ್ಕರ ಡಿಸ್ಟಿಲೆರಿಯಲ್ಲಿ ಯಾ ಸರ್ಕಾರದ ಅಪ್ಪಣೇ ಮೇರೆ ಏರ್ಪಾಡಾಗಿರುವ ಬಾಂಡೆಡ್ ಡಿಪೋಯಿಂದ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ 10½ ಆಣೆ ದರದ ಮ್ಯಾರಿ ಕ್ರಯವನ್ನು ಪಾವತೀ ಮಾಡಿ ಕೊಂಡುಕೊಳ್ಳಬೇಕು. ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ 5—5—0 ದರದ ಪ್ರಕಾರ ಜನಗಳಿಗೆ ಮಾರತಕ್ಕದ್ದು.

(4) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನೂ ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 180 ರೂಪಾಯಿ ದರದಮೇರಿಗೆ ಮ್ಯುನಿಸಿಪಲ್ ಕಾನೂನ್ ಪ್ರಕಾರ ರೆಜಿಸ್ಟರ್ ಫಿ ಯಾ ರುಸುಮನ್ನು ಕೊಡಬೇಕು; ಮತ್ತು ಆತನು ಪ್ರತಿ ತಿಂಗಳಲ್ಲಿಯೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿಸಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ್ ಫೀಯನ್ನು ಸಹ ಕೊಡಬೇಕು.

(5) ಮೇಲ್ಕಂಡ ಖರೀದಿ ದರ ಮತ್ತು ರುಸುಂಗಳು ಶಿವಾಯಿ ಸರ್ಕಾರದ ಅಪ್ಪಣೇ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಬಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ವಿಧಾಯಕವಾಗಿರುವ 4 ರೂಪಾಯಿ ದರದ ಮೇರೆ ಎಕ್ಸೈಜ್ ಡ್ಯೂಟೀ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಮುಂಗಡವಾಗಿ ಪಾವತೀ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನೂ ವ ಖರೀದಿ ಮೊಬಲಗನ್ನೂ ಪ್ರತ್ಯೇಕ ಅಂಗಡಿಗಳ ಅನುಕೂಲತೆಗೋಸ್ಕರ ಸ್ಥಾಪಿಸಲ್ಪಟ್ಟಿರುವ ಬಾಂಡೆಡ್ ಡಿಪೋನಲ್ಲಿ ಲೈಸೆನ್ಸದಾರರುಗಳ ಖರ್ಚಿನಿಂದ ನೇಮಿಸಲ್ಪಡುವ ಷರಾಫನ ವಶಕ್ಕೆ ಪಾವತೀ ಮಾಡಿ ಗೊತ್ತು ಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಮಾಡಿದರೆ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಜರೀ ಆಫೀಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟೀ ಮೊಬಲಗಿಗೆ ಸರಿಹೋದ ಸಾರಾಯಿಯನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿದ ತಾರೀಖು ಮತ್ತು ಘಂಟೆಯನ್ನು ನಮೂದುಮಾಡಿ ಎಕ್ಸೈಜ್ ಕಮ್ಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜಿಮ್ಮೇದಾರನು ಬಾಂಡೆಡ್ ಡಿಪೋಯಿಂದ ಸಾರಾಯಿ ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು.

(7) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಖ್ಖ, ಸಾರಾಯಿಯು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(8) ತೆಗದುಕೊಳ್ಳಲ್ಪಟ್ಟಿದ್ದ ಷಾಪುಗಳ ಪೈಕಿ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರ್ರವರು ವಿಚಾರಮಾಡದೆ ತಿರಸ್ಕರಿಸುವರು.

(9) ಲೈಸೆನ್ಸದಾರನು ಹಾಲೀ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(10) ಬಾಕೀ ಕರಾರುಗಳು ವ ಷರತ್ತುಗಳು ವಿಧಾಯಕವಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

8. ಲೈಸೆನ್ಸುದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸುದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣೀ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದು ಮಾಡಿ ಸದರೀ ಲೈಸೆನ್ಸುದಾರನ ಜವಾಬ್ದಾರೀಮೇಲೆ ಮೆಲ್ಕಂಡ ಹಕ್ಕನ್ನು ಪುನಹ ಹರಾಜು ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1895ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವವರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲು ಸದರೀ ಲೈಸೆನ್ಸುದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೇ ಹಣವು ಕೂಡ್ಲೆ ಪಾವತಿಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸುದಾರನ್ನಾಗಲಿ ಯಾ ಆತನ ನೌಕರರನ್ನಾಗಲಿ ಅಪಾದಿಸಿ ದರ್ಯಾಪ್ತೀ ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಆಫಿಷಿಯೇಟಿಂಗ್ ಚೀಫ್ ಸೆಕ್ರೆಟರಿ.

ಷೆಡ್ಯೂಲ್ ಪಟ್ಟಿ.

ಪ್ರಾಂತ್ಯದ ಹೆಸರು.	ಅಂಗಡಿಯ ಕ್ರಮ ನಂಬರು.	ಅಂಗಡಿ ಇರುವ ಸ್ಥಳ.	ಪ್ರತಿ ಅಂಗಡಿಯ ಗುತ್ತಿಗೆ ವಬಲಗು.			ಪ್ರತಿ ಅಂಗಡಿಯಲ್ಲಿ ಬಿಕರಿ ಯಾದ ಷರಾಬಿನ ತಪಶೀಲ್.			ಹರಾಜ್ ಸ್ಥಳ.	ಹರಾಜಿನ ತಾರೀಖು.	ಷರಾ.
			1892-93	1893-94	1894-95	1892-93	1893-94	1894-95 ಆರುತಿಂಗಳಬಿಕರಿ.			
			ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.			
ಬೆಂಗಳೂರು ಷಹರ.	1	ನಂಬರ್ 168 ಮಾರಿಯಮ್ಮನ ದೇವಸ್ಥಾನದ ಬೀದಿ, ರಂಗಸ್ವಾಮಿ ದೇವಸ್ಥಾನದ ಬೀದಿ ..	515	483	480	1946	1880	898	ಬೆಂಗಳೂರು ತಾಲ್ಲೂಕು ಕಚೇರಿ.	1895ನೇ ಮೇ 1ನೇ—2ನೇ ತಾರೀಖು.	
	2	,, 40 ರಂಗಸ್ವಾಮಿದೇವಸ್ಥಾನದ ಬೀದಿ ..	477	408	635	2441	2463	1022			
	3	,, 8 ಬಸೆಟ್ಟಿಪೇಟೆ ಕಟ್ಟಿಗರವರ ಬೀದಿ ..	770	560	690	2170	2308	1282			
	4	,, 680 ಧರ್ಮರಾಯನ ದೇವಸ್ಥಾನ, ಹಲಸೂರುಪೇಟೆ	801	748	950	2830	2828	1512			
	5	,, 23 ಅವೆನ್ಯೂರಸ್ತೆ ..	800	564	610	2092	2063	1430			
	6	,, 45 ಬಬ್ಬೂರು ರಂಗಸ್ವಾಮಿ ಬೀದಿ, ತಾರಾಮಂಡಲದ ಬೀದಿ ..	686	604	720	2708	2788	1490			
	7	,, 26 ಶೆಟ್ಟಿ ಸಿದ್ದಣ್ಣನಬೀದಿ ನಂಬರ್ ಯಫ್. 3ನೇ ಡಿವಿಜನ್ ರಾಮಣ್ಣನಪೇಟೆ ..	456	408	510	1633	1574	766			
	8	,, 112 ಲ್ಯಾಸ್ಕರ್ ಲೈನ್ಸ್ ಹೈರೋಡ್ ..	518	516	720	2247	2539	1375			
	9	,, 6 ಮಾರ್ಕೆಟ್ ರಸ್ತೆ ನಂಬರ್ 2ನೇ ಡಿವಿಜನ್ ..	1010	684	750	2318	2649	1517			
	10	,, 65 ಕುರುವಿನಪೇಟೆ, ರಂಗಯ್ಯಶೆಟ್ಟಿ ಬೀದಿ	768	684	805	2505	2677	1483			
	11	,, 30 ತೆಲುಗರಪೇಟೆಬೀದಿ, ಗುಡುಮಯ್ಯನಪೇಟೆ ..	800	584	805	2155	2586	1450			
	12	,, 128 ಅಕ್ಕಿಪೇಟೆ ತರಗಿನಪೇಟೆ ರಸ್ತೆ	686	764	980	2945	3183	1616			
	13	,, 21 ನಂ.2ನೇಸಂದಿ3ನೇ ಡಿವಿಜನ್ ಕಬ್ಬನ್ಪೇಟೆರಸ್ತೆ	464	408	460	1566	1435	907			
	14	,, 36 ನಂಬರ್ ಬಿ. 4ನೇ ಡಿವಿಜನ್ ಕುಂಬಾರಪೇಟೆ	641	548	700	2117	2248	1198			
	15	,, 104 ಕುರುವಿನಪೇಟೆ, ನಂಬರ 9, 2ನೇ ಡಿವಿಜನ್ ಅಕ್ಕಿಪೇಟೆ ..	761	672	715	2273	1983	1392			
	16	,, 136 ಲ್ಯಾಸ್ಕರ್ ಲೈನ್ಸ್ ಹೈರೋಡ್ ..	638	560	740	2021	1980	988			
	17	,, 24 ಜಂಕರ್ಪೇಟೆ, ಕಾಶೀವಿಶ್ವೇಶ್ವರ ದೇವಸ್ಥಾನರಬೀದಿ ..	801	572	950	2577	2938	1674			
	18	,, 10 ನರಸಪ್ಪನಗಲ್ಲಿ ಹೊಸಮಾರ್ಕೆಟ್ ರಸ್ತೆ ಬೀದಿ ..	867	724	965	2874	3482	1314			
	19	,, 79 ರಾಗೀಪೇಟೆ ಕಟಕರ ಹಳೇ ಮಾರ್ಕೆಟ್ ಬೀದಿ	738	788	805	2672	1871	1668			
	20	,, 6 ಸಿದ್ದೀಕಟ್ಟೆ ಕೂಂಬೂಬಜಾರ್ ..	626	684	960	2499	2719	1702			
	21	,, 11 ಸೀ. ಗಲ್ಲಿ ತೆಲುಗರಪೇಟೆ ಬೀದಿ ಬಳೇಪೇಟೆ ..	785	592	815	1892	2512	1398			
	22	,, 55 ಹೊಸಮಾದಿಗರಪಾಳ್ಯ ..	555	480	270	1267	621	480			
	23	,, 56 ಮೈಸೂರು ರಸ್ತೆ ತಟ್ಟನಬಾಗಲು — ..	660	760	995	3044	2805	1482			
	24	,, 28 ಲ್ಯಾಸ್ಕರ್ ಲೈನ್ಸ್ ಹೈರೋಡ್ ..	501	464	455	1469	1024	780			
	25	,, 72 ನಾಲ್ಬಂದ್ವಾಡಪೇಟೆ ಕೆಂಗೇರಿ ಪೋಲೀಸ್ ಸ್ಟೇಷನ್ ..	553	524	725	1765	2216	1048			
	26	,, 5 ಡಾಬಸ್ಪೇಟೆ ಏ. ಬೀದಿ ..	360	365	560	1936	2086	1300			
ಮೈಸೂರು ಷಹರ.	1	ಲಷ್ಕರ್ ಮೊಹಲ್ಲಾ ..	260	268	355	1383	1489	803	ಮೈಸೂರು ತಾಲ್ಲೂಕು ಕಚೇರಿ.	1895ನೇ ಮೇ 1ನೇ ತಾರೀಖು.	
	2	ದೇವರಾಜಮೊಹಲ್ಲಾ ..	405	440	480	1647	1532	774			
	3	ಮಂಡೀ ಮೊಹಲ್ಲಾ, ರಾಗಿಮಂಡಿ ..	405	320	405	1252	1504	833			
	4	ದೇವರಾಜ ಮೊಹಲ್ಲಾ, ಶಿವರಾಮಪೇಟೆ ..	650	508	720	1870	2750	1286			
	5	ಆನೇತೇರುಬೀದಿ ಡಿ॥ ..	425	292	315	1438	1063	470			
	6	ಕುರೀಮಂಡಿ, ಮಂಡಿ ಮೊಹಲ್ಲಾ ..	610	496	670	2590	2231	1119			
	7	ಮೋಚಿ ಬೀದಿ ಡಿ॥ ..	355	320	560	1591	2097	943			
	8	ದೇವರಾಜಮೊಹಲ್ಲಾ ..	370	240	405	1097	992	519			
	9	ಬಸವನ ಮೊಹಲ್ಲಾ ..	320	232	330	1126	1203	878			
	10	ಲಷ್ಕರ್ ಮೊಹಲ್ಲಾ ..	495	280	365	1402	1537	881			
	11	ಆನೇತೇರು ಬೀದಿ, ದೇವರಾಜಮೊಹಲ್ಲಾ ..	250	292	675	1619	2087	1156			
	12	ಬಸವನಮೊಹಲ್ಲಾ, ಕುಂಬಾರಗಿರಿ ..	305	188	270	1007	1263	677			
	13	ದೇವರಾಜಮೊಹಲ್ಲಾ, ಹೊಸಅಗ್ರಹಾರದಬಳಿ ..	250	144	162	750	644	320			
	14	ಕೃಷ್ಣರಾಜಮೊಹಲ್ಲಾ, ಹಳೇಅಗ್ರಹಾರ ..	485	228	355	1229	1224	581			
	15	ಆನೆ ತೇರುಬೀದಿ, ದೇವರಾಜಮೊಹಲ್ಲಾ ..	500	272	290	1104	854	1026			
	16	ಲಷ್ಕರ್ ಮೊಹಲ್ಲಾ ..	365	256	257	1151	918	416			
	17	ನಜರಬಾದ್ ಮೊಹಲ್ಲಾ ..	355	188	220	991	1020	534			
	18	ನಜರಬಾದ್ ಮೊಹಲ್ಲಾ ..	430	188	220	992	911	580			
	19	ಕೃಷ್ಣರಾಜಮೊಹಲ್ಲಾ, ಹಳೇಅಗ್ರಹಾರ ..	425	208	390	1117	1300	911			

ಷೆಡ್ಯೂಲ್ ಪಟ್ಟಿ.

ಫಿರ್ಕಾದ ಹೆಸರು.		ಅಂಗಡಿಯಕ್ರಮ ನಂಬರು.	ಅಂಗಡಿ ಇರುವ ಸ್ಥಳ.	ಪ್ರತಿಅಂಗಡಿಯ ಗುತ್ತಿಗೆ ಮೊಬಲಗು.			ಪ್ರತಿ ಅಂಗಡಿಯಲ್ಲಿ ಬಿಕರಿ ಯಾದ ಷರಾಬಿನ ತಪ್ಸೀಲ್.			ಹರಾಜು ಸ್ಥಳ.	ಹರಾಜು ತಾರೀಖು.	ಷರಾ.
				1892-93	1893-94	1894-95	1892-93	1893-94	1894-95			
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.			
ಭಂಗಾರದ ಗಣಿಗಳು.	ಬೌರಿಂಗ್‌ಪೇಟೆ.	1	ಬೌರಿಂಗ್‌ಪ್ಯಾಟೆ ..	1840	832	1500	1549	1479	885	ಭಂಗಾರದಗಣಿ ಮ್ಯಾಜಿಸ್ಟ್ರೇಟರ ಆಫೀಸಿನಲ್ಲಿ.	1895ನೇ 4ನೇ ಮೇ ತಾರೀಖು.	
		2	ಡಿಟ್ಟೋ ..		904	1365	1546	1564	647			
		3	ಡಿಟ್ಟೋ ..		968	1265	881	1325	664			
		4	ಡಿಟ್ಟೋ ..		840	1415	1583	1501	671			
		5	ಉರಿಗಂ ..	890	1520	2370	2820	3906	1630			
		6	ಡಿಟ್ಟೋ ..	805	1508	2345	2300	2694	1206			
		7	ಸೋರ್ಣಕೊಪ್ಪ ..	655	1472	2335	2049	2380	1688			
		8	ಸೂರೇಪಲ್ಲಿ ..	880	2420	4250	2336	4613	2154			
	ಬೇತಮಂಗಲ.	1	ಉರಿಗಂ ..	780	1512	2415	1889	2547	2584			
		2	ಡಿಟ್ಟೋ ..	705	1516	2405	1930	2094	1670			
		3	ಡಿಟ್ಟೋ ..	705	1516	2360	2287	2961	1362			
		4	ಸೂರೆಪಲ್ಲಿ ..	895	2640	4200	3400	4071	1984			
		5	ಮಾದಮಂಗಲ ..	310	480	600	747	810	399			
		6	ಚಿನ್ನಾಗನಹಳ್ಳಿ ..	280	440	705	704	819	548			
		7	ಘಟ್ಟಿರ್ಯಾಗಡಹಳ್ಳಿ ..	755	1520	2410	1972	2572	1192			
		8	ಮಾಸಿಕ ..	1030	1616	4000	3999	4648	2139			
		9	ಡಿಟ್ಟೋ ..	1010	1612	4000	4186	3506	2534			
		10	ಲಕ್ಕಿನಾಯಕನಹಳ್ಳಿ ..	0	0	1330	..	..	608			

ಮೈಸೂರು ಗವರ್ನಮೆಂಟಿನಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ನಂ. 16183.—ಜಿ. 4152. ಮ॥ ತಾರೀಖು 27ನೇ ಮಾರ್ಚಿ 1895.—ಮದ್ರಾಸ್ ಪೋಸ್ಟ್‌ಮಾಸ್ಟರ್ ಜನರಲ್‌ರವರಿಂದ ಮೈಸೂರು ದೇಶದ ತಮಾಂ ಪೋಸ್ಟಲ್ ಆಫಿಸರ್‌ಗಳಿಗೆ ಸಾದರ್ ಮಾಡಲ್ಪಟ್ಟು ಇದರಡಿ ಕಂಡ ಲೆಟರ್ ಸರ್ವರ ತಿಳುವಳಿಕೆ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ:—

[ಮದ್ರಾಸ್ ಪೋಸ್ಟ್ ಮಾಸ್ಟರ್ ಜನರಲ್‌ರವರಿಂದ—ಮೈಸೂರು ದೇಶದ ತಮಾಂ ಪೋಸ್ಟಲ್ ಆಫಿಸರ್‌ಗಳಿಗೆ.

ಜಿ. ಯಲ್. ನಂ. 82. ಡಿ. ಸಿ. ಯಂ. 6. ನಂ.—2 ಮುಕ್ಕಾಂ 6ನೇ ಮಾರ್ಚಿ 1895—ಮದ್ರಾಸ್ ಪೋಸ್ಟ್ ಮಾಸ್ಟರ್ ಜನರಲ್‌ರವರ ಆಫಿಸ್.

ಮೈಸೂರ್ ಗವರ್ನಮೆಂಟಿಗೆ ಶೇರಿದ ಒಬ್ಬ ಉದ್ಯೋಗಸ್ಥನು ರಜಾದಮೇಲೆ ಇರುವ ಕಾಲದಲ್ಲಿ "ಮೈಸೂರ್ ಸರ್ಕಾರಿ" ಯಂಬದಾಗಿ ವಿಳಾಸ ಬರಿಯಲ್ಪಟ್ಟ ವಂದು ಪದಾರ್ಥವನ್ನ ಬಗರ್ ಹಾಸಲ್ ಪೋಸ್ಟಾಫಿಸ್ ಮುಖಾಂತರ ರವಾನಿಸುವ ಬಗ್ಯೆ ಇಂಡಿಯನ್ ಪೋಸ್ಟಲ್ ಗೈಡಿನ (1895ನೇ ಜನವರಿ ಮಾಹೆ ಬಗೆ) 330*ನೇ ಕ್ಲಾಜಿನ ನಿಯಮಗಳಿಗೆ ವಿರುದ್ಧವಾಗಿ ಒಂದಾನೊಂದು ವೇಳೆ ರುಜು ಮಾಡುತ್ತಾನೆ. ರಜಾದ ಮೇಲಿರುವ ಒಬ್ಬ ಆಫಿಸರನು ಗವರ್ನಮೆಂಟ್ ಆಫಿಸಿಗೆ ತಿಳಿಸಬೇಕಾದ ಯಾವ ಸರ್ಕಾರಿ ವರ್ತಮಾನದ ವಿಷಯದಲ್ಲಾಗಲಿ ಬಗರ್ ನೌಕರನಾಗಿ ಇರತಕ್ಕದ್ದು: ಮತ್ತು ಆತನು ಈ ಕಾರಣದಿಂದ ಒಂದು ಪದಾರ್ಥವನ್ನು "ಸರ್ಕಾರಿ" ಯಾಗಿ ಪೋಸ್ಟಾಫೀಸ್ ದ್ವಾರಾ ರವಾನಿಸುವದಕ್ಕೆ ಅಧಿಕಾರ ಉಂಟಾಗಿರುವದಿಲ್ಲ.

2. ಪರಂತು ಗವರ್ನಮೆಂಟ್ ಕೆಲಸಗಳಿಗೆ ಲಗಾವ್ ಆದ ಕಾಗದ ಪತ್ರಗಳನ್ನು "ಬಗರ್ ಹಾಸಲ್ ಸರ್ಕಾರಿ" ಯಂಬದಾಗಿ ಬರೆದು ರುಜುಮಾಡಿ ರವಾನಿಸುವದಕ್ಕೆ ಆತನಿಗೆ ಅವಕಾಶವಿರುತ್ತೆ, ಈ ಬಗ್ಯಾಗಿ ಇಂಡಿಯನ್ ಪೋಸ್ಟಲ್ ಗೈಡಿನ 138ನೇ ಕ್ಲಾಜಿನಲ್ಲಿ ನಿಯಮ ಉಂಟುಮಾಡಲ್ಪಟ್ಟಿರುತ್ತೆ: ಮತ್ತು ಈ ತರಹೆ ವಿಳಾಸ ಬರಿಯಲ್ಪಟ್ಟು ರವಾನಿಸುವನಿಂದ ಕ್ರಮವಾಗಿ ರುಜು ಮಾಡಲ್ಪಟ್ಟ ಪದಾರ್ಥಗಳು, ಮೈಸೂರು ಗವರ್ನಮೆಂಟಿಗೆ ಶೇರಿದ ಒಬ್ಬ ಉದ್ಯೋಗಸ್ಥನಿಗೆ ವಿಳಾಸ ಬರಿಯಲ್ಪಟ್ಟಿದ್ದ ಪಕ್ಷದಲ್ಲಿ ಬಗರ್ ಹಾಸಲ್ ಯಾವಾಗ್ಯೂ ಪಾವತಿ ಮಾಡಲ್ಪಡಬೇಕು. ಪರಂತು ಸದರೀ ಪದಾರ್ಥಗಳು ರವಾನಿಸಲ್ಪಡುವ ಮತ್ತು ಪಾವತಿ ಮಾಡಲ್ಪಡುವ ಉಭಯ ಸ್ಥಳಗಳೂ ಮೈಸೂರು ದೇಶದ ಸರಹದ್ದಿನೊಳಗೆ ಇರತಕ್ಕದ್ದು. ಹೆಚ್. ಫ್ಯಾರರ್, ಪೋಸ್ಟ್ ಮಾಸ್ಟರ್ ಜನರಲ್.]

ತಾರೀಖು 9ನೇ ಏಪ್ರೆಲ್ 1895.

ನಂ. 17007.—ಜಿ. 4727.—ಎಲ್. ಎಂ. ವ ಎಸ್. ಮಿಸ್ಟರ್ ಪಿ. ಯಸ್. ಅಚ್ಯುತರಾಯರು ವಿಶೇಷ ಕೆಲಸದಿಂದ ಶಿವಮೊಗ್ಗಾ ಸಿವಿಲ್ ಸರ್ಜನ್‌ರ ಆಫಿಸಿಗೆ ವಾಪಸ್ ಬಂದರಾಗಿ ಇದರಡಿ ಬರುವ ಸ್ಥಳ ವಿಲೇವಾರಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

1. ಅಸಿಸ್ಟೆಂಟ್ ಸರ್ಜನ್ ಎಲ್. ಎಂ. ವ ಎಸ್. ಮಿಸ್ಟರ್ ಬಿ. ಡಿ. ರಾಘವೇಂದ್ರರಾಯರು ಶಿವಮೊಗ್ಗಾ ಸಿವಿಲ್ ಆಸ್ಪಿಟಲ್‌ನಿಂದ ಬೆಂಗಳೂರಲ್ಲಿನ ಗವರ್ನಮೆಂಟ್ ಸಿಟೀ ಆಸ್ಪಿಟಲಿಗೆ.

2. ಸಬ್ ಅಸಿಸ್ಟೆಂಟ್ ಸರ್ಜನ್ ಯಂ. ಬಿ. ಮಿಸ್ಟರ್ ಎಸ್. ಕೆ. ಹನುಮಂತರಾಯರು ಬೆಂಗಳೂರಲ್ಲಿನ ಗವರ್ನಮೆಂಟ್ ಸಿಟೀ ಆಸ್ಪಿಟಲ್‌ನಿಂದ ಶಿವಮೊಗ್ಗಾ ಸಿವಿಲ್ ಆಸ್ಪಿಟಲಿಗೆ.

ತಾರೀಖು 10ನೇ ಏಪ್ರಿಲ್ 1895.

ನಂ. 16979.—ಜಿ. 4719.—ವಿಶೇಷ ಕೆಲಸದ ಮೇಲಿರುವ ಅಮಲ್ದಾರ್ ಕೆ. ಜಿ. ಶಾಮಂಣ ಬಿ. ಎ. ಯವರು ಕೋಲಾರ್ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ ಮಾಜಿಸ್ಟ್ರೇಟರಾಗಿ ಕಳುಹಿಸಲ್ಪಟ್ಟಿರುತ್ತಾರೆ.

ನಂ. 17003.—ಜಿ. 4723.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಮೇರೆ ಅಸಿಸ್ಟೆಂಟ್ ಸರ್ಜನ್ ಮಿಸ್ಟರ್ ಇ. ಯಸ್. ಕ್ರಿಷ್ಣಸಾಮಿ ಅಯ್ಯರ್ ಯವರಿಗೆ, 1895ನೇ ಇಸವಿ ಮಾರ್ಚಿ 19ನೇ ತಾರೀಖಿನಾರಭ್ಯ ಆರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬಮೋಜಿಬ್,
ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರೆಟರಿ.

ನಂ. 16786.—ಜೆ. 1032 ತಾರೀಖು 6ನೇ ಏಪ್ರಿಲ್ 1895.

1895ನೇ ಇಸವಿ ಫಿಬ್ರವರಿ 12ನೇ ಮುರ್ಕುಂ 12143—4. ಜಿ. 2907ನೇ ನಂಬರ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಮೂಲಕ ಮೈಸೂರ್ ಸಿಟೀ ಮಾಜಿಸ್ಟ್ರೇಟ್ ಮಿಸ್ಟರ್ ಪಿ. ಪಂಚನಾಥರಾಯರಿಗೆ ಕೊಡಲ್ಪಟ್ಟ ಅಯಿದು ದಿವಸಗಳ ಕ್ಯಾಜುಯಲ್ ರಜಾ ಮತ್ತೊಂದು ದಿವಸ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 6ನೇ ಏಪ್ರಿಲ್ 1895.

ನಂ. 16792.—ಆರ್. 2349.—ಫಾರೆಸ್ಟ್ ಡೆಪ್ಯುಟಿ ಕನ್ಸರ್ವೇಟರ ಮಿಸ್ಟರ್ ಸಿ. ಇ. ಯಂ. ರಸ್ಸಲ್ ಯವರು, 1894ನೇ ಇಸವಿ ಜುಲೈ 23ನೇ ಮುರ್ಕುಂ 1377.—ಜಿ. ಎಫ್. 13—93ನೇ ನಂಬರ ಇಸ್ತಿಹಾರ್ ಮೂಲಕ ಅವರಿಗೆ ಕೊಡಲ್ಪಟ್ಟ ಯೆಂಟು ತಿಂಗಳ ರಜಾದಿಂದ ವಾಪಸ ಬಂದು 1895ನೇ ಇಸವಿ ಮಾರ್ಚಿ 11ನೇ ತಾರೀಖಿನ ಪೂರ್ವಾನ್ಹ ಕಡೂರು ಡಿಸ್ಟ್ರಿಕ್ಟಿನ ಫಾರೆಸ್ಟ್ ಆಫೀಸ ಚಾರ್ಜನ್ನು ಮರಳಿ ತೆಗದುಕೊಂಡಿರುತ್ತಾರೆ.

ನಂ. 16793.—ಆರ್. 2350—ಮೈಸೂರ್ ಸಿವಿಲ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಮೇರೆ ಕೆಡ್ಡಾ ಸೂಪರಿನ್‌ಟೆಂಡೆಂಟ್ ಮಿಸ್ಟರ್ ಕೆ. ಶಾಮಯ್ಯಂಗಾರ್ ಯವರಿಗೆ, 1895ನೇ ಇಸವಿ ಏಪ್ರಿಲ್ 2ನೇ ತಾರೀಖು ಲಾಗಾಯತು 4ನೇ ತಾರೀಖು ಪರಿಯಂತ ಈ ವುಭಯ ದಿವಸಗಳೂ ಶೇರಿ ಮೂರು ದಿವಸ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 15] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಏಪ್ರೆಲ್ ತಾ|| 25, ಸ್ನ 1895.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್ನಾಮೆ.

ನಂ. 5. ತಾರೀಖು 9ನೇ ಏಪ್ರೆಲ್ ಸ್ನ 1895.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಲೇಟ್ ವಸ್ತಾರಾ, ಹಾಲಿ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಇರತಕ್ಕ ಚಿಲ್ಲರೆ ಇನಾಂಗಳ ಬಾಬತು (304) ಫೈನಲ್ ಟೈಟಲ್ ಡೀಡ್‌ಯಾನೆ ಕಾಯಂಪಟ್ಟೆಗಳು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ದ್ವಾರಾ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟಿವೆ.

2. ಸದರೀ ತಾಲ್ಲೂಕಿನ ಅಮಲ್ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರ್ರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟೀಸುಗಳನ್ನು ದೇರ್ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಯಿರುತ್ತಾರೆ.

3. ಸದರೀ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫಿಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಶೆಯಿಂದ ಪ್ರಕಟಿಸಲ್ಪಟ್ಟು ಯಿರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಇನಾಂ ಸೆಟ್ಲ್‌ಮೆಂಟ್.

ಫಾರೆಸ್ಟ್ ಇಲಾಖಾ.

ತಾರೀಖು 17ನೇ ಏಪ್ರೈಲ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರಡಿ ನಮೂದಿಸಿರುವ ಚವುಬೀನೆ ಮತ್ತು ಬೊಂಬು ಶಿವಮೊಗ್ಗಾ ಡಿಸ್ಟ್ರಿಕ್ಟ್ಕು ಡಿಪೋಗಳಲ್ಲಿ ಅವುಗಳ ಬಾಜೂದಲ್ಲಿ ಕಾಣುವ ತಾರೀಖುಗಳಲ್ಲಿ ಫಾರೆಸ್ಟ್ ಆಫಿಸರ್ ಮತ್ತು ಡೆಪ್ಯುಟಿ ಕಮಿಷನರ್ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರ್‌ಗಳಿಂದ ಹರಾಜು ಮಾಡಿಸಲ್ಪಡುವದು.

ನಂಬರು.	ಡಿಪೋ ಹೆಸರು.		ಹರಾಜು ತಾರೀಖು.	ಸಾಗುವಾನಿ ನಾಟಾ.	ಕಾಡುಜಾತಿ ನಾಟಾ.	ಸಾಗುವಾನಿ ಬೆಲಗು ಮತ್ತು ತುಂಡು.	ಕಾಡುಜಾತಿ ಬೆಲಗು.	ಬೊಂಬು.	ಷರಾ.
1	ಆನವಟ್ಟಿ	..	1—5—1895	20	..	100	100	200	ನಗದು ಹಣಕ್ಕೆ.
2	ಶಿರಾಳಕೊಪ್ಪ	..	4—5—1895	10	120	120	50	200	
3	ಶಿಕಾರಿಪುರ	..	7—5—1895	10	150	150	..	4,000	
4	ಚನ್ನಗಿರಿ	..	10—5—1895	..	..	200	..	8,000	
5	ಪುಬ್ರಾಣಿ	..	13—5—1895	..	..	500	200	10,000	
6	ಆಯನೂರು	..	31—5—1895	80	70	800	..	5,000	
7	ಶಿವಮೊಗ್ಗಾ	..	6—6—1895	50	100	500	100	8,000	
8	ಕಣಬೂರು	..	10—6—1895	50	150	500	..	..	
9	ಸಮುದ್ರಹಳ್ಳಿ	..	11—6—1895	50	150	500	..	..	
10	ಚೋರ್ನಡಿಹಳ್ಳಿ	..	12—6—1895	..	..	500	..	..	

ಹರಾಜ್ ಷರತ್ತುಗಳು—ಸರ್ 1895ನೇ ಇಸವಿ 15ನೇ ಮಾರ್ಚಿ 15229—ಆರ್. ಎಫ್. 155-92ನೇ ನಂಬರ್ ಗವರ್ನಮೆಂಟ್ ಇಸ್ತಿಹಾರಿನಲ್ಲಿ ಫಾಯಿಷ್ ಮಾಡಲ್ಪಟ್ಟಿರತಕ್ಕ ರೂಲ್ಸ್ ನೋಡಿಕೊಳ್ಳತಕ್ಕದ್ದು.

ನೋಟಿಸ.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.					ಅಸಲ್ ಖರೀದಿ (ರೂಪಾಯಿ.)	
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ			..	..	ವಂದಕ್ಕೆ	150
2	ಇಂಗ್ಲಾಂಡ್ ಪೋರ್ಟರು ಬ್ರದರಸ್‌ರ		ಡಿಟೋ	..	..	„	170
1	ಮದ್ರಾಸ್ ಓಕ್ಸರವರ		ಡಿಟೋ	..	..	„	250
1	ಡಿಟೋ	ಡಿಟೋ	ಡಿಟೋ	..	..	„	188
1	ಡಿಟೋ	ಪೋರ್ತಾಮ್‌ರವರ	ಡಿಟೋ	..	..	„	85

ಖರೀದೀದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ, ಅಸಲ್ ಖರೀದಿಯಲ್ಲಿ ಶೇಕಡಾ $12\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಟ್‌ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ಇದರಿಂದ ಯಲ್ಲರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಡಿಸ್ಟ್ರಿಕ್ಟು ಕಾರ್ಖಾನಹಳ್ಳಿ, ಚನ್ನಪಟ್ಣ, ಕ್ಲೋಸ್‌ಪೇಟೆ, ಮಾಗಡಿ, ದೊಡ್ಡಬಳ್ಳಾಪುರ ಈ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟು ವೈಶಾಖಿ ಪಸಾರೆ ಬಾಬುಗಳನ್ನು 1895—96ನೇ ಸಾಲಿಗೋಸ್ಕರ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಆಯಾ ತಾಲ್ಲೂಕು ಅಮೀಲರನ್ನ ಇಟ್ಟುಕೊಂಡು ಈ ಕೆಳಗೆ ಕಂಡ ತಖ್ತೇಲಿ ನಮೂದಿಸುವ ತಾರೀಖಿನಲ್ಲಿ ಆಯಾಯ ಸ್ಥಳದಲ್ಲಿ ಹರಾಜು ಮಾಡಿಸುತ್ತಾರೆ.

2. ಚಡಸವಾಲ್‌ದಾರನು ಹರಾಜು ಕೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ $\frac{1}{4}$ ಡಿಪಾಜಿಟ್ ಹಾಜರ್ಮಾಡಬೇಕು ಬಾಕಿ $\frac{3}{4}$ ಹಿಸ್ಸೆ ಮೊಬಲಗನ್ನು ಹರಾಜು ಮಂಜೂರ್ಮಾಡಿ ಅಮಲ್‌ದಾರರಿಂದ ಬರಹ ಮೂಲಕ ವರ್ತಮಾನ ಕೊಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಹಾಜರ್ಮಾಡಬೇಕು ತಪ್ಪಿದರೆ ಬಾಬನ್ನು ಪುನಹ ಹರಾಜು ಮಾಡಿಸಿ ಲುಕ್ಸಾನಿಗೆ ಆವಲ್ ಹರಾಜುದಾರನನ್ನ ಗುರಿಮಾಡುತ್ತೆ.

ನಂಬರು	ಫಾರೆಸ್ಟಿನ ಹೆಸರು	ಹರಾಜು ತಾರೀಖು	ಹರಾಜಾಗತಕ್ಕ ಸ್ಥಳ
1	ಕುಂಬ್ಳ ಗೋಡು	4—5—95	ಬಿಡದಿ
2	ಹುಲ್ತಾರು	ಡಿಟೋ	ಡಿಟೋ
3	ಹಂದಿಗೊಂದಿ	ಡಿಟೋ	ಡಿಟೋ
4	ಅಚಲು	ಡಿಟೋ	ಡಿಟೋ
5	ತೆಂಗಿನಕಲ್	7—5—95	ಚನ್ನಪಟ್ಣ
6	ಮಾಕಳಿ		
7	ಚಿಕ್ಕ ಮಣ್ಣು ಗುಡ್ಡೆ		
8	ದೊಡ್ಡ ಮಣ್ಣು ಗುಡ್ಡೆ		
9	ಕೋಳಿರಾಯನದುರ್ಗ		
10	ಬಾಣಂತಿಮಾರಿ	11—5—95	ಕಾರ್ಖಾನಹಳ್ಳಿ
11	ಕಬ್ಬಾಳು ಮತ್ತು ಭೀಮನಕರಡಿ		
12	ಬಿಳಿಕಲ್		
13	ಚೀಲಂದಾಡಿ ಮತ್ತು ಮೂಗೂರು		
14	ಬಸವನಬೆಟ್ಟ		
15	ರಾಗಿಹಳ್ಳಿ		
16	ಸಾವಂದುರ್ಗ	22—5—95	ಮಾಗಡಿ
17	ಉಜನಿ ಹುಲ್ಕಡಿ ಮತ್ತು ಮಾಕಳಿ	27—5—95	ದೊಡ್ಡಬಳ್ಳಾಪುರ

ಯು. ಶೀತಾರಾಮಯ್ಯ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ.

ಮೋಜಣಿ ಖರ್ಚು ಮೊಬಲಗು 338—7—2.

ಮಾಗಡಿ ತಾಲ್ಲೂಕು ಕಚೇರಿಯಿಂದ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1ನೇ ಮೋಜಣಿ ಖರ್ಚಿನ ಕಂದಾಯದ ಬಾಕೀದಾರರಾದ ಬವರಿಂಗ್‌ಪೇಟೆ ತಾಲ್ಲೂಕು ತಿಮ್ಮಸಂದ್ರ ಗ್ರಾಮದ ಶಾನುಭೋಗ ವೆಂಗಟರಮಣಯ್ಯನ ಮಕ್ಕಳು ಗುಂಡಪ್ಪನವರಿಂದ ಬರಬೇಕಾದ ಜಮೀ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ತಾವರೆಕೆರೆ ಹೋಬಳಿ ಕಾಯಂಗುತ್ತಾ ಯಲಚಗುಪ್ಪೆ ಗ್ರಾಮದಲ್ಲಿ 1895ನೇ ಮೇ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಈ ಹರಾಜು 22—5—95ನೇ ದಿವ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894–95ನೇ ಸಾಲಿಗೆ ಪೂರ್ತಿಯಾಗಿ 338—7–2 ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 338—7—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ನ್ನ ಡಿಪಾಜಿಟ್ ಹಾಜರ್ ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಶಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು 'ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು, ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು. ಹರಾಜು ಮೊಬಲಗು ಧಡಸವಾಲ್‌ದಾರನು ಪೂರಾಕೊಟ್ಟಮಾತ್ರದಿಂದಲೇ ಆಖೈರ್ ಸವಾಲನ್ನು ಮಂಜೂರ್ಮಾಡಲು ಗವರ್ನಮೆಂಟಿನವರು ಬದ್ಧರಾಗಿರುವದಿಲ್ಲ.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಪ್ಸೀಲು.									ಸರಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.		
				ಕಟ್ಟಡಗಳು.		ಜಮೀನು.									
				ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.					
1	2	3	4	5	6	7	8	9		10			11		
					ರೂ.ಆ.ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.
ಮಾಗಡಿ.	ತಾವರೆಕೆರೆ.	ಕಾಯಂಗುತ್ತಾ ಯಲಚಗುಪ್ಪೆ.	ಬವರಿಂಗಪೇಟೆ ತಾಲ್ಲೂಕು ತಿಮ್ಮಸಂದ್ರದ ಶಾನುಭೋಗರು ವೆಂಕಟರಮಣಯ್ಯನವರ ಮಕ್ಕಳು ಗುಂಡಪ್ಪನವರು	..		ಕಾಯಂಗುತ್ತಾ ಯಲಚಗುಪ್ಪೆ ಗ್ರಾಮ ಪೂರ್ತಾ	ಖುಷ್ಕೀ	301	25	625	8	0	338	7	2
							ತರೀ	30	36						
							ಬಾಗಾಯಿತು	6	28						
							ವಟ್ಟು	339	9				ಮೋಜಣಿ ಖರ್ಚು ಮೊಬಲಗು		
							ಈ ಗ್ರಾಮಕ್ಕೆ ಸಾಲಿಯಾನಾ ಸರ್ಕಾರಕ್ಕೆ ಬರತಕ್ಕದ್ದು.								
							ಐನ್ ಜೋಡಿ	0	0	391	0	0			
							ಚಿಲ್ಲರೆ ಇನಾಂ	0	0	3	6	0			
							ಸೆನ್ ಜೋಡಿ ಬ	0	0	24	7	0			
							ಗೆ ಚಿಲ್ಲರೆ ಇನಾಂ								
							ತಿಗೆ ಸೆಸ್ಸು	0	0	1	12	6			
									ವಟ್ಟು	420	9	6			

* ಯಾ ಬಾಕೀ ಇರುವ ಮುಷ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಈ ಹರಾಜನ್ನು 1894—95ನೇ ಇಸವಿ ಕಂದಾಯವನ್ನು ಕೊಡುವ ಷರತ್ತಿನ ಮೇಲೆ ಕೂಗಿಸಲ್ಪಡುತ್ತೆ.

ಯಂ. ನಾಮಕಲ್‌ರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 17ನೇ ಏಪ್ರೈಲ್ 1895ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರುವ ದಸ್ತಾವೇಜುಗಳನ್ನು ಕ್ರಮವಾದ ವಾರಸ್‌ದಾರರಾಗಲಿ ಅಥವಾ ಅವರಿಂದ ಕ್ರಮವಾದ ಅಧಿಕಾರ ಪಡದುಕೊಂಡ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಆ ಸಬ್ ರಿಜಿಸ್ಟ್ರಾರ್ರ ಮುಂದೆ ಹಾಜರಾಗಿ ವಾಪಸ್ ತೆಗದುಕೊಂಡು ಹೋಗಬಹುದು, ಇಲ್ಲವಾದರೆ ಇಂಡಿಯನ್ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್‌ಷನ್ ಪ್ರಕಾರ ಅವುಗಳನ್ನು ನಾಶಪಡಿಸಲಾದೀತು.

ಆಫೀಸ್ ಹೆಸರು.	ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನವಗೈರೆ.	ದಸ್ತಾವೇಜಿನ ತಾರೀಖು.	ರೆಜಿಸ್ಟ್ರಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಮಾಲೂರು	179 1892—93	1 ಮಾಲೂರು ಕಸಬಾದಲ್ಲಿರುವ ಮುಸ್ಮರ್ಖಾನ್ ಕಂಪೆನಿಗೆ ಶೇರಿದ ಮುಸವರ್ಖಾನ್ 2 ಮೇಲ್‌ವಿಷಾರಂ ಖಾದರ್ ಹುಸೇನ್‌ಸಾಬಿ 3 ಅಬ್ದುಲ್‌ಖಾದರ್ ಸಾಬಿ	ಮೇಲ್‌ವಿಷಾರಂ ಅಮೀನುದೀನ್ ಸಾಬಿ ಮಗ ಅಬ್ದುಲ್ ಅಜೀಜ್‌ಸಾಬಿ	1892ನೇ ಇಸವಿ ಜೂನ್ ತಾರೀಖು 1	1892ನೇ ಇಸವಿ ಅಕ್ಟೋಬರ್ ತಾರೀಖು 10	800 ರೂಪಾಯಿಗೆ ಸರ್ವೆಗಿಡಗಳನ್ನ ಕ್ರಯಮಾಡಿರುವದಾಗಿ
	180 1892—93	1 ಮಾಲೂರು ಕಸಬಾದಲ್ಲಿರುವ ಮುಸ್ಮರ್ಖಾನ್ ಕಂಪೆನಿ ಏಜಂಟ್ ಮೇಲ್‌ವಿಷಾರಂ ಅಮೀನುದೀನ್ ಸಾಹೆಬರ ಮಗ ಖಾದರ್ ಹುಸೇನ್‌ಸಾಬಿ 2 ಮುಸವರ್ಖಾನ್ 3 ಅಬ್ದುಲ್‌ಖಾದರ್‌ಸಾಬಿ	ಮೇಲ್‌ವಿಷಾರಂ ಅಮೀನುದೀನ್‌ಸಾಬಿ ಮಗ ಅಬ್ದುಲ್ ಅಜೀಜ್‌ಸಾಬಿ	1892ನೇ ಇಸವಿ ಜೂನ್ ತಾರೀಖು 1	1892ನೇ ಇಸವಿ ಅಕ್ಟೋಬರ್ ತಾರೀಖು 10	200 ರೂಪಾಯಿಗೆ ಸರ್ವೆ ಮರಗಳನ್ನ ಕ್ರಯಮಾಡಿರುವದಾಗಿ

ಅಬ್ದುಲ್‌ಅಜೀಜ್,
ಫಾರ್ ರೆಜಿಸ್ಟ್ರಾರ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 13ನೇ ಏಪ್ರೈಲ್ 1895.

1. ಜೋಡಿ ಮತ್ತು ಕಾಯಂಗುತ್ತಾ ಬಾಕೀದಾರರಾದ ವೆಂಕಂಭಟ್ಟ ವಗೈರೆರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಫಾರ್ಫಿಟ್ ಮಾಡಲ್ಪಟ್ಟ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಅಮಲ್ದಾರ್ರ ಕಚೇರೀಲಿ 1895ನೇ ಇಸವಿ ಮೇ 31ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜ್‌ದಾರನು 1894—95ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಕೀಲ್ ಮೇರಿಗೆ 135—3–4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜ್ಞಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂತಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ, ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ, ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ, ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ **ಸ**ಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್ಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಪ್ಸೀಲ್.											ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.		
				ಕಟ್ಟಡಗಳು.				ಜಮೀನು.									
				ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.			ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.					
1	2	3	4	5	6			7	8	9		10			11		
					ರೂ.	ಅ.	ಪೈ.			ಖಂಡಿ.	ಕು.	ರೂ.	ಅ.	ಪೈ.	ರೂ.	ಅ.	ಪೈ.
ಕೋಲಾರ	ಸುಗಟೂರು	ಸೋಮಾಂಬುಧಿ ಅಗ್ರಹಾರ ಜೋಡಿ	ವೆಂಕಂಭಟ್ಟ	..	..	..	..	ಗ್ರಾಮದಲ್ಲಿ ಬಾಕಿದಾರನಿಗೆ ಇರುವ $\frac{1}{10}$ ಹಿಸ್ಸೆ	ಖುಷ್ಕಿ ತರೀ ಬಾಗಾಯತು	55	2¾	350	3	9	26	14	3
									ಜೋಡಿ			247	4	0			
									ಲೋಕಲ್‌ಸೆಸ್			25	14	10			
												273	2	10			
		ಮೊಟ್ಟನಹಳ್ಳಿ ಜೋಡಿ	ರಾಮಪ್ಪ	..	..	..	..	ಗ್ರಾಮದಲ್ಲಿ ಬಾಕಿದಾರನಿಗೆ ಇರುವ $\frac{1}{8}$ ಹಿಸ್ಸೆ	ಖುಷ್ಕಿ ತರೀ ಬಾಗಾಯತು	15	10¾	296	11	8	32	5	0
									ಜೋಡಿ			224	0	0			
									ಲೋಕಲ್‌ಸೆಸ್			18	8	9			
												242	8	9			
	ವೇಮಗಲ್	ಬಾಲನಾಗನಹಳ್ಳಿ ಕಾಯಂಗುತ್ತಾ	ಶೀನಪ್ಪ ರುಕ್ಮಿಣಿಅಮ್ಮ	..	..	..	..	ಪೂರಾ ಗ್ರಾಮ	ಖುಷ್ಕಿ ತರೀ ಬಾಗಾಯತು	14	13½	80	9	8	76	0	1
									ಕಾಯಂಗುತ್ತಾ			71	0	0			
									ಲೋಕಲ್‌ಸೆಸ್			5	0	1			
												76	0	1	ಕುಲ್ 135–3–4		

ಷರಾ—ಮೊದಲಿನ ಇನಾಂದಾರು ಮಾಡಿದ ಭೋಗ್ಯ ವಗೈರೆ ಭಾರವಿಲ್ಲದೆ ಹರಾಜ್ ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ಇಸ್ತಿಹಾರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 15ನೇ ಏಪ್ರೈಲ್ 1895.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟ್ ಶಿರಾ ತಾಲ್ಲೂಕು ಸರ್ವೆಸೆಟ್ಲ್‌ಮೆಂಟ್ ಆಗಿ 25 ವರುಷಗಳು ಆಗುತ್ತಾ ಬಂದಿರುವ ಪ್ರಯುಕ್ತ ಸನ್ 1895ನೇ ಇಸವಿ ಮಾರ್ಚಿ 11ನೇ ಮರ್ಸೂಂ 14523—30—R. F. 157—93ನೇ ನಂಬರು ಗವರ್ನಮೆಂಟ್ ಆರ್ಡರನ್ನನುಸರಿಸಿ ಸದರೀ ತಾಲ್ಲೂಕು ಕಚೇರಿ ರಿಕಾರ್ಡಿನಲ್ಲಿ ಇರುವ 1807—1808ನೇ ಪ್ರಭವ ಸಾಲ್ ಲಾಗಾಯತು 1869—70ನೇ ಶುಕ್ಲ ಸಾಲ್ ವರಿಗಿನ ದಿಟ್ಟಂಚಿತ್ತೆ ಮತ್ತು ಕುಳವಾರು ಚಿತ್ತ ಲೆಖ್ಖಗಳು ಜಲಾಯಿಸಲ್ಪಡುತ್ತವೆ.

ಸದರೀ ಚಿತ್ತ ಲೆಖ್ಖಗಳ ನಕಲುಗಳನ್ನು ಪಡಿಯಲು ಅಪೇಕ್ಷೆವುಳ್ಳವರು ಈ ತಾರೀಖು ಲಾಗಾಯತು 6 ತಿಂಗಳ ವಳಗಾಗಿ ಶಿರಾ ತಾಲ್ಲೂಕು ಅಮಲ್ದಾರ್ರಿಗೆ ಬರದುಕೊಂಡು ನಕಲುಗಳನ್ನು ಪಡಿಯಬಹುದು ಆ ವಾಯಿದೆ ಆದ ನಂತರ ನಕಲುಗಳು ದೊರಿಯಲಾರವು.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1894—95ನೇ ಇಸವಿ ಅರ್ಜೀ ನಂಬರ್ 329.

ಮೃತಪಟ್ಟ ಕೊಟ್ರೂರಪ್ಪನವರ ಆಸ್ತೀ ವಿಷಯದಲ್ಲಿ —

ಅರ್ಜಿದಾರ್ರು ಚನ್ನಬಸಪ್ಪನವರು, ಮೃತಪಟ್ಟ ಸದರೀ ಕೊಟ್ರೂರಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ವರಕೋಡು ಹೋಬಳಿ ವುತ್ತನಹಳ್ಳಿ ಸ್ಥಳದ ಸದರೀ ಚನ್ನಬಸಪ್ಪನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಕೊಟ್ರೂರಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 13,750 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನಬಸಪ್ಪನವರ ಅರ್ಜಿಯನ್ನು ಸನ್ 1895ನೇ ಇಸವಿ ಮೇ ತಿಂಗಳ ತಾರೀಖು 31ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೊಟ್ರೂರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1894—95ನೇ ಇಸವಿ ಅರ್ಜೀ ನಂಬರು 335.

ಮೃತಪಟ್ಟ ತಿಮ್ಮಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು ಚಿಕ್ಕನಾಗಯ್ಯನವರು, ಮೃತಪಟ್ಟ ಸದರೀ ತಿಮ್ಮಮ್ಮನವರಿಗೆ ಗಂಡ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸಂತೆಪ್ಯಾಟೆ ಸ್ಥಳದ ಸದರೀ ಚಿಕ್ಕನಾಗಯ್ಯನವರು, ಸದರೀ ವಾಸಸ್ಥರಾಗಿ ಮೃತಪಟ್ಟ ತಿಮ್ಮಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿ ಸಾಲವನ್ನು ವಸೂಲ್ ಮಾಡುವಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕನಾಗಯ್ಯನವರ ಅರ್ಜಿಯನ್ನು ಸನ್ 1895ನೇ ಇಸವಿ ಮೇ ತಿಂಗಳ ತಾರೀಖು 31ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

---

189 ನೇ ಇಸವಿ ಅರ್ಜೀ ನಂಬರ್ 336.

ಮೃತಪಟ್ಟ ಮೇಸ್ತ್ರಿ ವೆಂಕಟರಮಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು ವೆಂಗಟೇಶಯ್ಯ ಮೈನರ್, ಗಾರ್ಡಿಯನ್ ಚಿಕ್ಕಪ್ಪ ವೆಂಗಟರಮಣಯ್ಯನವರು, ವುರಫ್ ವೆಂಗಟಸತಯ್ಯನವರು, ಮೃತಪಟ್ಟ ಸದರೀ ವೆಂಗಟರಮಣಯ್ಯನವರಿಗೆ, ಮೈನರು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಮಂಡಿಮೊಹಲಾ ಸ್ಥಳದ ಸದರೀ ವೆಂಗಟರಮಣಯ್ಯ ವುರಫ್ ವೆಂಗಟಪತಯ್ಯನವರು ಸದರೀ ವಾಸಸ್ಥರಾಗಿ ಮೃತಪಟ್ಟವೆಂಗಟರಮಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿ ಸಾಲವನ್ನುವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಗಟರಮಣಯ್ಯ ವುರಫ್ ವೆಂಗಟಪತಯ್ಯನವರ ಅರ್ಜಿಯನ್ನು 1895ನೇ ಇಸವಿ ಮೇ ತಿಂಗಳ ತಾರೀಖು 31ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಗಟರಮಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ 1894—95ನೇ ಇಸವಿ ಅರ್ಜೀ ನಂಬರ್ 406.

ಮೃತಪಟ್ಟ ಉಪಾಧ್ಯಾರಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜಿದಾರು) ನಾಗಪ್ಪನವರು, ಮೃತಪಟ್ಟ ಸದರೀ ರಾಮಯ್ಯನವರಿಗೆ, ಸಹೋದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಹಳ್ಳದಕೇರಿ ನಾಗಪ್ಪನವರು, ಸದರೀ ವಾಸಸ್ಥರಾಗಿ ಮೃತಪಟ್ಟ ರಾಮಯ್ಯನವರ ಜಿಂದಗಿ ಬಗ್ಗ್ಯಾಗಿಬರತಕ್ಕ 450 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾಗಪ್ಪನವರ ಅರ್ಜಿಯನ್ನು 1895ನೇ ಇಸವಿ ಮೇ ತಿಂಗಳ ತಾರೀಖು 31ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ 1895ನೇ ಇಸವಿ ಏಪ್ರೆಲ್ ತಿಂಗಳ 10ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಯಂ. ರಾಮಸ್ವಾಮಯ್ಯರ್,
ಅಫಿಷಿಯೇಟಿಂಗ್ ಡಿಸ್ಟ್ರಿಕ್ಟು ಜಡ್ಜ್.

ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 6ನೇ ಏಪ್ರೆಲ್ 1895.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟು ಬಾಬತು ಈ ಕೆಳಗೆ ವಿವರಿಸಿರುವ ಪಸಾರೆ ಜಿನಸಿಗಳು ಸ 1895ನೇ ಇಸವಿ ಏಪ್ರೆಲ್ ತಾರೀಖು 30ರಲ್ಲು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಮೈಸೂರು ವುಡಿಯಾರಡಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸಿ ತಪ್ಸೀಲ್.	ಸುಮಾರು ಮೊತ್ತ.	
	ಮಣ.	ಪಾ.
ಅಳಲೆಕಾಯಿ	3,000	..
ಅರಗು	130	..

ಷರತ್ತು—ಮೈಸೂರು ಗೆಜೆಟ್ 93ನೇ ಜನವರಿ 12ನೇ ಮುರ್ಕುಮಿನಲ್ಲಿ ಚವಬೀನೆ ಮತ್ತು ಜೊಂಬು ವಿಷಯದಲ್ಲಿ ಫಾಯಿಷ್ ಮಾಡಿರುವ 1892ನೇ ಇಸವಿ ನವಂಬರು 29ನೇ ಮುರ್ಕುಂ 7953-ಆರ್. ಎಫ್. 155—92ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ಮೇರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ಹಾಸನ ಡಿಸ್ಟ್ರಿಕ್ಟು.

ಇದರಲ್ಲಿ ನಮೂದಾಗುವ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತೈವಜುಗಳನ್ನು ಕ್ರಮವಾದ ವಾರಸ್‌ದಾರ್ರ್ಯಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ಇಸವಿ.	ಪತ್ರ ಬರದುಕೊಟ್ಟವನ ಹೆಸರು.	ಪತ್ರ ಬರಸಿಕೊಂಡವನ ಹೆಸರು.	ಪತ್ರದ ತಾರೀಖು.	ರಿಜಿಸ್ಟರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತೈವಜಿನ ಸ್ವಭಾವ ಮತ್ತು ಮೊಬಲಗು.
376 1892-93ನೇ ಇಸವಿ	ಹಾಸನದ ತಾಲ್ಲೂಕು ಕಟ್ಟಾಯದ ಹೋಬಳಿ ಗೊರೂರು ಗ್ರಾಮದ ಶ್ರೀವೈಷ್ಣವ ಬ್ರಾಹ್ಮಣ ಜವಳಿ ವೆಂಕಟಪ್ಪನವರ ಮಗ ನರಸಿಂಹಾಚಾರು)	ಹಾಸನದ ತಾಲ್ಲೂಕು ಕಟ್ಟಾಯದ ಹೋಬಳಿ ಅಂಕನಹಳ್ಳಿ ಪಟೇಲ್ ಸುಬ್ಬೇಗವುಡನ ಹೆಂಡತಿ ಈರಮ್ಮ	4—1—93	7—1—93	7—1—93	ಕಟ್ಟಾಯದ ಹೋಬಳಿ ಅಂಕನಹಳ್ಳಿ ಗ್ರಾಮದಲ್ಲಿ 1 ಸರ್ವೆ ನಂ. 1ನೇ ಪೈಕಿ ಖುಷ್ಕೀ ಎಕರೆ 6 ಗುಂಟೆ 27 ಆಕಾರ ರೂ. 7—12—0 ಪೈಕಿ 6ರಲ್ಲಿ 1 ಭಾಗ ಎಕರೆ 1 ಗುಂಟೆ 4 ಆಕಾರ 1-4-0 ನಂಬರ್ 52ನೇ ಹೊಲದ ಪೈಕಿ ಅರ್ಧ ಎಕರೆ 1 ಗುಂಟೆ 15 ಆಕಾರ 1-8 ಈ ಸ್ವತ್ತು 25 ರೂಪಾಯಿಗೆ ಕ್ರಯ

ಪಿ. ಎನ್. ಪೂರ್ಣಯ್ಯ, ಡಿ॥ ರೆಜಿಸ್ಟ್ರಾರ್.

ನೋಟಿಫಿಕೇಷನ್.

ತಾರೀಖು 19ನೇ ಏಪ್ರೈಲ್ 1895.

ಇದರಿಂದ ಸಕಲಜನಗಳೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಚಾಲ್ತಿ ಸಾಲಿನಲ್ಲಿ ಫಾರೆಸ್ಟು ಇಲಾಖಾ ಮಾರಿಫತ್ತು ಜಮಾಯಿಸಲ್ಪಟ್ಟ ಹಿರೀಕಲ್‌ಗುಡ್ಡ ವಗೈರೆ ಸ್ಟೇಟ್ ಫಾರೆಸ್ಟುಗಳ ಅಳಲೇಕಾಯಿಗಳನ್ನು ಈ ಕೆಳಗೆ ಕಾಣುವ ಸ್ಥಳ ಮತ್ತು ತಾರೀಖುಗಳಲ್ಲಿ ಹರಾಜು ಮಾಡಲ್ಪಡುತ್ತವೆ.

ಹರಾಜು ಆಗುವಸ್ಥಳ.	ತಾರೀಖು.	ಮೊತ್ತ.	
ಹಾಸನ ..	10ನೇ ಮೇ 1895	500 ಮಣ	ಅಳಲೇಕಾಯಿ
ಅರ್ಶಿಕೆರೆ ..	15ನೇ ಮೇ 1895	1500 ಮಣ	

ಷರತ್ತುಗಳು.

ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ 1887ನೇ ಇಸವಿ ಜೂನ್ 11ನೇ ಮುಕ್ಕಾಂ ನೋಟಿಫಿಕೇಷನ್ ಹರಾಜು ಕಾಲದಲ್ಲಿ ಓದಲ್ಪಡುವದು.

ಮುದ್ದಪ್ಪ,
ಅಸಿಸ್ಟೆಂಟ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

ಮಂಜರಾಬಾದ್ ತಾಲ್ಲೂಕು.

ತಾರೀಖು 20ನೇ ಮಾರ್ಚಿ ಸನ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಂಜರಾಬಾದ್ ತಾಲ್ಲೂಕು ಉದೇವಾರ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸನ್ 1895ನೇ ಇಸವಿ ಮೇ ತಾರೀಖು 27ನೇ ಸೋಮವಾರ ಹಗಲು 11 ಘಂಟೆಗೆ ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಡಿಸಿ ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ರೂಬರೂ ಸಕಲೇಶಪುರ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ಒಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು, ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಜಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತು ದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್‍ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂಡಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ಒಳಪಟ್ಟು ಆಖೈರ್ ಜಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕೀ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಜಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಜಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕೀ ಮೊಬಲಗನ್ನು ಕೊಡದೆ ತಪ್ಪಿದರೆ ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು, ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು. ನಂತರ ನಡದ ಹರಾಜಿನಲ್ಲಿ ಹುಟ್ಟಿದ ಮೊಹಣಬಲಗು ಕೊಡಲು ತಪ್ಪಿದಂಥಾ ಷುರೂ ಹರಾಜುದಾರನ ಸವಾಲ್ ಮೊಬಲಗುಗಿಂತಲೂ ಕಮ್ಮಿಯಾದಲ್ಲಿ ಆ ಮೇರೆ ಕಮ್ಮಿಯಾದಷ್ಟು ಮೊಬಲಗನ್ನ ಅವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುವದು.

5. ಈ ನಿಬಂಧನೆಗಳಿಗೆ ಒಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತ ಪೂರಾ ಆಕಾರ ಕೊಡಲುಳ್ಳವನೆಂತ ಬಗಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ್ನ		ಷರಾ.
				ವಿಸ್ತೀರ್ಣ.	ಆಕಾರಾ.	
197ನೇ ನಂಬರಿನಲ್ಲಿ ಪೋಡಾದ ಹೊಸ ನಂಬರ್ 420	ಮಹಮದ್ ಹಬಿಬುಲ್ಲಾಸಾಬಿ	ಉದೇವಾರದ ಗ್ರಾಮದ ಗೋಮಾಳದಲ್ಲಿ	(1) ಪೂರ್ವಕ್ಕೆ—ಸರ್ವೆ ನಂಬರ್ 224ನೇ ಜಮೀನ್ (2) ಪಶ್ಚಿಮಕ್ಕೆ—ಬಾಳಗೋಡು ಗಡಿ (3) ದಕ್ಷಿಣಕ್ಕೆ—ಸರ್ವೆ ನಂಬರ್ 197ನೇ ಗೋಮಾಳ (4) ಉತ್ತರಕ್ಕೆ—ಅರೇಹಳ್ಳಿ ಗಡಿ	ಎಕರೆ 82 ಗುಂಟೆ 27	..	ಖಾಯಂದರ 1-8-0 ಎಕರೆ 1ಕ್ಕೆ ಹಂಗಾಮಿ ದರ 1—0—0 ಡಿಟೋ ಹರಾಜಾದನಂತರ ಚಡದರಖಾಸ್ತುದಾರನ ಇಷ್ಟದಂತೆ ಕಂದಾಯ ದಾಖಲ್ಮಾಡಿಕೊಡುತ್ತೆ.

ತಿಳುವಳಿಕೆ ಷರಾ,—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೇ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯ್ಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ್ ಹಿಡುವಳೀ ದಾರನು ಬದ್ಧ ವ ಅರ್ಹನಾಗಿರಬೇಕು.

ಪಿ. ಎನ್. ಪೂರ್ಣಯ್ಯ,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ಟೆಂಡರ್ ನೋಟಿಸ—ತಾರೀಖು 9ನೇ ಏಪ್ರಿಲ್ 1985.

ಈ ಕೆಳಗೆ ನಮೂದು ಇರುವ ಅಳಲೇಕಾಯಿ ಮತ್ತು ಇತರ ಜಿನಸಿಗಳನ್ನ ಪೂರ್ತಿಯಾಗಿ ಆಗಲಿ ಅಥವಾ ಒಂದು ಭಾಗವನ್ನಾಗಲಿ ಖರೀದಿಗೆ ಪಡಿಯತಕ್ಕ ಬಗ್ಯೆ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ 1895ನೇ ಇಸವಿ ಏಪ್ರೈಲ್ ತಿಂಗಳ 30ನೇ ತಾರೀಖು ಮಧ್ಯಾಹ್ನ 2 ಘಂಟೆ ವರಿಗೂ ತೆಗದುಕೊಳ್ಳಲ್ಪಡುವದು.

ಸ್ಥಳ.	ಜಿನಸಿ ತಪಶೀಲ್.	ಮೊತ್ತ.				ಷರಾ.
		ಖ್ಡ.	ಹ.	ಪೌ.	ಅ.	
ಶಿವಮೊಗ್ಗಾ ..	ಅಳಲೇಕಾಯಿ ..	3	0	0	0	ಹೆಚ್ಚು ಯಾ ಕಡಿಮೆ,
	ಡಿಟೋ ಶಿಪ್ಪೆ ..	0	2	56	0	
	ಶೀಗೇಕಾಯಿ ..	4	2	0	0	
	ಜೇನುಮೇಣ ..	0	1	7	12	
ಸಾಗರ ..	ಅಳಲೇಕಾಯಿ ..	2	12	56	0	
ಚಂದ್ರಗುತ್ತಿ ..	ಡಿಟೋ ..	10	1	0	0	* ಚಂದ್ರಗುತ್ತಿಯು ಶಿರಸಿ ಶಿದ್ದಾಪುರದ ರಸ್ತೆಗೆ 3 ಮೈಲ್ ದೂರದಲ್ಲಿಯೂ ಸೊರಬ ಶಿದ್ದಾಪುರ ರಸ್ತೆಗೆ 10 ಮೈಲು ದೂರದಲ್ಲಿಯೂ ಇರುತ್ತೆ. ಈ ರಸ್ತೆಗಳಿಂದ ಚಂದ್ರಗುತ್ತಿಗೆ ಭಂಡೀದಾರಿಗಳು ಇರುತ್ತವೆ.

2. ಪ್ರತಿ ದರಖಾಸ್ತಿನ ಸಂಗಡಲೂ 50 ರೂಪಾಯಿಯನ್ನು ನಗದಾಗಲಿ ಕರ್ರೆನ್ಸೀನೋಟ್ ಮೂಲಕವಾಗಿಯಾಗಲಿ ಡಿಪಾಜಿಟ್ ಬಗ್ಯೆ ಹಾಜರ್ಮಾಡತಕ್ಕದ್ದು. ಮತ್ತು ಲಖೋಟೆ ಮೇಲೆ'' ದಲ್ಲಿರುವ ಅಳಲೇಕಾಯಿ ವಗ್ಯೆರೆ ಜಿನಸಿಯನ್ನು ಖರೀದಿಗೆ ತೆಗದುಕೊಳ್ಳಲು ದರಖಾಸ್ತ್'' ಯಂಬದಾಗಿ ಬರಿಯಬೇಕು, ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು.

3. ಪ್ರತಿ ದರಖಾಸ್ತುದಾರನೂ ತಾನು ಅಪೇಕ್ಷಿಸುವ ಜಿನಸಿಯ ಮೊತ್ತವನ್ನೂ ಮತ್ತು ಟನ್ 1ಕ್ಕೆ ಕೊಡಲಿಕ್ಕೆ ಒಪ್ಪುವ ದರವನ್ನು ನಮೂದಿಸತಕ್ಕದ್ದು.

4. ದರಖಾಸ್ತುಗಳು 1895ನೇ ಇಸವಿ ಏಪ್ರೈಲ್ ತಿಂಗಳ 30ನೇ ತಾರೀಖು 2 ಘಂಟೆಗೆ ಹಾಜರಿರಬಹುದಾದ ದರಖಾಸ್ತುದಾರರ ಸಮಕ್ಷಮ ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸಿನಲ್ಲಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ವಡಿಯಲ್ಪಡುವವು.

5. ತಿರಸ್ಕರಿಸಲ್ಪಟ್ಟ ದರಖಾಸ್ತುಗಳ ಡಿಪಾಜಿಟ್ ಮೊಬಲಗು ದರಖಾಸ್ತುಗಳು ವಡದು ಏಲೇವಾರಿ ಮಾಡಿದ ನಂತರ ವಾಪಸ್ ಮಾಡಲ್ಪಡುವದು.

6. ಮಂಜೂರಾದ ದರಖಾಸ್ತುದಾರನು ತನ್ನ ದರಖಾಸ್ತು ದರದ ಪ್ರಕಾರ ಒಟ್ಟು ಮೊತ್ತಕ್ಕೆ ಆಗುವ ಬಾಕಿ ಮೊಬಲಗನ್ನು ದರಖಾಸ್ತು ಮಂಜೂರು ಸಂಗತಿ ತಿಳಿಸಿದ 15 ದಿವಸದೊಳಗಾಗಿ ಪಾವತಿ ಮಾಡಬೇಕು. ತಪ್ಪಿದರೆ ಡಿಪಾಜಿಟ್ ಹಣವು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು.

7. ಪೂರಾ ಮೊಬಲಗು ಪಾವತಿ ಮಾಡಿದ ನಂತರ ಮಾಲು ವಜನಿಯಿಂದ ಬಿಕರೀದಾರನ ಸುಫರ್ದು ಮಾಡಲ್ಪಡುವದು.

8. ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಯಾವ ಕಾರಣವೂ ಹೇಳದೆ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ.

ಸಿ. ನಾರಾಯಣರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಇಸ್ತಿಹಾರ್.

ತಾರೀಖು 2ನೇ ಏಪ್ರೈಲ್ 1895ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಶಿವಮೊಗ್ಗಾ ಡಿಸ್ಟ್ರಿಕ್ಟು ಸಾಗರ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ರಿಜಿಸ್ಟರಾದ ದಸ್ತಾವೇಜುಗಳನ್ನ ವಾರಸ್‌ದಾರ್ರು ಹಾಜರಾಗಿ ವಾಪಸ್ ಪಡಿಯದೆ ಯಿರುವ ಸಬಬ್ ನಿಂತಿರುತ್ತವೆ.

ಈ ಇಸ್ತಿಹಾರ್ ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು ವಂದು ತಿಂಗಳವಳಗಾಗಿ ಸದರೀ ತಂಸೂಕುಗಳನ್ನ ಕ್ರಮವಾದ ವಾರಸ್‌ದಾರ್ರು ಸದರೀ ಸಾಗರ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಹಾಜರಾಗಿ ತಮ್ಮ ದಸ್ತಾವೇಜುಗಳನ್ನ ವಾಪಸು ಪಡಿಯಬೇಕು. ತಪ್ಪಿದರೆ ಹಜರತ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ 1873ನೇ ಇಸವಿ 66—144ನೇ ನಂಬರ್ ಆಗಸ್ಟ್ 7ನೇ ಮುರ್ಕುಂ ಸರ್ಕ್ಯುಲರ್ ಆರ್ಡರ್ ಮತ್ತು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಯಿವುಗಳು ಅನುಸರಿಸಿ ನಾಶಪಡಿಸಲ್ಪಡುತ್ತವೆ.

ಆಫೀಸಿನ ಹೆಸರು.	ಪುಸ್ತಕದ ನಂಬರು.	ದಸ್ತಾವೇಜಿನ ನಂಬರ್.	ದಸ್ತಾವೇಜು ಬರದು ಕೊಟ್ಟವರ ಹೆಸರು.	ದಸ್ತಾವೇಜು ಬರಸಿ ಕೊಂಡವರ ಹೆಸರು.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಂಮತು.
ಸಾಗರ	I	258 1891—92	ಶಿಂಗಂದೂರು ಜಟ್ಟಿ ವಗ್ಯೆರೇ 5 ಜನರು	ವಳಗೆರೆ ಪಾಯಪ್ಪ ಗವುಡರು	5—12—91	9—1—92	145 ರೂಪಾಯಿನ ದೀಡು ದಸ್ತೈವಜು
ಡಿಟೋ	ಡಿಟೋ	290 1891—92	ಕುಡುಗುಂಜಿ ರಾಮಪ್ಪ	ಮಳವ ಅಕ್ಲಯಗವುಡ	23—3—92	23—3—92	200 ರೂಪಾಯಿನ ಕ್ರಯಪತ್ರ
ಡಿಟೋ	ಡಿಟೋ	56 1892—93	ಶಿರುಮನೆ ಶಂಕರಯ್ಯ ಬಿನ್ ದೇವಪ್ಪ	ತಿಮ್ಮಯ್ಯ	28—6—92	29—6—92	575 ರೂಪಾಯಿನ ಭೋಗ್ಯಪತ್ರ
ಡಿಟೋ	II	5 1891—92	ಅಬ್ದುಲ್ಲಾಸಾಬ್	ಶ್ರಿಂಗೇರಿ ವೆಂಕಟಗಿರಿಯಪ್ಪ	31—7—91	31—3—92	185 ರೂಪಾಯಿನ ದೀಡುಪತ್ರ
ಡಿಟೋ	IV	2 1892—93	ಹಸಲದ ಮಸೂರಾ ಬಿನ್ ಮಸೂರಾ	ದ್ಯಾವಪ್ಪ ಬಿನ್ ತಿಂಮಯ್ಯ	23—1—92	2—5—92	150 ರೂಪಾಯಿನ ನೌಕರೀ ಮಾಡಿ ತೀರಿಸುವದಾಗಿ

ಡಿ. ನಾಮಕಲ್‌ರಾವ್,
ರೆಜಿಸ್ಟ್ರಾರ್.

ಶಿವಮೊಗ್ಗಾ ಡಿಸ್ಟ್ರಿಕ್ಟು

ನೋಟಿಫಿಕೇಷನ್.

ತಾರೀಖು 4ನೇ ಏಪ್ರೆಲ್ 1895.

1878ನೇ ಇಸವಿ ಫಾರೆಸ್ಟ್ ರೂಲ್ಸ್ 37ನೇ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸಾಗರ ತಾಲ್ಲೂಕು ಮಳಲಿ ಗ್ರಾಮದ ಬಳಿಯ ನದಿಯಲ್ಲಿ ಈ ಕೆಳಗೆ ಕಾಣಿಸುವ ನಾಟಾ ತುಂಡುಗಳು ತೇಲಿಬಂದು ಸಿಕ್ಕಿರುತ್ತವೆ.

ಇದಕ್ಕೆ ಹಕ್ಕುದಾರಿ ಇರತಕ್ಕವರು ಈ ಇಸ್ತಿಹಾರು ತಾರೀಖು ಲಾಗಾಯತು ಎರಡು ತಿಂಗಳ ವಳಗಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕನ್ಸರ್ವೇಟರವರ ರೂಬರೂ ಖುದ್ದಾಗಲಿ ಯಾ ಕ್ರಮವಾಗಿ ಅಧಿಕಾರ ಪಡದ ಮುತಾಲೀಕನ ಮೂಲಕವಾಗಲಿ ಹಾಜರಾಗಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕು ತಪ್ಪಿದಲ್ಲಿ ಸದರೀ ತುಂಡುಗಳು ಸರಕಾರಕ್ಕೆ ಶೇರಿಸಲ್ಪಟ್ಟು ಹರಾಜು ಮಾಡಲ್ಪಡುವವು.

ನಂಬರು.	ಜಾತಿ.	ಅಳತೆ.		
		ಲಾಂಬಿ ಅಡಿ.	ರುಂದಿ ಅಡಿ.	ಮಟ್ಟ ಅಡಿ.
1	ನೇರಲು	6	2	$\frac{1}{2}$
2	ಡಿಟೋ	7	$\frac{1}{2}$	$\frac{1}{2}$

ಸಿ. ನಾರಾಯಣರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ನಗರದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ತರೀಕೆರೆ ತಾಲ್ಲೂಕು ಚಟ್ನಹಳ್ಳಿ ಬಸಂಣನಮಗ ನಂಜಂಣನ ವಿಷಯದಲ್ಲಿ—
ಸನ್ 1894—95ನೇ ಇಸವಿ ದಿವಾಳಿ ಕೇಸ್ ನಂಬರ್ 114.

ಹುಕುಂ,

ಮೇಲ್ಕಂಡ ಚಟ್ನಹಳ್ಳಿ ಬಸಂಣನಮಗ ನಂಜಂಣನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ನಗರ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರಾದ ಮೆಸ್ಟರ್ ಬಿ. ತಿರುಮಲಾಚಾರ್ರು ಬಿ. ಎಲ್. ಯವರ ರೂಬರೂ ಅರ್ಜಿದಾರನಾದ ನಂಜಂಣನನ್ನೂ ಮತ್ತು ಸದರೀಯವನ ಲೇಣೇದಾರ್ರಾದ ಚಟ್ನಹಳ್ಳಿ ಮೇಲಪ್ಪನ ಮಗ ದಾಸಂಣನ ರೂಬರೂಬ್ ದರ್ಯಾಫ್ತೀ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಬಸಂಣನಮಗ ನಂಜಂಣನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1895ನೇ ಇಸವಿ ಏಪ್ರೆಲ್ 6ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್ ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ,

ನಂಬರ್.	ಲೇಣೇದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೀ ವುಂಟಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ದಾಸಂಣ ಬಿನ್ ಮೇಲಪ್ಪ ತರೀಕೆರೆ ತಾಲ್ಲೂಕು ಚಟ್ನಹಳ್ಳಿ ವಾಸಸ್ಥ ..	ರೂ. (80)	..	ಎಡೇಹಳ್ಳಿ ಮುನ್ಸಿಫ್ ಕೋರ್ಟು ಸನ್ 1890ನೇ ಇಸವಿ ಅಸಲ್ ನಂಬರ್ 191 ಅದಕ್ಕೆ ಸಂಬಂಧಪಟ್ಟ ಅಮಲ್‌ಜಾರಿ ನಂಬರ್ 97 ಸನ್ 1894—95ನೇ ಇಸವಿ.	

ಸನ್ 1894—95ನೇ ಇಸವಿ ಅರ್ಜೀ ನಂಬರ್ 199.

ಮೃತಪಟ್ಟ ಕೊಲ್ಲಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಹಾಲಪ್ಪ, ಮೈನರ್ ಗಾರ್ಡಿಯನ್ ಚನ್ನಬಸಪ್ಪ ಬಿನ್ ತಮ್ಮಣಯ್ಯ, ಮೃತಪಟ್ಟ ಸದರೀ ಕೊಲ್ಲಪ್ಪನವರಿಗೆ ಮೈನರನು ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ನಗರ ತಾಲ್ಲೂಕು ಜಾಲದ ಮಾಗಣಿ ಹೊಸಕೋಟೆ ಸ್ಥಳದ ಮೈನರ್ ಗಾರ್ಡಿಯನ್ಕ್

ಚೆನ್ನಬಸಪ್ಪನು, ಮೈನರಿಗೋಸ್ಕರ ಡಿಟೋ ಹೊಸಕೋಟೆ ವಾಸಸ್ಥರಾಗಿ ಮೃತಪಟ್ಟ ಕೊಲ್ಲಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 950 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚೆನ್ನಬಸಪ್ಪನ ಅರ್ಜಿಯನ್ನು ಸನ್ 1895ನೇ ಇಸವಿ ಮೇ ತಿಂಗಳ ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೊಲ್ಲಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895ನೇ ಇಸವಿ ಏಪ್ರೈಲ್ ತಿಂಗಳ 11ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

1894—95ನೇ ಇಸವಿ ಅರ್ಜೀ ನಂಬರು 20[illegible]

ಅರ್ಜೀದಾರ್ 1ನೇ ಮುರುಗೆವ್ವ ಕೋಂ ವೀರವ್ವ 2ನೇ ಕಲ್ಲ್ಯಾಣಪ್ಪ ಬಿನ್ ಮೇಲಪ್ಪ ದಾವಣಗೆರೆ ವಾಸಿಗಳು, ಮೈನರಾದ ದಾವಣಗೆರೆ ಸ್ಥಳದ ದಾವಣಗೆರೆ ಮೈನರ್ ಸಂಗಪ್ಪ ಕೋಂ ವೀರಭದ್ರಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಸಂಗಪ್ಪನಿಗೆ 1ನೇ ಅರ್ಜೀದಾರಳು ಅತ್ತೆಯೂ 2ನೇ ಅರ್ಜೀದಾರನು ಅಳಿಯನೂ ಆಗಬೇಕೆಂಬ ಹಕ್ಕಿನ ಮೇಲೆ ದಾವಣಗೆರೆ ಸ್ಥಳದ 1ನೇ ಮುರಿಗೆವ್ವ 2 ನೇ ಕಲ್ಲ್ಯಾಣಪ್ಪ ಇವರು, ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1895ನೇ ಇಸವಿ ಜೂನ್ ತಾರೀಖು 14ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

1895ನೇ ಇಸವಿ ಏಪ್ರೈಲ್ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ್.

ಕಡೂರು ಡಿಸ್ಟ್ರಿಕ್ಟು.

ಚಿಕ್ಕಮಗಳೂರು ತಾಲ್ಲೂಕು.

ಇಸ್ತಿಹಾರ್ನಾಮೆ.

ತಾರೀಖು 11ನೇ ಏಪ್ರೈಲ್ ಸನ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರು ತಾಲ್ಲೂಕು ಪಂಡ್ರವಳ್ಳಿ ಗ್ರಾಮದಲ್ಲಿ ಇರುವ ಇದರಡಿ ನಮೂದುಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸನ್ 1895ನೇ ಇಸವಿ ಜೂನ್ ತಾರೀಖು 5ನೇ ಬುಧವಾರ ಹಗಲು 11 ಘಂಟೆಗೆ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಡಿಸಿ ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ರ ರೂಬರೂ ಚಿಕ್ಕಮಗಳೂರ್ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು ಎಕರೆ1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನ ಖೈದ್ ಮಾಡೋಣಾಗುತ್ತಧೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಶೇವಣಿ ಮೊಬಲಗನ್ನ ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಶೇವಣಿ ಮೊಬಲಗನ್ನು ಹರಾಜು ಖೈದಾದ ವಡನೆಯೇ 2ನೇ ಪ್ಯಾರದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನ ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯುಕ ಮಾಡಲ್ಪಟ್ಟ ಕಾಲದೊಳಗೆ ಖರೀದಿ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡದೆ ಡಿಪಾಜಿಟ್ ಮೊಬಲಗಿನಲ್ಲಿ ಖರೀದಿಗಾಗಿ ತಗಲಿರುವ ಖರ್ಚು ವಜಾ ಜಾತಾ ಬಾಕಿನಿಂತ ಶೇವಣಾತಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಶೇರತಕ್ಕದ್ದು. ಮತ್ತು ಸೊತ್ತು ಪುನಹ ವಿಕ್ರಯಿಸಲ್ಪಡುವದು, ಖರೀದಿ ಮೊಬಲಗನ್ನು ಪಾವತಿ ಮಾಡಲು ತಪ್ಪಿದ ಮನುಷ್ಯನ ಸೊತ್ತಿಗೆ ಯಿದ್ದ ಹಕ್ಕನ್ನು ಕಳದುಕೊಂಡದ್ದಲ್ಲದೆ ಅನಂತರ ಡಿಟೋ ಸೊತ್ತನ್ನು ಹರಾಜು ಮಾಡುವದರಲ್ಲಿ ವುತ್ಪತ್ತಿಯನ್ನು ಮೊಬಲಗಿನ ಯಾವ ಭಾಗದ ಹಕ್ಕೂ ಇಲ್ಲದವನಾಗಿರುತ್ತಾನೆ ಪರಂತು ಈ ಷರತ್ತನ್ನು ಜಾರಿಯಲ್ಲಿ ತರತಕ್ಕದ್ದು. ಅಧಿಕವಾದ ತೊಂದರೆ ಯಿದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಗೆ ತೋರಿಬಂದರೆ ಅಂಥಾವುಗಳನ್ನು ಸರಕಾರದ ಆರ್ಡರ್ ಬಗ್ಯೆ ಶಿಫಾರಸ್ ಮಾಡತಕ್ಕದ್ದಕ್ಕೆ ಅರ್ಹರಾಗಿರುತ್ತಾರೆ. ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ವುತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನಲ್ಲಿ ಚಡದರಖಾಸ್ತು ಮಾಡಿ ತಪ್ಪಿಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಅಂಥಾ ವೆತ್ಯಾಸದ ಮೊಬಲಗನ್ನು ಡೆಪ್ಯುಟಿ ಕಮ್ಮಿಷನರವರು ಜಮೀನು ಕಂದಾಯದ ಬಾಕಿಯಂತೆ ವಸೂಲ್ ಮಾಡತಕ್ಕದ್ದು.

489

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸ ತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯುತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ, ವಿಸ್ತೀರ್ಣ.	ಆಕಾರ.	ಷರಾ.
32	ಯ. ಜೆ. ಸಾಲ್ ಧಾನ.	ಪಂಡ್ರವಳ್ಳಿ	ಪೂರ್ವ ಸರ್ವೆ ನಂ. 34ನೇ ರಾಘವೇಂದ್ರಪ್ಪನವರ ಕಾಫಿತೋಟ ಪಶ್ಚಿಮ ಸರ್ವೆ ನಂಬರ್ 43ನೇ ಗೋಮಾಳ ದಕ್ಷಿಣಕ್ಕೆ ಸರ್ವೆ ನಂ. 44ನೇ ಬ್ಯಾರವಳ್ಳಿ ರಾಮೇಗವುಡನ ತೋಟ ವುತ್ತರಕ್ಕೆ ಸರ್ವೆ ನಂ. 31ನೇ ಕಾಫಿ ಸರ್ಕಾರಿ ಬಂಜರ್ ಕುಲ್	4311 71	36	
31			ಪೂರ್ವಕ್ಕೆ ಸರ್ವೆ ನಂ. 30ನೇ ಕಾಫಿ ಸರ್ಕಾರಿ ಬಂಜರ್ ಪಶ್ಚಿಮಕ್ಕೆ ಸರ್ವೆ ನಂ. 43ನೇ ಜಂಗ್ಲಿ ಮತ್ತು 42ನೇ ನಾಗಂಣ ಬಿನ್ ಭಾಸ್ಕರಯ್ಯನ ಕಾಫೀ ತೋಟ ದಕ್ಷಿಣಕ್ಕೆ ಸರ್ವೆ ನಂ. 32ನೇ ಕಾಫಿ ಸರ್ಕಾರ್ ಬಂಜರ್ ವುತ್ತರಕ್ಕೆ ಸರ್ವೆ ನಂ. 40ನೇ ಕಾಫೀ ಸರ್ಕಾರಿ ಬಂಜರ್ ಕುಲ್	76	38	
40			ಪೂರ್ವಕ್ಕೆ ನಂ. 30ನೇ ಕಾಫಿ ಸರ್ಕಾರಿ ಬಂಜರ್ ಪಶ್ಚಿಮಕ್ಕೆ ನಂ. 41ನೇ ಕಾಫಿ ಸರ್ಕಾರಿ ಬಂಜರ್ ಸರ್ವೆ ನಂ. 168ನೇ ತರೀಕೆರೆ ನಾಗಂಣನ ಕಾಫೀ ತೋಟ ಸರ್ವೆ ನಂಬರ್ 50ನೇ ಕಾಫಿ ಸರ್ಕಾರಿ ಬಂಜರ್ ಸರ್ವೆ ನಂ. 51ನೇ ಕಾಫೀ ಸರ್ಕಾರಿ ಬಂಜರ್ ದಕ್ಷಿಣಕ್ಕೆ ಸರ್ವೆ ನಂ. 31ನೇ ಕಾಫಿ ಸರ್ಕಾರಿ ಬಂಜರ್ ಹಾಲಿ ದರಖಾಸು ಸ್ಥಳ. ವುತ್ತರಕ್ಕೆ ಸರ್ವೆ ನಂ. 52ನೇ ಜಂಗಲಿ ಇದರಲ್ಲಿ ಇರುವ ನೀರು ಸರ್ಕಲ್‌ನಮೂದು ಮಾಡದೆ ಮಾಮೂಲಿನಂತೆ ಖಾಲಿಬಿಟ್ಟು ಸಾಗುವಳಿ ಮಾಡಬೇಕೆಂತ ಷರತ್ತಿನ ಮೇಲೆ ಹರಾಜು ಮಾಡಿಸುತ್ತೆ ಹರಾಜಿನಲ್ಲಿ ಈ ಜಂಗ್ಲಿ ಪಡೆದವರು ಸದರೀ ಷರತ್ತು ಮುಚ್ಚಳಿಕೆ ಬರಕೊಡಬೇಕು.			

ತಿಳುವಳಿಕೆ ಷರಾ,—ಬಂದು ಸರ್ವೆ ನಂಬರ್ ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತಿ ಆದರೆ ಜಾಸ್ತಿ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲಿ ಕೊಡುವದಕ್ಕೆ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೆ ಆಗಲಿ ಜಮೀನ್ ಹಿಡುವಳಿದಾರನು ಬದ್ಧ ವ ಅರ್ಹನಾಗಿರಬೇಕು.

ಚಿಕ್ಕಮಗಳೂರ್ ತಾಲ್ಲೂಕು.

ತಾರೀಖು 10ನೇ ಏಪ್ರೈಲ್ ಸ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರ್ ತಾಲ್ಲೂಕು ಕರಗೂರ್ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ 1895ನೇ ಇಸವಿ ಜೂನ್ ತಾರೀಖು 6ನೇ ಬ್ರಹಸ್ಪತಿವಾರ ಹಗಲು 11 ಘಂಟೆಗೆ ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಚಿಕ್ಕಮಗಳೂರ್ ತಾಲ್ಲೂಕು ಅಮಲ್‌ದಾರ್ರ ರೂಬರೂ ಚಿಕ್ಕಮಗಳೂರ್ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು ಎಕರೆ 1ಕ್ಕೆ 10 ಹತ್ತು ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಜಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್ ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ

ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನ ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯಕ ಮಾಡಲ್ಪಟ್ಟ ಕಾಲದೊಳಗೆ ಖರೀದಿ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡದೆ ಡಿಪಾಜಿಟ್ ಮೊಬಲಗಿನಲ್ಲಿ ಖರೀದಿಗಾಗಿ ತಗಲಿರುವ ಖರ್ಚು ವಜಾ ಜಾತಾ ಬಾಕಿ ನಿಂತ ಠೇವಣಾತಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರತಕ್ಕದ್ದು. ಮತ್ತು ಸೊತ್ತು ಪುನಃ ವಿಕ್ರಯಿಸಲ್ಪಡುವ ಮನುಷ್ಯನ ಸೊತ್ತಿಗೆ ಯಿದ್ದ ಹಕ್ಕನ್ನು ಕಳದುಕೊಂಡದ್ದಲ್ಲದೆ ಅನಂತರ ಮೊಬಲಗಿನ ಯಾವ ಭಾಗದ ಹಕ್ಕೂ ಯಿಲ್ಲದವನಾಗಿ ಯಿರುತ್ತಾನೆ ಪರಂತು ಈ ಷರತನ್ನು ಜಾರಿಯಲ್ಲಿ ತರತಕ್ಕದ್ದು, ಅಧಿಕವಾದ ತೊಂದರೆ ಯಿದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡೆಪ್ಯುಟಿ ಕಮಿಷನರಿಗೆ ತೋರಿಬಂದರೆ ಅಂಥಾವುಗಳನ್ನು ಸರಕಾರದ ಆರ್ಡರು ಬಗ್ಯೆ ಶಿಫಾರಸ್ ಮಾಡತಕ್ಕದ್ದಕ್ಕೆ ಅರ್ಹರಾಗಿರುತ್ತಾರೆ ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ವುತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನಲ್ಲಿ ಚಡದರಖಾಸ್ತುಮಾಡಿ ತಪ್ಪಿಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಯಿಂಥಾ ವೆತ್ಯಾಸದ ಮೊಬಲಗನ್ನು ಡೆಪ್ಯುಟಿ ಕಮಿಷನರವರು ಜಮೀನು ಕಂದಾಯದ ಬಾಕಿಯಂತೆ ವಸೂಲ್ ಮಾಡತಕ್ಕದ್ದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರೂ ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸ ತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜು ದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ,		ಷರಾ.
				ಎಕರೆ.	ಗುಂಟೆ.	
93	ಬಾಗಮನೆ ಅಂಣೆ ಗವುಡರು	ಪೈನೆಕೂಲ್ ಚಿಕ್ಕಮಗಳೂರ್ ತಾಲ್ಲೂಕು ಕಡಗಲ್‌ನಾಡ್ ಮಾಗಣಿ ಕರಗೂರ್	ಖುಲ್ಲು ಎಕರೆ ಪೈಕಿ 5 ಸರ್ಕಲ್‌ದಾರಿಗೆ ವಜಾ ಪೂರ್ವ—ನಂಬರ್ 68ನೇ ಬಾಗಮನೆ ರಾಮೇಗವುಡರ ವರ್ಗದ ಬಂಜರು ಕಾಫಿತೋಟ ಪಶ್ಚಿಮ—ಬೆರಣಗೋಡು ಗ್ರಾಮದ ಗಡಿ ಹುಲ್ಲುಹರು ದಕ್ಷಿಣ—ಡಿಟೋ ಉತ್ತರಕ್ಕೆ—ಕರಗೂರ್ ಸರ್ವೆ ನಂಬರ್ 69ನೇ ಗೋಮಾಳದ ಗುಡ್ಡ ಈ ಮಧ್ಯೆಯಿರುವ ಕಾಫಿಜಂಗ್ಲಿಯಲ್ಲಿ ಇರತಕ್ಕ ಯರಡು ನೀರು ಸರ್ಕಲು ಒಂದು ದಾರಿ ಯಿವುಗಳನ್ನ ಮಾಮೂಲಿನಂತೆ ಖುಲ್ಲಾ ಬಿಟ್ಟು ನೀರು ಸರ್ಕಲ್ ವುಭಯಪಾರ್ಶ್ವ 50 ಗಜದಲ್ಲಿ ಯಿರುವ ಮರಗಳನ್ನ ಕತರಾಯಿಸದೆ ಅದರ ತಂಪಿನಲ್ಲಿ ಕಾಫಿ ಸಾಗುವಳಿ ಮಾಡಿಕೊಳ್ಳುವಂತೆ ಮುಚ್ಚಳಿಕೆ ಬರದು ಕೊಡುವ ಷರತ್ತಿನ ಮೇಲೆ ಹರಾಜು ಮಾಡಿಸುತ್ತೆ.	55—37 3 52	 10 27	

ತಿಳುವಳಿಕೆ ಷರಾ,—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಬ್ಜಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ್ ಹಿಡುವಳೀ ದಾರನು ಬದ್ಧ ವ ಅರ್ಹನಾಗಿರಬೇಕು.

ಬಿ. ರಾಮುಸಾಮಿ,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

22ನೇ ಏಪ್ರೈಲ್ 1895.

ಪ್ರಕಟನೆ.

1. ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಗೊತ್ತಾದ ಪ್ರದೇಶಗಳಲ್ಲಿ ಯಾ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ 1895ನೇ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯತು 1896ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರ್ ಸಾಲ್ ಆಖೈರ್ ವರೆಗೆ ಸಾರಾಯಿಯನ್ನು ಬಿಕರಿಮಾಡುವ ಒಟ್ಟು ಸ್ವಾತಂತ್ರ್ಯದ ಹಕ್ಕು ಆಯಾಯ ಡೆಪ್ಯುಟಿ ಕಮ್ಮಿಷನರುಗಳಿಂದ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮ್ಮಿಷನರುಗಳಿಂದ ಶಿವಮೊಗ್ಗ ಡಿಸ್ಟ್ರಿಕ್ಟಿನ ಹರಾಜನ್ನು ಆ ಡಿಸ್ಟ್ರಿಕ್ಟಿನ ಹೆಡ್ ಕ್ವಾರ್ಟರ್‌ನಲ್ಲಿಯೂ ಇತರ ಡಿಸ್ಟ್ರಿಕ್ಟುಗಳ ಬಾಬತನ್ನು ಆಯಾ ಡಿಸ್ಟ್ರಿಕ್ಟುಗಳ ತಾಲ್ಲೂಕು ಕಸಬಾಗಳಲ್ಲಿಯೂ ಮೇಲ್ಕಂಡ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಹರಾಜ್ ಹಾಕಲ್ಪಡಲು ಮೈಸೂರ ಸರ್ಕಾರದಿಂದ ಈ ಇಸ್ತಿಹಾರುಮೂಲಕ ಪ್ರಕಟಸಲ್ಪಟ್ಟಿದೆ, ಹರಾಜ್‌ಗಳು ಸದರೀ ತಾರೀಖುಗಳಲ್ಲಿ ಪೂರೈಸದೇಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳ ಪೈಕಿ ಒಂಟಿಯಾಗಿ ಯಾವದಕ್ಕಾದರೂ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಹರಾಜ್ ಹಾಕುವ ಆಫಿಸರರು ಒಂದಕ್ಕಿಂತ ಹೆಚ್ಚು ಫಿರ್ಕಾಗಳನ್ನ ಸೇರಿಸಿಯಾಗಲಿ ಫಿರ್ಕಾಗಳನ್ನ ತಾಲ್ಲೂಕುವಾರ್ ಹರಾಜ್ ಮಾಡುವದರ ಮೂಲಕವಾಗಿ ಆಗಲಿ ಯಾ ಹಾಲಿ ಅಂಗಡಿಗಳನ್ನುಟೂಗದೆ ಇರುವ ವಿಶೇಷ ಫಿರ್ಕಾಗಳನ್ನು ಮುಂದೆ ಫೈಸಲ್ಮಾಡಲು ಅವಶ್ಯಕ ವಿದ್ದರೆ ಉಳಿಸಿಕೊಳ್ಳುವದರ ಮೂಲಕವಾಗಲಿ ಯುಕ್ತಾನುಸಾರ ಸದರೀ ಫಿರ್ಕಾಗಳನ್ನ ಬದಲಾಯಿಸಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಒಟ್ಟು ಸ್ವಾತಂತ್ರ್ಯದ ಹಕ್ಕು ಫಿರ್ಕಾವಾರು ಹರಾಜ್ ಮಾಡಲ್ಪಡುತ್ತೆ, ಹರಾಜ್ ಮಾಡಲ್ಪಟ್ಟ ಪ್ರತಿ ಫಿರ್ಕಾವೂ ಅಂಗೀಕರಿಸಲ್ಪಡತಕ್ಕ ಛಡ ಸವಾಲ್‌ದಾರನಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಸವಾಲನ್ನ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಡೋಣವು ಸವಾಲನ್ನ ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

3. ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಆಗಲಿ ಹಾಜರಾಗಬೇಕು. ಯಾವದಾದರೊಂದು ಫಿರ್ಕಾದ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಕೊಡಲ್ಪಟ್ಟ ಸವಾಲುದಾರನು ಯರಡನೇ ಫಿರ್ಕಾದ ಹರಾಜ್ ಷುರುವಾಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲಗಿನಲ್ಲಿ ಇಪ್ಪತ್ತರಲ್ಲಿ ಒಂದು ಭಾಗಕ್ಕೆ ಸರಿಯಾದ ಮೊಬಲಗನ್ನು ಠೇವಣೀ ಇಡಬೇಕು. ಮತ್ತು ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರಾದ ಸಂಗತಿಯು ಆತನಿಗೆ ಲಿಖಿತಮೂಲಕ ತಿಳಿಸಲ್ಪಟ್ಟ ಹದಿನೈದು ದಿವಸಗಳೊಳಗಾಗಿ ಮೊದಲು ಯಿಡೋಣಾದ ಠೇವಣೀ ದೇಖೀಲ್ ಆತನ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸಮಾನವಾಗುವಷ್ಟು ಠೇವಣಿಯನ್ನಿಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿರುವ ಠೇವಣೀ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡುವ ರೀತ್ಯ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ತಕ್ಷಣವೇ ಪುನಃ ಹರಾಜ್ ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು.

4. ಮೇಲ್ಕಂಡ 3ನೇ ಕಲಂ ಪ್ರಕಾರ ನಡಿಸಲ್ಪಡುವ ದುಸರೆ ಹರಾಜ್‌ಗಳು ತಪ್ಪಿತಸ್ಥನಾದ ಮೇಲ್ಕಂಡ ಸವಾಲ್‌ದಾರನ ಜವಾಬ್ದಾರೀ ಮೇಲೆ ನಡಿಸಲ್ಪಡುವವು. ಸದರೀ ಸವಾಲ್ದಾರನು ಯಾಲ್ಲಾ ಆದಾಯವನ್ನೂ ಕಳದುಕೊಳ್ಳತಕ್ಕದ್ದಲ್ಲದೆ ದುಸರೆ ಹರಾಜಿನಿಂದ ಸರ್ಕಾರಕ್ಕೆ ನಷ್ಟವಾದ ಪಕ್ಷದಲ್ಲಿ ಷುರು ಹರಾಜಿನ ಷರತ್ತುಗಳನ್ನನುಸರಿಸಿ ಮೇಲ್ಕಂಡ ಪೂರಾ ಕಾಲಕ್ಕೆ ಆತನಿಂದ ಪಾವತಿಯಾಗಬೇಕಾಗಿದ್ದ ಒಟ್ಟು ಮೊಬಲಗಿನಲ್ಲಿ ದುಸರೆ ಹರಾಜಿನಲ್ಲಿ ಪಡದ ಸವಾಲ್‌ದಾರನಿಂದ ಪಾವತಿಯಾಗತಕ್ಕ ಒಟ್ಟು ಮೊಬಲಗನ್ನು ವಜಾ ಮಾಡಿದರೆ ಉಳಿಯುವ ಶೇಷವನ್ನು ಆತನು ಪಾವತಿ ಮಾಡತಕ್ಕದ್ದು. ಈ ಸಂದರ್ಭದಲ್ಲಿ ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರೆ ಹರಾಜಿನಿಂದುಂಟಾದ ನಷ್ಟಕೋಸ್ಕರ ವಜಾ ಮಾಡಲ್ಪಡತಕ್ಕದ್ದು. ತದನಂತರ ಬಾಕೀ ಏನಾದರೂ ನಿಂತಲ್ಲಿ ಆ ಮೊಬಲಗು ಜಮೀನ್ ಕಂದಾಯವು ಯಾವ ರೀತಿಯಾಗಿ ವಸೂಲ್ಮಾಡಲ್ಪಡುತ್ತೋ ಅದೇ ರೀತಿಯಾಗಿ ವಸೂಲ್ಮಾಡಲ್ಪಡುವದು. ಪರಂತು ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರೆ ಹರಾಜಿನಿಂದುಂಟಾದ ನಷ್ಟಕ್ಕಿಂತ ಹೆಚ್ಚಾಗಿರುವ ಪಕ್ಷದಲ್ಲಿ ಅಂಥಾ ಪೂರಾ ಠೇವಣೀ ಮೊಬಲಗು ಸರಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

5. ಒಟ್ಟುಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳನ್ನ ಆಚರಿಸುವದಕ್ಕೆ ಬದ್ಧನಾಗಿರಲುಳ್ಳವನೆಂದು ಒಂದು ಕರಾರನ್ನು ಬರದು ರುಜುಮಾಡಿ ಕೊಡತಕ್ಕದ್ದು. ಮತ್ತು ಆ ಕರಾರನ್ನು ಮೇಲ್ಕಂಡ 15 ದಿವಸಗಳ ಕಾಲ ಕಳೆದ ತರುವಾಯ 10 ದಿವಸಗಳ ವಳಗಾಗಿ ಬರೆದುಕೊಡತಕ್ಕದ್ದು. ಕೊಂಡುಕೊಂಡವನು ಕರಾರನ್ನ ಸೈನ್ ಮಾಡುವದಕ್ಕೆ ತಪ್ಪಿದಲ್ಲಿ ಯಾ ತಿರಸ್ಕರಿಸಿದಲ್ಲಿ ಮೊದಲೇ ಇಡಲ್ಪಟ್ಟ ವಿಶಿಷ್ಟ ಠೇವಣೀ ಮೊಬಲಗೂ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು 3 ಮತ್ತು 4ನೇ ಕಲಂಗಳಲ್ಲಿ ನಮೂದಿಸಿರುವಂತೆ ಸದರೀ ಪ್ರಥಮ ಖರೀದೀದಾರನ ಜವಾಬ್ದಾರಿ ವ ನಷ್ಟಕ್ಕೆ ಗುರಿಯಾಗಿ ದುಸರೆ ಹರಾಜ್ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹರಾಜ್ ಮಂಜೂರಾದ ಮೇಲೆ ಸದರೀ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನ ಪಡದವರು ಸದರೀ ಕರಾರಿಗೆ ಜವಾಬ್ದಾರರಾಗಿರುತ್ತಾರೆ.

6. ಹರಾಜ್ ಕಾಲದಲ್ಲಿ ಸವಾಲ್ಮಾಡಲು ಇಷ್ಟವುಳ್ಳವರಿಗೆ ಹಾಲಿ ಫಿರ್ಕಾಗಳ ಬಾಬತು ಅಂಗಡಿಗಳಲ್ಲಿ ಖರ್ಚಾದ ಸಾರಾಯಿಯ ತಪಶೀಲನ್ನು ತಿಳಿಸುವ ಒಂದು ತಖ್ತೆಯು ತೋರಿಸಲ್ಪಡುವದು. 1892—93, 1893—94 ಮತ್ತು 1894—95ನೇ ಸಾಲ್ ಬಾಬತು ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗೂ ಮತ್ತು ಬಿಕರಿಯೂ ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಸಲ್ಪಟ್ಟಿರುತ್ತೆ.

7. ಕರಾರು ಬರದುಕೊಟ್ಟ ಕೂಡ್ಲೆ ಖರೀದಿದಾರನಿಗೆ ಡೆಪ್ಯುಟಿ ಕಮ್ಮಿಷನರವರು ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟು ವಿಧಿಸಲ್ಪಟ್ಟ ನಮೂನೆಯಲ್ಲಿ ಸದರೀ ಬಟ್ಟಿ ಸ್ವಾತಂತ್ರ್ಯದ ಹಕ್ಕನ್ನ ನಮೂದಿಸಿ ಒಂದು ಲೈಸೆನ್ಸನ್ನ ಕೊಡುವರು.

(1) ಸದರೀ ಬಟ್ಟಿ ಸ್ವಾತಂತ್ರ್ಯದ ಹಕ್ಕು ಸಾಧಾರಣವಾಗಿ 20° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನ ಮಾರುವದಕ್ಕೆ ಮಾತ್ರವೇ ಲಗಾವಾಗುತ್ತೆ. ಪರಂತು ಡೆಪ್ಯುಟಿ ಕಮ್ಮಿಷನರವರ ಯಾ ಇವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫಿಸರರ ವಿಶೇಷ ಅಪ್ಪಣೆ ಮೂಲಕ 30° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರಬಹುದು. ಆದರೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರಾಗುವ ಯಾವ ಜೋರಿನದಾದರೂ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗುಣೀ ಬಟ್ಟೀ ಇಳಿಸಲ್ಪಟ್ಟಿರುವ ಷರಾಬ್‌ಗಳನ್ನೂ ಮತ್ತು ಇತರ ವಿಶೇಷವಾದ ಸಾರಾಯಿಗಳನ್ನೂ ಮಾರಲಿಕ್ಕೆ ಹಕ್ಕು ಇರುವದಿಲ್ಲವು. ಈ ಷರಾಬುಗಳನ್ನೂ ವ ಸಾರಾಯಿಗಳನ್ನೂ ಮಾರಲಿಕ್ಕೆ ಪರಾಯಿ ದೇಶದ ಸಾರಾಯಿಗಳ ಅಂಗಡಿಕಾರ್ರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರದಿಂದ ಆ ಬಗ್ಯೆ ವಿಧಾಯಕವಾಗಿ ಅಚ್ಚು ಹಾಕಿಸಲ್ಪಟ್ಟಿರುವ ಚಲನ್‌ಗಳ ಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1895ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗೂ ಆ ತಿಂಗಳ 20ನೇ ತಾರೀಖು ಯಾ ಅದಕ್ಕೆ ಪೂರ್ವವೇ ಪಾವತಿಯಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ತಾಲ್ಲೂಕು ಅಮಲ್ದಾರ್ರು ಲೈಸೆನ್ಸನ್ನು ಬರಹ ರೂಪವಾದ ಆರ್ಡರ್ ಮೂಲಕ ರದ್ದುಮಾಡತಕ್ಕದ್ದು. ಮತ್ತು ಆ ತಿಂಗಳ ಆಖೈರೊಳಗೆ ಫಿರಕಾವನ್ನು ಪುನಃ ಹರಾಜ್ ಮಾಡತಕ್ಕದ್ದು ಷರತ್ತುಗಳಂತೆ ನಡಿಯದೆ ತಪ್ಪಿ ಹೋದಂಥಾ ಲೈಸೆನ್ಸ್‌ದಾರನ ಫಿರಕಾವನ್ನು ಹಾಲಿ ಅದರಲ್ಲಿರುವ ಅಂಗಡಿಗಳ ಸಂಖೆಗೆ ಒಡದು ಪ್ರತಿ ಒಂದು ಷಾಪುಕೀಪರು ಒಪ್ಪಿಕೊಳ್ಳುವ ಗುತ್ತಿಗೆ ಮೊಬಲಗಿಗೆ ಲೈಸೆನ್ಸ್‌ಗಳನ್ನು ಕೊಡುವ ಅಧಿಕಾರವು ಅಮಲ್ದಾರ್ರಿಗೆ ಸೇರಿರುತ್ತೆ. ಆದರೆ ಈ ರೀತಿ ಉತ್ಪತ್ತಿಯಾಗುವ ಬಟ್ಟು ಗುತ್ತಿಗೆ ಮೊಬಲಗು ಮೊದಲು ಫಿರಕಾವನ್ನು ಪಡದು ಇದ್ದವನು ಕೊಡಲು ಒಪ್ಪಿದ್ದ ಮೊಬಲಗಿಗೆ ಕಮ್ಮಿಯಾಗಿರಕೂಡದು.

(3) ಪ್ರತಿ ಮಾಹೆಯ ಗುತ್ತಿಗೆ ಮೊಬಲಗನ್ನು ಆ ಮಾಹೆಯ 20ನೇ ತಾರೀಖು ಯಾ ಅದಕ್ಕೆ ಪೂರ್ವ ಪಾವತಿ ಮಾಡದೆ ತಪ್ಪಿದಲ್ಲಿ ಲೈಸೆನ್ಸ್‌ದಾರನು ಇಟ್ಟಿರುವ ಎರಡು ತಿಂಗಳ ಡಿಪಾಜಿಟ್‌ಯಾನೆ ಠೇವಣಿ ಮೊಬಲಗು ಮೇಲಿನ ಷರತ್ತು 2ರ ಪ್ರಕಾರ ದುಸರೆ ಹರಾಜಿನಲ್ಲಿ ನಷ್ಟವೇನಾದರು ಉಂಟಾದಲ್ಲಿ ಅದರ ಭರ್ತಿಗಾಗಿ ಬೇಕಾಗುವ ಮೊಬಲಗು ಜಾತಾ ಉಳಿದ ಮೊಬಲಗು ಗವರ್ನಮೆಂಟಿಗೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೆ 2 ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು.

(4) (*a*) ಈ ಸರ್ಕಾರಕ್ಕೆ ಸಾರಾಯಿಯನ್ನೂ ಒಳದೇಶದ ಇತರ ಷರಾಬುಗಳನ್ನೂ ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟಿದಾರ್ರಾದ ಪ್ಯಾರಿ ಅಂಡ್‌ಕೋ ಎಂಬ ವರ್ತಕರಿಂದಾಗಲಿ ಯಾ ಸರ್ಕಾರದ ಅಪ್ಪಣೆ ಮೇರೆ ಏರ್ಪಾಡಾಗುವ ಯಾವದಾದರೊಂದು ಬಾಂಡೆಡ್ ಡಿಪೋ ಯಿಂದಲಾಗಲಿ ಲೈಸೆನ್ಸ್‌ದಾರನು ತನ್ನ ಫಿರ್ಕಾ ಅಂಗಡಿಗಳಿಗೆ ಸರಬರಾಯಿಗೋಸ್ಕರ ಸಾರಾಯಿಯನ್ನ ಕೊಂಡುಕೊಳ್ಳತಕ್ಕದ್ದು. ಅಂಥಾ ಭಟ್ಟಿದಾರ್ರಿಂದ ಸರಬರಾಯಿ ಆಗುವ ಸಾರಾಯಿನ ದರವು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ 10½ ಆಣೆ ಪ್ರಕಾರವೂ ಮತ್ತು ಸದರೀ ಜೋರಿಗಿಂತ ಕಮ್ಮಿ ಜೋರುಳ್ಳ ಸಾರಾಯಿಗಳಿಗೆ ಕ್ಯಾಸೆಲ್ಲಾ ಎಂಬುವರ ಸೂತ್ರಗಳನ್ನನುಸರಿಸಿ ಅದೇ ದಾಮಾಷಾಯಿ ದರಗಳ ಪ್ರಕಾರವೂ ಇರತಕ್ಕದ್ದು. ಲೈಸೆನ್ಸ್‌ದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ 5—5—0 ದರದ ಪ್ರಕಾರವೂ ಸದರೀ ಜೋರಿಗಿಂತ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನಗಳಿಗೆ ಮಾರತಕ್ಕದ್ದು.

(*b*) ಮೇಲ್ಕಂಡ ಖರೀದಿ ದರ ಶಿವಾಯಿ ಡಿಸ್ಟಿಲೇರಿಯಾನೆ ಭಟ್ಟೀ ಗಡಂಗಿನಿಂದ ಯಾ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಜೋರುಳ್ಳ ಸಾರಾಯಿಯ ಗ್ಯಾಲನ್ 1ಕ್ಕೆ 4 ರೂಪಾಯಿ ದರದಂತೆ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 5ನೇ ಷರತ್ತು ಅನುಸರಿಸಿ ಸ್ಥಳೀಯ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(5) ಲೈಸೆನ್ಸದಾರನು ಮೇಲ್ಕಂಡ ಡ್ಯೂಟೀ ಮೊಬಲಗನ್ನ ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಿ ವಿಧಿಸೋಣಾಗಿರುವ ನಮೂನೆಯಲ್ಲಿ ಒಂದು ರಶೀತಿಯನ್ನ ಪಡಿಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿ ಸರಬರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಪಡಿಸಿ ಅಂಥಾ ಷರಾಬಿಗೆ ವಿಧಿಸಿರುವ ಖರೀದಿಯನ್ನ ಭಟ್ಟಿದಾರ್ರಿಗಾಗಲಿ ಯಾ ಅವರ ಏಜಂಟಿಗಾಗಲಿ ಯಾ ಈ ಬಗ್ಯೆ ಸರ್ಕಾರದಿಂದ ನೇಮಿಸಲ್ಪಡುವ ಯಾವ ಮನುಷ್ಯನಿಗಾಗಲಿ ಪಾವತಿ ಮಾಡಿದ ನಂತರ ಡಿಸ್ಟಿಲೇರಿ ಜಿಮ್ಮೇಲಿರುವ ಅಸಿಸ್ಟೆಂಟ್ ಸೂಪರ್‌ವೈಜರ್ ಅಥವಾ ಇತರೆ ಆಫಿಸರರು ಯಾ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಜರಿ ಆಫಿಸರ್ರ ರಶೀತಿಯಲ್ಲಿ ನಮೂದ್ಮಾಡಿರುವ ಡ್ಯೂಟಿ ಮೊಬಲಗ್ಯೆ ಸರಿಯಾದ ಸಾರಾಯಿಯನ್ನ ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿರುವ ತಾರೀಖು ಮತ್ತು ಘಂಟೆ ನಮೂದ್ಮಾಡಿ ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಫಿಸಿಗೆ ಆ ರಶೀತಿಯನ್ನ ರವಾನಿಸತಕ್ಕದ್ದು. ಅಸಿಸ್ಟೆಂಟ್ ಸೂಪರ್‌ವೈಜರವರು ಅಥವಾ ಮೇಲೆ ಹೇಳಲ್ಪಟ್ಟ ಇತರ ಆಫಿಸರರು ಯಾ ಬಾಂಡೆಡ್ ಡಿಪೋ ಜಿಮ್ಮೇದಾರನು ವಿಧಾಯಕ

ವಾಗಿರುವ ನಮೂನೆಯಲ್ಲಿ ಡಿಸ್ಟಿಲೇರಿ ಅಥವಾ ವೇರ್ ಹೌಸಿನಿಂದ ಸಾರಾಯಿ ರವಾನೆ ಮಾಡುವದಕ್ಕೋಸ್ಕರ ಜಾರೀಲಿರುವ ನಿಬಂಧನೆಗಳ ಪ್ರಕಾರ ವಿಧಾಯಕವಾದ ನಮೂನೆಯಲ್ಲಿ ದ್ವಿಪ್ರತಿಯಾಗಿ ರಹದಾರಿಯನ್ನು ಕಳುಹಿಸತಕ್ಕದ್ದು. ಬಾಂಡೆಡ್ ಡಿಪೋಯಿಂದ ಸಾರಾಯಿಯನ್ನು ಪಡಿಯುವಂಥಾ ಲೈಸೆನ್ಸ್‌ದಾರನು ಅಂಥಾ ಸಾರಾಯಿಯ ಖರೀದಿಯನ್ನೂ ಮತ್ತು ಡ್ಯೂಟಿ ಮೊಬಲಗನ್ನೂ ಸಹ ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಬೇಕು.

(6) ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿನ ಲೈಸೆನ್ಸ್‌ದಾರನು ತನ್ನ ಫಿರ್ಕಾ ಸರಹದ್ದಿನಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಲೂ ಮತ್ತು ತನ್ನಿಂದಲೂ ಅವಶ್ಯಕವೆಂದು ಎಣಿಸಲ್ಪಡತಕ್ಕ ಸ್ಥಳ ಯಾ ಸ್ಥಳಗಳಲ್ಲಿ ಕೋಠಿ ಯಾ ಕೋಠಿಗಳನ್ನು ಸ್ಥಾಪಿಸತಕ್ಕದ್ದು. ಈ ಕೋಠಿಗಳಿಗೆ ತಾನು ಖರೀದಿಗೆ ಪಡದ ಸಾರಾಯಿಯನ್ನು ಅಂಗಡಿಕಾರರಿಗೆ ಕೊಡುವದಕ್ಕೆ ತತ್ಪೂರ್ವವೇ ಹಾಲಿ ಜಾರೀಲಿರುವ ನಿಬಂಧನೆಗಳನ್ನನುಸರಿಸಿ ರವಾನಿಸಿದ ಸರಕನ್ನ ಮೊಕಾಬಿಲೆ ವಗೈರೆ ಮಾಡತಕ್ಕ ಬಗ್ಗೆ ತೆಗದುಕೊಂಡು ಹೋಗತಕ್ಕದ್ದು. ಸದರೀ ಕೋಠಿಗಳು ಡೆಪ್ಯುಟಿ ಕಮ್ಮಿಷನರವರ ಯಾ ಎಕ್ಸೈಜ್ ಇಲಾಖೆ ಇತರ ಆಫಿಸರರ ತನಿಖೆ ಬಗ್ಗೆ ಸದಾ ಖುಲ್ಲಾವಾಗಿರತಕ್ಕದ್ದು. ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರಿಂದ ಲೈಸೆನ್ಸ್ ಹೊಂದದೆ ಅಂಥಾ ಕೋಠಿಯು ಇಡಲ್ಪಡಲಾಗದು. ಉಳಿದ 7 ಡಿಸ್ಟ್ರಿಕ್ಟುಗಳ ಲೈಸೆನ್ಸ್‌ದಾರರಿಂದ ಈಗಿನ ಹಾಗೆ ಶಿಬ್ಬಂದೀ ವ ಬಾಡಿಗೆ ಖರ್ಚುಗಳು ಭರಿಸಲ್ಪಟ್ಟು ಅವರು ಹಾಲಿ ಜಾರೀಲಿರುವ ಬಾಂಡೆಡ್ ಡಿಪೋಗಳಿಂದಲೇ ಸಾರಾಯಿ ಸರಬರಾಯಿ ಪಡಿಯಬೇಕಲ್ಲದೆ ಅವರ ಅಂಗಡಿಗಳಿಗೆ ರವಾನೆ ಮಾಡಲು ಸದರೀ ಡಿಪೋಗಳಲ್ಲಿ ಅದನ್ನು ಇಡತಕ್ಕದ್ದು.

(7) ಡಿಸ್ಟಿಲೇರಿ ಯಾ ಬಾಂಡೆಡ್ ಡಿಪೋಯಿಂದ ಯಾ ಫಿರ್ಕಾ ಕೋಠಿಯಿಂದ ರವಾನಿಸಲ್ಪಟ್ಟ ಸ್ಥಿತಿಯಲ್ಲಿ ಸಾರಾಯಿಯು ಮಾರಲ್ಪಡತಕ್ಕದ್ದು. ಮತ್ತು ಅಂಗಡಿಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಕೆಡಿಸಲ್ಪಡಲಾಗದು ಯಾ ನೀರಿನಿಂದ ಮಿಶ್ರಮಾಡಲಾಗದು.

(8) ಲೈಸೆನ್ಸ್‌ದಾರನು ತನ್ನಿಂದ ಖರೀದಿಗೆ ತೆಗದುಕೊಳ್ಳಲ್ಪಟ್ಟ ಮತ್ತು ಅಂಗಡಿಕಾರರಿಗೆ ಕೊಟ್ಟ ಸಾರಾಯಿಯ ಪರಿಮಾಣವನ್ನೂ ಮತ್ತು ಜೋರನ್ನೂ ಕುರಿತು ಸರಿಯಾದ ಲೆಖ್ಖಗಳನ್ನಿಡಬೇಕು. ಆತನಿಂದ ಕೊಂಡುಕೊಳ್ಳಲ್ಪಟ್ಟ ಸಾರಾಯಿಯೊಡನೆ ರವಾನಿಸಿದ ರಹದಾರಿಗಳು ಹಾಲಿ ಜಾರೀಲಿರುವ ಯಾ ಮುಂದೆ ಆಗಿಂದಾಗ್ಯೆ ಸರ್ಕಾರದಿಂದ ಸಾದರ್ಮಾಡಲ್ಪಡಬಹುದಾದ ನಿಬಂಧನೆಗಳನ್ನನುಸರಿಸಿ ಅಜಮಾಯಿಷಿಗೂ ವ ತನಿಖೆಗೂ ಗುರಿಯಾಗತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರಿಂದ ಕ್ರಮವಾಗಿ ಲೈಸೆನ್ಸ್ ಪಡದ ದುಕಾಣಗಳಲ್ಲಿ ವಿನಹಾ ಮತ್ತೆಲ್ಲಿಯೂ ಸಾರಾಯಿ ಬಿಕರಿ ಮಾಡಲಾಗದು ಮತ್ತು ಎಕ್ಸೈಜ್ ಕಮ್ಮಿಷನರವರ ಮುಂಚಿತವಾದ ಮಂಜೂರಾತಿ ಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು.

(10) ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾಣಗಳನ್ನಾಗಲಿ ಮುಚ್ಚಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಲು ಅಪ್ಪಣೆ ಕೊಡಬಹುದು.

(11) ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ವಾಯಿದೆ ವಳಗೆ ಲೈಸೆನ್ಸಿನಲ್ಲಿ ವ್ಯಕ್ತ ಪಟ್ಟಿರುವ ಫಿರಕಾವಿನ ಯಾವ ಭಾಗದಲ್ಲಾದರೂ ಶೇಂದಿ ಮಾರತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅವನ ಫಿರ್ಕಾವಿನ ಯಾವ ಭಾಗದಲ್ಲಾದರೂ ಶೇಂದಿ ಬಿಕರಿ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನೂ ಒಳದೇಶದ ಸಾರಾಯಿ ಮಾರುವ ತನ್ನ ಒಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು. ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂದರ್‌ವಾರ್ ಎಕ್ಸೈಜ್ ಕಮ್ಮಿಷನರವರ ಲಿಖಿತ ಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈ ಕೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿದೇಶದ ಯಾ ಶೀಮೆಯಲ್ಲಾಗಲಿ ಲೈಸೆನ್ಸ್‌ದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನ ಇಟ್ಟುಕೊಂಡಿರಕೂಡದು.

(12) ಲೈಸೆನ್ಸ್‌ದಾರನು 1895ನೇ ಇಸವಿ ಜುಲೈ ಗುರ್ರೆಯಲ್ಲಿ ತನ್ನ ಫಿರ್ಕಾದೊಳಗಿರುವ ಹಾಲೀ ಬಾಂಡೆಡ್ ಡಿಪೋದಲ್ಲಿ ಯಾ ಫಿರ್ಕಾ ಕೋಠಿಯಲ್ಲಿ ಯಾ ಆತನ ಅಂಗಡಿಗಳಲ್ಲಿ ಹಾಜರಿರತಕ್ಕ ವಾಯಿದೆ ಮೀರದ ಗುತ್ತಿಗೆದಾರನ ಬಾಬತು ದಾಸ್ತಾರ್ ಸಾರಾಯಿಯನ್ನು ಎಕ್ಸೈಜ್ ಕಮ್ಮಿಷನರ್ ಸಾಹೆಬರವರು ಗೊತ್ತುಮಾಡಬಹುದಾದ ಪರಿಹಾರ ದ್ರವ್ಯವನ್ನು ಪೂರ್ವದ ಗುತ್ತಿಗೆದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಲು ಗುರಿಯಾಗಿರತಕ್ಕದ್ದು.

(13) ಲೈಸೆನ್ಸ್‌ದಾರನು ಹಾಲೀ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ನಿಬಂಧನೆಗಳಿಗೂ ಅಥವಾ ಆಗಿಂದಾಗ್ಯೆ ಎಕ್ಸೈಜ್ ಕಾನೂನುಗಳ ಪ್ರಕಾರ ವಿಧಿಸೋಣಾಗುವ ಹೆಚ್ಚು ನಿಬಂಧನೆಗಳಿಗೂ ಅನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನೆಗಳನ್ನ ಉಪಯೋಗಿಸತಕ್ಕದ್ದು. ಮತ್ತು ಸಾರಾಯಿಯನ್ನು ಸಾಗಿಸುವ ಬಗ್ಗೆ ಬೇಕಾದ ಲೆಖ್ಖ, ರಹದಾರಿ ಅಥವಾ ಪ್ಯಾಸ್ ಇವುಗಳಿಗೆ ವಿಧಾಯಕವಾದ ನಮೂನೆಗಳನ್ನು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೆ ವದಗಿಸಿಕೊಳ್ಳತಕ್ಕದ್ದು.

(14) ಈ ಗುತ್ತಿಗೆಯು ಎಕ್ಸೈಜ್ ಕಮ್ಮಿಷನರ್ ಸಾಹೆಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(15) ತೆಗದುಕೊಳ್ಳಲ್ಪಟ್ಟದ್ದ ಫಿರ್ಕಾಗಳ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರವರು ವಿಚಾರ ಮಾಡದೆ ತಿರಸ್ಕರಿಸುವರು.

8. ಲೈಸೆನ್ಸ್‌ದಾರನಿಂದಲಾಗಲೀ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಿಂದಲಾಗಲೀ ಮೇಲ್ಕಂಡ ಷರತ್ತುಗಳು, ಯಾ ಲೈಸೆನ್ಸಿನ ಕರಾರುಗಳು ಉಲ್ಲಂಘಿಸಲ್ಪಟ್ಟ ಪಕ್ಷದಲ್ಲಿ ಯಾ ಆತನು ಅಂಗಡಿಗಳನ್ನು ತೆಗಿಯುವದರಲ್ಲಿ ಅಸ್ರದ್ಧೆಯಾಗಿದ್ದಲ್ಲಿ ಯಾ ಗುತ್ತಿಗೆ ಕೆಲಸದಲ್ಲಿ ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಕೊಡಲು ತಪ್ಪಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಪ್ರತಿಯೊಂದು ಉಲ್ಲಂಘನೆಗೆ 50 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷವರವರ ಇಷ್ಟಾನುಸಾರ ಅವರಲ್ಲಿ ತೇವಣಿ ಇಡಲ್ಪಟ್ಟಿರುವ ಮೊಬಲಗು ದಂಡವಾಗಿ ದಾಖಲ್ಮಾಡಿ ಕೊಳ್ಳಲ್ಪಟ್ಟಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದು ಮಾಡಿ ಸದರೀ ಲೈಸೆನ್ಸ್‌ದಾರನ ಜವಾಬುದಾರಿ ಮೇಲೆ ಸದರೀ ಸರ್ವ ಸ್ವತಂತ್ರದ ಹಕ್ಕನ್ನು ಪುನಃ ಹರಾಜು ಮಾಡಲಿಕ್ಕೂ, ಯಾ ಅಂಥಾ ಗುತ್ತಿಗೆ ಫಿರ್ಕಾವನ್ನು ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾದ ಎಲ್ಲಾ ನಷ್ಟವನ್ನೂ 1895ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಗಳನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ಎಲ್ಲಾ ನಷ್ಟಗಳೂ ದೇಖೀಲ್ ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೆ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗುತ್ತೆ. ಅಂಥಾ ಎಲ್ಲಾ ದಂಡದ ವ ನಷ್ಟದ ಮೊಬಲಗುಗಳು ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ವಿಧಿಸೋಣ, ತೇವಣಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸ್ ರದ್ದು ಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸ್‌ದಾರನನ್ನಾಗಲೀ, ಯಾ ಆತನ ಏಜಂಟನ್ನಾಗಲಿ, ಯಾ ಆತನ ನವುಕರರನ್ನಾಗಲೀ ಆಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕ ಪಡಿಸುವದೆಂದು ಭಾವಿಸಲ್ಪಡಕೂಡದು.

ಹುಕುಂ ಬಮೋಜೀಬ್,
ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರೆಟೇರಿ.

ಷೆಡ್ಯೂಲ್‌ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬ್ ತಪಸೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1393—94	1894—95	1892—93	1893—94	1894—95 ಆರು ತಿಂಗಳ ಬಿಕರಿ.		
			ಬೆಂಗಳೂರು ಡಿ||	ರೂ.	ರೂ.	ರೂ.	ಗ್ಯಾಲಾ.	ಗ್ಯಾಲಾ	ಗ್ಯಾಲಾ.		
ಬೆಂಗಳೂರು.	I	ಕೆಂಗೇರಿ ..	ಕೆಂಗೇರಿ	786	560	560	1616	1589	866	1ನೇ ಮತ್ತು 2ನೇ ಮೇ 1895.	
	II	ಬೇಗೂರು ..	ಬೇಗೂರು	661	400	770	2325	2327	1108		
	III	ಹಲಸೂರು ..	ಹಲಸೂರು	711	756	1330	3329	3316	2241		
	IV	ಯಸವಂತಪುರ ..	ಯಸವಂತಪುರ	1834	1088	1215	3703	3227	1953		
	V	ಅಗರ ..	ಅಗರ	1504	1120	1710	4070	4498	2229		
	VI	ಯಲಹಂಕ ..	ಯಲಹಂಕ	851	804	1000	2385	2454	1434		
	VII	ಕೃಷ್ಣರಾಜಪುರ ..	ಕೃಷ್ಣರಾಜಪುರ	534	524	620	1701	1765	963		
	VIII	ವರ್ತೂರು ..	ವರ್ತೂರು	600	440	520	1706	1757	928		
ಆನೇಕಲ್.	IX	ಆನೇಕಲ್ಲು .. ಇಗ್ಲೂರು .. ಅತ್ತಿಬೆಲೆ ..	ಆನೇಕಲ್ಲು	1281	1052	1404	3477	3427	1967	15ನೇ ಮೇ 1895	
	X	ಜಿಗಣಿ .. ಹಾರಗದ್ದೆ ..	ಜಿಗಣಿ	342	244	396	1229	1268	664		
	XI	ಸರ್ಜಾಪುರ ..	ಸರ್ಜಾಪುರ	701	1140	1692	4190	4232	2203		
	XII	ಬಿದರಗುಪ್ಪೆ ..	ಬಿದರಗುಪ್ಪೆ	701							
ಚನ್ನಪಟ್ಟ.	XIII	ಕ್ಲೋಸ್‌ಪೇಟೆ .. ಮಾಕ್ಳಿ .. ಬಿಡದಿ .. ಕೂಂಗಲ್ .. ಭೈರಮಂಗಲ ..	ಕ್ಲೋಸ್‌ಪೇಟೆ	1600	1332	1632	3812	3820	1797	17ನೇ ಮೇ 1895	
	XIV	ಚನ್ನಪಟ್ಟ ..	ಚನ್ನಪಟ್ಟ	1422	1440	1740	3401	3531	2248		
	XV	ಮಳೂರು .. ಹೊಂಗನೂರು .. ಮುದಿಗೆರೆ .. ವಿರುಪಾಕ್ಷಿಪುರ ..	ಹೊಂಗನೂರು	160			881	1138	722		
ಮಾಗಡಿ.	XVI	ಮಾಗಡಿ .. ಸಾತನೂರು ..	ಮಾಗಡಿ	156	384	642	1073	1034	504	22ನೇ ಮೇ 1895	
	XVII	ಗುಡೇಮಾರನಹಳ್ಳಿ .. ಸೋಲೂರು .. ಕುದೂರು .. ತಿಪ್ಪಸಂದ್ರ .. ನಾರಸಂದ್ರ .. ಹುಲಿಕಲ್ಲು ..	ಗುಡೇಮಾರನಹಳ್ಳಿ	80	60		317	308	180		
	XVIII	ತಾವರೇಕೆರೆ .. ಮಡಬಾಳ್ ..	ತಾವರೇಕೆರೆ	200	204	204	694	2020	387		
ದೊಡ್ಡಬಳ್ಳಾಪುರ.	XIX	ದೊಡ್ಡಬಳ್ಳಾಪುರ .. ಕಾಕೋಳ್ .. ಕೋಡಿಹಳ್ಳಿ .. ತೂಬಗೆರೆ ... ರಾಜಘಟ್ಟ .. ಹೊನ್ನಾವಾರ .. ಹುಲಿಕುಂಟೆ .. ತಿಪ್ಪೂರು ..	ದೊಡ್ಡಬಳ್ಳಾಪುರ	1480	1240	1325	3158	2481	1210	8ನೇ ಮೇ 1895	

ಷೆಡ್ಯೂಲ್ ಪಟ್ಟಿ.

ತಾಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಸೀಲ್.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892-93	1893-94	1894-95	1892-93	1893-94	1894—95 ಆರು ತಿಂಗಳ್ ಬಿಕರಿ.		
				ರೂ.	ರೂ.	ರೂ.	ಗ್ಯಾಲ.	ಗ್ಯಾಲ	ಗ್ಯಾಲ		
ನೆಲಮಂಗಲ.	XX	ನೆಲಮಂಗಲ ..	ನೆಲಮಂಗಲ	810	728	860	1737	1803	1134	6ನೇ ಜೂ 1895	
		ಸೊಂಡೇಕೊಪ್ಪ ..									
	XXI	ವೈಲ್ನಹಳ್ಳಿ ...	ವೈಲ್ನಹಳ್ಳಿ	560	400	1700	1686	4554	1624		
		ಜೇಗೂರು ..									
		ದೊಡ್ಡಬೆಲೆ ..									
		ನಿಜಗಲ್ ...									
ಹೊಸಕೋಟೆ.	XXII	ಹೊಸಕೋಟೆ ...	ಹೊಸಕೋಟೆ	1263	1224	1296	3688	3725	1973	13ನೇ ಜೂ 1895	
		ಸೂಲಿಬೆಲೆ ...									
	XXIII	ವಾಗಟ ..									
		ಕಾಡ್ಗೋಡಿ ...	ವಾಗಟ	565	808	888	1756	1868	1023		
		ಗುಬ್ಬಿ ...									
	XXIV	ಮುಗಳೂರು ..	ಮುಗಳೂರು	226			900	970	507		
	XXV	ನಂದಗುಡಿ ...	ನಂದಗುಡಿ	412	428	480	1237	1171	708		
	XXVI	ಹುಲ್ಲೂರು ..	ಹುಲ್ಲೂರ	55	40	60	621	771	392		
ದೇವನಹಳ್ಳಿ.	XXVII	ದೇವನಹಳ್ಳಿ ..	ದೇವನಹಳ್ಳಿ	1,090	884	1175	2699	2735	1146	10ನೇ ಜೂ 1895	
		ಕುಂದಾಣ ..									
		ಚನ್ನರಾಯಪಟ್ಣ ..									
	XXVIII	ಜಾಲ ..	ಜಾಲ	441	404	480	1465	1376	795		
		ಬೂದಿಗೆರೆ ..									
	XXIX	ವಡಿಗೇನಹಳ್ಳಿ ..	ವಡಿಗೇನಹಳ್ಳಿ	601	524	706	1830	1599	1064		
ಕಾರ್ಕಾರ್ಹಳ್ಳಿ.	XXX	ಕಾರ್ಕಾರ್ಹಳ್ಳಿ ..	ಕಾರ್ಕಾರ್ಹಳ್ಳಿ	620	720	984	1791	1889	959	20ನೇ ಜೂ 1895	
		ಮರ್ಳವಾಡಿ ..									
		ಮುದವಾಡಿ ..									
		ತುಂಗಣಿ ..									
	XXXI	ಕೋಡಿಹಳ್ಳಿ ..	ಕೋಡಿಹಳ್ಳಿ				983	1176	610		
		ಸಾತನೂರು ..									
		ಉಯ್ಯಂಬಳ್ಳಿ ..									
	XXXII	ಹಾರೋಹಳ್ಳಿ ..	ಸೋಮನಹಳ್ಳಿ		156	180	659	628	315		
		ಸೋಮನಹಳ್ಳಿ ..									

ಕೋಲಾರ ಡಿಸ್ಟ್ರಿಕ್ಟು.

ತಾಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892-93	1893-94	1894-95	1892-93	1893-94	1894—95 ಆರು ತಿಂಗಳ್ ಬಿಕರಿ.	ಹರಾಜು ತಾರೀಖು.	ಷರಾ.
ಕೋಲಾರ.	I	ಕೋಲಾರ ...	ಕೋಲಾರ	2,165	2960	4080	7766	7661	3145	1ನೇ ಜೂ 1895	*ಮಾಸರಹೊಸಹಳ್ಳಿ ಫಿರ್ಕಾ ಬಿಕರಿಯಿಂದ.
		ವಕ್ಕಲೇರಿ ...									
		ಹುತ್ತೂರು ...									
	II	ವೇಂಗಲ್ ..									
	III	ಸುಗಟೂರು ...									
		ದಳಸನೂರು ..									
		ಹೊಳೂರು ..									
ಬೌರಿಂಗ್‌ಪೇಟೆ.	IV	ಬೌರಿಂಗ್ಪೇಟೆ ..	ಬೌರಿಂಗಪೇಟೆ	840	1212	1505	2856	2762	*2075	6ನೇ ಜೂ 1895	
		ಬೂದಿಕೋಟೆ ..									
	V	ಕಾಮಸಂದ್ರ ..									

ಷೆಡ್ಯೂಲ್ ಪಟ್ಟಿ.

ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಸೀಲ್.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಸೀಲ್.			ಹರಾಜು ತಾರೀಖು.	ಷರಾ.
	ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892-93.	1893-94	1894-95	1892-93	1893-94	1894—95 ಅರು ತಿಂಗಳ ಬಾಬು.		
		ಕೋಲಾರ್ ಡಿ||	ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ		
VI	ಚೇತಮಂಗಲ ..	ಬೇತಮಂಗಲ	300	604	1350	1050	1554	1200	6ನೇ ಜೂ 1895	
	ಕ್ಯಾಸಂಬಳ್ಳಿ ..									
	ರಾಮಸಾಗರ ..									
VII	ದಾಸರ ಹೊಸಹಳ್ಳಿ ..	ದಾಸರಹೊಸಹಳ್ಳಿ	185	584	850	984	1073	0		
VIII	ಮಾಲೂರು ..	ಮಾಲೂರು	975	992	1660	3205	3226	1788	3ನೇ ಜೂ 1895	
IX	ನರಸಾಪುರ ..	ನರಸಾಪುರ	395	528	1030	1895	1728	963		
X	ಲಕ್ಕೂರು ..	ಮಾಸ್ತಿ	290	324	450	1062	1418	574		
XI	ಮಾಸ್ತಿ ..									
	ಹುಳದೇನಹಳ್ಳಿ ..									
	ತ್ಯಾಕಲ್ಲು ..									
XII	ಮುಳಬಾಗಲ್ ..	ಮುಳಬಾಗಲು	550	644	800	2329	2336	1524	8ನೇ ಜೂ 1895	
	ಬೈರಕೂರು ..									
	ಮಲ್ಲನಾಯಿಕನಹಳ್ಳಿ ..									
	ಆವನಿ ..									
XIII	ಯಲ್ದೂರು ..	ಯಲ್ದೂರು	65	164	200	741	870	362		
	ದುಗ್ಗಸಂದ್ರ ..									
XIV	ಚಿಕ್ಕಬಳ್ಳಾಪುರ ..	ಚಿಕ್ಕಬಳ್ಳಾಪುರ	2705	1908	3350	4198	5339	2343	13ನೇ ಜೂ 1895	
XV	ನಂದಿ ..									
XVI	ಮಂಡಿಕಲ್ಲು ..	ಪೆರೇಸಂದ್ರ	125	112	220	711	754	484		
	ಪೆರೇಸಂದ್ರ ...									
	ಪೂರ್ಣಸಾಗರ ..									
XVII	ಶಿಡ್ಲಘಟ್ಟ ...	ಶಿಡ್ಲಘಟ್ಟ	1000	992	1620	2181	2443	979	17ನೇ ಜೂ 1895	
XVIII	ಜಂಗಂಕೋಟೆ ..	ಜಂಗಂಕೋಟೆ	200	280	380	932	970	418		
XIX	ಕೈವಾರ ..	ಕೈವಾರ	160	260	450	779	810	362		
XX	ಬಶೆಟ್ಟಿಹಳ್ಳಿ ..	ಬಶೆಟ್ಟಿಹಳ್ಳಿ	75	68	361	786	866	406		
	ಸಾದ್ಲಿ ..									
XXI	ಗಂಜಿಗುಂಟೆ ..	ಗಂಜಿಗುಂಟೆ	85	188	365	815	984	466		
	ಚಿಲಕಬನೆರ್ಪು ..									
XXII	ಬಾಗೇಪಲ್ಲಿ ..	ಬಾಗೇಪಲ್ಲಿ	80	100	110	926	922	669	15ನೇ ಜೂ 1895	
	ಗೂಳೂರು ..									
	ಮಿಟ್ಟೆಮರಿ ...									
XXIII	ಬಿಳ್ಳೂರು ..	ಪಾಳ್ಯ	45	62	65	619	764	445		
	ಚೇಲೂರು ...									
	ಪಾಳ್ಯ ..									
XXIV	ಗುಡಿಬಂಡ ..	ಗುಡಿಬಂಡ	30	48	54	504	584	302		
	ಸೋಮನಹಳ್ಳಿ ..									
XXV	ಗೋರೀಬಿದನೂರು ..	ಗೋರೀಬಿದನೂರು	450	404	762	1737	1664	818	20ನೇ ಜೂ 1895	
	ಮಂಚೇನಹಳ್ಳಿ ..									
	ತೊಂಡೇಭಾವಿ ..									
	ಜೊಮ್ಮಸಂದ್ರ ..									
	ಹೊಸೂರು ..									
	ದೊಡ್ಡಿನಾಯಕನಪಾಳ್ಯ.									

ಷೆಡ್ಯೂಲ್ ಪಟ್ಟಿ.

ತಾಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಸೀಲ್.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಶರಾಬಿನ ತಪಶೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892-93	1893-94	1894-95	1892-93	1893-94	1894—95 ಆರು ತಿಂಗಳ ಬಿಕರಿ.		
			ಕೋಲಾರ್ ಡಿ||	ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.		
ಚಿಂತಾಮಣಿ.	XXVI	ಚಿಂತಾಮಣಿ ..	ಚಿಂತಾಮಣಿ	800	1244	1250	1385	2249	1238	10ನೇ ಜೂ 1895.	
		ಅಂಬಾಜಿದುರ್ಗ ..									
	XXVII	ಮುರಗಮಲೆ ..	ಅಡ್ಡಗಲ್	135	320	365	771	918	644		
		ಇರಗಂಪಲ್ಲಿ ..									
		ಮಂಗನಹಳ್ಳಿ ..									
		ಅಡ್ಡಗಲ್ ..									
	XXVIII	ಶ್ರೀನಿವಾಸಪುರ ..	ಶ್ರೀನಿವಾಸಪುರ	260	316	405	756	775	473		
	XXIX	ಸೋಮಯಾಜನಪಲ್ಲಿ ..	ರೋಣೂರು	230	388	515	1148	1059	529		
		ನೆಲವಂಕಿ ..									
		ರಾಯಲ್‌ಪಾಡು ...									
			ತುಮಕೂರು ಡಿ||								
ತುಮಕೂರು.	I	ತುಮಕೂರು ..	ತುಮಕೂರು	1610	1824	1824	4929	4979	2555	13ನೇ ಜೂ 1895.	
		ಬೆಳ್ಳಾವಿ ..									
		ಹೊನ್ನುಡಿಕೆ ..									
		ಹೆಬ್ಬೂರು ..									
		ಕೋಳಾಲ ...									
		ಊರಡಗೆರೆ ...									
		ಗೂಳೂರು ...									
		ಕೋರಾ ..									
		ತೊಟ್ಲುಗೆರೆ ...									
ಮದ್ದಗಿರಿ.	II	ಮದ್ದಗಿರಿ ..	ಮದ್ದಗಿರಿ	110	132	330	926	1003	853	9ನೇ ಜೂ 1895.	
		ಕೊರಟಗೆರೆ ..									
		ದೊಡ್ಡೇರಿ ...									
		ರಂಟವಳಲು ..									
		ಮಿಡಗೇಶಿ ..									
		ಇಟ್ಟಿಗೇದಿಬ್ಬನಹಳ್ಳಿ ..									
		ತೆರಿಯೂರು ..									
		ಕೊಡಿಗೇನಹಳ್ಳಿ ...									
		ಪುರವಾರ ..									
		ಚನ್ನರಾಯದುರ್ಗ ..									
		ಹೊಳವನಹಳ್ಳಿ ..									
ಪಾವಗಡ.	III	ಪಾವಗಡ ..	ಪಾವಗಡ	30	32	80	420	461	294	13ನೇ ಜೂ 1895.	
		ಮುಗ್ದಲ್‌ಪಟ್ಟಿ ..									
		ಗೂಂಗಲ್ಟ್ಲು ..									
		ನಿಡಗಲ್ ..									
		ಹೊಸಕೋಟೆ ..									
		ಪೊನ್ನಸಮುದ್ರ ..									
		ರಾಚರ್ಲು ...									

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಸೀಲ್.		ಪ್ರತಿಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಸೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—95 ಆರು ತಿಂಗಳ ಬಿಕರಿ		
				ರೂ.	ರೂ.	ರೂ.	ಗ್ಯಾಲಾ.	ಗ್ಯಾಲಾ.	ಗ್ಯಾಲಾ.		
ತಿಪಟೂರು.	IV	ತಿಪಟೂರು .. ಮಾಯಸಂದ್ರ .. ತುರುವೆಕೆರೆ .. ಹೊನ್ನವಳ್ಳಿ .. ಹುಲಿಕುರ್ಕಿ .. ನೊಣವಿನಕೆರೆ .. ಈಚನೂರು .. ಕಿಬ್ಬನಹಳ್ಳಿ .. ದಬ್ಬಗಟ್ಟ ..	ತಿಪಟೂರು ..	240	140	402	1204	1456	802	3ನೇ ಮೆ 1895.	
ಚಿಕ್ಕನಾಯಕನಹಳ್ಳಿ.	V	ಚಿಕ್ಕನಾಯಕನಹಳ್ಳಿ .. ಹುಳಿಯಾರು .. ಶೆಟ್ಟಿಕೆರೆ .. ಖಂಡಿಕೆರೆ .. ಹಂದಿನಕೆರೆ .. ಬೂದಿಹಾಳು .. ಯಲನೋಡು ..	ಚಿಕ್ಕನಾಯಕನಹಳ್ಳಿ	155	80	120	1356	903	413	20ನೇ ಮೆ 1895.	
ಶೀರಾ.	VI	ಶೀರಾ .. ತಾವರೆಕೆರೆ .. ಕಲ್ಲಂಬೆಳ್ಳ .. ಅಗ್ರಹಾರ .. ಬುಕ್ಕಾಪಟ್ಣ ..	ಶೀರಾ ..	205	480	636	2042	2140	1142	16ನೇ ಮೆ 1895.	
	VII	ನಾದೂರು .. ಹುಲಿಕುಂಟೆ .. ಬರಗೂರು ..	ನಾದೂರು ..	270							
ಗುಬ್ಬಿ.	VIII	ಗುಬ್ಬಿ .. ಚೇಲೂರು .. ಹಾಗಲ್ವಾಡಿ ..	ಗುಬ್ಬಿ ..	370	464	480	1640	1550	773	4ನೇ ಮೆ 1895.	
	IX	ನಿಟ್ಟೂರು .. ಕಡಬ .. ಕಲ್ಲೂರು .. ಚಿಟ್ನಹಳ್ಳಿ .. ದಂಡಿನಶಿವರ ..	ನಿಟ್ಟೂರು ..	185							
ಕುಣಿಗಲ್.	X	ಕುಣಿಗಲ್ .. ಹುಲಿಯೂರುದುರ್ಗ .. ಅಮೃತೂರು .. ಎಡಿಯೂರು .. ಕೊತ್ತಗೆರೆ .. ಹುತ್ರಿದುರ್ಗ .. ಬ್ಯಾಡ್ರಹಳ್ಳಿ ..	ಕುಣಿಗಲ್ ..	255	240	307	943	950	447	6ನೇ ಮೆ 1895.	

549

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ವಿಕ್ರೀ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ವಂದು ಫಿರ್ಕಾದಲ್ಲಿ ಬಿಕರಿಯಾದ ಶರಾಬಿನ ತಪಶೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1894—95	1894—95 ಏಳುತಿಂಗಳ್ ಬಿಕರಿ		
				ರೂ.	ರೂ.	ರೂ.	ಗ್ಯಾಲ	ಗ್ಯಾಲಾ	ಗ್ಯಾಲಾ		
			ಮೈಸೂರು ಡಿಸ್ಟ್ರಿಕ್ಟ್.								
ಮೈಸೂರು.	I	ಕಡಕೋಳ ಇಲವಾಲ ವರಕೋಡು ಕಸಾರಿ ಯಾ ನವಾಷಹರ್. ಕೂಡನಹಳ್ಳಿ ಲಿಂಗಾಂಬುಧಿ ಸಿಂದವಳ್ಳಿ ಮೈಸೂರು ಆನಂದೂರು	ಮೈಸೂರು	55	24	2	120	77	48	1ನೇ ಜೂ 1895.	
ನಂಜನಗೂಡು.	II	ನಂಜನಗೂಡು ಕಳಲಿ ಹೆಡತಲೆ ಹದಿನಾರು ದೇವನೂರು ಹುರ ರಾಂಪುರ ತಾಯೂರು ದಾಸನೂರು	ನಂಜನಗೂಡು	550	540	*775	6020	1755	750	22ನೇ ಜೂ 1895.	*ಕಾಡು ಕೋಳದ ಅಂಗಡಿಯ ಗುತ್ತಿ ಮೊಬಲಗು ಸೇರಿದೆ.
ಗುಂಡ್ಲು.	III	ಗುಂಡ್ಲು ರಾಘವಾಪುರ ಕೆಲಸೂರು ತಿರಕಣಾಂಬಿ ಹಂಗಳ ಕುತ್ತನೂರ	ಗುಂಡ್ಲು			305	639	618	447	13ನೇ ಮೇ 1895.	
ಹುಣಸೂರು.	IV	ಕಿರಜಾಜಿ ಪೆರಿಯಾಪಟ್ಣ ಬಿಳಕೆರೆ ಗಾಡಕೆರ ಚಿಲಕುಂದ ರಾವಂದೂರು ಚಟ್ಟದಪುರ ಹಾರ್ನಹಳ್ಳಿ ಕಗುಂದಿ ಹೆಗ್ಗಂದೂರು	ಹುಣಸೂರು	700	922	1200	3316	3424	1567	6ನೇ ಜೂ 1895.	
ಯಡತೊರೆ.	V	ಯಡತೊರೆ ಸಾಲಿಗ್ರಾಮ ಬ್ಯಾಡರಹಳ್ಳಿ ಹರದನಹಳ್ಳಿ ಮಿರಲೆ ತಿಪ್ಪೂರು ಹನಸೋಗೆ	ಯಡತೊರೆ		15	292	610	1000	570	4ನೇ ಜೂ 1895.	

ಷೆಡ್ಯೂಲ್ ಪಟ್ಟಿ.

ಗುತ್ತಿಗೆ ಫಿರ್ಕಾದ ಕ್ರಮ ನಂಬರ್.	ಸಾರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪ್ಸೀಲ್. ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಸಾರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪ್ಸೀಲ್. ಗುತ್ತಿಗೆ ಫಿರ್ಕಾದ ಹೆಸರುಗಳು.	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1892—93	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1893—94	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1894—95	ಪ್ರತಿ ವಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪ್ಸೀಲ್. 1892—93	ಪ್ರತಿ ವಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪ್ಸೀಲ್. 1893—94	ಪ್ರತಿ ವಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪ್ಸೀಲ್. 1894—95 (6 ತಿಂಗಳಿಗೆ)	ಹರಾಜು ತಾರೀಖು.	ಷರಾ.
			ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.		
VI	ಕುರವ ಶ್ರೀರಂಗಪಟ್ಣ .. ಪಾಲಹಳ್ಳಿ .. ಕ್ಯಾತನಹಳ್ಳಿ .. ಹರವು .. ಶೆಟ್ಟಿಹಳ್ಳಿ .. ಅರಕೆರೆ .. ಬೆಳಗೊಳಾ .. ಚಂದಗಲ್ ...	ಶ್ರೀರಂಗಪಟ್ಣ ..	760	920	1666	2112	2527	2270	25ನೇ ಮೇ 1895.	
VII	ಕಿರಂಗೂರು .. ಮೇಲ್ಕೋಟೆ ... ತಿರುಮಲಸಾಗರಛತ್ರ ..									
VIII	ಹೆಗ್ಗಡದೇವನಕೋಟೆ .. ಅಂತರಸಂತೆ .. ಸರಗೂರು .. ನೆಮ್ಮನಹಳ್ಳಿ .. ಜಕ್ಕಹಳ್ಳಿ ..	ಹೆಗ್ಗಡದೇವನಕೋಟೆ	105	96	167	826	868	532	9ನೇ ಮೇ 1895.	
IX	ಮಂಡ್ಯ .. ಯಲಿಯೂರು .. ಕೊತ್ತತ್ತಿ .. ಬಸರಾಳ್ .. ಮುತ್ತಗೆರೆ ... ದುದ್ದ ..	ಮಂಡ್ಯ ..	260	270	513	1388	1634	1014	29ನೇ ಮೇ 1895.	
X	ಮದ್ದೂರು .. ಕೊಪ್ಪ .. ಆಣೆ ಅಥವ ಹೊಸಕೆರೆ .. ಆಟಿಗೂರು .. ತಿಪ್ಪೂರು .. ಕುದುರೆಗುಂಡಿ ..									
XI	ನಾಗಮಂಗಲ .. ನೆಲ್ಲಿಗೆರೆ .. ಬೆಂಡಿಗನವಲೆ .. ಹೊಣಕೆರೆ .. ದೇವಲಾಪುರ ..	ನಾಗಮಂಗಲ ..	110		245	557	690	355	1ನೇ ಜೂನ್ 1895.	
XII	ಮಳವಳ್ಳಿ .. ಪೂರಿಗಾಲ್ .. ಹಲಗೂರು .. ದೊಡ್ಡಅರಸಿನಕೆರೆ ... ಕುಳಗೆರೆ ... ಗೌಡಗೆರೆ .. ಕಿರಗಾವಲು ..	ಮಳವಳ್ಳಿ ..	270	192	570	1338	1716	979	27ನೇ ಮೇ 1895.	

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕ್ರಿ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—95 ಆರು ತಿಂಗಳ ಕರಿ		
				ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ		
ತಿರುಮಕೂಡ್ಲು ನರಶೀಪುರ.	XIII	ತಿರುಮಕೂಡ್ಲು ನರಶೀಪುರ ಬನ್ನೂರು .. ತಲಕಾಡು .. ಸೋಸಲೆ .. ರಂಗಸಮುದ್ರ .. ಮೂಗೂರು .. ಬೇವಿನಹಳ್ಳಿ ..	ಟಿ. ನರಸೀಪುರ .. ಮತ್ತು	200	171	372	1019	1026	564	20ನೇಮೇ 1895.	ಟಿ. ನರಸೀಪುರದ ತಾಲ್ಲೂಕು ಕಚೇರಿಯಲ್ಲಿ ಹರಾಜು ಹಾಕಲ್ಪಡುವದು.
ಚಾಮರಾಜನಗರ.	XIV	ಚಾಮರಾಜನಗರ .. ಸಂತೆಮಾರ್ನಹಳ್ಳಿ .. ಆಲೂರು .. ಕಾಗಲ್‌ವಾಡಿ .. ಹರರ್ದಹಳ್ಳಿ .. ಉಮ್ಯಬಳ್ಳಿ .. ಉಮ್ಮತ್ತೂರು .. ಬ್ಯಾಡರಪುರ .. ಹೊಂಗನೂರು .. ಕೊತ್ತಲ್‌ವಾಡಿ ..	ಚಾಮರಾಜನಗರ ..	..	..	100	260	333	215	16ನೇ ಮೇ 1895.	
ಎಳಂದೂರ್.	XV	ಅಗರ .. ಯಳಂದೂರು .. ಯರಗಂಬಳ್ಳಿ ..	ಯಳಂದೂರು ..	210	122	230	574	761	554	20ನೇ ಮೇ 1895.	
ಅತ್ತಿಕುಪ್ಪೆ	XVI	ಅತ್ತಿಕುಪ್ಪೆ ಯಾ ಕೃಷ್ಣರಾಜಪೇಟೆ .. ಕಿಕ್ಕೇರಿ .. ಬರ್ಕಕುರುಳಿ .. ಸಂತೆಬಾಚಹಳ್ಳಿ .. ಅಕ್ಕಿಹೆಬ್ಬಾಳು .. ಕನ್ನಂಬಾಡಿ ..	ಅತ್ತಿಕುಪ್ಪೆ ಯಾ ಕೃಷ್ಣರಾಜಪೇಟೆ ..	40	5	101	..	125	171	3ನೇಜೂನ್ 1895.	
		ಚಾಮುಂಡಿಜಾತ್ರೆ ..		..	4	10	..	..	..		
		ಸುಬ್ರಾಯರ್ ಜಾತ್ರೆ ..		..	..	5					
			ಹಾಸನ ಡಿಸ್ಟ್ರಿಕ್ಟ್.								
ಹಾಸನ.	I	ಹಾಸನ .. ಸಾಲಗಾಮೆ .. ದುದ್ದ .. ಗ್ರಾಮ ..	ಹಾಸನ ..	1950	2529	2400	4601	4953	2245	1ನೇ ಮೇ 1895.	
	II	ಆಲೂರು .. ಪಾಳ್ಯ .. ಕಟಾಯಿ .. ಬೈಲಹಳ್ಳಿ .. ಪೊನ್ನಾಥಪುರ ..	ಆಲೂರು ..	350	677	620	1385	1371	714		
ಮಂಜರಾಬಾದು	III	ಸಕಲೇಶಪುರ .. ಬೆಳಗೋಡು .. ಹಾರ್ಬಾಳ್ .. ಮಾರ್ನಹಳ್ಳಿ ..	ಸಕಲೇಶಪುರ ..	1700	3200	2800	5118	5960	3110	13ನೇ ಮೇ 1895.	
	IV	ಯಸಲೂರು .. ಬ್ಯಾಗಡಹಳ್ಳಿ ..	ಯಸಲೂರು ..	450	1040	855	1734	1902	1021		

552

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕ್ರಿ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪ್ಶೀಲ್.			ಹರಾಜು ತಾರೀಖು	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—95 ಆರುತಿಂಗಳ ಬಿಕರಿ.		
				ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ.		
ಮಂಜರಾ ಬಾದು.	V	ಹೊಸಕೋಟೆ ಯಾ ಮುತ್ತಗಿ ಶುಕ್ರವಾರಸಂತೆ ವ ಬೆಳ್ಳೂರು	ಶುಕ್ರವಾರ ಸಂತೆ ಅಥವ ಬೆಳ್ಳೂರು ..	250	1040	1800	1513	1579	1266	15ನೇ ಮೇ 1895	
ಬೇಲೂರು.	VI	ಬೇಲೂರು ..	ಬೇಲೂರು ..	1425	2180	2000	3651	3839	2253		
		ಶನಿವಾರಸಂತೆ ..									
		ತೊಗರೆ ..									
		ಅರೆಹಳ್ಳಿ ...									
		ಬಿಕೋಡು ..									
	VII	ಮಾದಿಹಳ್ಳಿ ..									
		ಹಳೇಬೀಡು ..									
ಅರಕಲಗೂಡು.	VIII	ಅರಕಲಗೂಡು ..	ಅರಕಲಗೂಡು ..	85	505	706	881	671	629	10ನೇ ಮೇ 1895	
		ಕೋಣನೂರು ...									
		ಮರೂರು ..									
		ಮಲ್ಲಾಪಟ್ಟ ...									
		ಬಸವಾಪಟ್ಟಣ ..									
		ಕೃಷ್ಣರಾಜಕಟ್ಟೆ ..									
ಹೊಳೇನರಸೀಪುರ.	IX	ಹೊಳೇನರಸೀಪುರ ..	ಹೊಳೇನರಸೀಪುರ ..	110	256	562	752	673	424	8ನೇ ಮೇ 1895	
		ದೊಡ್ಡಕಾಡನೂರು ..									
		ಹಳೇಕೋಟೆ ...									
		ಗುಬ್ಬಿ ..									
ಚನ್ನರಾಯಪಟ್ಟಣ.	X	ಚನ್ನರಾಯಪಟ್ಟಣ ..	ಚನ್ನರಾಯಪಟ್ಣ ..	35	106	250	215	549	419	6ನೇ ಮೇ 1895	
		ಹಿರೇಸಾವೆ ..									
		ನುಗ್ಗಿಹಳ್ಳಿ ..									
		ಶ್ರಾವಣಬೆಳಗೊಳ ..									
		ದಂಡಿಗಾನಹಳ್ಳಿ ..									
		ಆನತಿ ..									
		ಬಾಗೂರು ..									
ಅರಸೀಕೆರೆ.	XI	ಅರಶೀಕೆರೆ ..	ಅರಶೀಕೆರೆ ..	800	650	700	2098	2242	1172	3ನೇ ಮೇ 1895	
		ಹಾರನಹಳ್ಳಿ ..									
		ಬಾಣಾವಾರ ..									
		ಗಂಡಸಿ ..									
		ಜಾವಗಲ್ ..									
		ಕಂಗಟ್ಟ ..									
			ಕಡೂರು ಡಿಸ್ಟ್ರಿಕ್ಟ್.								
ಕಡೂರು.	I	ಕಡೂರು ..	ಕಡೂರು ..	255	496	650	1925	2431	919	3ನೇ ಮೇ 1895	
		ಸಕ್ರೆಪಟ್ಣ ..									
		ಯಾಗಟಿ ..									
		ಬಿದರೆ ..									
	II	ಬೀರೂರು ..	ಬೀರೂರು ..	255	441	420					
		ಹಿರೇನಲ್ಲೂರು ..									

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರ್.	ಸಾರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪಸೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪ್ಶೀಲ್.			ಕರಾರ್ ತಾರೀಖು.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93.	1893—94.	1894—95.	1892—93.	1893—94.	1894—95 ಆರುತಿಂಗಳ್ಗೆ ಬರಿ.	
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.	
ಚಿಕ್ಕಮಗಳೂರು.	III	ಚಿಕ್ಕಮಗಳೂರು ..	ಚಿಕ್ಕಮಗಳೂರು ..	3100	5600	5350	9521	11300	6162	1ನೇ ಜೂ 1895.
	IV	ಮಾರೆ ..								
		ಲಾಖ್ಯ ..								
		ಜಾಗ್ರ ..								
	V	ವಸ್ತಾರ ..	ವಸ್ತಾರ ..	635	2256	2840	4548	5581	2965	
	VI	ಬಿದರೆನಾಡು ..	ಆಲ್ದೂರು ..	410	1920	1955	3347	3813	2042	
		ಕಡಗಲ್ನಾಡು ..								
		ಖಾಂಡ್ಯ ..								
ಮೂಡಗೆರೆ.	VII	ಮೂಡಗೆರೆ ..	ಮೂಡಗೆರೆ ..	690	2068	3330	4357	5890	3420	11ನೇ ಜೂ 1895.
		ಗೋಣೀಬೀಡು ..								
	VIII	ಬಾಂಕಲ್ಲು ..	ಬಾಂಕಲ್ಲು ...		1208	1502	2586	3253	2046	
		ಮೇಲ್‌ಭಂಗಾಡಿ ..								
		ಕಲಸ ..								
ತರೀಕೆರೆ.	IX	ತರೀಕೆರೆ ..	ತರೀಕೆರೆ ..	710	1800	1800	2404	2533	1278	6ನೇ ಜೂ 1895.
		ಅಜಂಪುರ ..								
		ವನೆ ..								
	X	ಅಮೃತಪುರ ..								
		ಲಿಂಗದಹಳ್ಳಿ ..	ಲಿಂಗದಹಳ್ಳಿ ..	805	1808	2200	2886	3966	1983	
	XI	ಲಕ್ಕವಳ್ಳಿ ..	ಲಕ್ಕವಳ್ಳಿ ..	100	188	250	407	49	322	
ಕೊಪ್ಪ.	XII	ಕೊಪ್ಪ ..	ಕೊಪ್ಪ ..	510	2400	1586	3137	4764	2241	9ನೇ ಜೂ 1895.
	XIII	ಹೊಸಕೆರೆ ..	ಹರಿಹರಪುರ ..	325	704	526	1997	1593	858	
		ಬಿಳೇರಿ ...								
		ಕಿಗ್ಗ ..								
	XIV	ಬಗುಂಜಿ ..	ಸೊಳ್ಳೆಬೈಲು ..	290	840	780	1713	2094	1037	
		ಮೇಗುಂದ ..								
	XV	ಎಡೆಹಳ್ಳಿ ..	ಎಡೆಹಳ್ಳಿ ..	110	608	526	1363	1090	628	
	XVI	ಬಾಳೇಹೊನ್ನೂರು ..	ಬಾಳೇಹೊನ್ನೂರು ..	115	400	350	855	872	485	
	XVII	ಶ್ರಿಂಗೇರಿ ..	ಶ್ರಿಂಗೇರಿ ...	400	552	841	1503	1836	939	

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರ್.	ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93.	1893—94.	1894—95.	1892—93.	1893—94.	1894—95 ಆರುತಿಂಗಳ್ಗೆ ಬರಿ.	ಕರಾರ್ ತಾರೀಖು.
ಶಿವಮೊಗ್ಗ.	I	ಶಿವಮೊಗ್ಗ ..	ಶಿವಮೊಗ್ಗ ..	4965	5008	4350	8136	8865	4871	1ನೇ ಜೂ 1895.
	II	ಹೊಳಲೂರು ..	ಹೊಳಲೂರು ..	95	93	81	306	485	172	
	III	ಬಿದರೆ ..	ಬಿದರೆ ..	200	522	560	1326	1412	688	
	IV	ಹೊಳೇಹೊನ್ನೂರು ..	ಹೊಳೇಹೊನ್ನೂರು ..	300	348	365	765	903	388	
	V	ಜೆಂಕೀಪುರ ..	ಜೆಂಕೀಪುರ ..	870	826	732	1593	1792	909	
	VI	ಹಾರ್ನಹಳ್ಳಿ ..	ಐನೂರು ..	810	856	720	1942	1894	953	
		ಕುಂಸಿ ..								
ಹೊನ್ನಾಳಿ.	VII	ಹೊನ್ನಾಳಿ ..	ಹೊನ್ನಾಳಿ ...	780	672	500	1620	2019	924	
		ಸಾಸುವೆಹಳ್ಳಿ ..								
	VIII	ಬೆಲಗುತ್ತಿ ..	ನ್ಯಾಮತಿ :	1395	1057	775	2176	2311	1194	

ಷೆಡ್ಯೂಲ್ ಪಟ್ಟಿ.

ಗುತ್ತಿಗೆ ಫಿರ್ಕಾದ ಕ್ರಮ ನಂಬರ್.	ಸಾರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಬಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲು.			ಹರಾಜ್ ತಾರೀಖು.	ಷರಾ.
	ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—85 ಆರುತಿಂಗಳ ಬಿಕರಿ.		
			ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲಾ.		
IX	ಚನ್ನಗಿರಿ .. ನಲ್ಲೂರು .. ಬಸವಾಪಟ್ಣ ಹೊಸಕೆರೆ. ಸಂತೆಬೆನ್ನೂರು .. ಉಬ್ರಾಣಿ ..	ಚನ್ನಗಿರಿ ..	335	306	260	916	1111	555	1ನೇ ಜೂ 1895.	
X	ಶಿಕಾರಿಪುರ ..	ಶಿಕಾರಿಪುರ ..	1205	1106	846	2023	1992	943		
XI	ಮುಗಳಗೆರೆ .. ಹೊಸೂರೂ .. ಉಡುಗಣಿ .. ತಲಗುಂದ ..	ಮುಗಳಗೆರೆ ..	710	705	721	1703	1787	1043		
XII	ಬಿಳಂದೂರು ..	ಬಿಳಂದೂರು ..	115	208	152	634	691	445		
XIII	ಹುಂಚ .. ಕರೇಹಳ್ಳಿ .. ನಗರ .. ಪುಟ್ಟಗುಪ್ಪಿ .. ಹರತಲ್ ..	ನಗರ ..	65	160	85	735	885	480		
XIV	ಜಾಲ .. ಸಾಗರ .. ಅನಂತಪುರ .. ಇಕ್ಕೇರಿ ..	ಸಾಗರ ..	1350	1205	720	2316	2565	1899		
XV	ತಲಗೊಪ್ಪ .. ಕರೂರು .. ಭಾರಂಗಿ ..	ತಲಗೊಪ್ಪ ..	165	80	42	898	1085	226		
XVI	ಸೊರಬ .. ಕ್ಯಾಸನೂರು .. ಚಂದ್ರಗುತ್ತಿ ..	ಸೊರಬ ..	560	764	530	1607	1734	919		
XVII	ತವನಂದಿ .. ಅಣವಟ್ಟಿ .. ತಲಗುಡ್ಡೆ ..	ಅಣವಟ್ಟಿ ..	350	696	380	1320	1531	648		
XVIII	ಅರಗ ..	ತೀರ್ಥಹಳ್ಳಿ ..	1055	1141	1120	2227	2148	1154		
XIX	ಅಗ್ರಹಾರ ..	ಅಗ್ರಹಾರ ..	205	392	400	1074	1346	822		
XX	ಮಿಟ್ಟೂರು ..	ಹಿರೇಮತ್ತೂರು ..	235	385	375	1008	1072	598		
XXI	ಆಗುಂಬಿ ..	ಆಗುಂಬಿ ..	141	385	300	851	1086	686		
XXII	ಮಂಡಗದ್ದೆ ..	ಮಂಡಗದ್ದೆ ..	485	617	460	6547	1267	743		
	ಚಿತ್ರದುರ್ಗ ಡಿಸ್ಟ್ರಿಕ್ಟು.									
I	ಚಿತ್ರದುರ್ಗ .. ತುರನೂರು .. ಭರಮಸಾಗರ .. ಹಿರೆಗುಂಟನೂರು ..	ಚಿತ್ರದುರ್ಗ ..	910	640	690	1429	1636	1020	1ನೇ ಜೂ 1895.	

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರ್.	ಸಾರಾಯಿ ಬಿಕರಿ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಪಶೀಲ್.			ಹರಾಜು ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93.	1893—94.	1894—95.	1892—93.	1893—94.	1894—95. ಆರುತಿಂಗಳ ಬಿಕರಿ.		
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.		
ಜಗಲೂರು.	II	ಜಗಲೂರು. ಬಿಳಚೋಡು ಸೊಕ್ಕಿ	ಜಗಲೂರು	46	37	40	197	198	92	20ನೇ ಮೇ 1895	
ದಾವಣಗೆರೆ.	III	ದಾವಣಗೆರೆ ಮಾಯಕೊಂಡ ಹದಡಿ ಆಣಿಗೋಡು ಆಣಜಿ	ದಾವಣಗೆರೆ	905	724	1052	1322	1246	648	4ನೇ ಮೇ 1895.	
	IV	ಹರಿಹರ ಮಳೇಬೆನ್ನೂರು ಕೊಂಡಜ್ಜಿ	ಹರಿಹರ	1310	762	755	1581	1836	811		
ಮೊಳಕಾಲ್ಮೂರು.	V	ಮೊಳಕಾಲ್ಮೂರು ದೇವಸಮುದ್ರ	ಮೊಳಕಾಲ್ಮೂರು	100	68	215	712	687	460	10ನೇ ಮೇ 1895.	
ಹೊಳಲ್ ಕೆರೆ.	VI	ಹೊಳಲ್ಕೆರೆ ಭರಮನಾಯಕನದುರ್ಗ. ತಾಳ್ಯ ರಾಮಗಿರಿ ಹೊಸದುರ್ಗ ಬಾಗೂರು	ಹೊಳಲ್ಕೆರೆ	130	87	90	566	684	441	6ನೇ ಮೇ 1895.	
ಚಳ್ಳಕೆರೆ.	VII	ಚಳ್ಳಕೆರೆ ತಳಕ್ ನಾಯಕನಹಟ್ಟಿ ಪರಶುರಾಮಪುರ	ಚಳ್ಳಕೆರೆ	110	78	140	686	629	414	13ನೇ ಮೇ 1885.	
ಹಿರಿಯೂರು.	VIII	ಹಿರಿಯೂರು ಐಮಂಗಲ ಜವನಗೊಂಡನಹಳ್ಳಿ ಧರ್ಮಾಪುರ ಲಕ್ಕಿಹಳ್ಳಿ	ಹಿರಿಯೂರು	155	160	163	495	409	227	16ನೇ ಮೇ 1895.	

1895–96ನೇ ವರುಷಕ್ಕಾಗಿ ಪ್ರತ್ಯೇಕ ಸರಾಯಿ ಅಂಗಡಿಗಳ ಹರಾಜು.

ನಂಬರು 15941 A. R. F. 210—92. ತಾರೀಖು 29ನೇ ಮಾರ್ಚಿ 1895.

1. ಇದಕ್ಕೆ ಲಗತ್ತು ಮಾಡಿರುವ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಾಗುವ ಜಾಗಗಳಲ್ಲಿರುವ ಪ್ರತ್ಯೇಕ ಸಾರಾಯಿ ಅಂಗಡಿಗಳಲ್ಲಿ 1895ನೇ ಇಸವಿ ಜುಲೈ ಗುರ್ರೆ ತಾರೀಖಿಗೆ ಪ್ರಾರಂಭವಾಗಿ 1896ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಸಾರಾಯಿ ಬಿಕರೀ ಮಾಡತಕ್ಕ ಹಕ್ಕನ್ನು ಸದರೀ ಪಟ್ಟಿಯಲ್ಲಿ ಕಂಡ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ಡೆಪ್ಯುಟಿಕಮಿಷನರ್ ಯಾ ಅವರಿಂದ ನೇಮಿಸಲ್ಪಟ್ಟ ಆಫೀಸರು ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಹರಾಜಿನಲ್ಲಿ ಪ್ರತಿ ಸವಾಲುದಾರನೂ ಸವಾಲು ಮಾಡುವುದಕ್ಕೆ ಮುಂಚಿತವಾಗಿ 60 ರೂಪಾಯಿ ಯಾ ಹರಾಜು ಮಾಡತಕ್ಕ ಆಫೀಸರರು ಗೊತ್ತು ಮಾಡುವ ಬೇರೇ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಸದರೀ ಅಂಗಡಿಗಳಿಗೆ ಯಾರ ದರಖಾಸ್ತು ಅಂಗೀಕರಿಸಲ್ಪಡತ್ತೊ ಅಂಥಾ ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತತೋರುವಂತೆ ತಕ್ಕಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರುಮಾಡಲ್ಪಟ್ಟ ದರಖಾಸ್ತನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು, ಅಥವಾ ಅವರಿಂದ ಕ್ರಮವಾಗಿ ಅಪ್ಪಣೆಪಡೆದು ಇರುವ ಅವರ ತರಫ್ ಮುಖಾಲೀಕರನ್ನ ಕಳುಹಿಸಬೇಕು.

3. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣೀ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿ ಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ. ಹರಾಜು ನಡಿಯುತ್ತಾ ಬಂದಹಾಗೆಲ್ಲಾ ಪ್ರತಿ ಅಂಗಡಿಗೆ ಯಾರ್‍ಯಾರ ಸವಾಲ್ ಅಂಗೀಕರಿಸಲ್ಪಡುತ್ತೊ ಅವರವರು ತಕ್ಷಣವೇ ಆಯಾಯ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣವಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನು ಠೇವಣಿ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲೆ 2ನೇಕಲಮಿನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜಾಗುವದಲ್ಲದೆ ಆತನು ಈ ಅಂಗಡಿಗಾಗಲೀ ಅಥವ ಮತ್ತ್ಯಾವ ಅಂಗಡಿಗೋಸ್ಕರವಾಗಿ ಆಗಲೀ ಸವಾಲ್ ಮಾಡಕೂಡದು.

4. ಯಾರ್‍ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಮೇಲಿನ 2 ವ 3ನೇ ಕಲಂಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನ ಕಟ್ಟಿರುತ್ತಾರೋ ಆ ಜನಗಳು ಹರಾಜು ತಾರೀಖು ಲಾಗಾಯಿತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟಿರುವ ಪ್ರತಿ ಒಂದು ಅಂಗಡಿಯ ಎರಡು ತಿಂಗಳ ಗುತ್ತಿಗೇ ಹಣಕ್ಕೆ ಸರಿಯಾಗುವಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣೀ ಕಟ್ಟಿ ವಿಧಾಯಕವಾದ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸುಗಳನ್ನ ಪಡೆಯತಕ್ಕದ್ದು, ಮತ್ತು ಎದರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣೀ ಇಡುವುದಕ್ಕೆ ಯಾ ಲೈಸೆನ್ಸು ಪಡಿಯುಲಿಕ್ಕೆ ಯಾ ಎದರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ಯಾವ ಮನುಷ್ಯನಾದರೂ ತಪ್ಪಿದರೆ ಸದರೀ ಅಂಗಡಿಯು ಯಾ ಅಂಗಡಿಗಳು ಅಂಥಾಮನುಷ್ಯರ ಜವಾಬ್‌ದಾರಿ ಮೇಲೆ ಪುನಹ ಹರಾಜ್ ಮಾಡಲ್ಪಡುತ್ತವೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿಹೋಗಿರುವ ಪಕ್ಷಕ್ಕೆ ಡೆಪ್ಯುಟಿಕಮ್ಮಿಷನರವರು ಅವರಿಗೆ ಯುಕ್ತತೋರುವಂತೆ ಬೇರೇ ವಿಧವಾಗಿ ವ್ಯವಸ್ಥೆಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸದಾರರು ಅಥವಾ ಆತನಿಂದ ವರ್ಗಪಡೆದವರನ್ನ ಹೊಂದಿರುತ್ತೆ.

5. ಮೇಲಿನ 4ನೇ ಕಲಂ ಅನುಸರಿಸಿ ನಡಿಸಲ್ಪಡುವ ಮುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀಮೇಲೆ ನಡೆಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದು

ಕೊಂಡವನಾಗುತ್ತಾನೆ ಮತ್ತು ದುಸರೇ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಿಗಿನ ಪೈಕೀ ದುಸರೇ ಹರಾಜಾದ್ದರಲ್ಲಿ ಚಡ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕೀ ಉಳಿಯುವದರನ್ನು ಆತನು ಭರ್ತಿ ಮಾಡಿಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಿಗಿನಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿಕೊಂಡಿರುವ ಠೇವಣೀ ಮೊಬಲಗುಗಳನ್ನು ವಜಾಮಾಡಿ ಬಾಕೀ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನ್ ಕಂದಾಯದ ಬಾಕೀಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಸದರೀ ಠೇವಣೀ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣೀ ಮೊಬಲಗನ್ನೆಲ್ಲಾ ಸರಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು.

6. ಹರಾಜು ಕಾಲದಲ್ಲಿ ಸವಾಲ್ಮಾಡಲು ಇಚ್ಛೆಯುಳ್ಳವರಿಗೆ ಪ್ರತಿ ಅಂಗಡಿಯಲ್ಲಿ ಖರ್ಚಾದ ಸಾರಾಯಿಯ ತಪಶೀಲನ್ನು ತಿಳಿಸುವ ಒಂದು ತಖ್ತೆಯು ತೋರಿಸಲ್ಪಡುವದು. 1892—93—1893—94 ಮತ್ತು 1894–95ನೇ ವರುಷಗಳ ಬಾಬತು ಪ್ರತಿ ಅಂಗಡಿಯ ಗುತ್ತಿಗೆ ಮೊಬಲಗು ಮತ್ತು ಖರ್ಚಾದ ಸಾರಾಯಿಯು ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಮೇಲಿನ 4ನೇ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು 20° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರುವವಕ್ಕೆ ಮಾತ್ರವೇ ವ್ಯಾಪಿಸುತ್ತೆ. ಪರಂತು ಬೆಂಗಳೂರು ಸೆಂಟ್ರಲ್ ಡಿಸ್ಟಿಲೆರಿಯಲ್ಲಿ ತಯಾರಾಗುವ ಯಾವ ಜೋರಿನದೇ ಆಗಲೀ ಡಬ್ಬಲ್ ಡಿಸ್ಟಿಲ್ಡ್ಯಾನೆ ದುಗುಣಿ ಬಟ್ಟಿ ಇಳಿಸಲ್ಪಟ್ಟ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ಮಾರಲಿಕ್ಕೆ ಹಕ್ಕು ಇರಲಾರದು. ಈಬಾಬತು ಷರಾಬನ್ನು ವ ಮದ್ಯಗಳನ್ನು ಮಾರುವದಕ್ಕೆ ಅನ್ಯದೇಶದ ಸಾರಾಯಿಗಳ ಅಂಗಡಿಕಾರರಿಗೆಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವತಂತ್ರದ ಹಕ್ಕನ್ನು ಪಡಮಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸ್ಥಳೀಯವಾದ ಸರ್ಕಾರದ ಖಜಾನೆಗೆ 1895ನೇ ಇಸವಿ ಜುಲೈ ಮಾಹೆ ಲಾಗಾಯಿತು ಸರಿಯಾದ ತಿಂಗಳುಗಟ್ಲೇ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತೂ ಯಾವ ತಿಂಗಳಿಗೆ ಪಾವತೀಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗಿಂದು ಭಾವಿಸತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಆ ತಿಂಗಳ 20ನೇ ತಾರೀಖು ಯಾ ತತ್ಪೂರ್ವ ಪಾವತಿಯಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ತಾಲ್ಲೂಕು ಅಮಲ್ದಾರರು ಬರಹರೂಪಕವಾದ ಆರಡರ್ ಮೂಲಕ ಲೈಸೆನ್ಸನ್ನು ರದ್ದು ಮಾಡಿ ಷಾಪನ್ನು ಆ ತಿಂಗಳ ಆಖೈರಿನೊಳಗೆ ಪುನಹ ಹರಾಜು ಮಾಡುವರು. ಪ್ರತಿ ಮಾಹೆಯ ಗುತ್ತಿಗೆ ಮೊಬಲಗನ್ನು ಆ ಮಾಹೆಯ 20ನೇ ತಾರೀಖು ಯಾ ಅದಕ್ಕೆ ಪೂರ್ವ ಪಾವತಿ ಮಾಡದೆ ತಪ್ಪಿದಲ್ಲಿ ಲೈಸೆನ್ಸದಾರನು ಇಟ್ಟಿರುವ ಡಿಪಾಜಿಟಯಾನೆ 2 ತಿಂಗಳ ಗುತ್ತಿಗೆ ಮೊಬಲಗು ಪೈಕಿ ದುಸರೆ ಹರಾಜಿನಲ್ಲಿ ನಷ್ಟವೇನಾದರು ಉಂಟಾದಲ್ಲಿ ಅದರ ಭರ್ತಿಗಾಗಿ ಬೇಕಾಗುವ ಮೊಬಲಗು ಜಾತಾ ಉಳಿದ ಮೊಬಲಗು ಗವರ್ನ್ಮೆಂಟಿಗೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು.

(3) ಈ ಸರ್ಕಾರಕ್ಕೆ ಸಾರಾಯಿಯನ್ನು ವ ಇತರ ಒಳದೇಶದ ಷರಾಬನ್ನು ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟೀದಾರರಾದ ಪ್ಯಾರಿ ಅಂಡ್ ಕೋ ಎಂಬ ವರ್ತಕರಿಂದ ಲೈಸೆನ್ಸದಾರನು ತನ್ನ ಅಂಗಡಿಯಲ್ಲಿ ಮಾರುವದಕ್ಕೋಸ್ಕರ ಡಿಸ್ಟಿಲೆರಿಯಲ್ಲಿ ಯಾ ಸರ್ಕಾರದ ಅಪ್ಪಣೇ ಮೇರೆ ಏರ್ಪಾಡಾಗಿರುವ ಬಾಂಡೆಡ ಡಿಪೋಯಿಂದ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ 10½ ಆಣೆ ದರದ ಮ್ಯಾರಿ ಕ್ರಯವನ್ನು ಪಾವತೀ ಮಾಡಿ ಕೊಂಡುಕೊಳ್ಳಬೇಕು. ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ 5—5—0 ದರದ ಪ್ರಕಾರ ಜನಗಳಿಗೆ ಮಾರತಕ್ಕದ್ದು.

(4) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನೂ ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 180 ರೂಪಾಯಿ ದರದಮೇರಿಗೆ ಮ್ಯುನಿಸಿಪಲ್ ಕಾನೂನ್ ಪ್ರಕಾರ ರಿಜಿಸ್ಟರ್ ಫಿ ಯಾ ರುಸುಮನ್ನು ಕೊಡಬೇಕು ; ಮತ್ತು ಆತನು ಪ್ರತಿ ತಿಂಗಳಲ್ಲಿಯೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ್ ಫೀಯನ್ನು ಸಹ ಕೊಡಬೇಕು.

(5) ಮೇಲ್ಕಂಡ ಖರೀದಿ ದರ ಮತ್ತು ರುಸುಂಗಳು ಶಿವಾಯಿ ಸರ್ಕಾರದ ಅಪ್ಪಣೇ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ವಿಧಾಯಕವಾಗಿರುವ 4 ರೂಪಾಯಿ ದರದ ಮೇರೆ ಎಕ್ಸೈಜ್ ಡ್ಯೂಟೀ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಮುಂಗಡವಾಗಿ ಪಾವತೀ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನೂ ವ ಖರೀದಿ ಮೊಬಲಗನ್ನೂ ಪ್ರತ್ಯೇಕ ಅಂಗಡಿಗಳ ಅನುಕೂಲತೆಗೋಸ್ಕರ ಸ್ಥಾಪಿಸಲ್ಪಟ್ಟಿರುವ ಬಾಂಡೆಡ್ ಡಿಪೋನಲ್ಲಿ ಲೈಸೆನ್ಸದಾರರುಗಳ ಖರ್ಚಿನಿಂದ ನೇಮಿಸಲ್ಪಡುವ ಷರಾಫನ ವಶಕ್ಕೆ ಪಾವತೀ ಮಾಡಿ ಗೊತ್ತು ಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಮಾಡಿದರೆ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಜರೀ ಆಫಿಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟೀ ಮೊಬಲಗಿಗೆ ಸರಿಹೊಂದ ಸಾರಾಯಿಯನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿದ ತಾರೀಖು ಮತ್ತು ಘಂಟೆಯನ್ನು ನಮೂದುಮಾಡಿ ಎಕ್ಸೈಜ್ ಕಮ್ಮಿಷನರರವರ ಆಫಿಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜಿಮ್ಮೇದಾರನು ಬಾಂಡೆಡ್ ಡಿಪೋಯಿಂದ ಸಾರಾಯಿ ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು.

(7) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಖ್ಖ, ಸಾರಾಯಿಯು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ವದಗಿಸಿಕೊಳ್ಳತಕ್ಕದ್ದು.

(8) ತೆಗದುಕೊಳ್ಳಲ್ಪಟ್ಟದ್ದ ಷಾಪುಗಳ ಪೈಕಿ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರ್ರವರು ವಿಚಾರಮಾಡದೆ ತಿರಸ್ಕರಿಸುವರು.

(9) ಲೈಸೆನ್ಸದಾರನು ಹಾಲೀ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(10) ಬಾಕೀ ಕರಾರುಗಳು ವ ಷರತ್ತುಗಳು ವಿಧಾಯಕವಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

8. ಲೈಸೆನ್ಸುದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಶೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತು ಗಳಿಗೆ ವಿರೋಧವಾಗಿ ನಡೆವ ಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸುದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣೀ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದು ಮಾಡಿ ಸದರೀ ಲೈಸೆನ್ಸುದಾರನ ಜವಾಬ್ದಾರೀಮೇಲೆ ಮೇಲ್ಕಂಡ ಹಕ್ಕನ್ನು ಪುನಹ ಹರಾಜು ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1895ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲು ಸದರೀ ಲೈಸೆನ್ಸುದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೇ ಹಣವು ಕೂಡ್ಲೆ ಪಾವತಿಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಕಸೀರಿಗೆ ಲೈಸೆನ್ಸುದಾರನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಪ್ತೀ ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಆಫಿಷಿಯೇಟಿಂಗ್ ಚೀಫ್ ಸೆಕ್ರೆಟರಿ.

ಷೆಡ್ಯೂಲ್ ಪಟ್ಟಿ.

ಪ್ರಾಂತದ ಹೆಸರು.	ಅಂಗಡಿಯ ಕ್ರಮ ನಂಬರು.	ಅಂಗಡಿ ಇರುವ ಸ್ಥಳ.	ಪ್ರತಿ ಅಂಗಡಿಯ ಗುತ್ತಿಗೆ ಮೊಬಲಗು.			ಪ್ರತಿ ಅಂಗಡಿಯಲ್ಲಿ ಬಿಕರಿ ಯಾದ ಷರಾಬಿನ ತಪಶೀಲ್.			ಹರಾಜು ಸ್ಥಳ.	ಹರಾಜು ತಾರೀಖು.	ಷರಾ.
			1892-93	1893-94	1894-95	1892-93	1893-94	1894-95 ಆರುತಿಂಗಳ ಬಿಕರಿ.			
			ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.			
ಬೆಂಗಳೂರು ಪಟ್ಟಣ.	1	ನಂಬರ್ 168 ಮಾರಿಯಮ್ಮನ ದೇವಸ್ಥಾನದ ಬೀದಿ, ರಂಗಸ್ವಾಮಿ ದೇವಸ್ಥಾನದ ಬೀದಿ ..	515	483	480	1946	1880	898	ಬೆಂಗಳೂರು ತಾಲ್ಲೂಕು ಕಚೇರಿ.	1895ನೇ ಜೂನ್ 1ನೇ—2ನೇ ತಾರೀಖು.	
	2	,, 40 ರಂಗಸ್ವಾಮಿದೇವಸ್ಥಾನದ ಬೀದಿ ..	477	408	635	2441	2463	1022			
	3	,, 8 ಬಸೆಟ್ಟಿಪೇಟೆ ಕಟ್ಟಿಗರವರ ಬೀದಿ ..	770	560	690	2170	2308	1282			
	4	,, 680 ಧರ್ಮರಾಯನ ದೇವಸ್ಥಾನ, ಹಲಸೂರುಪೇಟೆ	801	748	950	2830	2828	1512			
	5	,, 23 ಅವೆನ್ಯೂರಸ್ತೆ ..	800	564	610	2092	2063	1430			
	6	,, 45 ಬಬ್ಬೂರು ರಂಗಸ್ವಾಮಿ ಬೀದಿ, ತಾರಾಮಂಡಲದ ಬೀದಿ ..	686	604	720	2708	2788	1490			
	7	,, 26 ಶೆಟ್ಟಿ ಸಿದ್ದಣ್ಣನಬೀದಿ ನಂಬರ್ ಯಫ್. 3ನೇ ಡಿವಿಜನ್ ರಾಮಣ್ಣನಪೇಟೆ ..	456	408	510	1633	1574	766			
	8	,, 112 ಲ್ಯಾಸ್ಕರ್ ಲೈನ್ಸ್ ಹೈರೋಡ್ ..	518	516	720	2247	2539	1375			
	9	,, 6 ಮಾರ್ಕೆಟ್ ರಸ್ತೆ ನಂಬರ್ 2ನೇ ಡಿವಿಜನ್ ..	1010	684	750	2318	2649	1517			
	10	,, 65 ಕುರುವಿನಪೇಟೆ, ರಂಗಯ್ಯಶೆಟ್ಟಿ ಬೀದಿ .	768	684	805	2505	2677	1483			
	11	,, 30 ತೆಲುಗರಪೇಟೆಬೀದಿ, ಗುಡುಮಯ್ಯನಪೇಟೆ ..	800	584	805	2155	2586	1450			
	12	,, 128 ಅಕ್ಕಿಪೇಟೆ ತರಗಿನಪೇಟೆ ರಸ್ತೆ	686	764	980	2945	3183	1616			
	13	,, 21 ನಂ.2ನೇಸಂದಿ3ನೇ ಡಿವಿಜನ್ ಕಬ್ಬನ್‌ಪೇಟೆರಸ್ತೆ	464	408	460	1566	1435	907			
	14	,, 36 ನಂಬರ್ ಬಿ. 4ನೇ ಡಿವಿಜನ್ ಕುಂಬಾರಪೇಟೆ	641	548	700	2117	2248	1198			
	15	,, 104 ಕುರುವಿನಪೇಟೆ, ನಂಬರ 9, 2ನೇ ಡಿವಿಜನ್ ಅಕ್ಕಿಪೇಟೆ ..	761	672	715	2273	1983	1392			
	16	,, 136 ಲ್ಯಾಸ್ಕರ್ ಲೈನ್ಸ್ ಹೈರೋಡ್ .	638	560	740	2021	1980	988			
	17	,, 24 ಜಂಕಮ್‌ಪೇಟೆ, ಕಾಶೀವಿಶ್ವೇಶ್ವರ ದೇವಸ್ಥಾನದಬೀದಿ ..	801	572	950	2577	2938	1674			
	18	,, 10 ನರಸಪ್ಪನಗಲ್ಲಿ ಹೊಸಮಾರ್ಕೆಟ ರಸ್ತೆ ಬೀದಿ ..	867	724	965	2874	3482	1314			
	19	,, 79 ರಾಗೀಪೇಟೆ ಕಟಿಕರ ಹಳೇ ಮಾರ್ಕೆಟ ಬೀದಿ	738	788	805	2672	1871	1668			
	20	,, 6 ಸಿದ್ದೀಕಟ್ಟೆ ಜೂಂಬೂಬಜಾರ್ ..	626	684	960	2499	2719	1702			
	21	,, 11 ಸೀ. ಗಲ್ಲಿ ತೆಲುಗರಪೇಟೆ ಬೀದಿ ಬಳೇಪೇಟೆ .	785	592	815	1892	2512	1398			
	22	,, 55 ಹೊಸಮಾದಿಗರಪಾಳ್ಯ .	555	480	270	1267	621	480			
	23	,, 56 ಮೈಸೂರು ರಸ್ತೆ ತಟ್ಟನಬಾಗಲು ..	660	760	995	3044	2805	1482			
	24	,, 28 ಲ್ಯಾಸ್ಕರ್ ಲೈನ್ಸ್ ಹೈರೋಡ್ ..	501	464	455	1469	1024	780			
	25	,, 72 ನಾಲ್‌ಬಂದ್‌ವಾಡಪೇಟೆ ಕೆಂಗೇರಿ ಪೊಲೀಸ್ ಸ್ಟೇಷನ್ ..	553	524	725	1765	2216	1048			
	26	,, 5 ಡಾಬಸ್‌ಪೇಟೆ ಪಿ. ಬೀದಿ ..	360	365	560	1936	2086	1300			
ಮೈಸೂರು ಪಟ್ಟಣ.	1	ಲಷ್ಕರ್ ಮೊಹಲ್ಲಾ ..	260	268	355	1383	1489	803	ಮೈಸೂರು ತಾಲ್ಲೂಕು ಕಚೇರಿ.	1895ನೇ ಜೂನ್ 1ನೇ ತಾರೀಖು.	
	2	ದೇವರಾಜಮೊಹಲ್ಲಾ ..	405	440	480	1647	1532	774			
	3	ಮಂಡೀ ಮೊಹಲ್ಲಾ, ರಾಗಿಮಂಡಿ ..	405	320	405	1252	1504	833			
	4	ದೇವರಾಜ ಮೊಹಲ್ಲಾ, ಶಿವರಾಮಪೇಟೆ ..	650	508	720	1870	2750	1286			
	5	ಆನೇತೇರುಬೀದಿ ಡಿ॥ ..	425	292	315	1438	1063	470			
	6	ಕುರೀಮಂಡಿ, ಮಂಡಿ ಮೊಹಲ್ಲಾ ..	610	496	670	2590	2231	1119			
	7	ಪೋಚಿ ಬೀದಿ ಡಿ॥ ..	355	320	560	1591	2097	943			
	8	ದೇವರಾಜಮೊಹಲ್ಲಾ ..	370	240	405	1097	992	519			
	9	ಬಸವನ ಮೊಹಲ್ಲಾ ..	320	232	330	1126	1203	878			
	10	ಲಷ್ಕರ್ ಮೊಹಲ್ಲಾ ..	495	280	365	1402	1537	881			
	11	ಆನೇತೇರು ಬೀದಿ, ದೇವರಾಜಮೊಹಲ್ಲಾ ..	250	292	675	1619	2087	1156			
	12	ಬಸವನಮೊಹಲ್ಲಾ, ಕುಂಬಾರಗಿರಿ ..	305	188	270	1007	1263	677			
	13	ದೇವರಾಜಮೊಹಲ್ಲಾ, ಹೊಸಅಗ್ರಹಾರದಬಳಿ ..	250	144	162	750	644	320			
	14	ಕೃಷ್ಣರಾಜಮೊಹಲ್ಲಾ, ಹಳೇಅಗ್ರಹಾರ ..	485	228	355	1229	1224	581			
	15	ಆನ ತೇರುಬೀದಿ, ದೇವರಾಜಮೊಹಲ್ಲಾ ..	500	272	290	1104	854	1026			
	16	ಲಷ್ಕರ್ ಮೊಹಲ್ಲಾ ..	365	256	257	1151	918	416			
	17	ನಜರಬಾದ್ ಮೊಹಲ್ಲಾ ..	355	188	220	991	1020	534			
	18	ನಜರಬಾದ್ ಮೊಹಲ್ಲಾ ..	430	188	220	992	911	580			
	19	ಕೃಷ್ಣರಾಜಮೊಹಲ್ಲಾ, ಹಳೇಅಗ್ರಹಾರ ..	425	208	390	1117	1300	911			

ಷೆಡ್ಯೂಲ್ ಪಟ್ಟಿ.

ಫಿರ್ಕಾದ ಹೆಸರು.		ಅಂಗಡಿಯ ಕ್ರಮ ನಂಬರು.	ಅಂಗಡಿ ಇರುವ ಸ್ಥಳ	ಪ್ರತಿಅಂಗಡಿಯು ಗುತ್ತಿಗೆ ಮೊಬಲಗು.			ಪ್ರತಿ ಅಂಗಡಿಯಲ್ಲಿ ಬಿಕರಿ ಯಾದ ಷರಾಬಿನ ತಪ್ಸೀಲ್.			ಹರಾಜಿನ ಸ್ಥಳ.	ಹರಾಜಿನ ತಾರೀಖು.	ಷರಾ.
				1892-93	1893-94	1894-95	1892-93	1893-94	1894-95			
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.			
ಬೆಂಗಳೂರ ಜಿಲ್ಲೆ.	ಬೌರಿಂಗಪೇಟೆ.	1	ಬೌರಿಂಗ್‌ಪ್ಯೇಟೆ ..	1840	832	1500	1549	1479	885	ಬೆಂಗಳೂರಿನ ಡಿಪ್ಯುಟಿರ ಆಫೀಸಿನಲ್ಲಿ	1895ನೇ 4ನೇ ಜೂ ತಾರೀಖು.	
		2	ಡಿಟ್ಟೋ ..		904	1365	1546	1564	647			
		3	ಡಿಟ್ಟೋ ..		968	1265	881	1325	664			
		4	ಡಿಟ್ಟೋ ..		840	1415	1583	1501	671			
		5	ಉರಿಗಂ ..	890	1520	2370	2820	3906	1630			
		6	ಡಿಟ್ಟೋ ..	805	1508	2345	2300	2694	1206			
		7	ಸೋರ್ಣಕೊಪ್ಪ ..	655	1472	2335	2049	2380	1688			
		8	ಸೂರೇಪಲ್ಲಿ ..	880	2420	4250	2336	4613	2154			
	ಬೇತಮಂಗಲ.	1	ಉರಿಗಂ .	780	1512	2415	1889	2547	2584			
		2	ಡಿಟ್ಟೋ ..	705	1516	2405	1930	2094	1670			
		3	ಡಿಟ್ಟೋ .	705	1516	2360	2287	2961	1362			
		4	ಸೂರೆಪಲ್ಲಿ ..	895	2640	4200	3400	4071	1984			
		5	ಮಾದಮಂಗಲ ..	310	480	600	747	810	399			
		6	ಚಿನ್ನಾಗನಹಳ್ಳಿ .	280	440	705	704	819	548			
		7	ಘಟ್ಟರ್ಯಾಗಡಹಳ್ಳಿ ..	755	1520	2410	1972	2572	1192			
		8	ಮಾಸಿಕ .	1030	1616	4000	3999	4648	2139			
		9	ಡಿಟ್ಟೋ ..	1010	1612	4000	4186	3506	2534			
		10	ಲಕ್ಕಿನಾಯಕನಹಳ್ಳಿ ..	0	0	1330	..	..	608			

ಹುಕುಂ ಬಮೋಜಬ್,
ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರೆಟರಿ.

1895—96 ರೆವಿನ್ಯೂ No. $\frac{18151}{\text{R. F. 61—93}}$.

ಇಸ್ತಿಹಾರ್ನಾಮೆ.

ತಾರೀಖು 23ನೇ ಏಪ್ರೈಲ್ 1895.

ಇದರಿಂದ ಪ್ರಕಟಪಡಿಸುವದೇನಂದರೆ, 1895ನೇ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯತು 1896ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ 12 ತಿಂಗಳ ಕಾಲದಲ್ಲಿ ಇಜಾರೇದಾರ್ರ ಕೈಕೆಳಗಿನ ಅಂಗಡೀದಾರ್ರಿಂದ ಜನಗಳಿಗೆ ಮತ್ತು ಬೇಕರ್ಸ್ ಯಾನೆ ರೊಟ್ಟಿ ಕಾರಖಾನೆಯವರಿಗೆ ಈಚಲು ಮರದ ಶೇಂದಿಯು ಇದರಡಿ ನಮೂದಿಸಿರುವ ಮೇರೆ ಚಿಲ್ಲರೇ ದರಗಳಿಗೆ ಮಾರಲ್ಪಡತಕ್ಕದ್ದು:—

ಡಿಸ್ಟ್ರಿಕ್ಟು.	ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಖರೀದಿ.						ರೊಟ್ಟಿಕಾರಖಾನೆಯವರಿಗೆ ಶೇರು ಒಂದಕ್ಕೆ ಖರೀದಿ.		
		ಉತ್ತಮ.			ಕನಿಷ್ಟ.					
ಬೆಂಗಳೂರು.	ಶಿವಿಲ್ ವ ಮಿಲಿಟರಿ ಸ್ಟೇಷನ್ ಮತ್ತು ಷಹರ್	0	1	6	0	1	0	0	1	0
	ತಾಲ್ಲೂಕು ಕಸಬಾಗಳು .. .	0	1	3	0	0	10			
	ಮೈಸೂರ್ ಡಿಸ್ಟ್ರಿಕ್ಟಿನ ಬಾಜೂದಲ್ಲಿರುವ ಗ್ರಾಮಗಳು, ಅಂದರೆ:— ಚನ್ನಪಟ್ಟಣದ ತಾಲ್ಲೂಕಿಗೆ ಶೇರಿದ ಇಗ್ಗಲೂರು, ಗೀಜಗದಾಸನ ದೊಡ್ಡಿ, ಜೆಗದಾಪುರ, ಕುಕ್ಕೂರು, ಮೊರಗನಹಳ್ಳಿ, ದಾಮನಗುಂಡು, ಮತ್ತು ಅರಳಾಪುರ ಎಂಬುವ ಗ್ರಾಮಗಳು ಕಾನಕಾನಹಳ್ಳಿ ತಾಲ್ಲೂಕಿಗೆ ಶೇರಿದ ಸಾತನೂರು ಮತ್ತು ಹಲಸೂರು ಎಂಬುವ ಗ್ರಾಮಗಳು	0	0	6	0	0	4			
	ಇತರ ಎಲ್ಲಾ ಗ್ರಾಮಗಳಲ್ಲಿ	0	1	0	0	0	8			

ಡಿಸ್ಟ್ರಿಕ್ಟು.	ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಬಂದಕ್ಕೆ ಖರೀದಿ.						ರೊಟ್ಟಿ ಕಾರಖಾನೆ ಯವರಿಗೆ ಶೇರು ಬಂದಕ್ಕೆ ಗೊತ್ತಾದ ಖರೀದಿ.
		ಉತ್ತಮ.			ಕನಿಷ್ಟ.			
ಕೋಲಾರ.	ತಾಲ್ಲೂಕು ಕಸಬಾಗಳು	0	1	3	0	0	10	
	ಕೋಲಾರಿಗೆ ಶೇರಿದ ದಿಂಬ, ಬಿವರಿಂಗುಪ್ಯಾಟೆಗೆ ಶೇರಿದ ನೇರನಹಳ್ಳಿ, ಚಿಕ್ಕಬಳ್ಳಾಪುರಕ್ಕೆ ಶೇರಿದ ರಂಗಸ್ಥಳ, ಗೋರೀಬಿದನೂರಿಗೆ ಶೇರಿದ ಗುಂಡಾಪುರ, ಚಿಕ್ಕ ಕುರುಗೋಡು, ಹಿರೇಬಿದನೂರು, ಗೊಟ್ಟಿಗನಪುರ ಮತ್ತು ಕಲ್ಲೂಡಿ, ಮತ್ತು ಬಾಗೆಪಲ್ಲಿಗೆ ಶೇರಿದ ಗಂಟಂವಾರಿಪಲ್ಲಿ, ಹೊಸಕೋಟೆ ಮತ್ತು ಮಲ್ಲಸಂದ್ರ ಎಂಬ ಗ್ರಾಮಗಳಲ್ಲಿ	0	1	3	0	0	10	
	ಇತರೆ ಎಲ್ಲಾಗ್ರಾಮಗಳಲ್ಲಿ	0	1	0	0	0	8	
ತುಮಕೂರು.	ಹುಳಿಯಾರ್ ಸಬ್ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ	0	0	8	0	0	6	
	ಶಿರಾ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ	0	1	3	0	0	6	
	ಇತರ ಎಲ್ಲಾ ತಾಲ್ಲೂಕು ಕಸಬಾಗಳಲ್ಲಿ	0	1	3	0	0	10	
	ಕುಣಿಗಲ್ ತಾಲ್ಲೂಕಿಗೆ ಶೇರಿದ ಹುಳಿಯೂರದುರ್ಗ, ಪುರ ಮತ್ತು ಕೋಡವಟ್ಟಿ ಎಂಬ ಗ್ರಾಮಗಳಲ್ಲಿ	0	0	6	0	0	4	
	ಹುಳಿಯಾರು ಸಬ್ ತಾಲ್ಲೂಕಿನ ಗ್ರಾಮಗಳಲ್ಲಿ	0	0	6	0	0	4	
	ಶಿರಾತಾಲ್ಲೂಕಿನ ಗ್ರಾಮಗಳಲ್ಲಿ	0	1	0	0	0	4	
	ಇತರ ಎಲ್ಲಾ ಗ್ರಾಮಗಳಲ್ಲಿ	0	1	0	0	0	8	
ಮೈಸೂರು.	ಮೈಸೂರ ಟವರ್ನ	0	1	0	0	0	10	
	ಮೈಸೂರು ತಾಲ್ಲೂಕಿಗೆ ಶೇರಿದ ಹೊಸಕೊಳ, ಹಾರೋಹಳ್ಳಿ, ವರುಣ, ಮತ್ತನಹಳ್ಳಿ ಮತ್ತು ಕುಪ್ಪೆಗಾಲ ಎಂಬ ಗ್ರಾಮಗಳು	0	0	8	0	0	4	
	ಮೈಸೂರ್ ತಾಲ್ಲೂಕಿಗೆ ಶೇರಿದ ಚಾಮುಂಡಿ ಮತ್ತು ಉತ್ತನಹಳ್ಳಿ ಜಾತ್ರೆಗಳಲ್ಲಿ	0	1	0	0	0	8	
	ಮೈಸೂರು ತಾಲ್ಲೂಕಿಗೆ ಶೇರಿದ ಕಲಸ್ವಾಡಿ, ಸುಕ್ಕಹಳ್ಳಿ, ರಾಂನಹಳ್ಳಿ, ಕುಂಚಿಗರಕಟ್ಟೆ ಮತ್ತು ಅಮ್ಮನವರಕೊಳ ಎಂಬ ಗ್ರಾಮಗಳಲ್ಲಿ	0	1	0	0	0	10	
	ಮೈಸೂರು ತಾಲ್ಲೂಕಿಗೆ ಶೇರಿದ ಭೂಗದಗಳ್ಳಿ, ಕೆಂಚಲಗೂಡು, ಮರಟಿಕ್ಯಾತನಹಳ್ಳಿ ಮತ್ತು ಗಣಂಗೂರ್ ಹುಂಡಿ ಎಂಬ ಗ್ರಾಮಗಳಲ್ಲಿ	0	0	10	0	0	8	
	ಹೆಗ್ಗಡದೇವನಕೋಟೆ ಕಸಬ	0	0	10	0	0	6	
	ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಶೇರಿದ ಸರಗೂರು, ಕಿತ್ತೂರು, ಮುರಳುಮಗ್ಗೆ, ಸೋಗೆರೆ, ಅಂತ್ರಸಂತೆ, ನೇರಳೆ, ಎಲ್ಲಮತ್ತೂರು, ಕಾರೇಪುರ, ಮತ್ತು ಗಿಶನೆ ಎಂಬ ಗ್ರಾಮಗಳಲ್ಲಿ	0	0	8	0	0	4	
	ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಶೇರಿದ ಚಿಕ್ಕಳ್ಳಿ, ಮತ್ತಿಕೆರೆ, ಎಡತೊರೆ ಮತ್ತು ಹಿರಿಹಳ್ಳಿ ಎಂಬಗ್ರಾಮಗಳು	0	0	10	0	0	6	
	ಹುಣಸೂರು ಕಸಬ	0	0	10	0	0	6	
	ಹುಣಸೂರು ತಾಲ್ಲೂಕಿಗೆ ಶೇರಿದ ದಾದಕೆರೆ, ಹನಗೂಡು, ಹೆಬ್ಬೂರು, ಬಿಳಿಕೆರೆ ಮಸನಿಕಟ್ಟೆ, ಚಿಟ್ಟನಹಳ್ಳಿ, ಫಿಜಾಜಿಗುರ್ರಿ, ಕಂಪ್ಲಾಪುರ, ಚಿಲ್ಕುಂದು, ಅತ್ತಿಕುಪ್ಪೆ, ಬೆಟ್ಟದಪುರ, ಅತ್ತಿಗೋಡುಸಂತೆ, ಕಮರವಳ್ಳಿ, ಸೂಳೆಕೋಟೆ, ಚಾಮರಾಜಕೋಟೆ, ಕನ್ನಗೊಳ, ಆನೆಚೌಕೂರು, ಪಂಚವಳ್ಳಿ, ಮಟ್ಟೂರು, ಅವರ್ತಿಕೋಟೆ ಮತ್ತು ಸತ್ತಿಗಾಲ ಎಂಬ ಗ್ರಾಮಗಳು	0	0	8	0	0	4	
	ಹುಣಸೂರು ತಾಲ್ಲೂಕಿಗೆ ಶೇರಿದ ಬೆಟ್ಟದಪುರದ ಜಾತ್ರೆಗಳಲ್ಲಿ	0	0	10	0	0	8	
	ಹುಣಸೂರು ತಾಲ್ಲೂಕಿಗ ಶೇರಿದ ಕಟ್ಟೆಮಳವಾಡಿ, ಕಲ್ಲಪಟ್ಟ, ಹೊನ್ನೇನಹಳ್ಳಿ ಮತ್ತು ಬನ್ನಕುಪ್ಪೆ ಎಂಬಗ್ರಾಮಗಳಲ್ಲಿ	0	0	10	0	0	6	
6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದ್ದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

				ಸ್ವತ್ತಿನ ತಪ್ಸೀಲ್.												
				ಕಟ್ಟಡಗಳು.				ಜಮೀನು.								
ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.			ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.		
1	2	3	4	5	6			7	8	9		10			11		
					ರೂ.	ಆ.	ಪೈ.			ಖಂಡಿ.	ಕು.	ರೂ.	ಆ.	ಪೈ.	ರೂ.	ಆ.	ಪೈ.
ಕೋಲಾರ	ಸುಗಟೂರು	ಸೋಮಾಂಬುಧಿ ಅಗ್ರಹಾರ ಜೋಡಿ	ವೆಂಕಂಭಟ್ಟ	..	..	..	..	ಗ್ರಾಮದಲ್ಲಿ ಬಾಕಿದಾರನಿಗೆ ಇರುವ $\frac{1}{10}$ ಹಿಸ್ಸೆ	ಖುಷ್ಕಿ ತರೀ ಬಾಗಾಯತು	55	$2\frac{3}{4}$	350	3	9	26	14	3
									ಜೋಡಿ			247	4	0			
									ಲೋಕಲ್‌ಸೆಸ್			25	14	10			
												273	2	10			
		ಮೊಟ್ಟನಹಳ್ಳಿ ಜೋಡಿ	ರಾಮಪ್ಪ	..	..	..	..	ಗ್ರಾಮದಲ್ಲಿ ಬಾಕಿದಾರನಿಗೆ ಇರುವ $\frac{1}{8}$ ಹಿಸ್ಸೆ	ಖುಷ್ಕಿ ತರೀ ಬಾಗಾಯತು	15	$10\frac{3}{4}$	296	11	8	32	5	0
									ಜೋಡಿ			224	0	0			
									ಲೋಕಲ್‌ಸೆಸ್			18	8	9			
												242	8	9			
	ವೇಮಗಲ್	ಬಾಲನಾಗನಹಳ್ಳಿ ಕಾಯಂಗುತ್ತಾ	ಶೀನಪ್ಪ ರುಕ್ಮಿಣಿಅಮ್ಮ	..	..	..	..	ಪೂರಾ ಗ್ರಾಮ	ಖುಷ್ಕಿ ತರೀ ಬಾಗಾಯತು	14	$13\frac{1}{2}$	80	9	8	76	0	1
									ಕಾಯಂಗುತ್ತಾ			71	0	0			
									ಲೋಕಲ್‌ಸೆಸ್			5	0	1			
												76	0	1	ಕುಲ್ 135–3–4		

ಷರಾ—ಮೊದಲಿನ ಇನಾಂದಾರ್ರು ಮಾಡಿದ ಭೋಗ್ಯ ವಗೈರೆ ಭಾರವಿಲ್ಲದೆ ಹರಾಜ್ ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ಇಸ್ತಿಹಾರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 15ನೇ ಏಪ್ರೈಲ್ 1895.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕು ಸರ್ವೆಸೆಟ್ಲ್‌ಮೆಂಟ ಆಗಿ 25 ವರುಷಗಳು ಆಗುತ್ತಾ ಬಂದಿರುವ ಪ್ರಯುಕ್ತ ಸನ್ 1895ನೇ ಇಸವಿ ಮಾರ್ಚಿ 11ನೇ ಮರ್ಕುಂ 14523—30—R. F. 157—93ನೇ ನಂಬರು ಗವರ್ನಮೆಂಟ ಆರ್ಡರನ್ನನುಸರಿಸಿ ಸದರೀ ತಾಲ್ಲೂಕು ಕಚೇರಿ ರಿಕಾರ್ಡಿನಲ್ಲಿ ಇರುವ 1807—1808ನೇ ಪ್ರಭವ ಸಾಲ್ ಲಾಗಾಯತು 1869—70ನೇ ಶುಕ್ಲ ಸಾಲ್ ವರಿಗಿನ ದಿಟ್ಟಂಚಿತ್ಥ ಮತ್ತು ಕುಳವಾರು ಚಿತ್ತ ಲೆಖ್ಖಗಳು ಜಲಾಯಿಸಲ್ಪಡುತ್ತವೆ.

ಸದರೀ ಚಿತ್ತ ಲೆಖ್ಖಗಳ ನಕಲುಗಳನ್ನು ಪಡಿಯಲು ಅಪೇಕ್ಷೆವುಳ್ಳವರು ಈ ತಾರೀಖು ಲಾಗಾಯತು 6 ತಿಂಗಳ ವಳಗಾಗಿ ಶಿರಾ ತಾಲ್ಲೂಕು ಅಮಲ್‌ದಾರ್ರಿಗೆ ಬರದುಕೊಂಡು ನಕಲುಗಳನ್ನು ಪಡಿಯಬಹುದು ಆ ವಾಯಿದೆ ಆದ ನಂತರ ನಕಲುಗಳು ದೊರಿಯಲಾರವು.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 19ನೇ ಏಪ್ರೈಲ್ 1895.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಾಯಂಗುತ್ತಾ ಬಾಕೀದಾರರಾದ ಕ್ರಿಷ್ಣರಾವ್ ವಗೈರೇರಿಂದ ಬರಬೇಕಾದ ಕಾಯಂಗುತ್ತಾ ಬಾಕಿಗಾಗಿ ಇದರಡಿ ಫಾರ್ ಫಿಟ್ಟಾಗಿರುವ ನಮೂದಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಅಮಲದಾರ್ರ ಕಚೇರೀಲಿ 1895ನೇ ಮೇ 31ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇಧೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಾಯಂಗುತ್ತಾ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ 1001—6—7 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25ನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು ದಿವಸಗಳಲ್ಲಿ ಪಾವತಿಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂತಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ, ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ, ಎಂಬ ಅಂಶವನ್ನು ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್‌ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿದಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರು ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್‌ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು	ಹೋಬಳಿ	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್.											ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.		
				ಕಟ್ಟಡಗಳು.				ಜಮೀನು.									
				ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.			ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.					
1	2	3	4	5	6			7	8	9		10			11		
					ರೂ.	ಆ.	ಪೈ.			ಖ.	ಕೊ.	ರೂ.	ಆ.	ಪೈ.	ರೂ.	ಆ.	ಪೈ.
ಕೋಲಾರ್.	ದಳಸನೂರು.	ಮಲ್ಲಸಂದ್ರ ಖಾಯಂ ಗುತ್ತಾ	1 ಕೃಷ್ಣರಾವು 2 ಸುಬ್ಬರಾವು 3 ಗುರುರಾವು.	..	..	..	..	ಪೂರಾಗ್ರಾಮ.	ಖುಷ್ಕೀ ತರೀ ಬಾಗಾಯಿತು	45	$\frac{6}{2}$	148	1	2	97	6	5
									ಸಾಲೀಯಾ	ನಾ ಸರ		ಕಾರ	ಕ್ಕೆ	ಕೊ	ಡಬೇಕಾ	ದ್ದು	
												97	6	5			
	ವೇಮಗಲ್.	ಕಪ್ಯಲನೂರು ಖಾಯಂಗುತ್ತ*.	ರಾಮಪ್ಪ.	..	..	..	..	ಪೂರಾಗ್ರಾಮ.	ಖುಷ್ಕೀ ತರೀ ಬಾಗಾಯಿತು	62	$19\frac{7}{8}$	1358	13	5	904	0	2
									ಸಾಲೀಯಾ	ನಾ ಸರ		ಕಾರ	ಕ್ಕೆ	ಕೊ	ಡಬೇಕಾ	ದ್ದು	
												1535	12	1			
												ಟೋ	ಟ	ಲ್.	1001	6	7

* ಕಾಯಂಗುತ್ತಾದಾರರು ಆಗಲಿ ಅವರ ಹಿರಿಯರೇ ಆಗಲಿ ಭೋಗ್ಯ ವಗೈರೆ ಮಾಡಿದ ಭಾರವಿಲ್ಲದೆ ಹರಾಜು ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಡಿಪಾರ್ಟ್‌ಮೆಂಟ್.

ಪ್ರಕಟನೆ.

ತಾರೀಖು 23ನೇ ಏಪ್ರೆಲ್ 1895ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟು ದೇವರಾಯದುರ್ಗ, ಮದ್ದಗಿರಿ, ಹುಲಿಯೂರುದುರ್ಗ ಮತ್ತು ಬುಕ್ಕಾಪಟ್ಣ ಸ್ಟೇಟ್ ಫಾರೆಸ್ಟುಗಳಲ್ಲಿ ಜಮಾಯಿಸಲ್ಪಟ್ಟ 1894—95ನೇ ಸಾಲ್ ಪಸಾರೆ ಜಿನಸಿಗಳು ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುವದು.

ಸನ್ 1895ನೇ ಇಸವಿ ಮೇ ತಾರೀಖು 8ರಲ್ಲು ತುಮಕೂರು ಡಿಪೋದಲ್ಲಿ..

ತಪಸೀಲ್.	ಪಲ್ಲ.	ಮಣ.	ಸೇರು.	
ಅಳಲೇಕಾಯಿ	..	252	..	ಸುಮಾರು
ಜೇನುತುಪ್ಪ	..	6	4	ಡಿಟ್ಟೋ
ಜೇನುಮೇಣ	..	..	5	ಡಿಟ್ಟೋ
ಗೇರುಬೀಜ	..	..	35	ಡಿಟ್ಟೋ
ಪಟ್ಟೆ ಚಕ್ಕೆ	..	60	..	ಡಿಟ್ಟೋ
ನೀಲಿ	..	4	38	ಡಿಟ್ಟೋ
ಕಪಿಲಾರಂಗು	..	2	6	ಡಿಟ್ಟೋ
ಅರಗು	..	13	3	ಡಿಟ್ಟೋ
ಹೊಂಗೇಬೀಜ	..	..	99	ಡಿಟ್ಟೋ
ದುಪ್ಪಿಕೊಂಬು	..	..	7	ಅದದು
ಹುಣಸೇಹಣ್ಣು	..	94	..	ಸುಮಾರು
ಸೀಗೇಕಾಯಿ	..	8	..	ಡಿಟ್ಟೋ

1895ನೇ ಇಸವಿ ಮೇ ತಾರೀಖು 20ರಲ್ಲು ಮದ್ದಗಿರಿ ಡಿಪೋದಲ್ಲಿ.

ತಪಶೀಲ್.	ಪಲ್ಲ.	ಮಣ.	ಸೇರು.	
ಜೇನುತುಪ್ಪ	..	10	..	ಸುಮಾರು
ಜೇನುಮೇಣ	..	3	4	ಡಿಟೋ
ಗೇರುಬೀಜ	1	..	50	ಡಿಟೋ
ಅರಗು	..	..	20	ಡಿಟೋ
ಅಳಲೇಕಾಯಿ	..	180	..	ಡಿಟೋ

1895ನೇ ಇಸವಿ ಮೇ 31ನೇ ತಾರೀಖಿನಲ್ಲಿ ಶಿರಾ ಮುಸಾಫರ್ ಬಂಗ್ಲೆಯಲ್ಲಿ.

ತಪಶೀಲ್.	ಪಲ್ಲ.	ಮಣ.	ಸೇರು.	
ಅಳಲೇಕಾಯಿ	..	92	24	ಸುಮಾರು
ಹುಣಿಸೇಹಣ್ಣು	...	6	..	ಡಿಟೋ

1895ನೇ ಇಸವಿ ಜೂನ್ ತಾರೀಖು 10ರಲ್ಲು ಹುಲಿಯೂರುದುರ್ಗದ ಹಳೇ ತಾಲ್ಲೂಕು ಕಚೇರಿಯಲ್ಲಿ.

ತಪಶೀಲ್.	ಪಲ್ಲ.	ಮಣ.	ಸೇರು.	
ಅಳಲೇಕಾಯಿ	..	39	..	
ಕಪಿಲಾರಂಗು	..	..	31	
ಸೀಗೇಕಾಯಿ	..	25	20	
ಹುಣಿಸೇಹಣ್ಣು	..	22	..	

ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಮತ್ತು ಹರಾಜು ತಾರೀಖು ಲಾಗಾಯತು ಕಾವಲು ಕಟ್ಟನೆ ಖರೀದಿದಾರ್ರಿಗೇನೇ ಸಂಬಂಧಪಡುತ್ತೆ.

ಶೇಕಡಾ 25 ರೂಪಾಯಿಗಳಂತೆ ಡಿಪಾಜಿಟ್ ಮೊಬಲಗು ತಕ್ಷಣ ಕಟ್ಟಬೇಕು. ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ವಂದು ವಾರದ ವಳಗಾಗಿ ಪಾವತಿ ಮಾಡಬೇಕು. ತಪ್ಪಿದರೆ ಬಾಬನ್ನು ಪುನಹ ಹರಾಜು ಹಾಕಲ್ಪಡುತ್ತೆ, ಲುಕ್ಸಾನಿಗೆ ಮೊದಲು ಖರೀದಿದಾರ್ರನ್ನು ಗುರಿಮಾಡುತ್ತೆ. ಸಾಮಾನುಗಳನ್ನು ಹರಾಜು ಆದ ಹತ್ತು ದಿವಸದ ವಳಗಾಗಿ ತೆಗೆದುಕೊಂಡು ಹೋಗಬೇಕು. ಇವುಗಳ ಶಿವಾಯಿ ಇತರ ಸಂಗತಿಗಳಿಗೆ 1887ನೇ ಇಸವಿ ಸೆಪ್ಟಂಬರ್ 3ನೇ ಮರ್ಕುಂ 35ನೇ ನಂಬರ್ ಮೈಸೂರ ಗೆಜೆಟ್ಟನಲ್ಲಿ ಮೊದಲು ಭಾಗದಲ್ಲಿರುವ 1887ನೇ ಇಸವಿ ಆಗಸ್ಟ್ 30ನೇ ಮರ್ಕುಂ 99ನೇ ನಂಬರ್ ಪ್ರಕಟನೆಯನ್ನು ನೋಡಿ.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಹಾಸನ ಡಿಸ್ಟ್ರಿಕ್ಟು.

ಬೇಲೂರು ತಾಲ್ಲೂಕು.

ಇಸ್ತಿಹಾರ್ನಾಮಾ.

ತಾರೀಖು 31ನೇ ಮಾರ್ಚಿ ಸನ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ಶಿರಗೂರ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸನ್ 1895ನೇ ಇಸವಿ ಮೇ ತಾರೀಖು 25ನೇ ಶನಿವಾರ ಹಗಲು 11 ಘಂಟೆಗೆ ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಬೇಲೂರು ತಾಲ್ಲೂಕು ಅಮಲ್ದಾರ್ರ ರೂಬರೂ ಬೇಲೂರ್ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು, ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್. ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್‍ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಶೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಶೇವಣಿ ಮೊಬಲಗನ್ನು ಹರಾಜ್ ಖೈದಾದವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕೀ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕೀ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತಿ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ,		ಷರಾ.
				ವಿಸ್ತೀರ್ಣ.	ಆಕಾರಾ.	
83	ಕೊಂಗೋಡು ನಂಜುಂಡಶೆಟ್ಟಿ	ಅರೆಹಳ್ಳಿ ಹೋಬಳಿ ಶಿರಗೂರ ಗ್ರಾಮ	ಪೂರ್ವ ಮತ್ತು ದಕ್ಷಿಣ—ಸರ್ವೆ ನಂಬರ್ 82 ಮತ್ತು ಫೋಡು ನಂಬರು 129 ಪಶ್ಚಿಮ—ಸರ್ವೆ $4\frac{1}{2}$ನೇ ನಂಬರ್ ಉತ್ತರ—ಹಳ್ಳಾ	ಎಕರೆ 70 ಗುಂಟೆ 32	..	

ತಿಳುವಳಿಕೆ ಷರಾ,—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಬ್ಜಾ ಅಳತೇ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯ್ಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ ಹಿಡುವಳೀ ದಾರನು ಬದ್ಧ ವ ಅರ್ಹನಾಗಿರಬೇಕು.

ಪಿ. ಎನ್. ಪೂರ್ಣಯ್ಯ,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

1895ನೇ ಇಸವಿ ಏಪ್ರೈಲ್ 22ನೇ ಮರ್ಕುಂ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,

I. ಈ ಕೆಳಗೆ ಕಂಡ ಶಿವಮೊಗ್ಗಾ ಡಿಸ್ಟ್ರಿಕ್ಟು ತಾಲ್ಲೂಕುಗಳ ಬಗನಿ ಶೇಂದಿ ಫುತಾರ್ ಮತ್ತು ಮಾರುವ ಹಕ್ಕು ಸನ್ 1895ನೇ ಜುಲೈ ಗುರ್ರೆ ಲಾಗಾಯತು 1896ನೇ ಜೂನ್ 30ರ ವರಿಗೆ ಗ್ರಾಮವಾರಾಗಿ ಆಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ ಆಯಾಯ ತಾಲ್ಲೂಕು ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಆಯಾಯ ತಾಲ್ಲೂಕು ಕಚೇರಿ ರೂಬರೂ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಒಬ್ಬರು ಅಸಿಸ್ಟೆಂಟ್ ಕಮ್ಮಿಷನರವರಿಂದಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

	ತಾಲ್ಲೂಕು.		ಹರಾಜು ತಾರೀಖು.	
1	ಶಿಕಾರಿಪುರ	..	ಸನ್ 1895ನೇ ಮೇ	8— 9
2	ಸೊರಬ	..	ಡಿಟೋ	11—12
3	ಸಾಗರ	..	ಡಿಟೋ	14—15
4	ನಗರ	..	ಡಿಟೋ	17—18
5	ತೀರ್ಥಹಳ್ಳಿ	..	ಡಿಟೋ	21—22

II. ಪ್ರತಿ ಒಂದು ಸರಕಲ್ ಗುತ್ತಿಯನ್ನ ಚಡದರಖಾಸ್ತುದಾರನಿಗೆ ಕೊಡಲ್ಪಡುವದು, ಸದರೀ ಚಡದರಖಾಸ್ತು ಸಾಧ್ಯವಾದ ಮಟ್ಟಿಗೂ ಕಳದ ಸಾಲ್ ಮೊಬಲಗ್ಯೆ ಕಮ್ಮಿ ಇರಕೂಡದು ಈ ಹರಾಜು ಅಸಿಸ್ಟೆಂಟ್ ಕಮ್ಮಿಷನರವರಿಂದ ಮಾಡಲ್ಪಟ್ಟಲ್ಲಿ ಅದು ಡೆಪ್ಯುಟಿ ಕಮ್ಮಿಷನರವರ ಮಂಜೂರಿಗೆ ಒಳಪಟ್ಟು ಇರತಕ್ಕದ್ದಾಗಿ ಇರುತ್ತೆ ಅಂಥಾ ಹರಾಜಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸದರೀಯವರು ಡೆಪ್ಯುಟಿ ಕಮ್ಮಿಷನರವರಲ್ಲಿಗೆ ಕಳುಹಿಸತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾವದೊಂದು ದರಖಾಸ್ತು ಅಥವಾ ಚಡದರಖಾಸ್ತನ್ನಾದರೂ ಯಾವದೊಂದು ಕಾರಣವೂ ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

III. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಿಯಾಗಲಿ ಹಾಜರಾಗಬೇಕು. ಮತ್ತು ಇಂಥಾ ಮನುಷ್ಯನು ನಿಗದಿಯಾದ ಅಂದಾಜಾ ಮೊಬಲಗು ಪೈಕಿ ಶೇಕಡಾ ಐದು ರೂಪಾಯಿನಂತೆ ಆಗುವ ಮೊಬಲಗು ಡಿಪಾಜಿಟ್ ಕಟ್ಟುವ ತನಕ ಆತನ ಸವಾಲ್ ಅಂಗೀಕರಿಸಲಾಗುವದಿಲ್ಲ ಹರಾಜು ಆತನ ಹೆಸರಿಗೆ ಕೈಹಾಗದೆ ಇದ್ದರೆ ಡಿಪಾಜಿಟ್ ಮೊಬಲಗು ಹರಾಜು ಮಾಡಿದ ಕೂಡ್ಲೆ ಆತನಿಗೆ ವಾಪಸ್ ಮಾಡಲ್ಪಡುತ್ತೆ.

IV. ಡೆಪ್ಯುಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಚಡದರಖಾಸ್ತುದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡತಕ್ಕ ಆಫಿಸರಲ್ಲಿ ಆ ಕೂಡ್ಲೆ ಹಾಜರು ಮಾಡಬೇಕು ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲ್ ಗುತ್ತಿಗೆ ಮೊಬಲಗು ಯಷ್ಟು ನಿಷ್ಕರ್ಷೆ ಆಗುತ್ತೆ ಅದರ ಹನ್ನೆರಡರಲ್ಲಿ ಒಂದು ಭಾಗದ ಮೊಬಲಗು ಒಡನೆ ಡಿಪಾಜಿಟ್ ಮಾಡಬೇಕು. ಡೆಪ್ಯುಟಿ ಕಮ್ಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ಒಳಗಾಗಿ ಹಿಂದೆ ಹಾಜರು ಮಾಡಿದ ಡಿಪಾಜಿಟ್ ಮೊಬಲಗು ಅಲ್ಲದೆ ಜಾಸ್ತಿಯಾಗಿ ಸಾಲ್ ಗುತ್ತಿಗೆ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗದಷ್ಟು ಮೊಬಲಗು ನಗದಾಗಿಯಾಗಲಿ ಅಥವಾ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಅಮಲ್ದಾರ್ರಲ್ಲಿ ಹಾಜರ್ಮಾಡಬೇಕು ಹಾಗೆ ಗವರ್ನಮೆಂಟ್ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟು ಷರತ್ತು ನೆರವೇರಿಕೆ ಖಾತ್ರಿಗಾಗಿ ಹಾಜರ್ಮಾಡಿಧೆ ಯೆಂದು ಸದರೀ ಪತ್ರ ಜೈಲ್ ಡೆಪ್ಯುಟಿ ಕಮ್ಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿ ಕೊಡತಕ್ಕದ್ದಾಗಿ ಇರುತ್ತೆ. ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನಿ ಮೊಬಲಗ್ಗಾಗಿ ಅರವಾಶಿ ನಗದಾಗಿಯಾಗಲಿ ಅಥವಾ ಮೇಲ್ಕಂಡಂತೆ ಇಂಡಾರ್ಸ್ ಮಾಡಿ ಕೊಟ್ಟ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಬಾಕಿ ಅರ್ಧ ಭಾಗ ಸ್ಥಿರಸೊತ್ತು ಮೂಲಕ ಜಾಮೀನಿ ಕೊಡಬಹುದು ಹಾಗೆ ಆಧಾರ ಮಾಡುವ ಸ್ಥಿರಸೊತ್ತಿನ ಬೆಲೆ ಜಾಮೀನಿ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು. ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು ನಗದಾಗಿ ಠೇವಣಿ ಇಟ್ಟ ಮೊಬಲಗು ಆಖೈರ್ ಮೂರು ತಿಂಗಳ ಖಿಸ್ತಿನ ಬಗ್ಯೆ ಜಮೇ ಹಿಡಿಯಲ್ಪಡುತ್ತದೆ ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ನಡಕೊಳ್ಳಲು ಬದ್ಧನಾಗಿರುತ್ತೇನೆಂತ ಕ್ರಮವಾದ ಸ್ಟ್ಯಾಂಪು ಕಾಗದದ ಮೇಲೆ ಮಾಮೂಲ್‌ನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿ ಇರುತ್ತೆ.

V. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟ್ ಹಾಜರ್ಮಾಡದೆ ತಪ್ಪಿದರೂ ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ ಷುರೂ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬ್ ಪುನಹ ಹರಾಜು ಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿಯಾಗಲಿ ವಿಲೇವಾರಿ ಮಾಡಲ್ಪಡುತ್ತೆ ಹಾಗೆ ಮಾಡುವದರಲ್ಲಿ ಸರ್ಕಾರಕ್ಕೆ ಲುಕ್ಸಾನು ಯೇನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು ಕಂದಾಯ ಬಾಕಿಯಂತೆ ಸದರೀಯವನ ಜಿಂದಗಿ ಜಪ್ತಿ ಹರಾಜು ಮೂಲಕ ವಸೂಲ್ಮಾಡಿಕೊಳ್ಳಲ್ಪಡುತ್ತೆ.

VI. ಈಚಲ್ ಶೇಂದಿ ಕಂಟ್ರಾಕ್ಟರ್ ಸಂಬಂಧದಲ್ಲಿ ವಿಧಾಯಕವಾಗಿರುವ ಷರತ್ತುಗಳು ಈ ಬಗನೀ ಶೇಂದಿ ಇಜಾರೆ ಬಗ್ಯೂ ಅನ್ವಯಿಸಲ್ಪಡುತ್ತೆ.

VII. ಹಿಂದಿನ ಸಾಲ್‌ಗಳ ಬಗನೀ ಶೇಂದಿ ಹುಟ್ಟುವಳಿ ಮತ್ತು ಇತರ ತಪ್ಸೀಲ್ ತಿಳಿಯಬೇಕಾಗಿದ್ದರೆ ತಾಲ್ಲೂಕು ಅಮಲ್ದಾರ್ರು ಅಥವಾ ಶಿರಸ್ತೇದಾರ್ರಲ್ಲಿ ದರಖಾಸ್ತು ಕೊಟ್ಟು ತಿಳಕೊಳ್ಳಬಹುದು.

ಡಿ. ನಾಮಕಲ್‌ರಾವ್,
ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ನೋಟಿಫಿಕೇಷನ್.

ತಾರೀಖು 19ನೇ ಏಪ್ರೆಲ್ 1895.

ಇದರಿಂದ ಸಕಲಜನಗಳೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಚಾಲ್ತಿ ಸಾಲಿನಲ್ಲಿ ಫಾರೆಸ್ಟು ಇಲಾಖಾ ಮಾರಿಫತು ಜಮಾಯಿಸಲ್ಪಟ್ಟ ಹಿರೀಕಲ್‌ಗುಡ್ಡ ವಗೈರೆ ಸ್ಟೇಟ್ ಫಾರೆಸ್ಟುಗಳ ಅಳಲೇಕಾಯಿಗಳನ್ನು ಈ ಕೆಳಗೆ ಕಾಣುವ ಸ್ಥಳ ಮತ್ತು ತಾರೀಖುಗಳಲ್ಲಿ ಹರಾಜು ಮಾಡಲ್ಪಡುತ್ತವೆ.

ಹರಾಜು ಆಗುವಸ್ಥಳ.	ತಾರೀಖು.	ಮೊತ್ತ.
ಹಾಸನ ..	10ನೇ ಮೇ 1895	500 ಮಣ } [illegible]
ಅರ್ಸಿಕೆರೆ ..	15ನೇ ಮೇ 1895	1500 ಮಣ

ಷರತ್ತುಗಳು.

ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ 1887ನೇ ಇಸವಿ ಜೂನ್ 11ನೇ ಮಜ್ಕೂರ ನೋಟಿಫಿಕೇಷನ್ ಹರಾಜು ಕಾಲದಲ್ಲಿ ಓದಲ್ಪಡುವದು.

ಮುದ್ದಪ್ಪ,
ಅಸಿಸ್ಟೆಂಟ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್.

ಕಡೂರು ಡಿಸ್ಟ್ರಿಕ್ಟು.

ಚಿಕ್ಕಮಗಳೂರು ತಾಲ್ಲೂಕು.

ಇಸ್ತಿಹಾರ್‌ನಾಮಾ.

ತಾರೀಖು 11ನೇ ಏಪ್ರೆಲ್ ಸರ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರು ತಾಲ್ಲೂಕು ಪಂಡ್ರವಳ್ಳಿ ಗ್ರಾಮದಲ್ಲಿ ಇರುವ ಇದರಡಿ ನಮೂದುಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸರ್ 1895ನೇ ಇಸವಿ ಜೂನ್ ತಾರೀಖು 5ನೇ ಬುಧವಾರ ಹಗಲು 11 ಘಂಟೆಗೆ ಡೆಪ್ಯುಟಿ ಕಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಡಿಸಿ ಚಿಕ್ಕಮಗಳೂರು ತಾಲ್ಲೂಕು ಅಮಲ್‌ದಾರ್ರ ರೂಬರೂ ಚಿಕ್ಕಮಗಳೂರ್ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ಒಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್‌ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್‌ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನ ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್‌ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜು ಖೈದಾದ ವಡನೆಯೇ 2ನೇ ಪ್ಯಾರದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ಒಳಪಟ್ಟು ಆಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನ ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯಕ ಮಾಡಲ್ಪಟ್ಟ ಕಾಲದೊಳಗೆ ಖರೀದಿ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡದೆ ಡಿಪಾಜಿಟ್ ಮೊಬಲಗಿನಲ್ಲಿ ಖರೀದಿಗಾಗಿ ತಗಲಿರುವ ಖರ್ಚು ವಜಾ ಜಾತಾ ಬಾಕಿನಿಂತ ಠೇವಣಾತಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಶೇರತಕ್ಕದ್ದು. ಮತ್ತು ಸೊತ್ತು ಪುನಹ ವಿಕ್ರಯಿಸಲ್ಪಡುವದು, ಖರೀದಿ ಮೊಬಲಗನ್ನು ಪಾವತಿ ಮಾಡಲು ತಪ್ಪಿದ ಮನುಷ್ಯನ ಸೊತ್ತಿಗೆ ಯಿದ್ದ ಹಕ್ಕನ್ನು ಕಳದುಕೊಂಡದ್ದಲ್ಲದೆ ಅನಂತರ ಡಿಟ್ಟೋ ಸೊತ್ತನ್ನು ಹರಾಜು ಮಾಡುವದರಲ್ಲಿ ಉತ್ಪತ್ತಿಯನ್ನು ಮೊಬಲಗಿನ ಯಾವ ಭಾಗದ ಹಕ್ಕೂ ಇಲ್ಲದವನಾಗಿರುತ್ತಾನೆ ಪರಂತು ಈ ಷರತ್ತನ್ನು ಜಾರಿಯಲ್ಲಿ ತರತಕ್ಕದ್ದು. ಅಧಿಕವಾದ ತೊಂದರೆ ಯಿದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ತೋರಿಬಂದರೆ ಅಂಥಾವುಗಳನ್ನು ಸರಕಾರದ ಆರ್ಡರ್ ಬಗ್ಗೆ ಶಿಫಾರಸ್ ಮಾಡತಕ್ಕದ್ದಕ್ಕೆ ಅರ್ಹರಾಗಿರುತ್ತಾರೆ ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ಉತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನಲ್ಲಿ ಚಡದರಖಾಸ್ತು ಮಾಡಿ ತಪ್ಪಿಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಅಂಥಾ ವೆತ್ಯಾಸದ ಮೊಬಲಗನ್ನು ಡೆಪ್ಯುಟಿ ಕಮಿಷನರವರು ಜಮೀನು ಕಂದಾಯದ ಬಾಕಿಯಂತೆ ವಸೂಲ್ ಮಾಡತಕ್ಕದ್ದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಸಡಿ.	ದರಖಾಸ್ತು ಜಮೀನಿನ,		ಷರಾ.
				ವಿಸ್ತೀರ್ಣ.	ಆಕಾರ.	
32	ಯೆ. ಜೆ. ಸಾಲ್ ಧಾನ.	ಪಂಡ್ರವಳ್ಳಿ	ಪೂರ್ವ ಸರ್ವೆ ನಂ. 34ನೇ ರಾಘವೇಂದ್ರಪ್ಪನವರ ಕಾಫಿತೋಟ ಪಶ್ಚಿಮ ಸರ್ವೆ ನಂಬರ್ 43ನೇ ಗೋಮಾಳ ದಕ್ಷಿಣಕ್ಕೆ ಸರ್ವೆ ನಂ. 44ನೇ ಬ್ಯಾರವಳ್ಳಿ ರಾಮೇಗೌಡನ ತೋಟ ವುತ್ರಕ್ಕೆ ಸರ್ವೆ ನಂ. 31ನೇ ಕಾಫಿ ಸರ್ಕಾರಿ ಬಂಜರ್	4311		
			ಕುಲ್	71	36	
31			ಪೂರ್ವಕ್ಕೆ ಸರ್ವೆ ನಂ. 30ನೇ ಕಾಫಿ ಸರ್ಕಾರಿ ಬಂಜರ್ ಪಶ್ಚಿಮಕ್ಕೆ ಸರ್ವೆ ನಂ. 43ನೇ ಜಂಗ್ಲಿ ಮತ್ತು 42ನೇ ನಾಗಂಣ ಬಿನ್ ಭಾಸ್ಕರಯ್ಯನ ಕಾಫೀ ತೋಟ ದಕ್ಷಿಣಕ್ಕೆ ಸರ್ವೆ ನಂ. 32ನೇ ಕಾಫಿ ಸರ್ಕಾರ್ ಬಂಜರ್ ವುತ್ರಕ್ಕೆ ಸರ್ವೆ ನಂ. 40ನೇ ಕಾಫೀ ಸರ್ಕಾರಿ ಬಂಜರ್			
			ಕುಲ್	76	38	
40			ಪೂರ್ವಕ್ಕೆ ನಂ. 30ನೇ ಕಾಫಿ ಸರ್ಕಾರಿ ಬಂಜರ್ ಪಶ್ಚಿಮಕ್ಕೆ ನಂ. 41ನೇ ಕಾಫಿ ಸರ್ಕಾರಿ ಬಂಜರ್ ಸರ್ವೆ ನಂ. 168ನೇ ತರೀಕೆರೆ ನಾಗಂಣನ ಕಾಫೀ ತೋಟ ಸರ್ವೆ ನಂಬರ್ 50ನೇ ಕಾಫಿ ಸರ್ಕಾರಿ ಬಂಜರ್ ಸರ್ವೆ ನಂ. 51ನೇ ಕಾಫೀ ಸರ್ಕಾರಿ ಬಂಜರ್ ದಕ್ಷಿಣಕ್ಕೆ ಸರ್ವೆ ನಂ. 31ನೇ ಕಾಫಿ ಸರ್ಕಾರಿ ಬಂಜರ್ ಹಾಲಿ ದರಖಾಸ್ತು ಸ್ಥಳ. ವುತ್ರಕ್ಕೆ ಸರ್ವೆ ನಂ. 52ನೇ ಜಂಗಲಿ ಇದರಲ್ಲಿ ಇರುವ ನೀರು ಸರ್ಕಲ್‌ನಮೂದು ಮಾಡದೆ ಮಾಮೂಲಿನಂತೆ ಖಾಲಿಬಿಟ್ಟು ಸಾಗುವಳಿ ಮಾಡಬೇಕೆಂತ ಷರತ್ತಿನ ಮೇಲೆ ಹರಾಜು ಮಾಡಿಸುತ್ತೆ ಹರಾಜಿನಲ್ಲಿ ಈ ಜಂಗ್ಲಿ ಪಡೆದವರು ಸದರೀ ಷರತ್ತು ಮುಚ್ಚಳಿಕೆ ಬರಕೊಡಬೇಕು.			

ತಿಳುವಳಿಕೆ ಷರಾ,—ಬಂದು ಸರ್ವೆ ನಂಬರ್ ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯುವಾದಷ್ಟು ಕಮ್ಮಿ ಜಾಸ್ತಿ ಆದರೆ ಜಾಸ್ತಿ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲಿ ಕೊಡುವದಕ್ಕೆ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೆ ಆಗಲಿ ಜಮೀನ್ ಹಿಡುವಳಿದಾರನು ಬದ್ಧ ವ ಅರ್ಹನಾಗಿರಬೇಕು.

ಚಿಕ್ಕಮಗಳೂರ್ ತಾಲ್ಲೂಕು.

ತಾರೀಖು 10ನೇ ಏಪ್ರೆಲ್ ಸರ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರ್ ತಾಲ್ಲೂಕು ಕರಗೂರ್ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸರ್ 1895ನೇ ಇಸವಿ ಜೂನ್ ತಾರೀಖು 6ನೇ ಬೃಹಸ್ಪತಿವಾರ ಹಗಲು 11 ಘಂಟೆಗೆ ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಚಿಕ್ಕಮಗಳೂರ್ ತಾಲ್ಲೂಕು ಅಮಲ್‌ದಾರ್ರ ರೂಬರೂ ಚಿಕ್ಕಮಗಳೂರ್ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು ಎಕರೆ 1ಕ್ಕೆ 10 ಹತ್ತು ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಜಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್ ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ

ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯಕ ಮಾಡಲ್ಪಟ್ಟ ಕಾಲದೊಳಗೆ ಖರೀದಿ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡದೆ ಡಿಪಾಜಿಟ್ ಮೊಬಲಗಿನಲ್ಲಿ ಖರೀದಿಗಾಗಿ ತಗಲಿರುವ ಖರ್ಚು ವಜಾ ಜಾತಾ ಬಾಕಿ ನಿಂತ ಠೇವಣಾತಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಶೇರತಕ್ಕದ್ದು. ಮತ್ತು ಸೊತ್ತು ಪುನಃ ವಿಕ್ರಯಿಸಲ್‌ಪಡುವ ಮನುಷ್ಯನ ಸೊತ್ತಿಗೆ ಯಿದ್ದ ಹಕ್ಕನ್ನು ಕಳದುಕೊಂಡದ್ದಲ್ಲದೆ ಅನಂತರ ಮೊಬಲಗಿನ ಯಾವ ಭಾಗದ ಹಕ್ಕೂ ಯಿಲ್ಲದವನಾಗಿ ಯಿರುತ್ತಾನೆ ಪರಂತು ಈ ಷರತನ್ನು ಜಾರಿಯಲ್ಲಿ ತರತಕ್ಕದ್ದು, ಅಧಿಕವಾದ ತೊಂದರೆ ಯಿದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡೆಪ್ಯುಟಿ ಕಮಿಷನರಿಗೆ ತೋರಿಬಂದರೆ ಅಂಥಾವುಗಳನ್ನು ಸರಕಾರದ ಆರ್ಡರು ಬಗ್ಯೆ ಶಿಫಾರಸ್ ಮಾಡತಕ್ಕದ್ದಕ್ಕೆ ಅರ್ಹರಾಗಿರುತ್ತಾರೆ ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ವುತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನಲ್ಲಿ ಚಡದರಖಾಸ್ತು ಮಾಡಿ ತಪ್ಪಿಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಯಿಂಥಾ ವೆತ್ಯಾಸದ ಮೊಬಲಗನ್ನು ಡೆಪ್ಯುಟಿ ಕಮಿಷನರವರು ಜಮೀನು ಕಂದಾಯದ ಬಾಕಿಯಂತೆ ವಸೂಲ್‌ಮಾಡತಕ್ಕದ್ದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರೂ ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸ ತಕ್ಕದ್ದು. ಈ ರಿಯಾಯತ' ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖು ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟೂವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ,		ಷರಾ.
				ವಿಸ್ತೀರ್ಣ.	ಆಕಾರ.	
93	ಬಾಗಮನೆ ಅಂಣೆಗವುಡರು	ಜೈನೆಕೂಲ್ ಚಿಕ್ಕಮಗಳೂರ್ ತಾಲ್ಲೂಕು ಕಡಗಲ್‌ನಾಡ್ ಮಾಗಣಿ ಕರಗೂರ್	ಖುಲ್ಲು ಎಕರೆ ಪೈಕಿ 5 ಸರ್ಕಲ್‌ದಾರಿಗೆ ವಜಾ ಪೂರ್ವ—ಸೆಂಬರ್ 68ನೇ ಬಾಗಮನೆ ರಾಮೇಗವುಡರ ವರ್ಗದ ಬಂಜರು ಕಾಫಿತೋಟ ಪಶ್ಚಿಮ—ಬೆರಣಗೋಡು ಗ್ರಾಮದ ಗಡಿ ಹುಲ್ಲುಹರಾ ದಕ್ಷಿಣ—ಡಿಟೋ ಉತ್ತರಕ್ಕೆ—ಕರಗೂರ್ ಸರ್ವೆ ನಂಬರ್ 69ನೇ ಗೋಮಾಳದ ಗುಡ್ಡ ಈ ಮಧ್ಯೆಯಿರುವ ಕಾಫಿಜಂಗ್ಲಿಯಲ್ಲಿ ಇರತಕ್ಕ ಯರಡು ನೀರು ಸರ್ಕಲು ಒಂದು ದಾರಿ ಯಿವುಗಳನ್ನ ಮಾಮೂಲಿನಂತೆ ಖುಲ್ಲಾ ಬಿಟ್ಟು ನೀರು ಸರ್ಕಲ್ ವುಭಯಪಾರ್ಶ್ವ 50 ಗಜದಲ್ಲಿ ಯಿರುವ ಮರಗಳನ್ನ ಕತರಾಯಿಸದೆ ಅದರ ತಂಪಿನಲ್ಲಿ ಕಾಫಿ ಸಾಗುವಳಿ ಮಾಡಿಕೊಳ್ಳುವಂತೆ ಮುಚ್ಚಳಿಕೆ ಬರದು ಕೊಡುವ ಷರತ್ತಿನ ಮೇಲೆ ಹರಾಜು ಮಾಡಿಸುತ್ತೆ.	5–37 3 52	 10 27	

ತಿಳುವಳಿಕೆ ಷರಾ,—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ್ ಹಿಡುವಳೀದಾರನು ಬದ್ಧ ವ ಅರ್ಹನಾಗಿರಬೇಕು.

ಬಿ. ರಾಮಸಾಮಿ,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

22ನೇ ಏಪ್ರೈಲ್ 1895.

ಪ್ರಕಟನೆ.

ಈ ಕೆಳಗೆ ರುಜು ಮಾಡಿರುವವರ ತಂದೆ ಮೈಸೂರು ಹಳೆ ನರಸಪ್ಪನವರ ಮಕ್ಕಳು ಮಧ್ವರಾಯರಿಗೆ ಹುಚ್ಚು ಹಿಡಿದಿರುವ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟು ಮಾಜಿಸ್ಟ್ರೇಟರವರಿಂದ ಕಡೂರು ಡಿಸ್ಟ್ರಿಕ್ಟು ಮಾಜಿಸ್ಟ್ರೇಟರವರ ದ್ವಾರಾ ತಲ್ಪಿರುವ 1893ನೇ ಇಸವಿ ನವಂಬರ 8ನೇ ಮುಕ್ಕಾಂ 771ನೇ ನಂಬರ್ ಲೆಟರ್ ತಲ್ಪಿರುವದ್ದರಿಂದ ಇವರ ಬಾಬತು ಸ್ಥಿರ ಆಸ್ತಿಗಳು ಅಂದರೆ ಮೈಸೂರು ಡಿಸ್ಟ್ರಿಕ್ಟು ತಿರುಮಕೂಡ್ಲು ನರಸೀಪುರ ತಾಲ್ಲೂಕು ರಂಗಸಮುದ್ರದ ಹೋಬಳಿ ಕಸಬಾ ರಂಗಸಮುದ್ರದಲ್ಲಿರುವ ತರೀ ಜಮೀನು ಸರ್ವೆ ನಂಬರು 124 ಮತ್ತು ಮೈಸೂರು ಕಿಲ್ಲೆ ವೀಣೆ ವೆಂಕಟಸುಬ್ಬಯ್ಯನವರ ಗಲ್ಲಿಯಲ್ಲಿರುವ ಹಂಚಿನ ಮನೆ ಮ್ಯುನಿಸಿಪಲ್ ನಂಬರ್ ಇವುಗಳ ಬಾಬತು ಅಡವು, ಭೋಗ್ಯ, ಮತ್ತು ಕ್ರಯ ಇವೇ ಮುಂತಾದವುಗಳನ್ನು ಮಾಡಿಕೊಳ್ಳುವವರಿಗೆ ತತ್ಸಂಬಂಧವಾದ ಹಕ್ಕುಗಳು ಊರ್ಜಿತವಾಗಲಾರದೆಂಬದಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸಿದೆ.

ಎ. ಕೃಷ್ಣರಾವ್,
ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫ್ ವ್ಯಾಕ್ಸಿನೇಷನ್.

ಮೈಸೂರ ಗೆಜೆಟ್.

ನಂ. 17] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಮೇ ತಾ|| 9, ಸನ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

೧ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರಿಖು 26ನೇ ಏಪ್ರೈಲ್ 1895.

ನಂ. 18594.—ಜಿ. 5011.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರಾದ ಮೆಸ್ಸರ್ ಕೆ. ದೊರೆಸಾಮಿಅಯ್ಯರವರು, 95ನೇ ಇಸವಿ ಏಪ್ರೈಲ್ 24ನೇ ತಾರೀಖು ಮೊದಲು ಒಂದು ತಿಂಗಳೂ ಹತ್ತು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 29ನೇ ಏಪ್ರೈಲ್ 1895.

ನಂ. 18662.—ಜಿ. ಎಫ್. 106—93.—ಕ್ಲೋಸ್‌ಪೇಟೆ ಸಬ್ ಡಿವಿಜನ್ ಅಫಿಷಿಯೇಟಿಂಗ್ ಆಫಿಸರಾದ ಮೆಸ್ಟರ್ ಸಿ. ರಾಘವಾಚಾರ್ಲುನ್ ಬಿ. ಎ. ಯವರಿಗೆ, 95ನೇ ಇಸವಿ ಮಾರ್ಚಿ 6ನೇ ತಾರೀಖು ಮೊದಲು ಕೊಡಲ್ಪಟ್ಟಒಂದು ತಿಂಗಳೂ ಎಂಟುದಿನಗಳ ಪ್ರಿವಿ

ಲೀಜ್ ರಜಾ, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 166ನೇ ಆರ್ಟಿಕಲ್ ಅನುಸರಿಸಿ, ಮೆಡಿಕಲ್ ಸರಟಿಫಿಕೇಟ್ ಮೇಲಿನ ರಜಾಕ್ಕೆ ಬದಲಾಯಿಸಲ್ಪಟ್ಟು ಮತ್ತು ಆರು ವಾರಗಳಿಗೆ ಜಾಸ್ತೀ ಮಾಡಲ್ಪಟ್ಟಿದೆ.

ನಂ. 18664.—ಜಿ. 5045.—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಕುಣಿಗಲ್ ತಾಲ್ಲೂಕು ಅಮಲ್ದಾರ್ ವಿ. ಪಾರ್ಥಸಾರಥಿ ಅಯ್ಯಂಗಾರ್ರವರು, ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಯಂಟು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ತಾಲ್ಲೂಕು ಶಿರಸ್ತೇದಾರ್ರವರು, ಅಮಲ್ದಾರರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಾಲ್ಲೂಕಿನ ಚಾಲತೀ ಕೆಲಸಗಳ ಇನ್‌ಚಾರ್ಜಿನಲ್ಲಿರುವರು.

ಹುಕುಂ ಬಮೋಜಿಬ್,
ಎಲ್. ಅನಂತಸಾಮಿರಾವ್,
ಆಫಿಷಿಯೇಟಿಂಗ್ ಚೀಫ್ ಸೆಕ್ರೆಟರಿ.

ತಾರೀಖು 30ನೇ ಏಪ್ರಿಲ್ 1895.

ನಂ. 18765.—ಜಿ. 1164.—ಸನ್ 1895ನೇ ಇಸವಿ ಮಾರ್ಚಿ 18ನೇ ಮುರ್ಕುಮುಳ್ಳ 15251.—ಜಿ. 920ನೇ ನಂಬರ್ ಇಸ್ತಿಹಾರ್‌ನಾಮೆಯನ್ನನುಸರಿಸಿ, ಮೆಸ್ಟರ್ ಎಂ. ರಾಮಸ್ವಾಮಯ್ಯರ್, ಬಿ. ಎ. ಬಿ. ಎಲ್. ಯವರು, ಸಿವಿಲ್ ಕೋರ್ಟ್‌ಗಳ ಸಾಲಿಯಾನಾ ಮೋಕಳಿಯ ಕಾಲದಲ್ಲಿ, ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಮೈಸೂರ್ ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜಿಯವರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ರೆವಿನ್ಯೂ ಫಾರೆಷ್ಟು ಇಲಾಖಾ—ಇಸ್ತಿಹಾರ್ ನಾಮೆಗಳು.

ನಂಬರು 15229— R. F. 155—92 ತಾರೀಖು 15ನೇ ಮಾರ್ಚಿ 1895.

ಚವುಬೀನೆ ಮತ್ತು ಬಿದರು ಬೊಂಬುಗಳನ್ನು ಬಹಿರಂಗವಾದ ಹರಾಜು ಮೂಲ್ಕ ವಿಕ್ರಯಿಸತಕ್ಕ ಬಗ್ಯೆ ಹಾಲಿ ಜಾರಿಯಲ್ಲಿರುವ ತಮಾಂ ರೂಲ್ಸುಗಳನ್ನೂ ರದ್ದುಮಾಡಿ ಈ ಕೆಳಗೆ ಬರುವ ತಿದ್ದುಪಾಟಾದ ರೂಲ್ಸ್‌ಯಾನೆ ನಿಬಂಧನೆಗಳು ಮೈಸೂರು ಸರ್ಕಾರದವರಿಂದ ಮಂಜೂರಾತಿಯನ್ನು ಹೊಂದಿ ಸರ್ವರ ತಿಳುವಳಿಕೆ ಬಗ್ಯೆ ಫಾಯಿಷ್‌ಮಾಡಲ್ಪಟ್ಟಿರುತ್ತವೆ,—

I. ನಡವಳಿತ.

1. ಪ್ರತಿ ಹರಾಜೂ ಡಿಸ್ಟ್ರಿಕ್ಟ್ ಛಾರ್ಜಾಳ್ವ ಫಾರೆಷ್ಟ್ ಆಫಿಸರಿಂದಾಗಲಿ, ಡೆಪ್ಯುಟಿಕಮಿಷನರವರಿಂದ ಮೊಕರರ್ರ್ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ನಡಿಸಲ್ಪಡತಕ್ಕದ್ದು.

2. ಜಡದರಖಾಸ್ತುದಾರನು ಖರೀದಿದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ಉಂಟಾದರೆ ಡಿಟೋಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದಿದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪಸೀಲು ನಮೂದಿಸಿರತಕ್ಕ ಸ್ಥಳಕ್ಕೆ ಎದುರಾಗಿ ರುಜು ಮಾಡತಕ್ಕದ್ದು. ಹಾಗೆ ರುಜುಮಾಡೋಣದರಿಂದ ಲಾಟನ್ನು ಆ ಮನುಷ್ಯನು ಖರೀದಿಗೆ ತೆಗದುಕೊಂಡದ್ದು ಕಬೂಲ್‌ಪಟ್ಟಂತೆಯೇ ತಿಳಿಯತಕ್ಕದ್ದು.

II. ಮೊಬಲಗು ಪಾವತಿಯ ಕ್ರಮ.

4. ಹರಾಜಾದಕೂಡ್ಲೆ ಖರೀದಿದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದ್ನಿಃ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತರೀಕು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆ ಇಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ತಾಲ್ಲೂಕು ಖಜಾನೆಯ ಫಾಸಲೆಯನ್ನು ಆಲೋಚನೆಯಲ್ಲಿತಂದು ಹರಾಜು ತಾರೀಖು ಲಾಗಾಯಿತು ಸಂದರ್ಭಾನುಸಾರ 3ನೇ ಯಾ 5ನೇ ದಿನದ ಒಳಗಾಗಿಯೇ ಕೂಡಲೇ ಪಾವತಿ ಮಾಡಲಿಕ್ಕೆ ಒಂದು ಲೆಟರಾಫ್ ಅಡ್ವಯಿಸ್‌ಯಾನೆ ಮೇಲ್‌ಕಾಗದವನ್ನೂ ಸುದಾ ಪ್ರತಿ ಖರೀದಿದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರಿ ಆಫಿಸರರು ಒಂದು ರಶೀದಿಯನ್ನು ಕೊಡತಕ್ಕದ್ದು, ಆ ರಶೀದಿಯನ್ನ ಹರಾಜಾದ ಸ್ಥಳದಲ್ಲಿ ಖಜಾನೆಯಿದ್ದರೆ ತಕ್ಷಣವೇ ಫಾರೆಷ್ಟು ಆಫಿಸರರ ಬಳಿ ಹಾಜರ್ಮಾಡಬೇಕು, ಹಾಗೆ ಇಲ್ಲದಿದ್ದರೆ ನಿಷ್ಕರ್ಷೆಯಾದ ಮೇರಿಗೆ ಹರಾಜು ತಾರೀಖು ಲಾಗಾಯಿತು 5ನೇ ಅಥವಾ 8ನೇ ದಿವಸ ಪೂರೈಸುವವರ ಒಳಗಾಗಿ ಸದರೀ ರಶೀದಿಯನ್ನ ಫಾರೆಷ್ಟು ಆಫಿಸರರ ಬಳಿ ಹಾಜರ್ಮಾಡತಕ್ಕದ್ದು. ಫಾರೆಷ್ಟು ಆಫಿಸರರು ಆ ರಶೀದಿಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್‌ಮಾಡತಕ್ಕದ್ದು. ಯಾವ ಖರೀದಿದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಅಂಥಾ ತಪ್ಪಿತಸ್ಥನಿಂದ ಖರೀದಿಮಾಡಲ್ಪಟ್ಟದ್ದ ಬಿದರು ವ ಚವುಬೀನೆಯನ್ನು ಸಂಪೂರ್ಣವಾಗಿಯೇ ಆಗಲಿ ಯಾ ಅದರ ಪೈಕೀ ಒಂದು ಭಾಗವನ್ನಾಗಲಿ ಮರಳಿ ಹರಾಜು ಮಾಡ್ಸಲಿಕ್ಕೆ ಫಾರೆಷ್ಟು ಆಫಿಸರರಿಗೆ

ಯಖ್ತಿಯಾರೀ ಇರತಕ್ಕದ್ದು. ಹಾಗೆ ಮರಳಿ ಹರಾಜು ಮಾಡೋಣದರ ದೆಶೆಯಿಂದ ಉಂಟಾಗುವ ನಷ್ಟಕ್ಕೆ ಅವ್ವಲ್ ಖರೀದಿದಾರನೇ ಗುರಿಯಾಗಿರತಕ್ಕದ್ದು. ಪರಂತು ಎರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರಹನಾಗುವದಿಲ್ಲವು. ಹಾಂಗೆ ತಪ್ಪಿಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

5. ಹರಾಜಿನಲ್ಲಿ ತೆಗೆದುಕೊಳ್ಳಲ್ಪಟ್ಟ ಪೂರಾ ತೇದಾದಿನ ಮೊಬಲಗು ಹರಾಜು ತಾರೀಖುಲಾಗಾಯಿತು (30) ದಿವಸಗಳ ವಳಗಾಗಿಯೇ ಆಗಲಿ ಅಥವಾ ಫಾರೆಷ್ಟ್ಸ ಇನ್ಸ್ಪೆಕ್ಟರ್ ಜನರಲ್‌ರವರ ವಿಶೇಷ ಅಪ್ಪಣೇ ಮೇರೆ ಹರಾಜ್ ತಾರೀಖುಲಾಗಾಯಿತು 90 ದಿವಸಗಳಿಗೆ ಅತಿಕ್ರಮಿಸದಂತೆ ದುಸರೇ ವಾಯಿದೆ ವಳಗೆ ಯಾವಾಗಲಾದರೂ ಆಗಲಿ ಪಾವತಿ ಮಾಡಲ್ಪಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಇಟ್ಟ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು. ಮತ್ತು ಖರೀದಿ ಮೊಬಲಗು ಪಾವತಿಮಾಡಲ್ಪಡದಂಥಾ ಯಾವ ನಾಟಾ ಯಾ ಬಿದರುಗಳು ಪುನಹ ವಿಕ್ರಯಿಸಲ್ಪಡತಕ್ಕದ್ದು. ಸಲ್ಲಿಸಬೇಕಾದ ಮೊಬಲಗುಗಳು ವುಡಿಯಾರ್ಡ್ ಇರತಕ್ಕಂಥಾ ತಾಲ್ಲೂಕು ಖಜಾನೆಗೆಯಾಗಲಿ ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಆಗಲಿ ಪಾವತಿಮಾಡಲ್ಪಡಬೇಕೇಹೊರ್ತು ವರ್ತಕರು ಯಾವದಾದರೂ ಗವರ್ನಮೆಂಟ್ ಟ್ರೆಜರಿಯಲ್ಲಿ ಪಾವತಿ ಮಾಡುವದಕ್ಕೆ ಅಪ್ಪಣೆಕೊಡಲ್ಪಟ್ಟ ಸಂದರ್ಭದಲ್ಲಿ ವಿನಾ ಅನ್ಯಥಾ ಇತರ ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು.

III. ನಾಟಾವನ್ನು ಒಪ್ಪಿಸೋಣ.

6. ನಾಟಾ ಖರೀದಿ ಮೊಬಲಗನ್ನು ಖರೀದಿದಾರನು ಪೂರಾ ಪಾವತಿಮಾಡಿ, "ಸಾಗಿಸಲಿಕ್ಕೆ ಲೈಸೆನ್ಸನ್ನು" ಫಾರೆಸ್ಟ್ ಆಫೀಸರಿಂದ ಪಡೆವ ಹೊರ್ತು ಯಾವ ನಾಟಾ ಆಗಲಿ ಖರೀದಿದಾರನಿಂದ ಸಾಗಿಸಲ್ಪಡಕೂಡದು.

IV. ವುಡಿಯಾರ್ಡಿನ ಬಾಡಿಗೆ.

7. ಹಿಂದಿನ ಸೆಕ್ಷನ್‌ಗಳನ್ನನುಸರಿಸಿ ಖರೀದಿ ಮೊಬಲಗು ಪಾವತಿಮಾಡಲ್ಪಟ್ಟ ಚವುಬೀನೆ ವ ಬೊಂಬುಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳವಳಗಾಗಿಯಾಗಲಿ ಅಥವಾ ಪ್ರತಿ ಸಂಗತಿಯ ಸಂದರ್ಭಾನುಸಾರ ಫಾರೆಸ್ಟ್ ಆಫೀಸರರಿಂದ ಗೊತ್ತುಮಾಡಲ್ಪಡುವ (ಅಂದರೆ ಹರಾಜ್ ತಾರೀಖು ಲಾಗಾಯತು 90 ದಿನಗಳಿಗೆ ಅತಿಕ್ರಮಿಸಿದ) ಜಾಸ್ತೀ ವಾಯಿದೆಯಲ್ಲಿ ಆಗಲಿ ಯಾವಾಗಲಾದರೂ ವುಡಿಯಾರ್ಡ್ ಬಾಡಿಗೆ ಯಿಲ್ಲದೇನೇ ಸಾಗಿಸಲ್ಪಡಬಹುದು. ಆದರೆ ಹರಾಜ್ ತಾರೀಖು ಲಾಗಾಯತು 90 ದಿವಸಗಳ ತರುವಾಯ ವುಡಿಯಾರ್ಡಿನಲ್ಲಿ ನಿಲ್ಲಿಸಲ್ಪಟ್ಟರೆ ಅಂಥಾ ಚವುಬೀನೇ ಯಾ ಬೊಂಬುಗಳಿಗೆ ಹರಾಜ್ ತಾರೀಖು ಲಾಗಾಯತು ಖರೀದಿ ಮೊಬಲಗಿನ ಮೇಲೆ ಸಾಲಿಯಾನಾ ಶೇಕಡಾ 12ರ ಮೇರಿಗೆ ವುಡಿಯಾರ್ಡ್ ಬಾಡಿಗೆಯನ್ನು ವಸೂಲ್ಮಾಡತಕ್ಕದ್ದು. ಸದರೀ ನಾಟಾ ಯಾ ಬೊಂಬುಗಳು ಹರಾಜ್ ತಾರೀಖು ಲಾಗಾಯಿತು 6 ತಿಂಗಳವಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿವಸಗಳ ವಾಯಿದೆಯಿಂದ ನೋಟೀಸ್ ಕೊಟ್ಟ ತರುವಾಯ ಅವು ಬಾಡಿಗೆ ಮತ್ತು ಖರ್ಚು ಮೊಬಲಗಿನ ವಸೂಲೀವುದ್ದಿಶ್ಯ ಹರಾಜನ್ನು ಕ್ರಮವಾಗಿ ಪ್ರಸಿದ್ಧಪಡಿಸಿ ಪಬ್ಲಿಕ್ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಪರಂತು ಮೊಬಲಗು ಪೂರ್ತಿಯಾಗಿ ಪಾವತೀ ಮಾಡುವದಕ್ಕೂ ಸರಕು ತಕ್ಷಣ ಸಾಗಿಸುವದಕ್ಕೂ ಹರಾಜ್ ಮೊಬಲಗಿನ ಪೈಕಿ ಬಾಕೀ ಯೇನಾದರೂ ವುಳದರೆ ಅದನ್ನು ಅವ್ವಲ್ ಖರೀದಿದಾರನಿಗೆ ಪಾವತಿ ಮಾಡುವದಕ್ಕೂ ವಳಪಟ್ಟಿರತಕ್ಕದ್ದು. ಅಂಥಾ ಖರೀದಿಯು ಪೂರ್ತಿಯಾಗುವದಕ್ಕೆ ಮುಂಚೆ ಅವ್ವಲ್ ಕ್ರಯದಾರನು ಬಾಕಿಯಾಗುವ ಬಾಡಿಗೆ ವ ಖರ್ಚು ಮೊಬಲಗನ್ನು ಪಾವತಿಮಾಡಿದರೆ ಆತನು ನಾಟಾ ವ ಬೊಂಬುಗಳನ್ನು ಸಾಗಿಸುವ ಬಗ್ಯೆ ಅವಕಾಶ ಕೊಡಲ್ಪಡತಕ್ಕದ್ದು. ಫಾರೆಸ್ಟ್‌ಇನ್ಸ್ಪೆಕ್ಟರ್ ಜನರಲ್‌ಯವರಿಗೆ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಯಾವ ಸಂದರ್ಭದಲ್ಲಿಯಾದರೂ 3 ತಿಂಗಳ ಬಾಡಿಗೆಗೆ ಮೀರದ ಬಾಡಿಗೆ ಮೊಬಲಗನ್ನು ಅವರು ಮಾಫ್ ಮಾಡಬಹುದು.

V. ಸಾಗಿಸಲಿಕ್ಕೆ ಲೈಸೆನ್ಸ್.

8. ಡಿಸ್ಟ್ರಿಕ್ಟ್ ಇನ್‌ಛಾರ್ಜ್ ಫಾರೆಸ್ಟ್ ಆಫೀಸರವರಿಂದ ಸೈನ್ ಮಾಡಲ್ಪಟ್ಟ "ಚವುಬೀನೆ ವ ಬೊಂಬುಗಳನ್ನು ಸಾಗಿಸಲಿಕ್ಕೆ ಲೈಸೆನ್ಸ್" ಪಡೆದ ಹೊರ್ತು ವುಡಿಯಾರಡಿನಿಂದ ಯಾವ ನಾಟಾ ಆಗಲಿ ಸಾಗಿಸಲ್ಪಡಕೂಡದು; ಲೈಸೆನ್ಸ್‌ದಾರರೆಲ್ಲರೂ ಸದರೀ ಲೈಸೆನ್ಸುಗಳಲ್ಲಿ ನಮೂದಿಸಲ್ಪಟ್ಟ ಷರತ್ತು ಪ್ರಕಾರ ನಡದು ಕೊಳ್ಳಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವ್ಯಾಪಾರಸ್ಥನಾಗಲಿ ಯಾ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸಿನ ಷರತ್ತುಗಳಿಗೆ ಅತಿಕ್ರಮಿಸಿ ನಡದರೆ ಅಥವಾ ಕೊಟ್ಟ ವಾಯಿದೆ ಪೂರೈಸಿದ ವಡನೆ ತನ್ನ ಲೈಸೆನ್ಸನ್ನು ವಾಪಸ್‌ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲಸ್‌ಗಳ 40ನೇ ಸೆಕ್ಷನಿನಲ್ಲಿ ವಿಧಿಸೋಣಾದ ಷರತ್ತುಗಳ ಪ್ರಕಾರ ಕ್ರಮ ನಡಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸುಗಳೂ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ವಿಶೇಷ ಮತ್ತು ಜರೂರಿಯಾತ್ ಕಾರಣಗಳ ಮೇಲೆ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂವಿನಾ ಜಾಸ್ತಿವಾಯಿದೆಯು ಕೊಡಲ್ಪಡತಕ್ಕದ್ದಲ್ಲವು.

VI. ವಟ್ಟುವಿಷಯ.

9. ಫಾರೆಸ್ಟ್ ಆಫೀಸರವರು, ಡೆಪ್ಯುಟಿ ಕಮ್ಮಿಷನರವರ ಯಾ ಅವರಿಂದ ನೇಮಿಸಲ್ಪಟ್ಟ ಇತರ ಆಫೀಸರರ ಅನುಮತಿಯೊಡನೆ ಯಾ ಅವರುಗಳು ಹಾಜರಿಲ್ಲದ ಪಕ್ಷಕ್ಕೆ ತಮ್ಮ ಸ್ವಂತ ಜವಾಬ್‌ದಾರೀ ಮೇಲೆ ಯಾವ ಕಾಲದಲ್ಲಿ ಆಗಲಿ ವುದ್ದೇಸಿಸಲ್ಪಟ್ಟ ಖರೀದಿದಾರರಿಗೆ ಯಾವ ಸಬಬನ್ನೂ ತಿಳಿಸದೇನೇ ಹರಾಜನ್ನು ಮನ್ನಾ ಮಾಡುವದಕ್ಕೆ ಸ್ವತಂತ್ರರಾಗಿರತಕ್ಕದ್ದು.

ಹುಕುಂ ಬಮೋಜೀಬ್,
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರೆಟರಿ.

1895–96 ರೆವಿನ್ಯೂ No. $\frac{18151}{\text{R. F. 61–93}}$.

ಇಸ್ತಿಹಾರ್‌ನಾಮೆ.

ತಾರೀಖು 23ನೇ ಏಪ್ರೈಲ್ 1895.

ಇದರಿಂದ ಪ್ರಕಟಪಡಿಸುವದೇನಂದರೆ, 1895ನೇ ಇಸವಿ ಜುಲೈ ಗುರ್ರೀ ತಾರೀಖು ಲಾಗಾಯತು 1896ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ 12 ತಿಂಗಳ ಕಾಲದಲ್ಲಿ ಇಜಾರೇದಾರ್ರು ಕೈಕೆಳಗಿನ ಅಂಗಡೀದಾರ್ರಿಂದ ಜನಗಳಿಗೆ ಮತ್ತು ಬೇಕರ್ಸ್ ಯಾನೆ ರೊಟ್ಟಿ ಕಾರಖಾನೆಯವರಿಗೆ ಈಚಲು ಮರದ ಶೇಂದಿಯು ಇದರಡಿ ನಮೂದಿಸಿರುವ ಮೇರೆ ಚಿಲ್ಲರೇ ದರಗಳಿಗೆ ಮಾರಲ್ಪಡತಕ್ಕದ್ದು:—

ಡಿಸ್ಟ್ರಿಕ್ಟು.	ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಖರೀದಿ.						ರೊಟ್ಟೀಕಾರಖಾನೆಯವರಿಗೆ ಶೇರು ಒಂದಕ್ಕೆ ಗೊತ್ತಾದ ಖರೀದಿ.		
		ಉತ್ತಮ.			ಕನಿಷ್ಟ.					
ಬೆಂಗಳೂರು.	ಶಿವಿಲ್ ವ ಮಿಲಿಟರಿ ಸ್ಟೇಷನ್ ಮತ್ತು ಷಹರ್	0	1	6	0	1	0	0	1	0
	ತಾಲ್ಲೂಕು ಕಸಬಾಗಳು	0	1	3	0	0	10			
	ಮೈಸೂರ್ ಡಿಸ್ಟ್ರಿಕ್ಟಿನ ಬಾಜೂದಲ್ಲಿರುವ ಗ್ರಾಮಗಳು, ಅಂದರೆ:—									
	ಚನ್ನಪಟ್ಟದ ತಾಲ್ಲೂಕಿಗೆ ಶೇರಿದ ಇಗ್ಗಲೂರು, ಗೀಜಗದಾಸನ ದೊಡ್ಡಿ, ಜೆಗದಾಪುರ, ಕುಕ್ಕೂರು, ವೊರಗನಹಳ್ಳಿ, ದಾಮನಗುಂಡು, ಮತ್ತು ಅರಳಾಪುರ ಎಂಬುವ ಗ್ರಾಮಗಳು ಕಾನಕಾನಹಳ್ಳಿ, ತಾಲ್ಲೂಕಿಗೆ ಶೇರಿದ ಸಾತನೂರು ಮತ್ತು ಹಲಸೂರು ಎಂಬುವ ಗ್ರಾಮಗಳು	0	0	6	0	0	4			
	ಇತರ ಎಲ್ಲಾ ಗ್ರಾಮಗಳಲ್ಲಿ	0	1	0	0	0	8			
ಕೋಲಾರ.	ತಾಲ್ಲೂಕು ಕಸಬಾಗಳು	0	1	3	0	0	10			
	ಕೋಲಾರಿಗೆ ಶೇರಿದ ದಿಂಬ, ಬವರಿಂಗುಪ್ಪ್ಯಾಟೆಗೆ ಶೇರಿದ ನೇರನಹಳ್ಳಿ, ಚಿಕ್ಕಬಳ್ಳಾಪುರಕ್ಕೆ ಶೇರಿದ ರಂಗಸ್ಥಳ, ಗೋರೀಬಿದನೂರಿಗೆ ಶೇರಿದ ಗುಂಡಾಪುರ, ಚಿಕ್ಕ ಕುರುಗೋಡು, ಹಿರೇಬಿದನೂರು, ಗೊಟ್ಟಗನಪುರ ಮತ್ತು ಕಲ್ಲೂಡಿ, ಮತ್ತು ಬಾಗೆಪಲ್ಲಿಗೆ ಶೇರಿದ ಗಂಟಂವಾರಿಪಲ್ಲಿ, ಹೊಸಕೋಟೆ ಮತ್ತು ಮಲ್ಲಸಂದ್ರ ಎಂಬ ಗ್ರಾಮಗಳಲ್ಲಿ	0	1	3	0	0	10			
	ಇತರ ಎಲ್ಲಾಗ್ರಾಮಗಳಲ್ಲಿ	0	1	0	0	0	8			
ತುಮಕೂರು.	ಹುಳಿಯಾರ್ ಸಬ್ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ	0	0	8	0	0	6			
	ಶಿರಾ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ	0	1	3	0	0	6			
	ಇತರ ಎಲ್ಲಾ ತಾಲ್ಲೂಕು ಕಸಬಾಗಳಲ್ಲಿ	0	1	3	0	0	10			
	ಕುಣಿಗಲ್ ತಾಲ್ಲೂಕಿಗೆ ಶೇರಿದ ಹುಳಿಯಾರದುರ್ಗ, ಪುರ ಮತ್ತು ಕೋಡವಟ್ಟಿ ಎಂಬ ಗ್ರಾಮಗಳಲ್ಲಿ	0	0	6	0	0	4			
	ಹುಳಿಯಾರು ಸಬ್ ತಾಲ್ಲೂಕಿನ ಗ್ರಾಮಗಳಲ್ಲಿ	0	0	6	0	0	4			
	ಶಿರಾತಾಲ್ಲೂಕಿನ ಗ್ರಾಮಗಳಲ್ಲಿ	0	1	0	0	0	4			
	ಇತರ ಎಲ್ಲಾ ಗ್ರಾಮಗಳಲ್ಲಿ	0	1	0	0	0	8			
ಮೈಸೂರು.	ಮೈಸೂರ ಟವನ್	0	1	0	0	0	10			
	ಮೈಸೂರು ತಾಲ್ಲೂಕಿಗೆ ಶೇರಿದ ಹೊಸಕೊಳ, ಹಾರೋಹಳ್ಳಿ, ವರುಣ, ಪುತ್ತನಹಳ್ಳಿ ಮತ್ತು ಕುಪ್ಪೆಗಾಲ ಎಂಬ ಗ್ರಾಮಗಳು	0	0	8	0	0	4			
	ಮೈಸೂರ್ ತಾಲ್ಲೂಕಿಗೆ ಶೇರಿದ ಚಾಮುಂಡಿ ಮತ್ತು ಉತ್ತನಹಳ್ಳಿ ಜಾತ್ರೆಗಳಲ್ಲಿ	0	1	0	0	0	8			
	ಮೈಸೂರು ತಾಲ್ಲೂಕಿಗೆ ಶೇರಿದ ಕಲಸ್ವಾಡಿ, ಸುಕ್ಕಹಳ್ಳಿ, ರಾಂನಹಳ್ಳಿ, ಕುಂಚಿಗರಕಟ್ಟೆ, ಮತ್ತು ಅಮ್ಮನವರಕೊಳೆ ಎಂಬ ಗ್ರಾಮಗಳಲ್ಲಿ	0	1	0	0	0	10			
	ಮೈಸೂರು ತಾಲ್ಲೂಕಿಗೆ ಶೇರಿದ ಭೂಗದಗಳ್ಳಿ, ಕೆಂಚಲಗೂಡು, ಮರಟಿಕ್ಯಾತನಹಳ್ಳಿ ಮತ್ತು ಗಣಂಗೂರ್ ಹುಂಡಿ ಎಂಬ ಗ್ರಾಮಗಳಲ್ಲಿ	0	0	10	0	0	8			
	ಹೆಗ್ಗಡದೇವನಕೋಟೆ ಕಸಬ	0	0	10	0	0	6			
	ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಶೇರಿದ ಸರಗೂರು, ಕಿತ್ತೂರು, ಮುರಳು ಮಗ್ಗೆ, ಸೋಗೆರೆ, ಅಂತರಸಂತೆ, ನೇರಳೆ, ಎಲ್ಲಮತ್ತೂರು, ಕಾರೇಪುರ, ಮತ್ತು ಗಿಶನೆ ಎಂಬ ಗ್ರಾಮಗಳಲ್ಲಿ	0	0	8	0	0	4			
	ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಶೇರಿದ ಚಿಕ್ಕಳ್ಳಿ, ಮತ್ತಿಕೆರೆ, ಎಡತೊರೆ ಮತ್ತು ಹಿರಿಹಳ್ಳಿ ಎಂಬಗ್ರಾಮಗಳು	0	0	10	0	0	6			
	ಹುಣಸೂರು ಕಸಬ	0	0	10	0	0	6			
	ಹುಣಸೂರು ತಾಲ್ಲೂಕಿಗೆ ಶೇರಿದ ದಾದಕೆರೆ, ಹನಗೋಡು, ಹೆಬ್ಬೂರು, ಬಿಳಿಕೆರೆ ಮಸನಿಕಟ್ಟೆ, ಚಿಟ್ಟನಹಳ್ಳಿ, ಹಿಜಾಜಿಗುರ್ರೆ, ಕಂಪ್ಲಾಪುರ, ಚಿಲ್ಕುಂದು, ಅತ್ತಿಕುಪ್ಪ, ಚೆಟ್ಟದಪುರ, ಅತ್ತಿಗೋಡುಸಂತೆ, ಕಮರವಳ್ಳಿ, ಸೂಲಿಕೋಟೆ, ಚಾಮರಾಜ್ಜಕೋಟೆ, ಕನ್ನಗೊಳ, ಆನೆಚೌಕೂರು, ಪಂಚವಳ್ಳಿ, ಮಟ್ಟೂರು, ಅವರ್ತಿಕೋಟೆ ಮತ್ತು ಸತ್ತಿಗಾಲ ಎಂಬ ಗ್ರಾಮಗಳು	0	0	8	0	0	4			

ಡಿಸ್ಟ್ರಿಕ್ಟು.	ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಖರೀದಿ.						ರೊಟ್ಟೆ ಕಾರಬಾರಿಯವರಿಗೆ ಶೇರು ಒಂದಕ್ಕೆ ಗೊತ್ತಾದ ಖರೀದಿ.
		ಉತ್ತಮ.			ಕನಿಷ್ಟ.			
ಮೈಸೂರು.	ಹುಣಸೂರು ತಾಲ್ಲೂಕಿಗೆ ಶೇರಿದ ಬೆಟ್ಟದಪುರದ ಜಾತ್ರೆಗಳಲ್ಲಿ							
	ಹುಣಸೂರು ತಾಲ್ಲೂಕಿಗೆ ಶೇರಿದ ಕಟ್ಟೆಮಳವಾಡಿ, ಕಲ್ಲಪಟ್ಟ, ಹೊನ್ನೇನಹಳ್ಳಿ, ಮತ್ತು ಬನ್ನಕುಪ್ಪೆ ಎಂಬಗ್ರಾಮಗಳಲ್ಲಿ	0	0	10	0	0	8	
	ಶ್ರೀರಂಗಪಟ್ಟಣದ ಕಸಬ	0	0	10	0	0	6	
	ಶ್ರೀರಂಗಪಟ್ಟಣ ತಾಲ್ಲೂಕಿಗೆ ಶೇರಿದ ದರಸಕುಪ್ಪೆ, ಹಿರೋಡು, ಮತ್ತು ಶೆಟ್ಟಿಹಳ್ಳಿ ಎಂಬಗ್ರಾಮಗಳಲ್ಲಿ ..	0	0	10	0	0	6	
	ಶ್ರೀರಂಗಪಟ್ಟಣದ ತಾಲ್ಲೂಕಿನ ಮೇಲುಕೋಟೆ ಜಾತ್ರೆಯಲ್ಲಿ	0	0	8	0	0	4	
	ಶ್ರೀರಂಗಪಟ್ಟಣದ ತಾಲ್ಲೂಕಿನ ಪಾಲಹಳ್ಳಿ, ಸುಲ್ತಾನ್‌ಪೇಟೆ, ಪಶ್ಚಿಮವಾಹಿನಿ, ಬಳಗೊಳ, ಬೆಳವಾಡಿ, ಕ್ಯಾತನಹಳ್ಳಿ, ಕಬ್ಬಿನಬೋರೆ, ಕಿರಂಗೂರು, ಮತ್ತು ಗಂಜಾಂ ಎಂಬುವ ಗ್ರಾಮಗಳಲ್ಲಿ ..	0	1	0	0	0	8	
	ಎಳಂದೂರು ಕಸಬ	0	0	10	0	0	6	
	ಎಳಂದೂರು ಜಹಗೀರಿಗೆ ಶೇರಿದ ಅಗ್ರಹಾರ, ಮಾಂಬಳ್ಳಿ, ಹೊಳೆಕೆರೆ, ಮತ್ತು ಹೊರಳಕೆರೆ ಎಂಬುವಗ್ರಾಮಗಳಲ್ಲಿ ..	0	0	10	0	0	6	
	ತಿರುಮಕೂಡ್ಲು ನರಶೀಪುರದ ಕಸಬ	0	0	0	0	0	4	
	ತಿರಮಕೂಡ್ಲು ನರಶೀಪುರ ತಾಲ್ಲೂಕಿನ ಅಲಗೂಡು, ಕೆರೆಹಟ್ಟಿ, ತಿರುಮಕೂಡ್ಲು, ಗರ್ಗೇಶ್ವರಿ, ಎಡತೊರೆ, ಸೋಸಲೆ, ಬೆನಕನಹಳ್ಳಿ, ಕೆಂಡನಕೊಪ್ಪಲು, ನಿಲಸೋಗೆ, ಹೆಲವಾರಹುಂಡಿ, ಚೌಡಹಳ್ಳಿ, ಎರಗನಹಳ್ಳಿ, ಹಿರಿಯೂರು, ಕಿರಗಸೂರು, ತಮಡಿಪುರ ಮತ್ತು ಜವರನಹುಂಡಿ ಎಂಬ ಗ್ರಾಮಗಳು ..	0	0	10	0	0	6	
	ತಿರುಮಕೂಡ್ಲು ನರಶೀಪುರದ ತಾಲ್ಲೂಕಿನ ಇತರ ಎಲ್ಲಾಗ್ರಾಮಗಳಲ್ಲಿ ..	0	0	10	0	0	6	
	ತಿರುಮಕೂಡ್ಲು ನರಶೀಪುರದ ತಾಲ್ಲೂಕಿಗೆ ಶೇರಿದ ಮುದಕತೂರು ಮತ್ತು ಮೂಗೂರು ಜಾತ್ರೆಗಳಲ್ಲಿ ..	0	0	8	0	0	4	
	ಚಾಮರಾಜನಗರದ ಕಸಬ	0	0	10	0	0	8	
	ಚಾಮರಾಜನಗರ ತಾಲ್ಲೂಕಿನ ರಾಮಸಮುದ್ರ, ದೊಡ್ಡರಾಯಪೇಟೆ, ಮಾದಳ್ಳಿ, ಕಾಡಳ್ಳಿ, ಮಲ್ಲೈನಪುರ, ಉತ್ತಹಳ್ಳಿ ಮತ್ತು ಸೋಮವಾರದಪೇಟೆ ಎಂಬ ಗ್ರಾಮಗಳಲ್ಲಿ	0	0	10	0	0	6	
	ಕೃಷ್ಣರಾಜಪೇಟೆ ಮತ್ತು ನಾಗಮಂಗಲ ತಾಲ್ಲೂಕು ಕಸಬಾಗಳಲ್ಲಿ ..	0	0	10	0	0	6	
	ಕೃಷ್ಣರಾಜಪೇಟೆ ತಾಲ್ಲೂಕಿನ ಅಗ್ರಹಾರ, ಬಾಚಳ್ಳಿ, ಮುರಕನ್ಹಳ್ಳಿ, ಮತ್ತು ಹೊಸಹೊಳಲು ಎಂಬ ಗ್ರಾಮಗಳಲ್ಲಿ ..	0	1	0	0	0	6	
	ನಾಗಮಂಗಲ ತಾಲ್ಲೂಕಿನ ಪಾಲಗ್ರಹಾರ, ಕೋಟೆಪಟ್ಟ ಮತ್ತು ಜೊಮ್ಮದಳ್ಳ ಎಂಬ ಗ್ರಾಮಗಳಲ್ಲಿ ..	0	1	0	0	0	6	
	ಎಡತೊರೆ ಕಸಬ	0	1	0	0	0	6	
	ಎಡತೊರೆ ತಾಲ್ಲೂಕಿನ ಚುಂಚಿನಕಟ್ಟೆ ಮತ್ತು ಕಪಡಿ ಜಾತ್ರೆಗಳಲ್ಲಿ ..	0	0	10	0	0	6	
	ಡಿಟೋ ತಾಲ್ಲೂಕ್ ತಂದ್ರ ..	0	0	10	0	0	8	
	ಡಿಟೋ ತಾಲ್ಲೂಕ್ ಹಂಪಾಪುರ, ತಿಪ್ಪೂರು, ಸಾಲಗ್ರಾಮ, ದೊರ್ನಹಳ್ಳಿ, ಬೆಳ್ಳುಳ್ಳಿ, ಬ್ಯಾಡರಹಳ್ಳಿ, ಈ ಗ್ರಾಮಗಳಲ್ಲಿ	0	0	8	0	0	6	
	ಮಂಡ್ಯದ ಕಸಬ	0	0	10	0	0	6	
	ಮಂಡ್ಯದ ತಾಲ್ಲೂಕು ಚಿಕ್ಕಮಂಡ್ಯ, ಸಾತನೂರ್, ಕಟ್ಟೆಹಳ್ಳಿ, ಪನಕನಹಳ್ಳಿ ಈ ಗ್ರಾಮಗಳಲ್ಲಿ ..	0	0	10	0	0	6	
	ನಂಜನಗೂಡು ಕಸಬ	0	0	10	0	0	6	
	ನಂಜನಗೂಡು ತಾಲ್ಲೂಕು ದ್ಯಾವರಸನಹಳ್ಳಿ, ಪುಸ್ಪನಹಳ್ಳಿ, ಕುಂಬಳ್ಳಿ ದಿಬ್ಬೂರು, ಚಿಕ್ಕಯ್ಯನಛತ್ರ, ತೊರೆಮಾವು, ಮಲ್ಲೂರು, ನರಶೀಪುರ, ಗನತಗಾಲಮಾದರಹಳ್ಳಿ, ಈ ಗ್ರಾಮಗಳಲ್ಲಿ	0	0	10	0	0	6	
	ಮೇಲೆ ಉದಹರಿಸದೇ ಇರುವ ಡಿಸ್ಟ್ರಿಕ್ಟ ಮಜಕೂರ್ ಇತರ ಎಲ್ಲಾ ಕಸಬಗಳಲ್ಲಿಯೂ ..	0	0	10	0	0	6	
	ಮೇಲೆ ಉದಹರಿಸದೇ ಇರುವ ಡಿಸ್ಟ್ರಿಕ್ಟ ಮಜಕೂರ ಇತರ ಎಲ್ಲಾ ಗ್ರಾಮಗಳಲ್ಲಿಯೂ ..	0	0	10	0	0	6	
	.. .. ..	0	0	6	0	0	4	
ಹಾಸನ.	ಹಾರ್ಸಟರ್ವ							
	ಅರಕಲಗೂಡು ಕಸಬ	0	1	0	0	0	10	
	ಇತರ ತಾಲ್ಲೂಕು ಕಸಬಾಗಳು	0	1	0	0	0	8	
	ಬೇಲೂರು ತಾಲ್ಲೂಕು ಗ್ರಾಮಗಳು	0	1	0	0	0	6	
	ಬೇಲೂರು, ಅರಕಲಗೂಡು, ಮತ್ತು ಮಂಜರಾಬಾದು ತಾಲ್ಲೂಕು ಗ್ರಾಮಗಳು ವಿನಾಯಿಸಿ ಇತರ ಗ್ರಾಮಗಳಲ್ಲಿ ..	0	1	0	0	0	6	
	ಮಂಜರಾಬಾದು ತಾಲ್ಲೂಕಿನ ಸಕಲೇಶಪುರ, ಸುಂಡೆಕೆರೆ, ಬೆಳಗೋಡು, ಬಳ್ಳು, ಹೊಸಕೋಟೆ, ಮೊಗ್ಗೆ, ಶುಕ್ರವಾರಸಂತೆ ಮತ್ತು ಕಿರೋಡಿ ಎಂಬ ಗ್ರಾಮಗಳಲ್ಲಿ ..	0	0	6	0	0	4	
	.. .. ..	0	1	0	0	0	8	

ಡಿಸ್ಟ್ರಿಕ್ಟು.	ಸ್ಥಳ.	ಬಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಬಂದಕ್ಕೆ ಖರೀದಿ.						ರೊಟ್ಟೀ ಕಾರಖಾನೆ ಯವರಿಗೆ ಶೇರು ಬಂದಕ್ಕೆ ಗೊತ್ತಾದ ಖರೀದಿ.
		ಉತ್ತಮ.			ಕನಿಷ್ಟ.			
ಹಾಸನ.	ಅರಕಲ್‌ಗೂಡು ತಾಲ್ಲೂಕಿನ ಮಲ್ಲಿಪಟ್ಣ ಮಜಲು, ಸೋಮವಾರಸಂತೆ ಮರಟ ಮತ್ತು ಮಾರೂರು ಸಂತೆಗಳಲ್ಲಿ	0	1	0	0	0	6	
	ಅರಕಲಗೂಡು ತಾಲ್ಲೂಕಿನ, ಧರ್ಮಪುರ, ನರಸನಕುಪ್ಪೆ ಮತ್ತು ಎಲಹಳ್ಳಿ ಎಂಬ ಗ್ರಾಮಗಳಲ್ಲಿ .. .	0	0	10	0	0	6	
	ಡಿಟ್ಟೋ ಡಿಟ್ಟೋ ಉಲ್ಲಿ ಹೊಸೂರು ಎಂಬ ಗ್ರಾಮದಲ್ಲಿ ..	0	0	8	0	0	6	
	ಡಿಟ್ಟೋ ಡಿಟ್ಟೋ ಮಗ್ಗೆ ಮತ್ತು ಹುಲಿಕಲ್ಲು ಗ್ರಾಮಗಳಲ್ಲಿ ..	0	0	10	0	0	6	
	ಡಿಟ್ಟೋ ಡಿಟ್ಟೋ ಬನ್ನೂರು ಮತ್ತು ಭಾನುವಾರಸಂತೆ ಮರಟ ಗ್ರಾಮಗಳಲ್ಲಿ	0	1	0	0	0	6	
	ಡಿಟ್ಟೋ ಡಿಟ್ಟೋ ಕೊಂಗಲಾಳೆ ಮರಟ ಮತ್ತು ಕಡಿವಿನ ಹೊಸಹಳ್ಳಿ ಉಕ್ಕಡ ಗ್ರಾಮಗಳಲ್ಲಿ	0	0	8	0	0	6	
	ಡಿಟ್ಟೋ ಡಿಟ್ಟೋ ರಾಮನಾಥಪುರ ಮತ್ತು ಬಸವಾಪಟ್ಟಣ ಗ್ರಾಮಗಳಲ್ಲಿ	0	0	10	0	0	6	
	ಡಿಟ್ಟೋ ಡಿಟ್ಟೋ ಕೀರಲಾಪುರ, ರುದ್ರಪಟ್ಟಣ, ಕರಗೋಡು ಮರಟ ಮತ್ತು ಗಂಗೂರ್ ಮರಟ ಎಂಬ ಗ್ರಾಮಗಳಲ್ಲಿ ..	0	0	8	0	0	6	
	ಡಿಟ್ಟೋ ಡಿಟ್ಟೋ ಕಟ್ಟೇಪುರ, ಮತ್ತು ಮಜ್ಜನಹಳ್ಳಿ ಮರಟ ಎಂಬ ಗ್ರಾಮಗಳಲ್ಲಿ	0	0	10	0	0	6	
	ಡಿಟ್ಟೋ ಡಿಟ್ಟೋ ಕೋಣನೂರು ಗ್ರಾಮದಲ್ಲಿ	0	1	0	0	0	6	
ಕಡೂರು.	ಕೊಪ್ಪಾ ಮತ್ತು ಮೂಡಿಗೆರೆ ತಾಲ್ಲೂಕು ಕಸಬಾ ಮತ್ತು ಗ್ರಾಮಾಂತ್ರಗಳಲ್ಲಿ.	0	1	6	0	0	6	
	ಇತರ ತಾಲ್ಲೂಕು ಕಸಬಾಗಳಲ್ಲಿ	0	1	4	0	0	6	
	ಇತರ ಗ್ರಾಮಗಳಲ್ಲಿ	0	1	0	0	0	6	
ಶಿವಮೊಗ್ಗಾ	ಶಿವಮೊಗ್ಗಾ ಟವರ್ನ	0	1	6	0	1	0	
	ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳು	0	1	0	0	0	6	
	ಡಿಸ್ಟ್ರಿಕ್ಟಿನ ಇತರ ಎಲ್ಲಾ ಭಾಗಗಳಲ್ಲಿ	0	1	6	0	0	6	
ಚಿತ್ರದುರ್ಗ.	ತಾಲ್ಲೂಕ ಕಸಬಾಗಳಲ್ಲಿ ಮತ್ತು ಗ್ರಾಮಗಳಲ್ಲಿ	0	1	0	0	0	6	

ಹುಕುಂ ಬಮೋಜೀಬ್,

ಯಂ. ನಾರಾಯಣರಾವ್, ಫಾರ್ ಅ॥ ಚೀಫ್ ಸೆಕ್ರಟೆರಿ.

ಮೈಸೂರು ಗವರ್ನಮೆಂಟನಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ನಂ. 16183.—ಜಿ. 4152. ಮೇ ತಾರೀಖು 27ನೇ ಮಾರ್ಚಿ 1895.—ಮದ್ರಾಸ್ ಪೋಸ್ಟ್‌ಮಾಸ್ಟರ್ ಜನರಲ್‌ರವರಿಂದ ಮೈಸೂರು ದೇಶದ ತಮಾಂ ಪೋಸ್ಟಲ್ ಆಫೀಸರ್‌ಗಳಿಗೆ ಸಾದರ್ ಮಾಡಲ್ಪಟ್ಟ ಇದರಡಿ ಕಂಡ ಲೆಟರ್ ಸರ್ಕ್ಯುಲರ ತಿಳುವಳಿಕೆ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ:—

[ಮದ್ರಾಸ್ ಪೋಸ್ಟ್ ಮಾಸ್ಟರ್ ಜನರಲ್‌ರವರಿಂದ—ಮೈಸೂರು ದೇಶದ ತಮಾಂ ಪೋಸ್ಟಲ್ ಆಫೀಸರ್‌ಗಳಿಗೆ.

ಜಿ. ಯಲ್. ನಂ. 82. ಡಿ. ಸಿ. ಯಂ. 6. ನಂ.–2 ಮರ್ಕುಂ 6ನೇ ಮಾರ್ಚಿ 1895–ಮದ್ರಾಸ್ ಪೋಸ್ಟ್ ಮಾಸ್ಟರ್ ಜನರಲ್‌ರವರ ಆಫೀಸ್

ಮೈಸೂರ್ ಗವರ್ನಮೆಂಟಿಗೆ ಶೇರಿದ ಒಬ್ಬ ಉದ್ಯೋಗಸ್ಥನು ರಜಾದಮೇಲೆ ಇರುವ ಕಾಲದಲ್ಲಿ "ಮೈಸೂರ್ ಸರ್ಕಾರ" ಯಂಬದಾಗಿ ವಿಳಾಸ ಬರಿಯಲ್ಪಟ್ಟ ವಂದು ಪದಾರ್ಥವನ್ನ ಬಗರ್ ಹಾಸಲ್ ಪೋಸ್ಟಾಫಿಸ್ ಮುಖಾಂತರ ರವಾನಿಸುವ ಬಗ್ಯೆ ಇಂಡಿಯನ್ ಪೋಸ್ಟಲ್ ಗೈಡಿನ (1895ನೇ ಜನವರಿ ಮಾಹೆ ಬಗ್ಗೆ) 330*ನೇ ಕ್ಲಾಜಿನ ನಿಯಮಗಳಿಗೆ ವಿರುದ್ಧವಾಗಿ ಬಂದಾನೊಂದು ವೇಳೆ ರುಜಾ ಮಾಡುತ್ತಾನೆ. ರಜಾದ ಮೇಲಿರುವ ಒಬ್ಬ ಆಫೀಸರನು ಗವರ್ನಮೆಂಟ ಆಫೀಸಿಗೆ ತಿಳಿಸಬೇಕಾದ ಯಾವ ಸರ್ಕಾರಿ ವರ್ತಮಾನದ ವಿಷಯದಲ್ಲಾಗಲಿ ಬಗರ್ ನೌಕರನಾಗಿ ಇರತಕದ್ದು: ಮತ್ತು ಆತನು ಈ ಕಾರಣದಿಂದ ಬಂದು ಪದಾರ್ಥವನ್ನು "ಸರ್ಕಾರಿ" ಯಾಗಿ ಪೋಸ್ಟಾಫೀಸ್ ದ್ವಾರಾ ರವಾನಿಸುವದಕ್ಕೆ ಅಧಿಕಾರ ಉಂಟಾಗಿರುವದಿಲ್ಲ.

2. ಪರಂತು ಗವರ್ನಮೆಂಟ್ ಕೆಲಸಗಳಿಗೆ ಲಗಾವ್ ಆದ ಕಾಗದ ಪತ್ರಗಳನ್ನು "ಬಗರ್ ಹಾಸಲ್ ಸರ್ಕಾರ" ಯಂಬದಾಗಿ ಬರೆದು ರುಜೂಮಾಡಿ ರವಾನಿಸುವದಕ್ಕೆ ಆತನಿಗೆ ಅವಕಾಶವಿರುತ್ತೆ, ಈ ಬಗ್ಯಾಗಿ ಇಂಡಿಯನ್ ಪೋಸ್ಟಲ್ ಗೈಡಿನ 138ನೇ ಕ್ಲಾಜಿನಲ್ಲಿ ನಿಯಮ ಉಂಟುಮಾಡಲ್ಪಟ್ಟಿರುತ್ತೆ: ಮತ್ತು ಈ ತರಹೆ ವಿಳಾಸ ಬರಿಯಲ್ಪಟ್ಟು ರವಾನಿಸುವನಿಂದ ಕ್ರಮವಾಗಿ ರುಜಾ ಮಾಡಲ್ಪಟ್ಟ ಪದಾರ್ಥಗಳು, ಮೈಸೂರು ಗವರ್ನಮೆಂಟಿಗೆ ಶೇರಿದ ಒಬ್ಬ ಉದ್ಯೋಗಸ್ಥನಿಗೆ ವಿಳಾಸ ಬರಿಯಲ್ಪಟ್ಟಿದ್ದ ಪಕ್ಷದಲ್ಲಿ ಬಗರ್ ಹಾಸಲ್ ಯಾವಾಗ್ಯೂ ಪಾವತಿ ಮಾಡಲ್ಪಡಬೇಕು. ಪರಂತು ಸದರೀ ಪದಾರ್ಥಗಳು ರವಾನಿಸಲ್ಪಡುವ ಮತ್ತು ಪಾವತಿ ಮಾಡಲ್ಪಡುವ ಉಭಯ ಸ್ಥಳಗಳೂ ಮೈಸೂರು ದೇಶದ ಸರಹದ್ದಿನೊಳಗೆ ಇರತಕದ್ದು. ಹೆಚ್. ಫ್ಯಾರರ್, ಪೋಸ್ಟ್ ಮಾಸ್ಟರ್ ಜನರಲ್.]

ಹುಕುಂ ಬಮೋಜೀಬ್,
ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರಟೇರಿ.

ವಿದ್ಯಾಭ್ಯಾಸದ ಇಲಾಖೆ.

ಸನ್ 1895ನೇ ಇಸವಿ ಏಪ್ರಿಲ್ 6ನೇ ತಾರೀಖಿನ E. ನಂ. 55.

ಗ್ರಾಮ ಪಾಠಶಾಲೆಗಳಿಗೂ ಗ್ರಾಮಗಳಲ್ಲಿರುವ ರಾತ್ರಿಯ ಪಾಠಶಾಲೆಗಳಿಗೂ ಮಾಡುವ ದ್ರವ್ಯ ಸಹಾಯ ವಿಷಯಕವಾದ ಕಟ್ಟಳೆಗಳು.

ಮೈಸೂರು ಶೀಮೆಯ ಗ್ರಾಮ ಪಾಠಶಾಲೆಗಳಿಗೂ ರಾತ್ರಿಯ ಪಾಠಶಾಲೆಗಳಿಗೂ ಮಾಡುವ ದ್ರವ್ಯ ಸಹಾಯಕ್ಕೆ ಸಂಬಂಧಪಟ್ಟ ಕಟ್ಟಳೆಗಳು ಜನರ ತಿಳಿವಳಿಕೆಗೋಸ್ಕರ ಕೆಳಗೆ ಪ್ರಕಟಿಸಲ್ಪಟ್ಟಿವೆ. ಈ ಕಟ್ಟಳೆಗಳು 1895ನೇ ಇಸವಿ ಜುಲೈ ಮೊದಲನೇ ತಾರೀಖಿನಿಂದ ಚಲಾವಣೆಗೆ ಬರುತ್ತವೆ.

ಗ್ರಾಮ ಪಾಠಶಾಲೆಗಳು.

I. ಎಲ್ಲಾ ಜಾತಿಯ ಹುಡುಗರಿಗೋಸ್ಕರವಾಗಲಿ ವಿಶೇಷ ಜಾತಿಯ ಹುಡುಗರಿಗೋಸ್ಕರವಾಗಲಿ ಗ್ರಾಮಗಳಲ್ಲಿ ಈಗ ಇಟ್ಟಿರುವ ಅಥವಾ ಇನ್ನು ಮೇಲೆ ಇಡಬಹುದಾದ ದೇಶೀಯ ಮಠಗಳು ಗ್ರಾಮ ಪಾಠಶಾಲೆಗಳೆಂದು ಕರೆಯಲ್ಪಡುವುವು. ಇವು ಕೆಳಗೆ ವಿವರಿಸುವ ನಿಬಂಧನೆಗಳಿಗೆ ಒಳಪಟ್ಟಿದ್ದಲ್ಲಿ ವರ್ಷವರ್ಷವೂ ದ್ರವ್ಯ ಸಹಾಯ ಮಾಡುವುದಕ್ಕಾಗಿ ದಾಖಲ್ಮಾಡಿಕೊಳ್ಳಲ್ಪಡುವುವು.

ನಿಬಂಧನೆಗಳು. 1 ಗ್ರಾಮಪಾಠಶಾಲೆಗಳು ಉಪಯೋಗವಾದ ಲೌಕಿಕ ವಿದ್ಯಾಭ್ಯಾಸಕ್ಕೆ ಯಾವುದಾದರೂ ಒಂದು ವಿಧದಲ್ಲಿ ಸಹಕಾರಿಗಳಾಗಿದ್ದು ದೇಶಭಾಷೆ, ಅಂಕಗಣಿತ, ಭೂವಿವರಣೆ ಇವುಗಳಲ್ಲಿ ಮುಂದೆ ವಿವರಿಸುವ ಸಾಮಾನ್ಯ ಬೋಧೆಯ ಈಯತ್ತೆಗಳನ್ನು (Standards of General instruction) ಅಂಗೀಕರಿಸಿರಬೇಕು. ಅಲ್ಲದೆ ವಿದ್ಯಾರ್ಥಿಗಳ ತಂದೆ ತಾಯಿಗಳು ಬೋಧಿಸಬೇಕೆಂದು ಅಪೇಕ್ಷಿಸಬಹುದಾದ ಹೆಚ್ಚು ವಿಷಯಗಳನ್ನು ಮೇಲ್ವಿಚಾರಣೆ ಮಾಡುವ ಅಧಿಕಾರಿಯು (Inspecting officer) ಅವು ನಿರಾಕ್ಷೇಪವೆಂದು ಎಣಿಸಿದ ಪಕ್ಷದಲ್ಲಿ ಬೋಧಿಸಬಹುದು.

2. ದಾಖಲ್ಮಾಡಿಕೊಳ್ಳುವಂತೆ ಕೇಳಿಕೊಳ್ಳುವ ದರಖಾಸ್ತಿನ ತಾರೀಖಿಗೆ ಹಿಂದಿನ ವರ್ಷವೆಲ್ಲಾ ಪ್ರತಿ ದಿನವೂ ಸರಾಸರಿ ಹತ್ತು ವಿದ್ಯಾರ್ಥಿಗಳಿಗೆ ಕಡಮೆ ಇಲ್ಲದೆ ಪಾಠಶಾಲೆಗೆ ಬರುತ್ತಾ ಇದ್ದಿರಬೇಕು. ಬಾಲಿಕಾ ಪಾಠಶಾಲೆಗಳಲ್ಲೂ, ಹೀನ ಅಥವಾ ಅಪಕೃಷ್ಟ ಜಾತಿಯ ಹುಡುಗರ ಪಾಠಶಾಲೆಗಳಲ್ಲೂ ಪ್ರತಿ ದಿನವೂ ಕನಿಷ್ಟ ಪಕ್ಷ 6 ಮಂದಿ ಬರುತ್ತಾ ಇದ್ದಿರಬೇಕು.

3. ಪಾಠಶಾಲೆಗಳಲ್ಲಿ ಪ್ರತಿ ದಿನವೂ 4 ಘಂಟೆಯ ಕಾಲಕ್ಕೆ ಕಡಮೆ ಇಲ್ಲದಂತೆ ವರ್ಷದಲ್ಲಿ ದರಿದ್ರಪಕ್ಷ 150 ದಿನಗಳು ಕೆಲಸ ನಡೆದಿರಬೇಕು. ಎರಡೆರಡು ಘಂಟೆಯ ಕಾಲ ಕೆಲಸ ನಡೆದ 2 ದಿನಗಳು ಲೆಕ್ಕಕ್ಕೆ ಒಂದು ದಿನವೆಂದು ಭಾವಿಸಲ್ಪಡುವುವು.

4. ಪಾಠಶಾಲೆಗಳು ಮುಖ್ಯ ಗ್ರಾಮಸ್ಥರ ಒಂದು ಸಭೆಯ ಮೇಲ್ವಿಚಾರಣೆಯಲ್ಲಿರಬೇಕು. ಈ ಸಭೆಗೆ ಪಟೇಲರೂ ಶಾನುಭೋಗರೂ ಸಾಮಾಜಿಕರಾಗಿರಬೇಕು.

5. ಸರ್ಕಾರೀ ಸ್ಕೂಲುಗಳಿಗೆ ನೇಮಿಸಿರುವ ರೀತಿಯಲ್ಲಿ ಹಾಜರಿಯ ಮತ್ತು ಪ್ರವೇಶದ ಪಟ್ಟಿಗಳನ್ನು (Attendance and Admission registers) ಇಡಬೇಕು. ಇಲಾಖೆಯವರು ಕೇಳಬಹುದಾದ ಲೆಕ್ಕಗಳನ್ನು ಕಳುಹಿಸಬೇಕು. ಹಾಜರಿಪಟ್ಟಿ ಸರಿಯಾಗಿದೆ ಯಂಬ ವಿಷಯವನ್ನು ಪ್ರತಿ ತಿಂಗಳಲ್ಲಿಯೂ ಪಾಠಶಾಲಾ ಸಭೆಯ ಒಬ್ಬ ಸಾಮಾಜಿಕನು ದೃಢೀಕರಿಸಬೇಕು.

6. ಇಲಾಖೆಯವರ ಅವೇಕ್ಷಣಕ್ಕೆ (Inspection) ಸಮ್ಮತಿಸಬೇಕು.

II. ಈ ಕಟ್ಟಳೆಗಳ ಸಂಬಂಧದಲ್ಲಿ ಕೆಳಗೆ ಹೇಳುವ ಜಾತಿಗಳು ಹೀನ ಅಥವಾ ಅಪಕೃಷ್ಟ ಜಾತಿಗಳೆಂದು ಎಣಿಸಬೇಕು:— ಹೊಲೆಯರು, ಮಾದಿಗರು, ಲಂಬಾಣಿಗರು, ಕೊರಚರು, ಕೊರಮರು, ನಾಯಿಂದರು.

III. (1) ದಾಖಲ್ಮಾಡಿಕೊಳ್ಳುವುದಕ್ಕೋಸ್ಕರ ದರಖಾಸ್ತುಗಳನ್ನು ಛಾಪಿಸಿರುವ ನಮೂನೆಯಲ್ಲಿ (Printed form) ಬರೆದು ಪಾಠಶಾಲೆಯು ಇರುವ ಡಿಸ್ಟ್ರಿಕ್ಟಿನ ಡೆಪ್ಯುಟಿ ಇನ್ಸ್ಪೆಕ್ಟರಿಗೆ ಜೂನ್ 30ನೇ ತಾರೀಖಿನೊಳಗಾಗಿ ಕಳುಹಿಸಬೇಕು. [ದರಖಾಸ್ತು ಮಾಡುವುದಕ್ಕೆ ಕೊನೆಯ ದಿವಸವು 1895ನೇ ಇಸವಿಯಾದ ಮೇಲೆ ಬದಲಾಯಿಸಲ್ಪಡಬಹುದು.]

IV. ದರಖಾಸ್ತುಗಳು ತಲಪಿದ ನಂತರ ಪ್ರತಿ ಡಿಸ್ಟ್ರಿಕ್ಟಿನ ಡೆಪ್ಯುಟಿ ಇನ್ಸ್ಪೆಕ್ಟರೂ 1ನೇ ಕಟ್ಟಳೆಯ ನಿಬಂಧನೆಗಳ ಪ್ರಕಾರ ಯಾವ ದರಖಾಸ್ತುಗಳು ದಾಖಲ್ಮಾಡಿಕೊಳ್ಳುವುದಕ್ಕೆ ತಕ್ಕವೆಂದು ನೋಡಬೇಕು. ಯಾವ ದರಖಾಸ್ತುದಾರರ ಪಾಠಶಾಲೆಗಳನ್ನು ದಾಖಲ್ಮಾಡಿಕೊಳ್ಳುವುದಕ್ಕೆ ಸಮ್ಮತಿಸುತ್ತಾರೋ ಅವರಿಗೆ ಅವರ ದರಖಾಸ್ತುಗಳು ದಾಖಲ್ಮಾಡಲ್ಪಟ್ಟಿವೆ ಯೆಂದು ತಿಳಿಸಬೇಕು. ದಾಖಲ್ಮಾಡಿಕೊಂಡ ದರಖಾಸ್ತುಗಳನ್ನು ಜುಲೈ 15ನೇ ತಾರೀಖಿನೊಳಗಾಗಿ ವಿದ್ಯಾಭ್ಯಾಸದ ಸೆಕ್ರೆಟೆರಿಯವರಿಗೆ, ತಾಲ್ಲೂಕುವಾರ್ ಪಾಠಶಾಲೆಗಳನ್ನೂ, ಒಂದೊಂದರಲ್ಲಿಯೂ ಪ್ರತಿ ದಿನದ ಸರಾಸರಿ ಹಾಜರಿಯನ್ನೂ, ಡಿಸ್ಟ್ರಿಕ್ಟಿನಲ್ಲಿರುವ ಪ್ರತಿ ಗ್ರಾಮ ಪಾಠಶಾಲೆಗೂ ಸಹಾಯ ಮಾಡುವುದಕ್ಕೋಸ್ಕರ ಬೇಕಾಗುವ ಅಂದಾಜು ಮೊಬಲಗನ್ನೂ ನಮೂದಿಸಿರುವ ಒಂದು ಪಟ್ಟಿಯೊಡನೆ, ಕಳುಹಿಸಿಕೊಡಬೇಕು. ಅವೇಕ್ಷಣಕ್ಕೂ ಸಹಾಯ ಮಾಡುವುದಕ್ಕೂ ಪಾಠಶಾಲೆಗಳನ್ನು ಚುನಾಯಿಸುವಾಗ ವಿದ್ಯಾಭ್ಯಾಸದ ಸೆಕ್ರೆಟೆರಿಯವರು ಹಾಲಿ ಇರುವ ಯಾವುದಾದರೂ ಒಂದು ಸರಕಾರೀ ಸ್ಕೂಲಿಗೆ 2 ಮೈಲಿಗಿಂತ ಹೆಚ್ಚು ದೂರದಲ್ಲಿದ್ದು ಹೋಲಿಸಿ ನೋಡುವಲ್ಲಿ ಹಿಂದಾಗಿರುವ ಡಿಸ್ಟ್ರಿಕ್ಟುಗಳಲ್ಲಿ ಅಥವಾ ತಾಲ್ಲೂಕುಗಳಲ್ಲಿ ನೆಲಸಿರುವ ಪಾಠಶಾಲೆಗಳಿಗೆ ಪ್ರಾಮುಖ್ಯವನ್ನು ಕೊಡುವರು. ಚುನಾಯಿಸಲ್ಪಟ್ಟ ಪಾಠಶಾಲೆಗಳ ನಿರ್ವಾಹಕರಿಗೆ (Managers) ಅವರ ಪಾಠಶಾಲೆಗಳು ಅವೇಕ್ಷಣಕ್ಕೂ ಸಹಾಯ ಮಾಡುವುದಕ್ಕೂ ಚುನಾಯಿಸಲ್ಪಟ್ಟಿವೆ ಎಂಬ ವಿಷಯವನ್ನು ತಿಳಿಸಬೇಕು.

V. ವಿದ್ಯಾಭ್ಯಾಸದ ಸೆಕ್ರೆಟೆರಿಯವರು ಚುನಾಯಿಸಿದ ಪಾಠಶಾಲೆಗಳನ್ನು ಡೆಪ್ಯುಟಿ ಇನ್ಸ್ಪೆಕ್ಟರು ತಮ್ಮ ಮುಂದಿನ ವರ್ಷದ ಪ್ರಯಾಣದ ಪಟ್ಟಿಯಲ್ಲಿ (Programme of Tour) ಅವೇಕ್ಷಣಕ್ಕೋಸ್ಕರ ಸೇರಿಸಿಕೊಳ್ಳಬೇಕು. ಹಿಂದಿನ ವರ್ಷದಲ್ಲಿ ಯಾವ ಪಾಠಶಾಲೆಗಳನ್ನು ಯಾವ ತಿಂಗಳಲ್ಲಿ ಅವೇಕ್ಷಣ ಮಾಡಿದರೋ ಆ ಪಾಠಶಾಲೆಗಳನ್ನು ಸಾಧ್ಯವಾದ ಮಟ್ಟಿಗೆ ವರ್ಷ ವರ್ಷವೂ ಅದೇ ತಿಂಗಳಲ್ಲಿ ಅವೇಕ್ಷಣ ಮಾಡಬೇಕು. ಅವೇಕ್ಷಣವಾಗುವ ತಿಂಗಳಿಗೆ ಹಿಂದಿನ 12 ತಿಂಗಳುಗಳೇ ಪಾಠಶಾಲೆಗೆ ವರ್ಷವೆನಿಸುವುದು. ಡಿಸ್ಟ್ರಿಕ್ಟಿನ ಡೆಪ್ಯುಟಿ ಇನ್ಸ್ಪೆಕ್ಟರಾಗಲಿ ಅಥವಾ ವಿದ್ಯಾಭ್ಯಾಸದ ಸೆಕ್ರೆಟೆರಿಯವರ ವಿಶೇಷಾನುಮತಿಯಿಂದ (Special permission) ಇನ್ಸ್ಪೆಕ್ಟರ ಅಸಿಸ್ಟೆಂಟರಾಗಲಿ ಗ್ರಾಮ ಪಾಠಶಾಲೆಗಳನ್ನು ತಪ್ಪದೆ

ಅವೇಕ್ಷಣೆ ಮಾಡಬೇಕು. ಅವೇಕ್ಷಣೆಕ್ಕೆ ಹೋಗುವ ತಾರೀಖನ್ನು ಪಾಠಶಾಲಾ ನಿರ್ವಾಹಕರಿಗೆ ದರಿದ್ರಪಕ್ಷ 7 ದಿವಸ ಹಿಂದೆಯೇ ತಿಳಿಸಿ ಛಾಪಿಸಿರುವ ಅಂಕದ ಪಟ್ಟಿಗಳನ್ನೂ (Mark lists) ಕೂಡ ಆಗಲೇ ಕಳುಹಿಸಿಕೊಡಬೇಕು. ನಿರ್ವಾಹಕರು ಅಂಕದ ಪಟ್ಟಿಗಳಲ್ಲಿ ಒಂದೊಂದು ಈಯತ್ತೆಯ ವಿದ್ಯಾರ್ಥಿಗಳ ಹೆಸರುಗಳನ್ನೂ ಬರೆದು ಮೇಲ್ವಿಚಾರಣೆಯ ಅಧಿಕಾರಿಯು ಬರುವಾಗ ಸಿದ್ಧವಾಗಿಟ್ಟಿರಬೇಕು. ಡೆಪ್ಯುಟಿ ಇನ್ಸ್ಪೆಕ್ಟರೇ ಒಂದು ವರ್ಗದಿಂದ ಮೇಲಿನ ವರ್ಗಕ್ಕೆ ಹುಡುಗರನ್ನು ಕಳುಹಿಸಬೇಕು.

VI. ದಾಖಲಾಗಿರುವ ಪಾಠಶಾಲೆಗೆ ವರ್ಷಕ್ಕೆ 15 ರೂಪಾಯಿಯಿಂದ 60 ರೂಪಾಯಿನ ವರೆಗೆ ಸಹಾಯ ದ್ರವ್ಯವು ದೊರೆಯುವುದು. 60 ರೂಪಾಯೇ ಗ್ರಾಮ ಪಾಠಶಾಲೆಗೆ ಕೊಡುವ ಸಹಾಯ ದ್ರವ್ಯದ ಪರಮಾವಧಿ ಯೆಂದೆಣಿಸಲ್ಪಡುವುದು. ಸಹಾಯ ದ್ರವ್ಯವನ್ನು ಹೊಂದಬೇಕಾದರೆ ಒಂದೊಂದು ವರ್ಗದಲ್ಲಿಯೂ ಇರುವ ಹುಡುಗರಲ್ಲಿ ಮೂರರಲ್ಲಿ ಒಂದುಪಾಲು ಆ ವರ್ಗಕ್ಕೆ ಸಂಬಂಧಿಸುವ ಈಯತ್ತೆಯ (Standard) ಒಂದೊಂದು ಪ್ರಕರಣದಲ್ಲಿಯೂ (Head) ಪ್ರತ್ಯೇಕ ಪ್ರತ್ಯೇಕವಾಗಿ ತೇರ್ಗಡೆಯಾಗಬೇಕು. ಸಹಾಯ ದ್ರವ್ಯವು ಸಾಧಾರಣವಾದ ಹಿಂದೂ ಜಾತಿಯ ಒಬ್ಬ ಹುಡುಗನಿಗೆ $1\frac{1}{2}$ ರೂಪಾಯಿಯಂತೆಯೂ, ಒಬ್ಬ ಮಹಮ್ಮದೀಯ ಹುಡುಗನಿಗೆ 2 ರೂಪಾಯಂತೆಯೂ, ಹೀನ ಅಥವಾ ಅಪಕೃಷ್ಟ ಜಾತಿಗಳಿಗೋಸ್ಕರವೇ ಇಟ್ಟಿರುವ ಪಾಠಶಾಲೆಗಳಲ್ಲಿ ಸದರೀ ಜಾತಿಯ ಒಬ್ಬ ವಿದ್ಯಾರ್ಥಿಗೆ 3 ರೂಪಾಯಂತೆಯೂ, ಹೀನ ಅಥವಾ ಅಪಕೃಷ್ಟ ಜಾತಿಗಳಲ್ಲದ ಇತರ ಜಾತಿಗಳಿಗೋಸ್ಕರ ಇಟ್ಟಿರುವ ಸಾಧಾರಣವಾದ ಪಾಠಶಾಲೆಯಲ್ಲಿ ಓದುವ ಹೀನ ಅಥವಾ ಅಪಕೃಷ್ಟ ಜಾತಿಗಳ ಒಬ್ಬ ವಿದ್ಯಾರ್ಥಿಗೆ 2 ರೂಪಾಯಂತೆಯೂ, ಹೀನ ಅಥವಾ ಅಪಕೃಷ್ಟ ಎನಿಸಿಕೊಳ್ಳದ ಯಾವುದಾದರೂ ಒಂದು ಜಾತಿಯ ಅಥವಾ ಕುಲದ ಒಬ್ಬ ಹುಡುಗಿಗೆ $2\frac{1}{2}$ ರೂಪಾಯಂತೆಯೂ, ಸ್ಥೂಲಾಕಾರವಾಗಿ ಲೆಕ್ಕಮಾಡಲ್ಪಡುವುದು. ಸಹಾಯ ದ್ರವ್ಯವನ್ನು ಹೊಂದಬಹುದಾದ ವಿದ್ಯಾರ್ಥಿಗಳ ಪರಮಾವಧಿ ಸಂಖ್ಯೆಯು ಹಿಂದಿನ 12 ತಿಂಗಳುಗಳಲ್ಲಿ ಪ್ರತಿ ದಿನದ ಸರಾಸರಿ ಹಾಜರಿಯ ಸಂಖ್ಯೆಯಾಗಿರುವುದು.

ಹಿಂದಿನ ವರ್ಷದಲ್ಲಿ ದರಿದ್ರಪಕ್ಷ 150 ದಿವಸ ಪಾಠಶಾಲೆಗೆ ಬಾರದೇ ಇದ್ದ ವಿದ್ಯಾರ್ಥಿಯು ಸಹಾಯ ದ್ರವ್ಯವನ್ನು ಪಡೆವಂತೆ ಭಾವಿಸಲ್ಪಡುವುದಿಲ್ಲ. ಒಂದೇ ಈಯತ್ತೆಯಲ್ಲಿರುವ ವಿದ್ಯಾರ್ಥಿಯು ಒಂದಾವರ್ತಿ ಸಹಾಯ ದ್ರವ್ಯವನ್ನು ಪಡೆಯುವನಲ್ಲದೆ ಮುಂದಿನ ವರ್ಷಗಳಲ್ಲೂ ಪಡೆಯಲಾರನು.

VII. ಹಾಜರಿಯ ಪಟ್ಟಿಗಳನ್ನು ಸರಿಯಾಗಿಯೂ ಚೊಕ್ಕಟವಾಗಿಯೂ ಇಟ್ಟಿದ್ದರೆ VIನೇ ಕಟ್ಟಳೆಯಲ್ಲಿ ಹೇಳಿರುವ ಸಹಾಯ ದ್ರವ್ಯದ ಜೊತೆಗೆ ತಿಂಗಳಿಗೆ 1 ರೂಪಾಯಿನ ವರೆಗೂ ವಿಶೇಷ ಸಹಾಯ ದ್ರವ್ಯವು ಮಂಜೂರ್ ಮಾಡಲ್ಪಡುವುದು.

VIII. ಮೇಲ್ವಿಚಾರಣೆಯ ಅಧಿಕಾರಿಯು ತನ್ನ ಅವೇಕ್ಷಣದ ವರದಿಯನ್ನು (Inspection Report) ನಿಯಮಿತವಾದ ರೀತಿಯಲ್ಲಿ ಕಳುಹಿಸಬೇಕು. ಮತ್ತು ಪಾಠಶಾಲಾ ನಿರ್ವಾಹಕರು ಪಡೆದ ಸಹಾಯ ದ್ರವ್ಯವನ್ನು ಮಂಜೂರು ಮಾಡುವ ಬಗ್ಗೆ ಆವಶ್ಯಕವಾದ ಪ್ರಮಾಣ ಪತ್ರಿಕೆಗಳೊಡನೆ (Certificates) ಶಿಫಾರಸ್ ಮಾಡಬೇಕು. ಸರಕಾರದವರು ಮಂಜೂರು ಮಾಡಿದ ಸಹಾಯ ದ್ರವ್ಯವು ತಾಲ್ಲೂಕು ಖಜಾನೆಯಲ್ಲಿ "ಲೋಕಲ್‌ಫಂಡಿ"ನಿಂದ ಕೊಡಲ್ಪಡುವುದು.

IX. ಗ್ರಾಮ ಪಾಠಶಾಲೆಗಳ ಉಪಾಧ್ಯಾಯರುಗಳು ಧನ ರೂಪವಾಗಿಯಾಗಲಿ ಧಾನ್ಯ ರೂಪವಾಗಿಯಾಗಲಿ ವೇತನವನ್ನು (Fees ವಸೂಲ್ಮಾಡಬಹುದು.

X. ಸಹಾಯವನ್ನು ಪಡೆಯುವ ಗ್ರಾಮ ಪಾಠಶಾಲೆಯಲ್ಲಿ ಒಂದು ವರ್ಷಕಾಲ ಕೆಲಸವು ತೃಪ್ತಿಕರವಾಗಿ ಜರಗಿದ್ದಲ್ಲಿ ಸರಕಾರದವರು ಕೆಳಗೆ ವಿವರಿಸಿರುವ ಉಪಕರಣಗಳನ್ನೂ (Apparatus) ಪುಸ್ತಕಗಳನ್ನೂ ಕೊಡಬಹುದು. ಆದರೆ, ಪಾಠಶಾಲಾ ಸಭೆಯವರು ಪಾಠಶಾಲೆಯ ಕೆಲಸಕ್ಕೋಸ್ಕರವೇ ಅವು ಉಪಯೋಗವಾಗುವಂತೆ ನೋಡಿಕೊಳ್ಳುವುದಕ್ಕೂ ಮುಂದೆ ಯಾವಾಗಲಾದರೂ ಪಾಠಶಾಲೆಯು ನಿಂತು ಹೋದರೆ ತಾವು ಅವುಗಳನ್ನು ಸರಕಾರದವರಿಗೋಸ್ಕರ ತಮ್ಮ ವಶದಲ್ಲಿಟ್ಟುಕೊಂಡಿರುವುದಕ್ಕೂ ಒಪ್ಪಿಕೊಳ್ಳಬೇಕು.

	ರೂ. ಆ. ಪೈ.
ನೇತು ಹಾಕುವ ಕಪ್ಪು ಹಲಿಗೆ (Hanging Black-board)	5—0—0
ಕಾಲು ಮಣೆ (Stool)	1—8—0
ಸಣ್ಣ ಗುಂಡು ಚೌಕಟ್ಟು (Small ball-frame) ..	1—4—0
ಪಾಠಶಾಲೆಯ ಪುಸ್ತಕಗಳು	2—8—0
ಅಕ್ಷರಮಾಲೆಯ ಚೀಟುಗಳು (Alphabet cards) ..	1—0—0
ಮೈಸೂರು ಸೀಮೆಯಪಟ	2—8—0
ಮರಳು ಗಡಿಯಾರ (Sand Glass)	1—4—0
20 ಹಲಿಗೆಗಳು (Slates)	4—4—0
	ರೂ. 19—4—0

XI. ಸಹಾಯವನ್ನು ಹೊಂದುತ್ತಲಿರುವಂಥ ಉತ್ತಮ ಸ್ಥಿತಿಯಲ್ಲಿರುವ ಒಂದು ಗ್ರಾಮ ಪಾಠಶಾಲೆಯ ಉಪಾಧ್ಯಾಯನು ಬೋಧಿಸುವುದರಲ್ಲಿ ಆಸಕ್ತನೆಂದೂ ಘಟಕನೆಂದೂ ತಿಳಿಯ ಬಂದಲ್ಲಿ ಆತನು ಅಪೇಕ್ಷಿಸಿದರೆ ಸರಕಾರೀ ಸ್ಕೂಲಿನಲ್ಲಿ ಆತನಿಗೆ ಕೆಲಸವನ್ನು ಕೊಡಬಹುದು.

XII. ಪಟ್ಟಿಗಳಲ್ಲಿ (Registers) ಸುಳ್ಳು ಬರೆಯೋಣವಾಗಲಿ, ಪಾಠಶಾಲಾ ನಿರ್ವಾಹಕರು ತಯಾರ್ಮಾಡಿದ ಯಾವುದಾದರೂ ಒಂದು ಲೆಕ್ಕದಲ್ಲಿ (Return) ವಾಸ್ತವಾಂಶವನ್ನು ಮರೆಮಾಜೋಣವಾಗಲಿ, ವಿದ್ಯಾರ್ಥಿಗಳನ್ನು ತೋರಿಸುವುದರಲ್ಲಿ ವಂಚನೆಯಾಗಲಿ, ಅಥವಾ ಇನ್ನೂ ಯಾವ ವಿಧವಾದ ಮೋಸವಾಗಲಿ ಅಕ್ರಮವಾಗಲಿ ನಡೆದಿರುವ ಸಂದರ್ಭಗಳಲ್ಲಿ ಸಹಾಯ ದ್ರವ್ಯದ ಪೂರಾ ಮೊಬಲಗಾಗಲಿ ಅಥವಾ ಒಂದು ಭಾಗವಾಗಲಿ ನಿಲ್ಲಿಸಲ್ಪಡುತ್ತದೆ.

ಈ ಕೆಳಗೆ ರುಜು ಮಾಡಿರುವವರ ತಂದೆ ಮೈಸೂರು ಹಳೆ ನರಸಪ್ಪನವರ ಮಕ್ಕಳು ಮಧ್ವರಾಯರಿಗೆ ಹುಚ್ಚು ಹಿಡಿದಿರುವ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರಿಂದ ಕಡೂರು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರ ದ್ವಾರಾ ತಲ್ಪಿರುವ 1893ನೇ ಇಸವಿ ನವಂಬರ್ 8ನೇ ಮುರ್ಕುಂ 771ನೇ ನಂಬರ್ ಲೆಟರ್ ತಲ್ಪಿರುವದ್ದರಿಂದ ಇವರ ಬಾಬತು ಸ್ಥಿರ ಆಸ್ತಿಗಳು ಅಂದರೆ ಮೈಸೂರು ಡಿಸ್ಟ್ರಿಕ್ಟ್ ತಿರುಮಕೂಡ್ಲು ನರಸೀಪುರ ತಾಲ್ಲೂಕು ರಂಗಸಮುದ್ರದ ಹೋಬಳಿ ಕಸಬಾ ರಂಗಸಮುದ್ರದಲ್ಲಿರುವ ತರೀ ಜಮೀನು ಸರ್ವೆ ನಂಬರು 124 ಮತ್ತು ಮೈಸೂರು ಕಿಲ್ಲೆ ವೀಣೆ ವೆಂಕಟಸುಬ್ಬಯ್ಯನವರ ಗಲ್ಲಿಯಲ್ಲಿರುವ ಹಂಚಿನ ಮನೆ ಮ್ಯುನಿಸಿಪಲ್ ನಂಬರ್ ಇವುಗಳ ಬಾಬತು ಅಡವು, ಭೋಗ್ಯ, ಮತ್ತು ಕ್ರಯ ಇವೇ ಮುಂತಾದವುಗಳನ್ನು ಮಾಡಿಕೊಳ್ಳುವವರಿಗೆ ತತ್ಸಂಬಂಧವಾದ ಹಕ್ಕುಗಳು ವೂರ್ಜಿತವಾಗಲಾರದೆಂಬದಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸಿದೆ.

ಎ. ಕೃಷ್ಣರಾವ್,
ಡೆಪ್ಯುಟಿ ಇನ್ಸ್ಪೆಕ್ಟರ್ ಆಫ್ ವ್ಯಾಕ್ಸಿನೇಷನ್.

ಮೈಸೂರ ಗೆಜೆಟ್.

ನಂ. 19] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಮೇ ತಾ॥ 23, ಸನ್ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡ್ ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

೧ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 9ನೇ ಮೇ 1895.

ನಂ. 20096—ಜಿ. 5319.—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ ಅನುಸರಿಸಿ, ಮಂಡ್ಯ ತಾಲ್ಲೂಕು ಅಮಲ್‌ದಾರ್ ಎಸ್. ಕೃಷ್ಣಮೂರ್ತಿರಾಯರು, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಮೊದಲು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ತಾಲ್ಲೂಕು ಶಿರಸ್ತೇದಾರ್ ಸುಬ್ಬಣ್ಣನವರು ಅಮಲ್‌ದಾರರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಮಂಡ್ಯ ತಾಲ್ಲೂಕು ಇನ್‌ಚಾರ್ಜಿನಲ್ಲಿರತಕ್ಕದ್ದಲ್ಲದೆ, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ 12ನೇ ಸೆಕ್ಷನ್ ಅನುಸರಿಸಿ, ಅಮಲ್‌ದಾರರ ಗೈರ್‌ಹಾಜರೀ ಕಾಲದಲ್ಲಿ ಚಲಾಯಿಸತಕ್ಕ ಬಗ್ಗೆ, ಮೂರನೆಯ ಕ್ಲಾಸ್ ಮ್ಯಾಜಿಸ್ಟ್ರೇಟರ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ತಾರೀಖು 10ನೇ ಮೇ 1895.

ನಂ. 20098—ಜಿ. 5321.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಮಂಜರಾಬಾದ್ ತಾಲ್ಲೂಕು ಅಮಲ್‌ದಾರ್ ಸಿ. ನಾರಾಯಣರಾಯರವರು ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು, ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಹಾಸನ ಡಿಸ್ಟ್ರಿಕ್ಟ್ ಆಫೀಸ್ ಜುಡಿಷಲ್ ಹೆಡ್‌ಮುನಿಷಿ ಶಿಕಾರಿಪುರ ಕೃಷ್ಣಪ್ಪನವರು ಹಂಗಾಮಿ ತರೀಕ್ ಮಂಜರಾಬಾದ್ ತಾಲ್ಲೂಕು ಅಮಲ್‌ದಾರರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟು, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ 12ನೆಯ ಸೆಕ್ಷನ್ ಅನುಸರಿಸಿ, ಎರಡನೆಯ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುವದಲ್ಲದೆ, 1859ನೆಯ ಇಸವಿ XIIIನೆಯ ನಂಬರ್ ಬ್ರೀಚಾಫ್ ಕಂಟ್ರಾಕ್ಟ್ ಆಕ್ಟಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ವಿಚಾರಿಸುವದಕ್ಕೆ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ತಾರೀಖು 13ನೇ ಮೇ 1895.

ನಂ. 20459—ಜಿ. 5386.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೆಯ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಟಿ. ಎ. ಮೀರಕಮಾಲುದ್ದೀನ್ ಅಲ್ಲೀಖಾನರವರು, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಮೊದಲು 25 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಚಿತ್ರದುರ್ಗ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಎಚ್. ರಾಮಾನುಜಯ್ಯಂಗಾರ್ರವರು ಮೆಸ್ಟರ್ ಟಿ. ಎ. ಮೀರಕಮಾಲುದ್ದೀನ್ ಅಲ್ಲೀಖಾನರವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತಮ್ಮ ಸ್ವಂತಕೆಲಸಗಳೊಂದಿಗೆ, ಡಿಸ್ಟ್ರಿಕ್ಟ್ ಟ್ರೆಜರಿ ಇನ್‌ಚಾರ್ಜಿನಲ್ಲಿರತಕ್ಕದ್ದು.

ನಂ. 20461—ಜಿ. 5388.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೆಯ ಆರ್ಟಿಕಲ್ ಅನುಸರಿಸಿ, ತುರುವೇಕೆರೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್ ಮಹಮ್ಮದ್ ಅಲೀಖಾನರು ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಮೊದಲು ಎಂಟು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಡೆಪ್ಯುಟಿ ಅಮಲ್‌ದಾರರು ರಜಾ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತಿಪಟೂರ್ ತಾಲ್ಲೂಕು ಅಮಲ್‌ದಾರರು ತುರುವೇಕೆರೆ ಸಬ್ ತಾಲ್ಲೂಕು ಇನ್‌ಚಾರ್ಜಿನಲ್ಲಿರುವರು.

ತಾರೀಖು 15ನೇ ಮೇ 1895.

ನಂ. 20574—ಜಿ. 5422.—ಮೈಸೂರು ಗವರ್ನ್‌ಮೆಂಟ್ ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿಯವರಾದ ಮೆಸ್ಟರ್ ಎಚ್. ಜೆ. ಭಾಭಾ ಯವರಿಗೆ, 1895ನೆಯ ಇಸವಿ ಮೇ 6ನೇ ತಾರೀಖುಳ್ಳ 19636—ಜಿ. 5223ನೆಯ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟ ಹತ್ತು ದಿನಗಳ ಕ್ಯಾಜುಯಲ್ ರಜಾ ಇದರಿಂದ ಅಯಿದು ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿರುತಿದೆ.

ಹುಕುಂ ಬಮೋಜಿಬ್,

ಎಲ್. ಅನಂತಸ್ವಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರೆಟರಿ.

ನಂ. 18928—ಜೆ. 1175, ತಾ॥ 23ನೇ ಏಪ್ರೆಲ್ 1895.

ಖೈದಿಗಳನ್ನು ಹಾಜರ್‌ಪಡಿಶಿಕೊಂಡು ಅವರ ಸಾಕ್ಷ್ಯವನ್ನು ತೆಗೆದುಕೊಳ್ಳುವ ಬಗ್ಗ್ಯೆ ಅವರ ಮೇಲೆ ಪ್ರೊಸೆಸ್ ಜಾರಿಯಾಗುವ ಬಗ್ಗ್ಯೆ ಸಾಲಭ್ಯಗಳನ್ನುಂಟುಮಾಡಲು ಹುಟ್ಟಿದ ರೆಗ್ಯುಲೇಷನ್ ಅಂದರೆ 1894ನೇ ಇಸವಿಯ Vನೇ ನಂಬರ್ ರೆಗ್ಯುಲೇಷನಿನ 8ನೇ ಸೆಕ್ಷನ್ ನಿಯಮಗಳನುಸರಿಸಿ, ಮೈಸೂರು ಸರ್ಕಾರದವರು ಆಜ್ಞಾಪಿಸುವದೇನಂದರೆ—ಯಾವ ಸಿವಿಲ್ ಯಾ ಕ್ರಿಮಿನಲ್ ಕೋರ್ಟಿನವರಾಗಲಿ ಇದರಡಿಕಂಡ ಖೈದಿಗಳು ಯಾ ಆ ತರಗತಿಗೆ ಶೇರಿದ ಖೈದಿಗಳನ್ನು ಅವರ ಸಾಕ್ಷ್ಯವನ್ನು ತೆಗೆದುಕೊಳ್ಳುವದಕ್ಕೋಸ್ಕರ ಬಂದೀಖಾನೆಯಿಂದ ಆಚೆಗೆ ಬರಮಾಡಿಕೊಳ್ಳಲು ಪ್ರೊಸೆಸ್ ಮೂಲಕ ಬಲಾತ್ಕರಿಸಕೂಡದು.

(a) ಮರಣ ದಂಡನೆ ಪಡೆದ ಖೈದಿಗಳು.

(b) ತಹ ಉಮ್ಮರ್ ಸಜಾ ಪಡೆದ ಖೈದಿಗಳು.

(c) ಕ್ರೂರಸ್ವಭಾವವುಳ್ಳ ಮತ್ತು ಅಂಥಾವರುಗಳನ್ನು ಹೊರಗೆ ಕರಿಸೋಣದರಿಂದ ಅಪಾಯವುಂಟಾಗಬಹುದೆಂದು ಜೈಲ್ ಯಾ ಲಾಕಪ್ ಚಾರ್ಜುಳ್ಳ ಆಫೀಸರರು ಅಭಿಪ್ರಾಯಪಡುವಂಥಾ ಖೈದಿಗಳು.

ಮೇಲೆ ನಮೂದ್ಮಾಡಲ್ಪಟ್ಟ ಯಾವದಾದರೂ ತರಗತಿಗೆ ಸೇರಿದ ಯಾವ ಖೈದಿಯಾದರೂ ಕೋರ್ಟಿನಲ್ಲಿ ಹಾಜರಾಗುವ ಬಗ್ಯೆ ದರಖಾಸ್ತು ತಲಪಿದ ಸಂದರ್ಭದಲ್ಲಿ, ಅಂಥಾ ದರಖಾಸ್ತನ್ನು ಜಾರಿಮಾಡದೆ, ಹಾಗೆ ಜಾರಿಮಾಡದೆ ಇರುವ ಬಗ್ಯೆ ತಕ್ಕ ಕಾರಣವನ್ನ ಅದರ ಮೇಲೆ ಇಂಡಾರ್ಸ್ ಮಾಡಿ ವಾಪಸ್ ಮಾಡುವದು ಜೈಲ್ ಯಾ ಬಂದೀಖಾನೆಯ ಚಾರ್ಜುಳ್ಳ ಆಫಿಸರಿಗೆ ನ್ಯಾಯವಾಗಿರತಕ್ಕದ್ದು.

2. ಸದರೀ ರೆಗ್ಯುಲೇಷನ್ 17ನೇ ಸೆಕ್ಷನಿನ ನಿಯಮಗಳನುಸರಿಸಿ, ಮೈಸೂರು ಗವರ್ನಮೆಂಟಿನವರು ಮತ್ತು ಆಜ್ಞಾಪಿಸುವದೇನಂದರೆ—ಬೆಂಗಳೂರು ಸೆಂಟ್ರಲ್ ಜೈಲ್ ವ ಮೈಸೂರು ಶಿವಮೊಗ್ಗಾ ಜೈಲ್‌ಗಳ ವಿಷಯದಲ್ಲಿ, ಆಯಾ ಜೈಲಿನ ಸೂಪರಿಂಟೆಂಡೆಂಟರೂ, ಡಿಸ್ಟ್ರಿಕ್ಟು ವ ತಾಲ್ಲೂಕು ಲಾಕಪ್‌ಗಳ ವಿಷಯದಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರಾಗಲಿ, ಅಥವಾ ಲಾಕಪ್ಪಿನ ಚಾರ್ಜು ಉಳ್ಳ ಆಫಿಸರರಾಗಲಿ, ಈ ರೆಗ್ಯುಲೇಷನಿನ ಉದ್ದಿಶ್ಯಗಳಿಗಾಗಿ ಜೈಲ್ ಚಾರ್ಜುಳ್ಳ ಆಫಿಸರರೆಂದು ಎಣಿಸಲ್ಪಡತಕ್ಕದ್ದು. ಮತ್ತು ಈ ರೆಗ್ಯುಲೇಷನಿಗೆ ಲಗತ್ಮಾಡಲ್ಪಟ್ಟ ಷೆಡ್ಯೂಲಿನ *A*, *B*, ನಮೂನೆಗಳಲ್ಲಿ ದರಖಾಸ್ತುಗಳು ಸಂದರ್ಭಾನುಸಾರ ಅವರುಗಳಿಗೆ ಕಳುಹಿಸಲ್ಪಡತಕ್ಕದ್ದು.

3. ಒಬ್ಬ ಖೈದಿಯ ಹಾಜರಾತಿ ಬಗ್ಯೆ ಸಮ್ಮನ್ಸ್ ಕಳುಹಿಸುವ ಕೋರ್ಟಿನವರು, ಸದರೀ ರೆಗ್ಯುಲೇಷನಿನ 15ನೇ ಸೆಕ್ಷನ್ ನಿಯಮಗಳಿಗೆ ಅನುಗುಣವಾಗಿ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟ ನಿಬಂಧನೆಗಳ ಪ್ರಕಾರ ಆಗಿಂದಾಗ್ಯೆ ಗೊತ್ತುಮಾಡಲ್ಪಡಬಹುದಾದ ಫೀಜುಗಳ ದರದಂತೆ ಖೈದಿಗಳ ಮತ್ತು ಅವರ ಪಹರೇ ಜನಗಳ ಪ್ರಯಾಣದ ಖರ್ಚು ಮತ್ತು ಭತ್ಯ ಇವುಗಳಿಗೆ ಬೇಕಾಗುವ ಮೊತ್ತವನ್ನು ಪ್ರೊಸೆಸ್ ಒಂದಿಗೆ ಕಳುಹಿಸತಕ್ಕದ್ದು.

ರೆವಿನ್ಯೂ ಫಾರೆಸ್ಟು ಇಲಾಖಾ—ಇಸ್ತಿಹಾರ್ ನಾಮೆಗಳು.

ನಂಬರು 15229—R. F. 155—92, ತಾರೀಖು 15ನೇ ಮಾರ್ಚಿ 1895.

ಚವುಬೀನೆ ಮತ್ತು ಬಿದರು ಬೊಂಬುಗಳನ್ನು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸತಕ್ಕ ಬಗ್ಯೆ ಹಾಲಿ ಜಾರಿಯಲ್ಲಿರುವ ತಮಾಂ ರೂಲ್ಸುಗಳನ್ನೂ ರದ್ದುಮಾಡಿ ಈ ಕೆಳಗೆ ಬರುವ ತಿದ್ದುಪಾಟಾದ ರೂಲ್ಸ್ ಯಾನೆ ನಿಬಂಧನೆಗಳು ಮೈಸೂರು ಸರ್ಕಾರದವರಿಂದ ಮಂಜೂರಾತಿಯನ್ನ ಹೊಂದಿ ಸರ್ವರ ತಿಳುವಳಿಕೆ ಬಗ್ಯೆ ಫಾಯಿಷ್ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜು ಡಿಸ್ಟ್ರಿಕ್ಟು ಛಾರ್ಜುಳ್ಳ ಫಾರೆಷ್ಟು ಆಫಿಸರಿಂದಾಗಲಿ, ಡೆಪ್ಯುಟಿಕಮ್ಮಿಷನರವರಿಂದ ಮೊಕರರ್ಮಾಡಲ್ಪಟ್ಟ ಇತರ ಆಫಿಸರಿಂದಾಗಲಿ ನಡಿಸಲ್ಪಡತಕ್ಕದ್ದು.

2. ಚಡದರಖಾಸ್ತುದಾರನು ಖರೀದಿದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ಉಂಟಾದರೆ ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದಿದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪಸೀಲು ನಮೂದಿಸಿರತಕ್ಕ ಸ್ಥಳಕ್ಕೆ ಎದುರಾಗಿ ರುಜು ಮಾಡತಕ್ಕದ್ದು. ಹಾಗೆ ರುಜುಮಾಡೋಣದರಿಂದ ಲಾಟನ್ನು ಆ ಮನುಷ್ಯನು ಖರೀದಿಗೆ ತೆಗದುಕೊಂಡದ್ದು ಕಬೂಲ್‌ಪಟ್ಟಂತೆಯೇ ತಿಳಿಯತಕ್ಕದ್ದು.

II. ಮೊಬಲಗು ಪಾವತಿಯ ಕ್ರಮ.

4. ಹರಾಜಾದಕೂಡ್ಲೆ ಖರೀದಿದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದ್‌ನಿಃ ಒಂದು ಯಾದಿಯನ್ನೂ ಮತ್ತು ಡಿಪಾಜಿಟ್ಟು ತರೀಕು ಒಟ್ಟು ಮೊಬಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆ ಇಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ ತಾಲ್ಲೂಕು ಖಜಾನೆಯ ಫಾಸಲೆಯನ್ನು ಆಲೋಚನೆಯಲ್ಲಿತಂದು ಹರಾಜು ತಾರೀಖು ಲಾಗಾಯಿತು ಸಂದರ್ಭಾನುಸಾರ 3ನೇ ಯಾ 5ನೇ ದಿನದ ಒಳಗಾಗಿಯೇ ಕೂಡಲೆ ಪಾವತಿ ಮಾಡಲಿಕ್ಕೆ ಒಂದು ಲೆಟರಾಫ್ ಅಡ್ವಯಿಸ್ ಯಾನೆ ಮೇಲ್‌ಕಾಗದವನ್ನೂ ಸುದಾ ಪ್ರತಿ ಖರೀದಿದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರಿ ಆಫಿಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದಿಯನ್ನ ಹರಾಜಾದ ಸ್ಥಳದಲ್ಲಿ ಖಜಾನೆಯಿದ್ದರೆ ತಕ್ಷಣವೇ ಫಾರೆಷ್ಟು ಆಫಿಸರರ ಬಳಿ ಹಾಜರ್ಮಾಡಬೇಕು, ಹಾಗೆ ಇಲ್ಲದಿದ್ದರೆ ನಿಷ್ಕರ್ಷೆಯಾದ ಮೇರಿಗೆ ಹರಾಜು ತಾರೀಖು ಲಾಗಾಯಿತು 5ನೇ ಅಥವಾ 8ನೇ ದಿವಸ ಪೂರೈಸುವದರ ಒಳಗಾಗಿ ಸದರೀ ರಶೀದಿಯನ್ನ ಫಾರೆಷ್ಟು ಆಫಿಸರರ ಬಳಿ ಹಾಜರ್ಮಾಡತಕ್ಕದ್ದು. ಫಾರೆಷ್ಟು ಆಫಿಸರರು ಆ ರಶೀದಿಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈನ್ಮಾಡತಕ್ಕದ್ದು. ಯಾವ ಖರೀದಿದಾರನಾಗಲಿ ಈ ನಿಬಂಧನೆಗೆ ತಪ್ಪಿನಡದರೆ ಅಂಥಾ ತಪ್ಪಿತಸ್ಥನಿಂದ ಖರೀದಿಮಾಡಲ್ಪಟ್ಟಿದ್ದ ಬಿದರು ವ ಚವುಬೀನೆಯನ್ನು ಸಂಪೂರ್ಣವಾಗಿಯೇ ಆಗಲಿ ಯಾ ಅದರ ಪೈಕಿ ಒಂದು ಭಾಗವನ್ನಾಗಲಿ ಮರಳಿ ಹರಾಜು ಮಾಡ್ಸಲಿಕ್ಕೆ ಫಾರೆಷ್ಟು ಆಫಿಸರರಿಗೆ ಯಖ್ತಿಯಾರೀ ಇರತಕ್ಕದ್ದು. ಹಾಗೆ ಮರಳಿ ಹರಾಜು ಮಾಡೋಣದರ ದೆಶೆಯಿಂದ ಉಂಟಾಗುವ ನಷ್ಟಕ್ಕೆ ಅವ್ವಲ್ ಖರೀದಿದಾರನೇ ಗುರಿಯಾಗಿರತಕ್ಕದ್ದು. ಪರಂತು ಎರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರಹನಾಗುವದಿಲ್ಲವು. ಹಾಂಗೆ ತಪ್ಪಿಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

5. ಹರಾಜಿನಲ್ಲಿ ತೆಗೆದುಕೊಳ್ಳಲ್ಪಟ್ಟ ಪೂರಾ ತೇದಾದಿನ ಮೊಬಲಗು ಹರಾಜು ತಾರೀಖುಲಾಗಾಯಿತು (30) ದಿವಸಗಳ ವಳಗಾಗಿಯೇ ಆಗಲಿ ಅಥವಾ ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್‌ರವರ ವಿಶೇಷ ಅಪ್ಪಣೇ ಮೇರೆ ಹರಾಜ್ ತಾರೀಖು ಲಾಗಾಯಿತು 90 ದಿವಸಗಳಿಗೆ ಅತಿಕ್ರಮಿಸದಂತೆ ದುಸರೇ ವಾಯಿದೆ ವಳಗೆ ಯಾವಾಗಲಾದರೂ ಆಗಲಿ ಪಾವತಿ ಮಾಡಲ್ಪಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಇಟ್ಟ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು. ಮತ್ತು ಖರೀದಿ ಮೊಬಲಗು ಪಾವತಿಮಾಡಲ್ಪಡದಂಥಾ ಯಾವ ನಾಟಾ ಯಾ ಬಿದರುಗಳು ಪುನಹ ವಿಕ್ರಯಿಸಲ್ಪಡತಕ್ಕದ್ದು. ಸಲ್ಲಿಸಬೇಕಾದ ಮೊಬಲಗುಗಳು ವುಡ್‌ಯಾರ್ಡ್ ಇರತಕ್ಕಂಥಾ ತಾಲ್ಲೂಕು ಖಜಾನೆಗೆಯಾಗಲಿ ಡಿಸ್ಟ್ರಿಕ್ಟು ಖಜಾನೆಯಲ್ಲಿ ಆಗಲಿ ಪಾವತಿಮಾಡಲ್ಪಡಬೇಕೇಹೊರ್ತು ವರ್ತಕರು ಯಾವದಾದರೂ ಗವರ್ನಮೆಂಟ್ ಟ್ರೆಜರಿಯಲ್ಲಿ ಪಾವತಿ ಮಾಡುವದಕ್ಕೆ ಅಪ್ಪಣೆಕೊಡಲ್ಪಟ್ಟ ಸಂದರ್ಭದಲ್ಲಿ ವಿನಾ ಅನ್ಯಥಾ ಇತರ ಯಾವ ಖಜಾನೆಯಲ್ಲಿಯೂ ಪಾವತಿ ಮಾಡಲ್ಪಡಕೂಡದು.

III. ನಾಟಾವನ್ನು ವಪ್ಪಿಸೋಣ.

6. ನಾಟಾ ಖರೀದಿ ಮೊಬಲಗನ್ನು ಖರೀದಿದಾರನು ಪೂರಾ ಪಾವತಿಮಾಡಿ, "ಸಾಗಿಸಲಿಕ್ಕೆ ಲೈಸೆನ್ಸನ್ನು" ಫಾರೆಸ್ಟು ಆಫಿಸರಿಂದ ಪಡದ ಹೊರ್ತು ಯಾವ ನಾಟಾ ಆಗಲಿ ಖರೀದಿದಾರನಿಂದ ಸಾಗಿಸಲ್ಪಡಕೂಡದು.

IV. ವುಡ್‌ಯಾರ್ಡಿನ ಬಾಡಿಗೆ.

7. ಹಿಂದಿನ ಸೆಕ್ಷನ್‌ಗಳನ್ನನುಸರಿಸಿ ಖರೀದಿ ಮೊಬಲಗು ಪಾವತಿಮಾಡಲ್ಪಟ್ಟ ಚವುಬೀನೆ ವ ಬೊಂಬುಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳವಳಗಾಗಿಯಾಗಲಿ ಅಥವಾ ಪ್ರತಿ ಸಂಗತಿಯು ಸಂದರ್ಭಾನುಸಾರ ಫಾರೆಸ್ಟು ಆಫಿಸರರಿಂದ ಗೊತ್ತುಮಾಡಲ್ಪಡುವ (ಅಂದರೆ ಹರಾಜ್ ತಾರೀಖು ಲಾಗಾಯತು 90 ದಿನಗಳಿಗೆ ಅತಿಕ್ರಮಿಸದ) ಜಾಸ್ತೀ ವಾಯಿದೆಯಲ್ಲಿ ಆಗಲಿ ಯಾವಾಗಲಾದರೂ ವುಡ್‌ಯಾರ್ಡ್ ಬಾಡಿಗೆ ಯಿಲ್ಲದೇನೇ ಸಾಗಿಸಲ್ಪಡಬಹುದು. ಆದರೆ ಹರಾಜ್ ತಾರೀಖು ಲಾಗಾಯತು 90 ದಿವಸಗಳ ತರುವಾಯ ವುಡ್‌ಯಾರ್ಡಿನಲ್ಲಿ ನಿಲ್ಲಿಸಲ್ಪಟ್ಟರೆ ಅಂಥಾ ಚವುಬೀನೆ ಯಾ ಬೊಂಬುಗಳಿಗೆ ಹರಾಜ್ ತಾರೀಖು ಲಾಗಾಯತು ಖರೀದಿ ಮೊಬಲಗಿನ ಮೇಲೆ ಸಾಲಿಯಾನಾ ಶೇಕಡಾ 12ರ ಮೇರಿಗೆ ವುಡ್‌ಯಾರ್ಡ್ ಬಾಡಿಗೆಯನ್ನು ವಸೂಲ್ಮಾಡತಕ್ಕದ್ದು. ಸದರೀ ನಾಟಾ ಯಾ ಬೊಂಬುಗಳು ಹರಾಜ್ ತಾರೀಖು ಲಾಗಾಯಿತು 6 ತಿಂಗಳವಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿವಸಗಳ ವಾಯಿದೆಯಿಂದ ನೋಟಿಸ್ ಕೊಟ್ಟ ತರುವಾಯ ಅವು ಬಾಡಿಗೆ ಮತ್ತು ಖರ್ಚು ಮೊಬಲಗಿನ ವಸೂಲೀವುದ್ದಿಶ್ಯ ಹರಾಜನ್ನು ಕ್ರಮವಾಗಿ ಪ್ರಸಿದ್ಧಪಡಿಸಿ ಪಬ್ಲಿಕ್ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಪರಂತು ಮೊಬಲಗು ಪೂರ್ತಿಯಾಗಿ ಪಾವತೀ ಮಾಡುವದಕ್ಕೂ ಸರಕು ತಕ್ಷಣ ಸಾಗಿಸುವದಕ್ಕೂ ಹರಾಜ್ ಮೊಬಲಗಿನ ಪೈಕಿ ಬಾಕೀ ಯೇನಾದರೂ ವುಳದರೆ ಅದನ್ನು ಅವ್ವಲ್ ಖರೀದಿದಾರನಿಗೆ ಪಾವತಿ ಮಾಡುವದಕ್ಕೂ ವಳಪಟ್ಟಿರತಕ್ಕದ್ದು. ಅಂಥಾ ಖರೀದಿಯು ಪೂರ್ತಿಯಾಗುವದಕ್ಕೆ ಮುಂಚೆ ಅವ್ವಲ್ ಕ್ರಯದಾರನು ಬಾಕಿಯಾಗುವ ಬಾಡಿಗೆ ವ ಖರ್ಚು ಮೊಬಲಗನ್ನು ಪಾವತಿಮಾಡಿದರೆ ಆತನು ನಾಟಾ ವ ಬೊಂಬುಗಳನ್ನು ಸಾಗಿಸುವ ಬಗ್ಯೆ ಅವಕಾಶ ಕೊಡಲ್ಪಡತಕ್ಕದ್ದು. ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ಯವರಿಗೆ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಯಾವ ಸಂದರ್ಭದಲ್ಲಿಯಾದರೂ 3 ತಿಂಗಳ ಬಾಡಿಗೆಗೆ ಮೀರದ ಬಾಡಿಗೆ ಮೊಬಲಗನ್ನು ಅವರು ಮಾಫ್ ಮಾಡಬಹುದು.

V. ಸಾಗಿಸಲಿಕ್ಕೆ ಲೈಸೆನ್ಸ್.

8. ಡಿಸ್ಟ್ರಿಕ್ಟು ಇನ್‌ಛಾರ್ಜ್ ಫಾರೆಸ್ಟು ಆಫಿಸರವರಿಂದ ಸೈನ್ ಮಾಡಲ್ಪಟ್ಟ "ಚವುಬೀನೆ ವ ಬೊಂಬುಗಳನ್ನು ಸಾಗಿಸಲಿಕ್ಕೆ ಲೈಸೆನ್ಸ್" ಪಡದ ಹೊರ್ತು ವುಡ್‌ಯಾರಡಿನಿಂದ ಯಾವ ನಾಟಾ ಆಗಲಿ ಸಾಗಿಸಲ್ಪಡಕೂಡದು; ಲೈಸೆನ್ಸ್‌ದಾರರೆಲ್ಲರೂ ಸದರೀ ಲೈಸೆನ್ಸುಗಳಲ್ಲಿ ನಮೂದಿಸಲ್ಪಟ್ಟ ಷರತ್ತು ಪ್ರಕಾರ ನಡದುಕೊಳ್ಳಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವ್ಯಾಪಾರಸ್ಥನಾಗಲಿ ಯಾ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸಿನ ಷರತ್ತುಗಳಿಗೆ ಅತಿಕ್ರಮಿಸಿ ನಡದರೆ ಅಥವಾ ಕೊಟ್ಟ ವಾಯಿದೆ ಪೂರೈಸಿದ ವಪನೆ ತನ್ನ ಲೈಸೆನ್ಸನ್ನು ವಾಪಸ್‌ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟು ರೂಲಸ್‌ಗಳ 40ನೇ ಸೆಕ್ಷನಿನಲ್ಲಿ ವಿಧಿಸೋಣಾದ ಷರತ್ತುಗಳ ಪ್ರಕಾರ ಕ್ರಮ ನಡಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸುಗಳೂ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ವಿಶೇಷ ಮತ್ತು ಜರೂರಿಯಾತ್ ಕಾರಣಗಳ ಮೇಲೆ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂವಿನಾ ಜಾಸ್ತಿ ವಾಯಿದೆಯು ಕೊಡಲ್ಪಡತಕ್ಕದ್ದಲ್ಲವು.

VI. ವಟ್ಟುವಿಷಯ.

9. ಫಾರೆಸ್ಟು ಆಫಿಸರವರು, ಡೆಪ್ಯುಟಿ ಕಮ್ಮಿಷನರವರ ಯಾ ಅವರಿಂದ ನೇಮಿಸಲ್ಪಟ್ಟ ಇತರ ಆಫಿಸರರ ಅನುಮತಿಯೊಡನೆ ಯಾ ಅವರುಗಳು ಹಾಜರಿಲ್ಲದ ಪಕ್ಷಕ್ಕೆ ತಮ್ಮ ಸ್ವಂತ ಜವಾಬ್‌ದಾರೀ ಮೇಲೆ ಯಾವ ಕಾಲದಲ್ಲಿ ಆಗಲಿ ವುದ್ದೇಸಿಸಲ್ಪಟ್ಟ ಖರೀದಿದಾರರಿಗೆ ಯಾವಸಬಬನ್ನೂ ತಿಳಿಸದೇನೇ ಹರಾಜನ್ನು ಮನ್ನಾ ಮಾಡುವದಕ್ಕೆ ಸ್ವತಂತ್ರರಾಗಿರತಕ್ಕದ್ದು.

ತಾರೀಖು 15ನೇ ಮಾರ್ಚಿ 1895.

ನಂ. 15230—R. F. 155—92.—ಮೈಸೂರು ದೇಶದಲ್ಲಿ ಬಹಿರಂಗವಾದ ಹರಾಜು ಮೂಲಕ ಸಂದಲ್ ಬಿಕರೀ ಮಾಡುವ ಬಗ್ಯೆ ಹಾಲಿಜಾರೀಲಿರುವ ತಮಾಂ ರೂಲ್ಸುಗಳನ್ನು ರದ್ದುಮಾಡಿ ಇದರಡಿ ಬರುವ ತಿದ್ದುಪಾಟಾದ ರೂಲ್ಸ್ ಯಾನೆ ನಿಬಂಧನೆಗಳು ಮೈಸೂರು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಯೆ ಫಾಯಿಷ್ಮಾಡಲ್ಪಟ್ಟಿರುತ್ತವೆ:—

I. ನಡೆವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಯಿತರ ಆಫಿಸರಿಂದ ಆಗಲೀ ಶೇರಿ ಫಾರೆಸ್ಟ್ ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಚಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ, ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪಶೀಲು ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜುಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟ್ ಆಫಿಸರವರಿಂದ ತೂಕಾ ಮಾಡಲ್ಪಡುವ ತನಕ, ಹೀಗೆ ವಿಕ್ರಯಿಸಲ್ಪಟ್ಟ ಲಾಟು, ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತೀ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದುನಿಸಿ ಒಂದು ಯಾದಿಯನ್ನು ಮತ್ತು ಡಿಪಾಜಿಟ್ಟು ತರೀಕು ಒಟ್ಟು ಮೊಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ, ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ್ ಆಫ್ ಅಡ್ವೈಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫೀಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದೀಯನ್ನ 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟ್ ಆಫೀಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟ್ ಆಫೀಸರರು ಆ ರಸೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕ ಸೈ ಮಾಡತಕ್ಕದ್ದು. ಯಾವ ಖರೀದೀದಾರನಾಗಲೀ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲೀ ಯಾ ಅದರ ಪೈಕಿ ಒಂದು ಭಾಗವನ್ನಾಗಲೀ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟ್ ಆಫೀಸರರಿಗೆ ಯಿಖ್ತಿಯಾರಿಯಿರತಕ್ಕದ್ದು. ಹಾಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು. ಹಾಂಗೆ ತಪ್ಪಿ ಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿಮಾಡುವ ಗಿರಾಕಿಗಳ ಅನುಕೂಲ್ಯಕ್ಕೋ [illegible]ಘಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ ‘‘ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫೀಸರ [illegible]ನರಿಗೆ’’ ಮುಂದಾಗಿ ಕಳುಹಿಸಲ್ಪಡುವ ಕರೆನ್ಸೀ ನೋಟುಗಳು ಡಿಪಾಜಿಟ್ ತರೀಕ ಅಂಗೀಕರಿಸಲ್ಪಡುತ್ತೆ. ಅಲ್ಲದೆ ಸದರೀ ಆಫೀಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತೀ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಶೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲೀ ಅಥವಾ ಇತರರಿಗೆ ಯಿಲ್ಲದ ರಿಯಾಯತೀ ತೋರಿಸುವದಕ್ಕಾಗಲೀ ಅಥವಾ ಅವರುಗಳನ್ನು ಈ ರೂಲ್ಸಿಗೆ ಒಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟು ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫೀಸರರು, ಹಾಜರಾದ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟು ಆಫೀಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ಯವರಿಗೆ ತಿಳಸತಕ್ಕದ್ದು. ಮತ್ತು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ವುಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತೀ ಮಾಡಲ್ಪಡತಕ್ಕದ್ದು. ಹಾಗೆ ಪಾವತೀ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು. ಮತ್ತು ಅದು, ಪಾವತೀ ಮಾಡಲ್ಪಡಬೇಕಾದ ಮೊಬಲಗು ಪೈಕೀ ಒಂದು ಭಾಗವನ್ನಾಗಿ ಯಂದಿಗೂ ಯಣಿಸಲ್ಪಡಕೂಡದು. ಹಣ ಪಾವತೀಯಾಗದೇ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠಿ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ, ಖರೀದೀದಾರರು ಇತರ ಯಾವ ಗವರ್ನ್‌ಮೆಂಟ್ ಟ್ರೆಜರೀಯಲ್ಲಿ ಹಣ ಪಾವತೀ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ, ಅನ್ಯಥಾ ಮತ್ತ್ಯಾವ ಖಜಾನೆಯಲ್ಲಿಯೂ ಪಾವತೀ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿಒಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರೀಯಲ್ಲಿ ಪಾವತಿಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರೀ ಯಿಂದ ಪಡದಂಥಾ ರಶೀದಿಯು ಹಣಪಾವತೀ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫೀಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫೀಸರವರು ಆಯಾಸಂಬಂಧಪಟ್ಟ ಫಾರೆಸ್ಟ್ ಆಫೀಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಜಮಾ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟಿಯಿನ್ಸ್ಪೆಕ್ಟರ್ ಜನರಲ್‌ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕಾ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟ್ ಆಫೀಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರುಹಾಜರೀಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫೀಸರಿಂದಾಗಲಿ ಖುದ್ದು ತೂಗಿಸಲ್ಪಡ

ತಕ್ಕದ್ದು. ಪ್ರತಿ ಕೋಠೀಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕಾ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನ ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕಾ ನಡಿಸುವ ಆಫೀಸರರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ವಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದಿದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀದಿದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫಿಸರವರು ಅಥವಾ ತೂಗಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫಿಸರು ತಮಿಗೆ ಅನುಕೂಲವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆ ಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದಿದಾರನು ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕಾ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದಿದಾರನಿಂದ ವಹಿಸಲ್ಪಡತಕ್ಕದ್ದು. ಯಾವ ಖರೀದಿದಾರನಾಗಲಿ ಮುಂಚಿತವಾಗಿ ಸಂದಲ್‌ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್‌ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದಿದಾರನಿಗೆ ಮರಗಳನ್ನ ಫಾರೆಸ್ಟ್ ಆಫಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫಿಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವರಿವಿಗೂ ಯಾವ ಖರೀದಿದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟ ಛಾಪಾ ಹಾಕಲ್ಪಟ್ಟ ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು; ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ವುತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಮಿಲ್ವಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್‌ವಂದಕ್ಕೆ 8 ಆಣೆಗಳ ಮೇರೆ ಕೋಠೀಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳು ವಾಯಿದೇ ನೋಟಿಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು, ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್‌ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡುಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್‌ಸ್ಪೆಕ್ಟರ್ ಜನರಲ್‌ಯವರು, ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜು ಆಫಿಸರಿಂದ ದಸ್ತಖತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡೆಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನ ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತೀ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರವರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಒಟ್ಟು ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಶೀಮಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್‌ಛಾರ್ಜು ಫಾರೆಸ್ಟ್ ಆಫಿಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರವರ ಯಾ ಅವರಿಂದ ನೇಮಿಸಲ್ಪಡುವ ಆಫಿಸರರ ಮಂಜೂರಾತಿನಿಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜು ಫಾರೆಸ್ಟ್ ಆಫಿಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗಮಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೀ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ಹುಕುಂ ಬಮೋಜೀಬ್,
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 19] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಮೇ ತಾ|| 23, ಸನ್ 1895.

೨ನೇ ಭಾಗ.

ಇಂಡ್ಯಾಗವರ್ನ್‌ಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಪಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ.)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ ಪೋರ್ಟರು ಬ್ರದರಸ್‌ರ ಡಿಟ್ಟೋ	,, 170
1	ಮದ್ರಾಸ್ ಒಕ್ಸರವರ ಡಿಟ್ಟೋ	,, 250
1	ಡಿಟ್ಟೋ ಡಿಟ್ಟೋ ಡಿಟ್ಟೋ	,, 188
1	ಡಿಟ್ಟೋ ಬೋರ್ರ್ಯಾಮ್‌ರವರ ಡಿಟ್ಟೋ	,, 85

ಖರೀದಿದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ, ಅಸಲ್ ಖರೀದಿಯಲ್ಲಿ ಶೇಕಡಾ $12\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

1895—96ನೇ ವರುಷಕ್ಕಾಗಿ ಭಂಗಾರದ ಗಣಿಯಲ್ಲಿ ಇರತಕ್ಕ ಬೀರು ಅಂಗಡಿ ಹರಾಜು ನೋಟಿಸ್.

ನಂಬರ್ 4776—77, ತಾರೀಖು 14ನೇ ಮೇ 1895.

1. ಕೋಲಾರ ಡಿಸ್ಟ್ರಿಕ್ಟು ಬವುರಿಂಗಪೇಟೆ ತಾಲ್ಲೂಕು ಭಂಗಾರದ ಗಣಿಯಲ್ಲಿ ಇರತಕ್ಕ ಬೀರು ಮತ್ತು ಪೋರ್ಟರ್ ಅಂಗಡಿಯಲ್ಲಿ 1895ನೇ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1896ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಬಟ್ಟು ಸ್ವತಂತ್ರದ ಹಕ್ಕನ್ನು ಸದರೀ ಬವುರಿಂಗಪೇಟೆ ಮುಸಾಫರ್ ಬಂಗ್ಲೆಯಲ್ಲಿ ಸನ್ 1895ನೇ ಇಸವಿ ಜೂನ್ 8ನೇ ತಾರೀಖಿನಲ್ಲಿ ಡೆಪ್ಯುಟಿ ಕಮ್ಮಿಷನರ್ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರು ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿಧೆ.

2. ಹರಾಜಿನಲ್ಲಿ ಪ್ರತಿ ಸವಾಲುದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ 300 ರೂಪಾಯಿ ಯಾ ಹರಾಜು ಮಾಡತಕ್ಕ ಆಫಿಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಸದರೀ ಅಂಗಡಿಗೆ ಯಾರ ಚಡದರಖಾಸ್ತು ಅಂಗೀಕರಿಸಲ್ಪಡುತ್ತೋ ಅಂಥಾವರಿಗೆ ಆ ಅಂಗಡಿಯು ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ವುದಹರಿಸದೇ ಮಂಜೂರ್ ಯಾ ತಳ್ಳಿಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡದು ಇರುವ ಅವರ ತರಫ್ ಮುತಾಲೀಕರನ್ನ ಕಳುಹಿಸಬೇಕು.

3. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ. ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರವರು ತಕ್ಷಣವೇ ಆ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣಿ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲೆ 2ನೇ ಕಲಂನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣಿ ಮೊಬಲಗು ಸರಕಾರಕ್ಕೆ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜಾಗುವದಲ್ಲದೆ ಆತನು ಈ ಅಂಗಡಿಗೆ ಸವಾಲ್ ಮಾಡಕೂಡದು.

4. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿ ನಿಂತು ಮೇಲಿನ 2 ವ 3ನೇ ಕಲಂಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜು ತಾರೀಖು ಲಾಗಾಯತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟಿರುವ ಅಂಗಡಿಯ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣಿ ಕಟ್ಟಿ ವಿಧಾಯಕವಾದ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸನ್ನ ಪಡಿಯತಕ್ಕದ್ದು, ಮತ್ತು ಒಂದು ಎದುರು ಒಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರಿ ಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸ್‌ದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

5. ಮೇಲಿನ 4ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರಿ ಮೇಲೆ ನಡಿಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ ಮತ್ತು ದುಸರೇ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಬಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದರಲ್ಲಿ ಚಡಸವಾಲ್‌ದಾರನು ಕೊಡಬೇಕಾದ ಬಟ್ಟು ಮೊಬಲಗು ಜಾತಾ ಬಾಕಿ ಉಳಿಯುವದರನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನ ವಜಾಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರಕಾರಕ್ಕೇನೇ ಜಮಾ ಮಾಡಿಕೊಳ್ಳತಕ್ಕದ್ದು.

6. ಮೇಲಿನ 4ನೇ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ಬೆಂಗಳೂರು ಅಥವಾ ನೀಲಗಿರಿಯಲ್ಲಿ ಕಾಯಿಸಲ್ಪಟ್ಟ ಕಂತ್ರಿಬೀರು ಯಾ ಪೋರ್ಟರನ್ನು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಸದರೀ ಬಟ್ಟು ಸ್ವತಂತ್ರದ ಹಕ್ಕನ್ನು ಪಡದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗನ್ನು ಬವುರಿಂಗಪೇಟೆ ತಾಲ್ಲೂಕು ಖಜಾನೆಗೆ 1895ನೇ ಇಸವಿ ಜುಲೈ ಮಾಹೆ ಲಾಗಾಯಿತು ಸರಿಯಾದ ತಿಂಗಳುಗಟ್ಲೇ ಖಿಸ್ತು ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತೂ ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಪಾವತಿಯಾಗತಕ್ಕದ್ದು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ 2 ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡ

ತಕ್ಕದ್ದು. ಸದರೀ 20ನೇ ತಾರೀಖಿನೊಳಗಾಗಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮ್ಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡೀ ಸಹ ಬಾಕೀ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಗುತ್ತಿಗೇ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫೀ, ವಜಾ ಮುಂತಾದ್ದನ್ನ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(3) ಲೈಸೆನ್ಸ್‌ದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೂ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(4) ಲೈಸೆನ್ಸ್‌ದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ್ ಬ್ರೂಯಿರಿಯಿಂದ ಬವರಿಂಗ್‌ಪೇಟೆ ತಾಲ್ಲೂಕು ಅಮಲ್ದಾರ್‌ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟ್ರ್ ಆಫ್' ಅಡ್ವೈಸ್ ಎಂಬ ರಹದಾರಿಯನ್ನ ಅಮಲ್ದಾರ್‌ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಫೀಸಿಗೆ ರವಾನಿಸಲ್ಪಡತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ದರದ ಮೇರೆಗೆ ಹಾಸಲ್ ಮೊಬಲಗು ಗೊತ್ತಾದ ನಮೂನೆಯಲ್ಲಿ ಪಾವತಿಆದ ನಂತರ ಅಮಲ್ದಾರ್‌ರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡದ ಇತರ ಆಫೀಸರ್ರು ಸರಕನ್ನ ಲೈಸೆನ್ಸ್‌ದಾರನು ಗಣಿಯಲ್ಲಿ ತನ್ನ ಅಂಗಡಿಗೆ ಒಯ್ಯಲು ತಮ್ಮ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(5) ಲೈಸೆನ್ಸುದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಖ್ಖ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ವದಗಿಸಿಕೊಳ್ಳತಕ್ಕದ್ದು.

(6) ಲೈಸೆನ್ಸುದಾರನು ಹಾಲೀ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(7) ಬಾಕೀ ಕರಾರುಗಳು ವ ಷರತ್ತುಗಳು ಇದಕ್ಕೆ ಲಗತ್ತಾದ ಲೈಸೆನ್ಸಿನಲ್ಲಿ ವುದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸುದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ವುದಾಶೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗೆಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸುದಾರನಿಗೆ ಅಂಥಾ ಪ್ರತಿ ಒಂದು ವುಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನ ರದ್ದು ಮಾಡಿ ಸದರೀ ಲೈಸೆನ್ಸುದಾರನ ಜವಾಬ್ದಾರೀ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1895ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲು ಸದರೀ ಲೈಸೆನ್ಸುದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ 'ಪೂರಾಕಾಲದ ಗುತ್ತಿಗೇ ಹಣವು ಕೂಡಲೆ ಪಾವತಿಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

8. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನ ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಕ್ಕೀರಿಗೆ ಲೈಸೆನ್ಸುದಾರರನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಎಲ್. ರಿಕ್ಕೆಟ್ಸ್,
ಮೈಸೂರು ಶೀಮೆಯ ಎಕ್ಸೈಜ್ ಕಮ್ಮಿಷನರ್.

ಬೀರ್ ಲೈಸೆನ್ಸ್.

ಕಂತ್ರಿ ಬೀರನ್ನು ವ ಪೋರ್ಟರನ್ನು ಚಿಲ್ಲರೆಯಾಗಿ ಮಾರುವದಕ್ಕೆ ಲೈಸೆನ್ಸ್ (1881ನೇ ಇಸವಿ XXIIನೇ ನಂಬರ್ ಆಕ್ಟಿನ 12 ವ 13ನೇ ಸೆಕ್ಷನ್‌ಗಳನ್ನನುಸರಿಸಿ ಕೊಡಲ್ಪಟ್ಟದ್ದು.)

1. ರಿಜಿಸ್ಟರ್ ನಂಬರ್.
2. ಲೈಸೆನ್ಸ್‌ದಾರನ ಹೆಸರು.
3. ಮಾರುವವನ ಹೆಸರು.
4. ಸ್ಥಳ.

ಬೀರ್ ಮತ್ತು ಪೋರ್ಟರನ್ನು ಕೋಲಾರ ಡಿಸ್ಟ್ರಿಕ್ಟು
ನಂಬರ್ ಅಂಗಡಿಯಲ್ಲಿ ಚಿಲ್ಲರೆಯಾಗಿ ಮಾರುವದಕ್ಕೋಸ್ಕರ
ನಲ್ಲಿರುವ ಗೆ
ಈ ಕೆಳಗಿನ ಷರತ್ತುಗಳ ಪ್ರಕಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಿ. ಮಾದಯ್ಯನವರಾದ ನಾವು ಇದರಿಂದ ಅಧಿಕಾರವನ್ನ ಕೊಟ್ಟಿರುತ್ತೇವೆ.

1. ಈ ಲೈಸೆನ್ಸ್ ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ. ಮತ್ತು ಇದರಲ್ಲಿ ನಮೂದಿರತಕ್ಕವರು ಶಿವಾಯಿ ಮತ್ಯಾವ ಜನರಿಗೂ ಇದರ ಆಧಾರದಮೇಲೆ ಕಾರ್ಯಗಳನ್ನ ನಡಿಸಲಿಕ್ಕೆ ಅಧಿಕಾರ ವಿರುವದಿಲ್ಲ.

2. ದುಕಾನ್‌ದಾರನು ಲೈಸೆನ್ಸ್‌ದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ—ಆ ಷರತ್ತುಗಳು ಯಾವವೆಂದರೆ:—

3. ಅವನು ಬೀರ್ ಮತ್ತು ಪೋರ್ಟರನ್ನು ಮಾತ್ರವೇ ಪೀಪಾಯಿನಿಂದಾಗಲಿ ಅಥವಾ ಬುಡ್ಡಿಗಳಿಂದಾಗಲಿ ಅಂಗಡಿಯಲ್ಲಿ ಅಥವಾ ಹೊರಗಡೆಯಲ್ಲಿ ಕುಡಿಯಲಿಕ್ಕೆ ಮಾರಬೇಕೇ ಹೊರತು ಇತರ ಯಾವ ತರಹೇದ ಬೀ

ರನ್ನಾಗಲಿ ಪೋರ್ಟರನ್ನಾಗಲಿ ಮಾರಕೂಡದು. ಮತ್ತು ಅಂಗಡಿಯ ಹೊರಗಡೆಯಲ್ಲಿ ಕುಡಿಯಲಿಕ್ಕೆ ಮಾರುವ ಸಂದರ್ಭದಲ್ಲಿ ಎಕ್ಸೈಜ್ ಇಲಾಖೆಯಿಂದ ಕೊಡಲ್ಪಡುವ ರಹದಾರಿಗಳ ಆಧಾರದಮೇಲೆ ಮಾರತಕ್ಕದ್ದಲ್ಲದೆ ಸದರೀ ರಹದಾರಿಯಲ್ಲಿನ ಷರತ್ತುಗಳಂತೆ ಮಾರುವವನೂ ಮತ್ತು ಕೊಂಡುಕೊಳ್ಳುವವನೂ ಈ ವುಭಯತ್ರರೂ ಖಂಡಿತವಾಗಿ ನಡೆದುಕೊಳ್ಳಬೇಕು. ಮತ್ತು ಅಂಥಾ ರಹದಾರಿಗಳ ಆಧಾರದಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಎರಡು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ಎಂಟು ಶೇರುಗಳಿಗಿಂತಾ ಹೆಚ್ಚಾಗಿರಕೂಡದು.

4. ಅವನು ಪ್ರತ್ಯಕ್ಷವಾಗಿ ಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ವ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯೂರೋಪಿಯನಿಗೂ ಅಥವಾ ನಾನ್ ಕಮ್ಮಿಷನ್ಡ್ ಆಫೀಸರಿಗಾದರೂ, ಪ್ರೈವೇಟ್ ಸೋಲ್ಜರಿಗಾದರೂ, ಸದರೀ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಇವನು ಅವಕಾಶ ಕೊಡಕೂಡದು. ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾಹತ್ತಿ ಬೀಳುವಂತೆ ಮಾಡಕೂಡದು, ಮತ್ತು ಅವರು ಅಕ್ರಮವಾಗಿ ನಡೆಯುವಂತೆಯೂ ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಿಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂತವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂತವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು, ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂ ಕೂಡದು. ಮತ್ತು ಗುಮಾನಿ ನಡತೆಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೊಲೀಸ್ ಆಫಿಸರ್ ಯಾ ಮ್ಯಾಜಿಸ್ಟ್ರೇಟರಿಗೆ ತಿಳಿಸಬೇಕು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೊಲೀಸ್ ಆಫಿಸರಿಗೆಯಾಗಲಿ, ರೈಲ್ವೆ ನವುಕರನಿಗೆಯಾಗಲಿ, ಎಕ್ಸೈಜ್ ಆಫಿಸರಿಗೆಯಾಗಲಿ ಬೀರು ಅಥವಾ ಪೋರ್ಟರನ್ನು ಮಾರಲೂಕೂಡದು.

5. ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇ ಮೇಲೆ ತನ್ನ ಹೆಸರು, ಮಾರುವವನಹೆಸರು, ಅಂಗಡಿ ನಂಬರ್ ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರೆಸಿ ಇಡಬೇಕು.

6. ಅವನು ಯಾವ ದಿನಸು ಯಾ ನಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗದುಕೊಳ್ಳಕೂಡದು. ಮತ್ತು ತಾನು ಮಾರಿದ ಬೀರು ಮತ್ತು ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ದರ ಒಂದು ರೂಪಾಯಿನ ಲಾಗಾಯತು ಒಂದು ರೂಪಾಯಿ ನಾಲ್ಕಾಣೆ ವರಿವಿಗೆ ನಗದಾಗಿ ಹಣ ತೆಗದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರ ಖರೀದಿ ವಸೂಲ್ಮಾಡಬೇಕು.

7. ಈ ಲೈಸೆನ್ಸ್ ಪ್ರಕಾರ ಮಾರುವ ಪ್ರತಿ ಒಂದು ಹಾಗ್ಸ್ ಹೆಡ್ಡಿಗೆ ಬೀರ್ ಮತ್ತು ಪೋರ್ಟರ್‌ನಲ್ಲಿ ಮಾಲ್ಟ್ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಶೇಕಡಾ 75ರಷ್ಟನ್ನೂ, ಕೆಂಟು ದೇಶದಲ್ಲಿ ಬೆಳದಂಥಾ ಒಳ್ಳೇದಾಗಿ ಇರುವ ಮೂರು ಪೌನ್ ಹಾಪ್ಸ್ ಎಂಬ ಹುವ್ವುಗಳನ್ನೂ ಶೇರಿಸಿರಬೇಕು. ಮತ್ತು ಮೇಲ್ಕಂಡ ಬೀರು ವ ಪೋರ್ಟರನ್ನು ಭಟ್ಟಿ ಕಾರಖಾನೆಯಿಂದ ಖರೀದಿಗೆ ತಂದ ಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇಹೊರ್ತು ನೀರಿನಿಂದ ಮಿಶ್ರಪಡಿಸಕೂಡದು. ಯಾ ಇತರ ಪದಾರ್ಥಗಳನ್ನ ಬೆರೆಸಿ ಕೆಡಿಸಕೂಡದು. ಇಂಥಾ ಬೀರ್ ಮತ್ತು ಪೋರ್ಟರ್‌ನುಳ್ಳ ಒಂದು ಸೀಸಾಯಿನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದಾಗ ಅಜಮಾಯಿಷಿ ಮಾಡುವದಕ್ಕಾಗಿ ಭಟ್ಟಿ ಕಾರ್ಖಾನೆಯಿಂದ ಕಳುಹಿಸಬೇಕು.

8. ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಿ ಯಾದರೂ ಅಂಗಡಿಯೊಳಗೆ ಪ್ರವೇಶಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶಕೊಡಬೇಕು, ಮತ್ತು ಲೈಸೆನ್ಸನ್ನೂ ಅಂಗಡಿಯಲ್ಲಿ ಅವಶ್ಯಕವಾಗಿ ಲೈಸೆನ್ಸದಾರನಿಂದಲೂ, ವ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು. ಮತ್ತು ಈ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾವಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೀನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನೂ ನಾಶಪಡಿಸತಕ್ಕದ್ದು.

9. ಸದರೀ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ ಮೇಲೆ ಹೊರ್ತು ಬೆಳಿಗ್ಯೆ 6 ಘಂಟೆಗೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

10. ಕಮ್ಮಿಸೇರಿಯಾಟ್ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು, ಕೋಲಾರಕ್ಕೆ ಶೇರಿದ ಭಂಗಾರದ ಗಣಿಗಳಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

11. ಸದರೀ ಅಂಗಡಿಗೆ ವೊಂದೇ ಬಾಗಲಿರಬೇಕು. ಹಿಂಭಾಗದಲ್ಯಾದರೂ ಕೊನೆ ಭಾಗಗಳಲ್ಯಾದರೂ ಕಿಟಕಿ ಇಡಕೂಡದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಶೇರಿದ ಹಾಗೆ ಎರಡನೇ ಕೊಠಡಿ ತೆರೆದಿರಕೂಡದು.

12. ಮೇಲಿನ ಷರತ್ತು ಮತ್ತು ನಿಬಂಧನೆಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ, ಲೈಸೆನ್ಸದಾರನು ವೊಬ್ಬ ಮ್ಯಾಜಿಸ್ಟ್ರೇಟರ ಮುಂದೆ ತಪ್ಪು ಆಪಾದಿಸಲ್ಪಟ್ಟ 1881ನೇ ಇಸವಿ XXIIನೇ ಆಕ್ಟು ಅನುಸರಿಸಿ ಜುರ್ಮಾನೆ ತೆರುವದಕ್ಕಾಗಲಿ, ಸದರೀ ಆಕ್ಟಿನ 13ನೇ ಸೆಕ್ಷನ್ ಅನುಸರಿಸಿ ಲೈಸೆನ್ಸ್ ಕಳಕೊಳ್ಳುವದಕ್ಕಾಗಲಿ ಅಥವಾ ಈ ಎರಡಕ್ಕಾಗಲಿ ಗುರಿಯಾಗತಕ್ಕದ್ದು.

13. ಈ ಲೈಸೆನ್ಸ್ 189 ನೇ ಇಸವಿ ನೇ ತಾರೀಖು ವರಿವಿಗೆ ಜಾರಿಯೇ ಹೊರ್ತು ಅನಂತರವಲ್ಲ. ಆದರೆ ಇದು 1881ನೇ ಇಸವಿ XXIIನೇ ಆಕ್ಟಿನ 13 ವ 14ನೇ ಸೆಕ್ಷನ್‌ಗಳನ್ನನುಸರಿಸಿ ಯಾವಾಗಲಾದರೂ ವಾಪಸ್ ತರಿಸಿಕೊಳ್ಳಲ್ಪಡಬಹುದು. ಅಥವಾ ಬಿಟ್ಟು ಬಿಡಲ್ಪಡಬಹುದು

ಡೆಪ್ಯುಟಿ ಕಮ್ಮಿಷನರ್, ವ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟು,
ಕೋಲಾರ ಡಿಸ್ಟ್ರಿಕ್ಟು.

ಎದುರು ಒಡಂಬಡಿಕೆ.

ಈ ಕೆಳಗೆ ರುಜೂ ಮಾಡಿರುವ ಮೇಲ್ಕಂಡ ಲೈಸೆನ್ಸದಾರ ವ ಬಿಕರಿದಾರ ಮತ್ತು ಸದರೀ ಭಂಗಾರದ ಗಣಿಗಳ ಬಳಿ ಇರುವ ಬೀರ್ ಅಂಗಡಿಗೆ ಸಂಬಂಧಪಟ್ಟವರಾದ ನಾವು ನಮಿಗಾಗಿಯೂ ನಮ್ಮ ವಾರಸದಾರರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗಪಡೆದಂಥಾವರಿಗೋಸ್ಕರವೂ, ಇದರ ದೆಶಿಯಿಂದ, ಮೇಲ್ಕಂಡ ಲೈಸೆನ್ಸಿನಲ್ಲಿ ಬರೆಯೋಣಾದ, ಛಾಪಿಸೋಣಾದ, ವ ಹೇಳೋಣಾದ ಕರಾರುಗಳಿಗೂ, ಷರತ್ತುಗಳಿಗೂ ಒಪ್ಪಿರುತ್ತೇವೆ.

ತಾರೀಖಿನ ದಿನ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಆಫಿಸಿನಲ್ಲಿ ನಮ್ಮಗಳ ರೂಬರೂ ರುಜು ವ ಮೊಹರ್ ನೊಡನೆ ಒಪ್ಪಿಸಲ್ಪಟ್ಟಿರುತ್ತೆ.

ಲೈಸೆನ್ಸದಾರ್ ವ ಬಿಕರೀದಾರ್.

ಸಾಕ್ಷಿಗಳು.
1.
2.
3.

ವಿದ್ಯಾಭ್ಯಾಸದ ಇಲಾಖಾ.

ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಗಳು.

ಸನ್ 1895ನೇ ಇಸವಿ ಏಪ್ರೈಲ್ ತಾರೀಖು 26.

ಉಪಾಧ್ಯಾಯ ನಿರ್ಣಯ ಪತ್ರಿಕೆಗಳ ಅಪ್ಪರ್ ಸೆಕಂಡರಿ ಮತ್ತು ಲೋವರ್ ಸೆಕೆಂಡರಿ ಅಂತಸ್ತುಗಳ ಬರಹ ಪರೀಕ್ಷೆಯು (Written Examination) ಸನ್ 1895ನೇ ಇಸವಿ ಜೂನ್ ತಿಂಗಳು 3ನೇ ಸೋಮವಾರ ಮತ್ತು 4ನೇ ಮಂಗಳವಾರ ಈ ದಿವಸಗಳಲ್ಲಿ ಮೈಸೂರಲ್ಲಿ ಇದರಡಿ ಕಂಡ ಕಾಲಕ್ರಮವಾಗಿ ನಡೆಯಿಸಲ್ಪಡುವುದು.:—

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಲೋವರ್ ಸೆಕಂಡರಿ ಅಂತಸ್ತಿನ ವಿಷಯಗಳು.
ಮೊದಲನೆಯ ದಿವಸ	10ರಿಂದ 1ರ ವರಿಗೆ	(a) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಶಾಸ್ತ್ರ ಮತ್ತು ಅನುಭವ (The theory and practice of teaching) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ (The art of oral teaching) ಯಾವುದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ (Notes of a lesson on a given subject)	10ರಿಂದ 1ರ ವರಿಗೆ	(a) ಅಪ್ಪರ್ ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಕ್ರಮಗಳು, ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ
	2ರಿಂದ 5ರ ವರಿಗೆ	(b) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳ ಸಂವಿಧಾನ (Organization) ಸ್ಕೂಲ್ ರೆಜಿಸ್ಟರ್‌ಗಳ ಮಾದಿರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ, ಮತ್ತು ಸರ್ಕಾರೀ ಕಾಗದಗಳನ್ನು ಬರೆಯುವ ಸರಿಯಾದ ಕ್ರಮ.	2ರಿಂದ 4ರ ವರಿಗೆ	(b) ಯಾವದಾದರೂ ಒಂದು ಪ್ರೈಮರಿ ಸ್ಕೂಲಿನ ಸಂವಿಧಾನ(Organization) ಮತ್ತು ವ್ಯವಸ್ಥೆ (Discipline), ಸ್ಕೂಲ್ ರೆಜಿಸ್ಟರುಗಳ ಮಾದಿರಿ ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ
ಎರಡನೆಯ ದಿವಸ	10ರಿಂದ 11-30ರ ವರಿಗೆ	(c) ನೀತ್ಯನುಶಾಸನ ವಿಧಾನ (Principles of moral discipline) ಶೀಲಸ್ವಭಾವೋತ್ಪಾದನ (Formation of habits and character)		

ಒಂದೊಂದು ಪತ್ರಿಕೆಗೂ ಕ್ಲಿಪ್ತಮಾಡಿರುವ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆಯದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವುದಿಲ್ಲ. ತೇರ್ಗಡೆಯಾದವರಲ್ಲಿ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

ಬರಹ ಪರೀಕ್ಷೆಗಳ ಫಲಿತಾಂಶವು 1895ನೇ ಇಸವಿ ಜೂನ್ ತಿಂಗಳು 12ನೇ ತಾರೀಖನ್ನ ಅತಿಕ್ರಮಿಸದೆ ಪ್ರಕಟಿಸಲ್ಪಡುತ್ತದೆ.

ವ್ಯವಹಾರಿಕ ಪರೀಕ್ಷೆಯು (Practical test) 1895ನೇ ಇಸವಿ ಜೂನ್ ತಿಂಗಳು 17ನೇ ತಾರೀಖಿನಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವುದು.

ಬರಹ ಪರೀಕ್ಷೆಯಲ್ಲಿ ತೇರ್ಗಡೆಯಾಗದವರನ್ನು ವ್ಯವಹಾರಿಕ ಪರೀಕ್ಷೆಗೆ ಸೇರಿಸುವುದಿಲ್ಲ.

ಇದರಡಿ ಕಂಡ ನಿಬಂಧನೆಗಳಿಗೆ ಪರೀಕ್ಷ್ಯರು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ಪರೀಕ್ಷ್ಯನಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳದ ಮೇಲಿ ಬರುವ ಯಾವ ಪರೀಕ್ಷ್ಯರಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದನಂತರ ಪುನಹಾ ಪ್ರವೇಶಿಸಲು ಯಾವ ಪರೀಕ್ಷ್ಯನಿಗೂ ಅವಕಾಶ ಉಂಟಾಗಲಾರದು ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟು ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವುದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ಪರೀಕ್ಷ್ಯನೇ ಆಗಲಿ ಮತ್ತೊಬ್ಬ ಪರೀಕ್ಷ್ಯನೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಒಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಸೆಕ್ರೆಟರಿ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವುದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರವನ್ನಾಗಲಿ, ತೆಗದುಕೊಂಡು ಹೋಗಲು ಯಾವ ಪರೀಕ್ಷ್ಯನಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವುದಿಲ್ಲವು. ಯಾವ ಪರೀಕ್ಷ್ಯನಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಸೆಕ್ರೆಟರಿ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವುದು.

(5) ಪರೀಕ್ಷ್ಯನು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ಪರೀಕ್ಷ್ಯನೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ಪರೀಕ್ಷ್ಯನ ಹೆಸರು ರೆಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ಪರೀಕ್ಷ್ಯರಿಗೆ ಅಪ್ಪಣೆ ಕೊಡುವದಿಲ್ಲವು.

(8) ಪರೀಕ್ಷ್ಯರು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಶಿಷ್ಟ ಕಾಗದಗಳೂ ಪರೀಕ್ಷ್ಯರು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಹೆಚ್. ಜೆ. ಭಾಭಾ,
ಎಡ್ಯುಕೇಷನ್ ಸೆಕ್ರೆಟರಿ.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 13ನೇ ಮೇ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ಕಂಡ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ, ಕಡೂರು ಡಿಸ್ಟ್ರಿಕ್ಟು ಡಿಪೋಗಳ ಬಾಬತು ಚೌಬೀನೆ ಸಾಮಾನು, ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ ಮತ್ತು ಡೆಪ್ಯುಟಿ ಕಮ್ಮಿಷನರ್ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರ್‌ರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಡಿಪೋ ಹೆಸರು	ಹರಾಜು ತಾರೀಖು	ಸಾಗವಾನಿ ನಾಟಾ	ಮನ್ನಾ ಜಾತಿ ನಾಟಾ	ಕಾಡುಜಾತಿ ನಾಟಾ	ಸಾಗವಾನಿ ಮತ್ತು ಕಾಡುಜಾತಿ ಬೆಲಗು	ಸ್ಲೀಪರ್ ರಿಜರ್ವ್ಡ್ ತುಂಡುಗಳು	ತುದಿ ತುಂಡುಗಳು	ಸ್ಲೀಪರ್ ವ ರೊಡೆ	ರಿಜರ್ವ್ಡ್ ಸ್ಲೀಪರ್‌ಗಳು	ಸ್ಲೀಪರ್ ನಾಲಾಯಖ್ ತುಂಡುಗಳು	ಷರಾ
ಲಕ್ಕವಳ್ಳಿ	14 ಜೂನ್ 95	100	100	150	50	.	..	..	ಮಣ 3000	..	ಸ್ವಲ್ಪ ಹೆಚ್ಚು ಕಡ್ಮೆ
ತರೀಕೆರೆ	17 ಡಿಟೋ	300	60	60	1000	450	ಲಾಟ್ 50	..	.. *	.. *	
ಕಡೂರು	20 ಡಿಟೋ	50	50	50	500	..	..	..	400	7400	*ಬೀರೂರು ರೈಲ್ವೆಸ್ಟೇಷನ್ ಹತ್ರ ಇವೆ.

ಹರಾಜು ಷರತ್ ಸನ್ 1895ನೇ ಇಸವಿ 15ನೇ ಮಾರ್ಚಿ ನಂಬರ್ 15229 ಆರ್. ಎಫ್. 155—92ನೇ ಗವರ್ನಮೆಂಟ್ ನೋಟಿಫಿಕೇಷನ್ ನೋಡಬೇಕು. ಇದು ಶಿವಮೊಗ್ಗ ಡಿಸ್ಟ್ರಿಕ್ಟು ಹರಾಜ್ ಇಸ್ತಿಹಾರ್ ಕೆಳಗೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಯಲ್. ರಿಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಸೆಂಟ್ರಲ್ ಜೈಲ್.

ಇಸ್ತಿಹಾರ್ನಾಮೆ.

ತಾರೀಖು 2ನೇ ಮೇ ಸನ್ 1895ನೇ ಇಸವಿ.

ಸನ್ 1895ನೇ ಇಸವಿ ಜುಲೈ 1ರ ಲಾಗಾಯತು ಸನ್ 1896ನೇ ಇಸವಿ ಜೂನ್ 30ರವರಿಗೆ, ಆ ಎರಡು ದಿವಸಗಳೂ ಸೇರಿ 12 ತಿಂಗಳ ತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ, ಈ ಕೆಳಗೆ ನಮೂದಿಸುವ ಸರಕುಗಳನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗೆದುಕೊಳ್ಳುವುದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸನ್ 1895ನೇ ಇಸವಿ ಜೂನ್ 10ನೇ ಸೋಮವಾರ ಹಗಲು 1 ಘಂಟೆಯವರಿಗೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಫಾಯಿಷ್ ಮಾಡಿದೆ.

2. ಮೇಲೆ ಕಂಡ ತಾರೀಖಾದ ತರುವಾಯ ದರಖಾಸ್ತುಗಳನ್ನು ಹಿಡಿಯುವುದಿಲ್ಲ.

3. ದರಖಾಸ್ತು ಕವರಿನ ಮೇಲ್‌ಭಾಗದಲ್ಲಿ ಬರೆದಿರಬೇಕಾದ ಮೇಲ್ವಿಳಾಸವೇನಂದರೆ,

"I. ಕುರೀ ಮಾಂಸದ ಬರಬರಾಯಿ ದರಖಾಸ್ತು"

"II. ಸವದೇ ಸರಬರಾಯಿ ದರಖಾಸ್ತು"

4. ಕುರೀ ಮಾಂಸದ ಸರಬರಾಯಿಗೆ 75 ರೂಪಾಯಿ, ಸವದೇ ಸರಬರಾಯಿಗೆ 50 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಠೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವುದಿಲ್ಲ.

5. ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮೇಲೆ ನಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರಿರುವುದಕ್ಕೆ ಇಷ್ಟವುಳ್ಳಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫಿಸಿನಲ್ಲಿ ಒಡೆಯುವರು.

6. ಈ ಕೆಳಗೆ ನಮೂದಿಸುವ ಪದಾರ್ಥಗಳನ್ನು ಒಂದು ರೂಪಾಯಿಗೆ ಇಷ್ಟು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾದೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರವು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಪದಾರ್ಥಗಳೆಲ್ಲಾ ಒಳ್ಳೇದಾಗಿಯೂ ಸೂಪರಿಂಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

I. ಮೂಳೆ ಇಲ್ಲದ ಮಾಂಸ—20,000 ಪೌಂಡು.

II. ಒಣಗಿದ ಸವದೆ—ಖೈದಿಗಳ ಕೈಲಿ ಕಡಿಸತಕ್ಕದ್ದು, ತುಂಡುಗಳ ಪ್ರಮಾಣ ಒಂದು ಮಳ ನುದ್ದವೂ 1½ ಲಾಗಾಯತು 3 ಯಿಂಚು ಘಾತ್ರವಾಗಿಯೂ ಇರತಕ್ಕದ್ದು 400,000 ಪೌಂಡುಗಳು.

ಪದಾರ್ಥಗಳು ಮೇಲೆ ಕಂಡ ಪರಿಮಾಣದ ಮೇಲೆ ಇಷ್ಟಿಷ್ಟೇ ಆಗಬೇಕೆಂದು ಖಾತರೀಯಾವುದೂ ದೊರೆಯುವುದಿಲ್ಲ.

7. ಸೂಪರಿಂಟೆಂಡೆಂಟರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ವುಳಸಿಕೊಂಡಿಧಾರೆ.

8. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್ಮಾಡಿದ ಠೇವಣೀ ಮೊಬಲಗು ಇಟ್ಟುಕೊಳ್ಳಲ್ಪಡುವುದು; ಮತ್ತು ಅವರ ದರಖಾಸ್ತು ಮಂಜೂರಾಗಿದೆ ಯಂದು ಅವರಿಗೆ ತಿಳಿಯಪಡಿಸಿದ ಒಂದು ವಾರದೊಳಗಾಗಿ ಅವರು ಕಂಟ್ರಾಕ್ಟು ಕರಾರನ್ನು ಬರೆದು ಕೊಡದೇ ಹೋದರೂ ಸರಿಯೆ, ಅಥವಾ ಕುರಿ ಮಾಂಸಕ್ಕೆ 150 ರೂಪಾಯಿ, ಸವದೆಗೆ 100 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಸರ್ಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ ಮೇಲೆ ಕಂಡ ಠೇವಣೀ ಮೊಬಲಗು ಸಿವಾಯಿ ಜಮೆಯಾಗಿ ತೆಗೆದುಕೊಳ್ಳಲಾದೀತು.

9. ಕಂಟ್ರಾಕ್ಟರು ಯಾ ಇಜಾರೆದಾರರಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಪ್ರತಿ ತಿಂಗಳ ಗುರ್ರೇ ತಾರೀಖಾದ ತರುವಾಯ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಲ್ಲಿ ಪಾವತಿ ಮಾಡುವರು.

10. ಸ್ಟೋರ್ ರೂಂ ಎಂಬ ಒಂದು ಉಗ್ರಾಣವನ್ನು ಸವದೆ ಇಜಾರೆದಾರರ ವಶಕ್ಕೆ ಕೊಡಲಾದೀತು; ಆತನು ಅದರಲ್ಲಿ ಸವುದೆಯನ್ನು ಇಟ್ಟುಕೊಳ್ಳತಕ್ಕದ್ದು, ಮತ್ತು ಅದರಲ್ಲಿ ಯಾವಾಗ್ಯೂ ಒಂದು ತಿಂಗಳಿಗೆ ಕಡಮೆ ಇಲ್ಲದಂತೆ ಸರಬರಾಯನ್ನು ಇಟ್ಟಿರಬೇಕು. ಕುರೀ ಮಾಂಸವು ಪ್ರತಿ ದಿನವೂ ಬೆಳಿಗ್ಯೆ 8 ಘಂಟೆ ವಳಗಾಗಿ ಜೈಲ್‌ನಲ್ಲಿ ಶಿದ್ಧಪಡಿಸತಕ್ಕದ್ದು.

11. ಈ ಕಂಟ್ರಾಕ್ಟನ್ನು ಷಿಕ್ಮಿ ಇಜಾರೆಯಾಗಿ ಕೊಡಕೂಡದು.

12. ಕಂಟ್ರಾಕ್ಟು ಷರತ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮುನಾಸಬು ಅರಿತು 50 ರೂಪಾಯಿಗೆ ಹೆಚ್ಚದೆ ಜರಿಮಾನೆಯನ್ನು ವಸೂಲು ಮಾಡಬಹುದು; ಪದೇಪದೇ ಕರಾರಿಗೆ ತಪ್ಪಿ ಹೋದರೆ ಕಂಟ್ರಾಕ್ಟನ್ನು ರದ್ದು ಮಾಡಿ ಸೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಲಾಗಿ ತೆಗೆದುಕೊಳ್ಳಬಹುದು.

13. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂಗತಿಗಳಲ್ಲೆಲ್ಲಾ ಸದರೀ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ಫೈಸಲೇ ಆಖೈರ್ ಫೈಸಲಾಗಿರತಕ್ಕದ್ದು.

14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರಿಂಟೆಂಡೆಂಟರ ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರ್ ಜೈಲ್ ಇನ್ಸ್‌ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡೆಯಲು ಇಷ್ಟ ಪಡದಿದ್ದರೆ, ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

17. ಇಜಾರೆದಾರರು ತಪ್ಪಿ ಹೋಗುವುದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನೂ ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚುದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತಿಮಾಡಿ ಕೊಡಬೇಕು. ವಿಚಾರ—ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯಿತಿಯೂ ದೊರೆಯಲಾರದು.

ಡಿ. ಎ. ಜೋಕ್ಸಿ,
ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಟ

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 6ನೇ ಮೇ ಸನ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ದೊಡ್ಡಬಳ್ಳಾಪುರ ತಾಲ್ಲೂಕು ಕಸಬೇಲಿರುವ ಪುರಾತನವಾದ ಆದಿನಾರಾಯಣಸ್ವಾಮಿ ದೇವಸ್ಥಾನವು ಹೀನ ಸ್ಥಿತೀಲಿರುವದ್ದರಿಂದ ರಿಪೇರ್ ಆಗತಕ್ಕದ್ದು ಅವಶ್ಯಕವಾಗಿರುತ್ತೆ. 1874ನೇ ಇಸವಿ ಚೀಫ್ ಕಮ್ಮಿಷನರವರ ಪ್ರೊಸಿಡಿಂಗ್ಸ್ ಅನುಸರಿಸಿ ಗವರ್ನಮೆಂಟಿನಿಂದ ಈ ರಿಪೇರಿಗಾಗಿ ತಗಲುವ ಲಾಗವಡಿನ ಅರ್ಧ ಭಾಗ ಕೊಡಲ್ಪಡುತ್ತೆ. ದೇವಸ್ಥಾನಗಳ ಮ್ಯಾನೇಜರ್‌ಗಳು ಮತ್ತು ಭಕ್ತಾದಿಗಳು ಶೇರಿ ಬಾಕೀ ಮೊಬಲಗು ಜಮಾಯಿಸಬೇಕಾಗಿರುವದ್ದರಿಂದ ಧರ್ಮಕರ್ತರು,

ಮ್ಯಾನೇಜರು, ಭಕ್ತಾದಿಗಳು, ಸೇವಾರ್ಥಿಗಳೂ ಸಹ ತಮಗಳಿಗೆ ಇಷ್ಟವಿರುವ ಮೊಬಲಗನ್ನು ಡಿಸ್ಟ್ರಿಕ್ಟು ಮುಜರೈ ಆಫಿಸರವರಲ್ಲಿ ಕಳುಹಿಸಿದಲ್ಲಿ ಅವರು ಅದನ್ನು ತೆಗದುಕೊಂಡು ರಸೀತಿಗಳು ಕೊಡುತ್ತಾರೆ, ಈ ಮೊಬಲಗನ್ನು ಯಾವ ಉದ್ದೇಶಕ್ಕಾಗಿ ವಸೂಲ್ಮಾಡಲ್ಪಡುತ್ತೋ ಆ ಕಾರ್ಯಕ್ಕೇನೇ ಕ್ರಮವಾಗಿ ವ್ಯಯಮಾಡಲ್ಪಡುವದನ್ನು ಡೆಪ್ಯುಟಿ ಕಮ್ಮಿಷನರವರು ಖುದ್ದಾಗಿ ತನಿಖೆ ತೆಗದುಕೊಳ್ಳುತ್ತಾರಾದ್ದರಿಂದ ಈ ವಿಷಯದಲ್ಲಿ ದೇವಸ್ಥಾನದಲ್ಲಿ ಪ್ರೀತಿವುಳ್ಳಂಥಾವರೆಲ್ಲರೂ ಶೇರಿ ಯೋಚನೆಮಾಡಿ ಕೂಡ್ಲೆ ತಕ್ಕಷ್ಟು ಮೊಬಲಗನ್ನು ಜಮಾಯಿಸಲು ಏರ್ಪಾಟು ಮಾಡತಕ್ಕದ್ದೆಂದು ಕೋರಲ್ಪಡುತ್ತೆ.

ಜಿ. ರಘುನಾಥರಾವ್,
ಅಸಿಸ್ಟೆಂಟ್ ಕಮ್ಮಿಷನರ್ ಇನ್ ಡಿ|| ಛಾರ್ಜ್ ಫಾರ್ ಡೆ|| ಕಮ್ಮಿಷನರ್.

ನೋಟಿಫಿಕೇಷನ್.

ತಾರೀಖು 29ನೇ ಏಪ್ರೈಲ್ 1895.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ಕಂಡ ಅಮಾನೀಲಿ ರೂಡಿಸಿದ ಜಂಗಲಿ ಪಸಾರೆ ಜಿನಸುಗಳು ಬೆಂಗಳೂರು ಕೋಟೇಲಿ ಸಂದಲ್ ಕೋಠಿಯಲ್ಲಿ ಚಾಲತಿ ಇಸವಿ ಜೂನ್ 18ನೇ ತಾರೀಖಿನ ದಿವಸ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಹಾಕಲ್ಪಡುತ್ತವೆ.

ಷರತ್ತು—ನಗದಾಗಿ ಮೊಬಲಗು ಕೊಡಬೇಕು.

ಹರಾಜ್ ಕಾಲದಲ್ಲಿ ಯಾವದಾದರೂ ಸವಾಲನ್ನು ಯೇನೂ ಕಾರಣ ಹೇಳದೆ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಇಟ್ಟು ಕೊಂಡಿರುತ್ತಾರೆ.

	ಟನ್.	ಹಂ.	ಪೌಂಡ್ಸ್	
ಅರಗಿನಪುಡಿ ..	1	1	96	ಹೆಚ್ಚು ಅಥವಾ ಕಮ್ಮಿ
ಆಳಲೇಕಾಯಿ ..	3	1	8	ಡಿಟೋ
ಡಿಟೋ ಹೊಟ್ಟು ..	0	4	30	250 ಮಣ
ಹುಣಿಸೇಹಣ್ಣು ..	0	3	49	
ಗಂಡುಗರ್ಜಿತುಂಡುಗಳು ನಂಬರು 2				
ಜಪ್ಪಾಲೆ ತುಂಡುಗಳು 8				

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.

ಕೋಲಾರ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಜೋಡಿ ಕಾಯಂಗುತ್ತಾ ಬಾಕೀದಾರರಾದ ಪೂರ್ಣಪ್ಪ ವಗೈರೇರಿಂದ ಬರಬೇಕಾದ ಬಾಕಿಗಾಗಿ ಫಾರ್ಫಿಟ್ ಮಾಡಲ್ಪಟ್ಟ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಅಮಲ್ದಾರ್ರ ರೂಬರೂ 1895ನೇ ಇಸವಿ ಜೂನ್ 24ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಿಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜ್‌ದಾರನು 1894—95ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 120—10—5 ರೂಪಾಯಿ ಆಗಿರುತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂತಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ, ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ, ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡುವಂತೆಯೂ, ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

				ಸ್ವತ್ತಿನ ತಪ್ಸೀಲ್.													
				ಕಟ್ಟಡಗಳು.				ಜಮೀನು.									
ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.			ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟೀಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.		
1	2	3	4	5	6			7	8	9		10			11		
					ರೂ.	ಆ.	ಪೈ.			ಖಂಡಿ.	ಕು.	ರೂ.	ಆ.	ಪೈ.	ರೂ.	ಆ.	ಪೈ.
ಕೋಲಾರ	ಹುತ್ತೂರು	ಬೆಳಗಾನಹಳ್ಳಿ ಜೋಡಿ	ಪೂರ್ಣಪ್ಪ	..	..	..	..	ಗ್ರಾಮದಲ್ಲಿ ಬಾಕಿದಾರನ ಹಿಸ್ಸೇ	ಖುಷ್ಕೀ ತರೀ ಬಾಗಾಯತು	4	$18\frac{1}{4}$	43	5	4	23	13	11
									ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ್ದು			23	13	11			
	ವಕ್ಕಲೇರಿ	ಕೂತಾಂಡಹಳ್ಳಿ ಜೋಡಿ	ರಾಮಸ್ವಾಮಿ ಯ್ಯಂಗಾರ್	..	..	..	..	ಗ್ರಾಮದಲ್ಲಿ ಬಾಕಿದಾರನ ಹಿಸ್ಸೇ	ಖುಷ್ಕೀ ತರೀ ಬಾಗಾಯತು	23	$4\frac{1}{2}$	101	4	8	41	6	6
									ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ್ದು			98	6	6			
	ವೇಮಗಲ್	ಲಿಂಗಾಪುರ ಕಾಯಂಗುತ್ತಾ	ನರಸಾವಧಾನಿ	..	..	..	..	ಪೂರಾ ಗ್ರಾಮ	ಖುಷ್ಕೀ ತರೀ ಬಾಗಾಯತು	10	11	52	0	0	55	6	0
									ಸಾಲೀನಾ ಸರ್ಕಾರಕ್ಕೆ ಕೊಡತಕ್ಕ ಗುತ್ತಾ			52	0	0			
									ಲೋಕಲ್‌ನೆಸ್			3	6	0	ಜುಮ್ಲಾ		
												55	6	0	120–10–5		

ಷರಾ.—ಬಾಕಿದಾರರೇ ಆಗಲಿ ಅವರ ಪೂರ್ವೀಕರೇ ಆಗಲಿ ಭೋಗ್ಯ ವಗೈರೆ ಮಾಡಿರತಕ್ಕದ್ದರ ಬಾಧಕವಿಲ್ಲದೆ ಹರಾಜು ಮಾಡಲ್ಪಡುತ್ತೆ.

ಇಸ್ತಿಹಾರ್ ನಾಮೆ.

ತಾರೀಖು 10ನೇ ಮೇ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕೋಲಾರ ತಾಲ್ಲೂಕಿನಲ್ಲಿ ಸರಕಾರೀ ಜಮೀನ್ಗಳಲ್ಲಿ ಇರತಕ್ಕ ಬಂಡೇಗಳನ್ನು ಒಡದು ತೆಗದುಕೊಂಡು ಹೋಗತಕ್ಕ ಹಕ್ಕು 1895ನೇ ಇಸವಿ ಜೂನ್ ಮಾಹೆಯಲ್ಲಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಆಯಾಯ ಮೊಕ್ಕಾಂಗಳಲ್ಲಿ ತಾಲ್ಲೂಕು ಅಮಲ್‌ದಾರ್ ಅಥವಾ ಶಿರಸ್ತೇದಾರ್ರಿಂದ ನಡಿಸಲ್ಪಡುತ್ತೆ.

2. ಈ ಹರಾಜು ಡೆಪ್ಯುಟಿ ಕಮ್ಮಿಷ್ನರ್ ಸಾಹೇಬರವರಿಂದ ಮಂಜೂರಾಗುವವರಿಗೂ ಖೈದಾಗಿರತಕ್ಕದ್ದಲ್ಲಾ.

3. ಈ ಹರಾಜು 95ನೇ ಜುಲೈ ಗುರ್ರೆ ಲಾಗಾಯಿತು 96ನೇ ಜೂನ್ ಆಖೈರ್ ವರಿಗೆ ಜಾರೀಲಿ ಇರತಕ್ಕದ್ದಾಗಿಯಿರುತ್ತೆ.

4. ಜಡಸವಾಲ್‌ದಾರ ಹರಾಜು ಆದ ಕೂಡ್ಲೆ ಶೇಕಡಾ 25 ರೂಪಾಯಿನಂತೆಯೂ ಹರಾಜು ತಾರೀಖು ಲಾಗಾಯಿತು 15 ದಿವಸದಲ್ಲಿ ಸೆನ್ಸು ದೇಖೀಲ್ ಬಾಕೀ ಪೂರಾ ಮೊಬಲಗು ಕೊಡಬೇಕು, ಹಾಗೆ ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಂಡು ದುಸರಾ ಹರಾಜು ಮಾಡಲ್ಪಡುತ್ತೆ. ಇದರಲ್ಲಿ ಆಗುವ ಲುಕ್ಸಾನಿಗೆ ಅವಲ್ ಸವಾಲ್‌ದಾರನು ಜವಾಬ್‌ದಾರನಾಗಿ ಯಿರುತ್ತಾನೆ.

5. ಹರಾಜಿನ ಷರತ್ತುಗಳು—

(a) ಹರಾಜುದಾರು ಹುಲ್ಲುಬನ್ನೀ ಇಜಾರೆದಾರ ಹುಲ್ಲುಮೇಸುವದಕ್ಕೆ ಅಡ್ಡಿ ಪಡಿಸಕೂಡದು.

(b) ಬಂಡೀ ಹರಾಜಿನಲ್ಲಿ ಪಡದ ಜಮೀನ್ ಪೈಕಿ ಸರಕಾರದವರು ಇತರರಿಗೆ ಜಮೀನ್ ಸಾಗುವಳಿಗೆ ಕೊಟ್ಟರೆ ಅಂಗೀಕರಿಸಬೇಕು, ಬಂಡೇಮಾತ್ರ ತೆಗದುಕೊಳ್ಳಲು ಹರಾಜುದಾರ ಬದ್ಧನಾಗಿ ಯಿರಬೇಕು.

(c) ಹರಾಜಿನಲ್ಲಿ ಪಡದ ಬಂಡೆ ಪೈಕಿ ರೈತರು ಸ್ವಂತವುಪಯೋಗಕ್ಕೆ ಏನಾದರೂ ಬಂಡೆ ತೆಗದುಕೊಂಡು ಹೋಗಲು ಹಕ್ಕು ಯಿದ್ದಲ್ಲಿ ಅದಕ್ಕೆ ಹರಾಜುದಾರ ಅಡ್ಡಿ ಪಡಿಸಕೂಡದು.

(d) ಸರಕಾರದವರ ವುಪಯೋಗಕ್ಕೇನಾದರೂ ಬಂಡೇ ತೆಗಿಯಬೇಕಾದರೆ ಲಾಗವಡು ಯಿಲ್ಲದೇನೇ ತೆಗದುಕೊಂಡು ಹೋಗಲು ಬಿಡಬೇಕು.

(e) ಹರಾಜುದಾರ ಹರಾಜಿನಲ್ಲಿ ಪಡದ ಬಂಡೇ ಜಮೀನನ್ನ ಸಾಗುವಳಿಗೆ ಅನಾನುಕೂಲ ವುಂಟಾಗುವ ಹಾಗೆ ಮಾಡಕೂಡದು. ಬಂಡೇ ಯಿರತಕ್ಕ ಗ್ರಾಮಗಳ ತಪ್ಸೀಲ್ ಕೆಳಗೆ ನಮೂದಿಸಿಯಿಧೆ.

3 ಕಸಬಾ ಹೋಬಳಿ
  1 ಕೂಟೇರಿ ಗ್ರಾಮದ ಅಡವಿ ಜಮೀನಿನಲ್ಲಿ
  1 ಖಾದ್ರಿಪುರದ ಬೆಟ್ಟದವಾರೆಯಲ್ಲಿ
  1 ಸಂಗೊಂಡಹಳ್ಳಿ, ಖರಾಬು ಗುಟ್ಟೆಯಲ್ಲಿ
  3

9 ವಕ್ಕಲೇರಿ ಹೋಬಳಿ
  1 ಹೊಗರಿ ಗೊಲ್ಲಹಳ್ಳಿ
  1 ಚಲುವನಹಳ್ಳಿ
  1 ತಿರುಮಲಕೊಪ್ಪ
  1 ವೆಂಕಟಾಪುರ
  1 ನೆರ್ನಹಳ್ಳಿ
  1 ಬೆಟ್ಟಬೆಳಚೇನಹಳ್ಳಿ
  1 ತವುಡದೇನಹಳ್ಳಿ
  1 ಚುಂಚದೇನಹಳ್ಳಿ
  1 ಮಂಗಸಂದ್ರ
  9

6 ವೇಮಗಲ್ಲು ಹೋಬಳಿ
  1 ಮದ್ದೇರಿ ಬಳಿ
  1 ಶಿತ್ತಿ ಹೊಸೂರು ಬಳಿ
  1 ತುರ್ರುಗಲ್ಲು
  1 ಬೀಚಗೊಂಡಹಳ್ಳಿ
  1 ವೇಮಗಲ್ಲು
  1 ಶಿಂಜಮಲೆ
  6

32 ಸುಗಟೂರು ಹೋಬಳಿ
  1 ಕಲ್ಲೂರು
  6 ಜಂಗಂ ಗೂರ್ಕೇನಹಳ್ಳಿ 6 ಸ್ಥಳದಲ್ಲಿ
  2 ಬೊಮ್ಮಸಂದ್ರ ಬಳಿ 2 ಸ್ಥಳದಲ್ಲಿ
  3 ಮಾಧವ ಗೂರ್ಕೇನಹಳ್ಳಿ 3 ಕಡೆ
  1 ಬಯ್ಯಪಲ್ಲಿ
  1 ಬುಸನಹಳ್ಳಿ
  1 ಚಿಟ್ನಹಳ್ಳಿ
  1 ಚನ್ನಾಪುರ
  1 ವುರಿಗಿಲಿ ಬಳಿ
  1 ಭೀಮಾಪುರ ಬಳಿ
  2 ಸುಗಟೂರು ಗ್ರಾಮದಲ್ಲಿ 2 ಸ್ಥಳ
  1 ವುರಟ ಅಗ್ರಹಾರ
  2 ಗೊಟ್ಟಹಳ್ಳಿ
  2 ನಾಗನಾಳ
  2 ಮದನಹಳ್ಳಿ
  2 ಮೊದಮಂಗಲ
  1 ವೆಲಗಲಬುರ್ರೆ
  1 ಮುಳಹಳ್ಳಿ
  1 ಬಗಳಹಳ್ಳಿ
  32

1 ಹೋಳೂರು ಹೋಬಳಿ
  1 ಕಾರಹಳ್ಳಿ
  1

14 ದಳಸನೂರು ಹೋಬಳಿ
  1 ಭಂಗವಾದಿ
  1 ಕುರುಬರಹಳ್ಳಿ
  1 ಗೌಡಹಳ್ಳಿ
  1 ವೆಂಕಟಾಪುರ
  1 ಗಾಂಡ್ಲಹಳ್ಳಿ
  1 ನೊಲುಪುರ
  1 ನುಕನಹಳ್ಳಿ
  1 ಮತ್ತಿಕುಂಟೆ
  1 ಮಾಸ್ತೇನಹಳ್ಳಿ
  1 ಬೂರಗಹಳ್ಳಿ
  1 ಜನ್ನಗಟ್ಟಗುಂಡುಗಳು ಇಧೆ
  1 ಮುದುವಾಡಿ ಡಿಟೋ
  1 ಕೊಂಡೇನಹಳ್ಳಿ
  1 ಅರಿನಾಗನಹಳ್ಳಿ, ಗುಂಡುಗಳು ಇಧೆ
  14

23 ಹುತ್ತೂರು ಹೋಬಳಿ
  3 ಪಟ್ನಗ್ರಾಮದ ಬಳಿ
  1 ನಡಪಲ್ಲಿ ಕಾಳಹಸ್ತಿಪುರ
  1 ತಿಮ್ಮಸಂದ್ರ
  1 ವೆಂಕಟಾಪುರ
  1 ಕೂತಾಂಡಹಳ್ಳಿ
  1 ಕೃಷ್ಣಾಪುರ
  1 ತಿಪ್ಪಸಂದ್ರ
  1 ಹರಳಕುಂಟೆ
  2 ದೊಡ್ಡಹಳ್ಳಿ
  4 ನೆಂದಂಬಳಿ
  3 ಶಿಳಂಗೆರೆ
  2 ಶೀಸಂದ್ರ
  1 ನೆರ್ನಹಳ್ಳಿ
  1 ಯಾನಾದಿಹಳ್ಳಿ
  23

ಹೋಬಳಿ ಹೆಸರು.	ಹರಾಜು ಟೈಂ.	ಹರಾಜಾಗುವ ಸ್ಥಳ.
ಕೋಲಾರ್ ..	1895ನೇ ಜೂನ್ 10	ಕೋಲಾರ್ ತಾಲ್ಲೂಕು ಕಚೇರಿಯಲ್ಲಿ
ದಳಸನೂರು ..	ಜೂನ್ 11	ದಳಸನೂರಿನಲ್ಲಿ
ಸುಗಟೂರ್ ..	ಜೂನ್ 12	ಸುಗಟೂರು ಕಸಬೆಯಲ್ಲಿ
ವೇಮಗಲ್ಲು ..	ಜೂನ್ 13	ವೇಮಗಲ್ ಕಸಬೆಯಲ್ಲಿ
ವಕ್ಕಲೇರಿ ..	ಜೂನ್ 14	ವಕ್ಕಲೇರಿ ಕಸಬೆಯಲ್ಲಿ
ಹೋಳೂರು ಹುತ್ತೂರು ..	ಜೂನ್ 17	ಹುತ್ತೂರು ಹೋಬಳಿ ಶೀಸಂದ್ರದಲ್ಲಿ

ತಾರೀಖು 10ನೇ ಮೇ 1895ನೇ ಇಸವಿ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಜೋಡಿ ಬಾಕೀದಾರರಾದ ನರಶಿಂಗರಾವ್ ವಗೈರೇರಿಂದ ಬರಬೇಕಾದ ಜೋಡಿ ಬಾಕೀಗಾಗಿ ಫಾರ್‌ಫಿಟ್ಟಾಗಿರುವ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ್ ಡಿಸ್ಟ್ರಿಕ್ಟು, ತಖ್ತೇಲಿಕಂಡ ತಾಲ್ಲೂಕುಗಳ ಅಮಲ್ದಾರ್ರ ರೂಬರೂ 1895ನೇ ಜೂನ್ 22ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894–95ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾ ಬಾಕಿ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 199—4—9 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ನ್ನ ಡಿಪಾಜಿಟ್ ಹಾಜರ್ ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೇ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಪ್ಸೀಲು.									ಸರಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.			
				ಕಟ್ಟಡಗಳು.		ಜಮೀನು.										
				ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.						
1	2	3	4	5	6	7	8	9		10			11			
					ರೂ. ಆ. ಪೈ.			ಎಕರೆ.	ಕೂ.	ರೂ.	ಆ.	ಪೈ.	ರೂ.	ಆ.	ಪೈ.	
ಮಾಲೂರು.	ನರಸಾಪುರ	ಮುತ್ತಕದಹಳ್ಳಿ ಜೋಡಿ	ನರಶಿಂಗರಾವ್ ಖರೀದಿದಾರ್	..	..	ಪೂರಾ ಗ್ರಾಮ	ಖುಷ್ಕೀ ತರೀ ಬಾಗಾಯತು	145 20 1	71 92 23	195	13	7	135	2	0	ಮಾಲೂರು ತಾ॥ ಅಮಲ್ದಾರ್ರ ರೂಬರೂ
							ಜುಮ್ಲಾ	167	86							
							ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ್ದು			135	2	0				

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್.									ಸರಕಾರಕ್ಕೆ ಬರಬೇಕಾದ ನೋಟಸ್ ಫೀ ವಗ್ಯೆರೆ ಸಹಿತವಾದ ಬಾಕೀ ಮೊಬಲಗು.			
				ಕಟ್ಟಡಗಳು.		ಜಮೀನು.										
				ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.						
1	2	3	4	5	6	7	8	9		10			11			
								ಖಂ.	ಕೂ.	ರೂ.	ಆ.	ಪೈ.	ರೂ.	ಆ.	ಪೈ.	
ಕೋಲಾರ.	ಕೋಲಾರ	ಕೊಂಡರಾಜನಹಳ್ಳಿ ಜೋಡಿ	ರಾಘವೇಂದ್ರಾಚಾರ್	..	ರೂ.ಆ.ಪೈ.	ಗ್ರಾಮದಲ್ಲಿ ಬಾಕಿದಾರನ ಹಿಸ್ಸೆ	ಖುಷ್ಕೀ ತರೀ ಬಾಗಾಯತು	13	$12\frac{3}{4}$	51	0	1	43	12	1	ಕೋಲಾರ ತಾಲ್ಲೂಕು ಅಮಲ್ದಾರ್ರು ರೂಬರೂ
							ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ್ದು			43	12	4				
	ದಳಸನೂರು	ಜಯಸಂದ್ರ ಜೋಡಿ ಗ್ರಾಮ	ಚಿಕ್ಕ ರಾಮಣ್ಣ	..	..	ಗ್ರಾಮದಲ್ಲಿ ಬಾಕಿದಾರನ ಹಿಸ್ಸೆ	ಖುಷ್ಕೀ ತರೀ ಬಾಗಾಯತು	12	$14\frac{1}{4}$	29	0	0	20	6	5	ಡಿಟೋ
										ಜುಮ್ಲಾ			199	4	9	

ಹರಾಜು ಮಾಡುವ ಸ್ವತ್ತುಗಳ ಮೇಲೆ ಪೂರ್ವೀಕರು ಮಾಡಿದ ಭೋಗ್ಯ ಪರಬಾಧಕವಿಲ್ಲದೆ ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1894—95ನೇ ಇಸವಿ ಅರ್ಜೀ ನಂಬರ್ 365.

ಮೃತಪಟ್ಟ ಶಾನಭಾಗ ಕೃಷ್ಣಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು ನರಸಿಂಹಾಚಾರ್ ಮೈನರ್, ಗಾರ್ಡಿಯನ್ ದೊಡ್ಡಪ್ಪ ಆನಂದಾಳ್ವಾರ್, ಮೃತಪಟ್ಟ ಸದರೀ ಕೃಷ್ಣಯ್ಯಂಗಾರ್ರಿಗೆ ಮೈನರ್ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮಂಡ್ಯದ ತಾಲ್ಲೂಕು ಹೊನ್ನಲಗೆರೆ ಸ್ಥಳದ ಸದರೀ ಆನಂದಾಳ್ವಾರ್, ಸದರೀ ವಾರಸ್ಥರಾಗಿ ಮೃತಪಟ್ಟ ಕೃಷ್ಣಯ್ಯಂಗಾರ್ರ ಜಿಂದಗಿಬಗ್ಗಾಗಿ ಬರತಕ್ಕ 600 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಆನಂದಾಳ್ವಾರ್ರು ಅರ್ಜಿಯನ್ನು ಸರ್ 1895ನೇ ಇಸವಿ ಜೂನ್ ತಿಂಗಳ ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1894—95ನೇ ಇಸವಿ ಅರ್ಜೀ ನಂಬರ್ 403.

ಅರ್ಜಿದಾರ್ 1ನೇ ಅಮ್ಮಣ್ಣಿಬಾಯಿ ಪುರುಫ್ ಲಕ್ಷ್ಮಂಬಾಯಿ, 2ನೇ ದ್ವಾರಕಾಬಾಯಿ ಇವರುಗಳು, ಮೈಸೂರ್ ಸ್ಥಳದ
ಬೆಟ್ಟದ ವೆಂಕೋಬಾಚಾರ್ರ ಆಸ್ತೀ ವಿಷಯದಲ್ಲಿ—

ಸದರೀ ವೆಂಕೋಬಾಚಾರ್ರಿಗೆ ಹೆಂಡತಿ, ಮಗಳು ಆಗಬೇಕೆಂಬ ಹಕ್ಕಿನಮೇಲೆ ಮೈಸೂರ್ ದೇವೀರಾಂಬಾ ಅಗ್ರಹಾರ ಸ್ಥಳದ ಮೇಲ್ಕಂಡ 1—2ನೇ ಅರ್ಜಿದಾರ್ರು, ಸದರೀ ವೆಂಕೋಬಾಚಾರ್ರ ಆಸ್ತೀ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ ಬಗ್ಗೆ 1895ನೇ ಇಸವಿ ಜುಲೈ ತಾರೀಖು 12ರಲ್ಲಿ ಮೊಕರರ್ ಮಾಡಿರುವದಾಗಿ ಇದರಿಂದ ನೋಟೀಸ್ ಕೊಡಲಾಗಿದೆ.

ಸರ್ 1894—95ನೇ ಇಸವಿ ಅರ್ಜೀ ನಂಬರು 408.

ಮೃತಪಟ್ಟ ನರಸುಹ್ಮಗವುಡ ಮತ್ತು ಕುಂಟೆಗವುಡರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು ದೊಡ್ಡರಾಮ ವಗ್ಯೆರೆ ಮೈನರ್, ಗಾರ್ಡಿಯನ್ ತಾಯಿ ಭದ್ರಮ್ಮನವರು, ಮೃತಪಟ್ಟ ಸದರೀ ನರಸುಹ್ಮಗವುಡ ಕುಂಟೆಗವುಡರಿಗೆ ಮೈನರ್ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ಲಿಂಗಾಂಬುಧಿ ಹೋಬಳಿ ಹೆಬ್ಬಾಳು ದಾಖಲೆ ಮಂಚುಗೌಡನ ಕೊಪ್ಪಲು ಸ್ಥಳದ ಸದರೀ ಭದ್ರಮ್ಮನವರು, ಸದರೀ ವಾರಸ್ಥರಾಗಿ ಮೃತಪಟ್ಟ ನರಸುಹ್ಮಗವುಡ ಕುಂಟೆಗವುಡರ ಜಿಂದಗಿ ಬಗ್ಗಾಗಿ ಬರತಕ್ಕ 3,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಭದ್ರಮ್ಮನವರ ಅರ್ಜಿಯನ್ನು ಸನ್ 1895ನೇ ಇಸವಿ ಜುಲೈ ತಿಂಗಳ ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಿಂಹಗವುಡ ಕುಂಟೆಗವುಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1894—95ನೇ ಇಸವಿ ಅರ್ಜೀ ನಂಬರ್ 410.

ಮೃತಪಟ್ಟ ಚಿಕ್ಕಂಣನವರ ಆಸ್ತೀ ವಿಷಯದಲ್ಲಿ—

ಅರ್ಜಿದಾರರು ಕೆಂಪಮ್ಮನವರು ಮೃತಪಟ್ಟ ಸದರೀ ಚಿಕ್ಕಣ್ಣನವರಿಗೆ ಅಕ್ಕ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ಚಂದ್ರಗಾಲ್ ಹೋಬಳಿ ಹಂಪಾಪುರ ಸ್ಥಳದ ಸದರೀ ಕೆಂಪಮ್ಮನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಚಿಕ್ಕಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 350 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪಮ್ಮನವರ ಅರ್ಜಿಯನ್ನು 1895ನೇ ಇಸವಿ ಜುಲೈ ತಿಂಗಳ ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1895ನೇ ಇಸವಿ ಏಪ್ರಿಲ್ ತಿಂಗಳ 10ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಂ. ರಾಮಸ್ವಾಮಯ್ಯರ್,
ಅಫಿಷಿಯೇಟಿಂಗ್ ಡಿಸ್ಟ್ರಿಕ್ಟ್ ಜಡ್ಜ್.

ನೋಟಿಫಿಕೇಷನ್.

ಸನ್ 1895ನೇ ಇಸವಿ ಮೇ ತಾರೀಖು 13ರಲ್ಲು.

ಸನ್ 1895ನೇ ಇಸವಿ ಮೇ 4—7ನೇ ಮುರ್ಕ್ಕಂ 19567—8 ಜಿ. 5182ನೇ ನಂಬರ್ ಮೈಸೂರು ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಸನ್ 1894ನೇ ಇಸವಿ ಜೂನ್ 21ನೇ ಮುರ್ಕ್ಕಂ ಮೈಸೂರ ಗೆಜೆಟಿ 2ನೇ ಭಾಗ 481ನೇ ಪೇಜಿನಲ್ಲಿ ಫಾಯಿಷ್ ಆಗಿರುವ ನೋಟಿಫಿಕೇಷನನ್ನು ತಿದ್ದುಪಡಿ ಮಾಡುವದೇನಂದರೆ:—

1. ಕೊಪ್ಪ
2. ಮುತ್ತೂರು
3. ಆನೇಚೌಕೂರು
4. ಕೆಕ್ಕನಹಳ್ಳಿ ಸ್ಟೇಷನ್

ಈರೇಬಿನಲ್ಲಿ ನಮೂದು ಮಾಡಿರುವ ಟೋಲ್‌ಯಾನೆ ಸುಂಕದ ಕಟ್ಟೆಗಳನ್ನು ತೆಗದು ಸದರೀ ಕಟ್ಟೆಗಳಿಗೆ ಬದಲಾಗಿ ಇದರಡಿ ನಮೂದಿಸಿರುವ ಸ್ಥಳಗಳಲ್ಲಿ ಟೋಲ್‌ಯಾನೆ ಸುಂಕವನ್ನು, ಮೊದಲಿನ ನೋಟಿಫಿಕೇಷನಲ್ಲಿ ಕಂಡ ರೇಟಿನಂತೆಯೇ, ಸನ್ 1895ನೇ ಇಸವಿ ಜೂನ್ ಗುರ್ರೇ ಲಾಗಾಯತು ವಸೂಲ್ ಮಾಡಲ್ಪಡುತ್ತೆಂಬುವದನ್ನು ಇದರಿಂದ ಸಮಸ್ತರಿಗೂ ತಿಳಿಯಪಡಿಸಿರುತ್ತೆ.

ರೋಡುಗಳು.	95ನೇ ಜೂನ್ ಗುರ್ರೇ ಲಾಗಾಯತು ಸ್ಟೇಷನ್‌ಗಳು.
ಮಂಗಳೂರು ರಸ್ತೆ	ಪೆರ್ಯಾಪಟ್ಟಣದ ಕೋಟೆಗೆ ಪಶ್ಚಿಮ ಭಾಗದಲ್ಲಿ, ಎರಡು ರಸ್ತೆಯೂ ಶೇರತಕ್ಕ ಸ್ಥಳ
ಸಿದ್ದಾಪುರ ಬ್ರಾಂಚ್	
ಹಾಸನ್ ಪೆರ್ಯಾಪಟ್ಟಣ ಕನ್ಯಾನೂರು	ಪೆರ್ಯಾಪಟ್ಟಣಕ್ಕೂ ಅಂಕನಹಳ್ಳಿಗೂ ಮಧ್ಯೆ
ಮದ್ರಾಸ್ ಕನ್ಯಾನೂರು	ಪಂಚವಳ್ಳಿ
ಬೆಂಗಳೂರು ನೀಲಗಿರಿ	ಭಂಡೀಪುರ

2. ಈ ಡಿಸ್ಟ್ರಿಕ್ಟಿನಲ್ಲಿ ಮೇಲ್ಕಂಡ ರಸ್ತೆ ವಿನಹ ಇತರ ರಸ್ತೆಗಳಲ್ಲಿ ಇಡಲ್ಪಟ್ಟಿರುವ ಟೋಲ್‌ಯಾನೆ ಸುಂಕದ ಕಟ್ಟೆಗಳು, ಇದರಿಂದ ಬದಲಾಯಿಸಲ್ಪಟ್ಟಿಲ್ಲ.

ಎ. ರಂಗಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ತಾರೀಖು 10ನೇ ಮೇ 1895.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನ ಇದರಡಿ ಕಂಡ ತಾಲ್ಲೂಕು ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲೂ ಹಿಡುವಳಿಯಲ್ಲಿ ಇಲ್ಲದ ಕಂದಾಯ ಗೊತ್ತು ಮಾಡಿರುವ ಜಮೀನುಗಳು ಅಡಗಿರುವ ಸರಕಾರೀ ಬಂಜರ್ ಜಮೀನುಗಳಲ್ಲಿಯೂ ಅಮೃತಮಹಲ್ ಕಾವಲ್‌ಗಳಲ್ಲೂ ಹಳೆ ಮತ್ತು ಹೊಸ ಡಿಮಾರ್ಕೇಷನ್ ಲೈನ್‌ಗಳ ಮಧ್ಯೆ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲೂ ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿ ದೊರಿಯುವ ಪಸಾರೇ ಹುಟ್ಟುವಳಿಗಳನ್ನ 1895ನೇ ಜುಲೈ ಮಾಹೆ 1ನೇ ತಾರೀಖು ಲಾಗಾಯತು 1896ನೇ ಇಸವಿ ಜೂನ್ 30ನೇ ತಾರೀಖಿನ ವರಿಗೆ ಜಮಾಯಿಸುವ ಹಕ್ಕುದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಾಗಿಯೂ ಅಥವಾ ಹೋಬಳಿವಾರಾಗಿಯೂ, ಸರಕಾರಕ್ಕೆ ಅನುಕೂಲಿಸುವ ರೀತಿಯಾಗಿ ಈ ಕೆಳಗೆ ವಿವರಿಸಿ ಇರುವ ಆಫೀಸರವರಿಂದ ಈ ಕೆಳಗೆ ಕಂಡ ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು.

ಸೂಚನೆ—ಫಾರೆಸ್ಟ್ ಪ್ಲಾಂಟೇಷನ್‌ಗಳೂ, ಸಂದಲ್ ಮತ್ತು ಫಾರೆಸ್ಟು ರೀ ಪ್ರೊಡಕ್ಷನ್ ಬ್ಲಾಕುಗಳೂ ಇದಕ್ಕೆ ಸೇರಿ ಇರುವದಿಲ್ಲ.

ತಾಲ್ಲೂಕು.	ತಾರೀಖು.	ಹರಾಜು ಸ್ಥಳ.	ಹರಾಜು ಮಾಡುವ ಆಫೀಸರರು.
ಮೈಸೂರು	10—6—95	ಮೈಸೂರ್ ಡೆಪ್ಯುಟಿ ಕಮ್ಮಿಷನರ್ ಆಫೀಸ್ ಬಳಿ	ಡೆಪ್ಯುಟಿ ಕಮ್ಮಿಷನರ್ ಸಾಹೆಬರವರು.
ಯಡತೊರೆ	ಡಿಟೋ	ಡಿಟೋ	ಡಿಟೋ
ಹುಣಸೂರು	ಡಿಟೋ	ಡಿಟೋ	ಡಿಟೋ
ಹೆಗ್ಗಡದೇವನಕೋಟೆ	ಡಿಟೋ	ಡಿಟೋ	ಡಿಟೋ
ಗುಂಡ್ಲುಪೇಟೆ	ಡಿಟೋ	ಡಿಟೋ	ಡಿಟೋ
ಚಾಮರಾಜನಗರ	ಡಿಟೋ	ಡಿಟೋ	ಡಿಟೋ
ನಂಜನಗೂಡು	ಡಿಟೋ	ಡಿಟೋ	ಡಿಟೋ
ತಿ|| ನರಸೀಪುರ	ಡಿಟೋ	ಡಿಟೋ	ಡಿಟೋ
ಮಂಡ್ಯ	13—6—95	ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸಿನಲ್ಲಿ	ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.
ಮಳವಳ್ಳಿ	ಡಿಟೋ	ಡಿಟೋ	

ಹುಟ್ಟುವಳಿ ತಪ್ಸೀಲ್.

1. ತಾರೇಕಾಯಿ, 2 ಶೀಗೇಕಾಯಿ, 3 ಅಂಟವಾಳದ ಕಾಯಿ, 4 ದಿಂಡಗದ ಗೋಂದು, 5 ಕಾಡುಅರಸಿನ, 6 ಜೇನುಮೇಣ, 7 ಜೇನುತುಪ್ಪ, 8 ಕಪಿಲಾರಂಗು, 9 ಪತಂಗ, 10 ಮಡ್ಡಿ, 11 ಚಿಲ್ಲದಬೀಜ, 12 ಹಾಲುಮಡ್ಡಿ, 13 ಚಗಚೇಬೀಜ, 14 ಹೊಂಗೇಬೀಜ, 15 ಗೇರುಬೀಜ, 16 ಅವರಿಕೆ ಗೋಂದು, 17 ಜಿಂಕೆಕೊಂಬು, 18 ಗುಗ್ಗಳ, 19 ಅಳಲೇಕಾಯಿ, 20 ಬೇಲದ ಹಣ್ಣು, 21 ಅರಗು, (ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ತಾಲ್ಲೂಕುಗಳದು ವಿನಹ.)

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣೀ ಕಟ್ಟತಕ್ಕದ್ದು. ಹಾಗೆ ಮಾಡಲು ತಪ್ಪಿದಲ್ಲಿ ಕೂಡ್ಲೆ ಬಾಬು ಎರಡನೇ ದಫಾ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1895ನೇ ಜುಲೈ 1ನೇ ತಾರೀಖಿನಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಶಿಸತಕ್ಕದ್ದು. ಮತ್ತು ಕಂಟ್ರಾಕ್ಟು ಮೊಬಲಗು ಪೈಕಿ ವುಳಿದ ಮೊಬಲಗನ್ನೂ ಮತ್ತು ಕಂಟ್ರಾಕ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್‌ಸೆಸ್ ಮೊಬಲಗನ್ನೂ ಸಹ ಮೂರು ಸಮನಾದ ಖಿಸ್ತುಗಳಲ್ಲಿ ಅಂದರೆ—

1895ನೇ ಡಿಸೆಂಬರ್ 1ನೇ ತಾರೀಖು
1896ನೇ ಜನವರಿ 1ನೇ ತಾರೀಖು
1896ನೇ ಫೆಬ್ರುವರಿ 1ನೇ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ಲಿಪ್ತವಾದ ತಾರೀಖುಗಳಲ್ಲಿ ಖಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಶೇಕಡಾ ಸಾಲಿಯಾನಾ 6 ರೂಪಾಯಿ ಮೇರೆ ಬಡ್ಡಿ ಕಟ್ಟಲ್ಪಡುತ್ತೆ. ಮತ್ತು ಮೊಬಲಗು ಅವನ ಆಸ್ತಿಯಿಂದ ವಿಲೇಮಾಡಿಕೊಳ್ಳಲ್ಪಡುತ್ತೆ.

4. ಕಂಟ್ರಾಕ್ಟುದಾರನು ಯಾವ ಒಂದು ಖಿಸ್ತನ್ನೂ ಪಾವತಿ ಮಾಡದೆ ತಪ್ಪಿದರೂ, ಅಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1895ನೇ ಜೂನ್ ಆಖೈರುವರಿಗೆ, ಉಳಿದ ಕಾಲದವರಿಗೆ ಬಾಬು ಜಮಾಯಿಸುವ ಹಕ್ಕು ಹರಾಜು ಮಾಡಲ್ಪಡುವದು, ಅಥವಾ ಅಮಾನಿಯಲ್ಲಿ ರೂಢಿಸಲ್ಪಡುವದು, ಪರಂತು ತಪ್ಪಿಹೋದ ಕಂಟ್ರಾಕ್ಟುದಾರನನ್ನು ಅದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವದು.

5. ಹಿಡುವಳೀ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲ್ ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರ್ರ ಸ್ಥಿರಪಟ್ಟ ಹಕ್ಕುದಾರಿ ವಿಷಯದಲ್ಲಿ ಕಂಟ್ರಾಕ್ಟುದಾರ್ರು ಪ್ರವೇಶಿಸತಕ್ಕದ್ದಲ್ಲಾ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಹುಟ್ಟುವಳಿಗಳಲ್ಲಿ ಅಡಗಿರುವದಿಲ್ಲಾ.

ಎ. ರಂಗಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್.

ಪ್ರಸಿದ್ಧ ಪತ್ರಿಕೆ.

ತಾರೀಖು 8ನೇ ಮೇ 1895ನೇ ಇಸವಿ.

I. ನಾಗಮಂಗಲ ತಾಲ್ಲೂಕು ರಿಜಿಸ್ಟರ್ 132ನೇ ನಂಬರ್ ಕೊಪ್ಪದ ತಲಾವ್ ಕಾಂಗಾರಿ ಉದ್ದಿಶ್ಯ 1895ನೇ ಇಸವಿ ಮೇ ಮಾಹೆ 31ನೇ ತಾರೀಖು ವರಿವಿಗೂ ದರಖಾಸ್ತುಗಳು ಡಿವಿಜನ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರಿಂದ ತೆಗೆದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ಮೊತ್ತವನ್ನು ಕಾಣಿಸಲ್ಪಟ್ಟಿರುತ್ತದೆ. ಇದು ನಿಷ್ಕರ್ಷೆಯಾದದ್ದಾಗಿರುವದಿಲ್ಲಾ. ಕಾಂಗಾರಿಯು 1896ನೇ ಇಸವಿ ಜೂನ್ ತಿಂಗಳ ಆಖೈರೊಳಗಾಗಿ ಪೂರೈಸತಕ್ಕದ್ದು.

II. ಪ್ಲ್ಯಾನ್ ಮತ್ತು ಅಂದಾಜು ಷರತ್ತು ವಗೈರೆ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸಿನಲ್ಲಿ ಪ್ರಾತಃಕಾಲ 11 ಘಂಟೆ ಲಾಗಾಯತು ಸಾಯಿಂಕಾಲ 4 ಘಂಟೆ ವರಿವಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳು ಅಚ್ಚು ಹಾಕಿದ ಫಾರಂನಲ್ಲಿ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸಿನಲ್ಲಿ ದೊರೆಯುತ್ತವೆ. ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಒಂದು ಸ್ಟೇಟ್‌ಮೆಂಟ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರ್ಯಾಕ್ಟುದಾರನು ಯಾವ ರೇಟ್ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿಸಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ.	ಕ್ವೈ.	ಮೊತ್ತ.	ದರ.	ಮೊಬಲಗು.
ಯೇರಿ.				
ಮಂಣು ಕೆಲಸ	ಸಲೆಗಜ	38272		
ಹೆಪ್ಪು ಕೆಲಸ	ಚದರ	66·42		
ಹಳೇಕಲ್ಲು ಕೆಲಸ	ಸಲೆಗಜ	350		
ಹೊಸಕಲ್ಲು ಕೆಲಸ	ಡಿಟೋ	3587		
ಗ್ರೇಡ್ ಕಲ್ಲು	1ಕ್ವೈ	24		
ಬಿ. ಯಂ. ಕಲ್ಲು	ಡಿಟೋ	2		
ಗೇಜು ಕಲ್ಲು	ಡಿಟೋ	1		
ತಲಾವ್ ನಂಬರ್ ಕಲ್ಲು	ಡಿಟೋ	1		
ಜುಮ್ಲಾ				
200 ಅಡಿ ಲಾಂಬಿಯು ಯಡಪಾರ್ಶ್ವದ ಕೋಡಿ.				
ಪಾಯಖೋದಿ	ಸಲೆಗಜ	4533		
ಗಚ್ಚು ಮತ್ತು ಕಾಡುಕಲ್ಲು	ಸಲೆ ಅಡಿ	1473		
ಚಪ್ಪಡಿ ಕಲ್ಲು	ಚದರ ಅಡಿ	1046		
ಕಾಡುಕಲ್ಲು ಕೆಲಸ	ಸಲೆಗಜ	369		
ಹಳೇಕಲ್ಲು ಕೆಲಸ	ಡಿಟೋ	230		
ಜುಮ್ಲಾ				
ಡಿಸ್ಟ್ರಿಬ್ಯೂಷನ್.				
ಹೊಸ ನಾಲಾ ತೆಗಿಸುವದು	ಮೊತ್ತ			
ಮಿಸ್ ಲೇನಿಯಸ್.				
ಜಮೀನ್‌ಗಳ ಕಂಪೆನ್‌ಶೇಷನ್	ಡಿಟೋ			

IV. ಪ್ರತಿ ಒಂದು ದರಖಾಸ್ತಿನ ಸಂಗಡಲೂ 100 ರೂಪಾಯಿಗಳ ಕರೆನ್ಸಿ ನೋಟುಗಳಾಗಲಿ, ಗವರ್ನಮೆಂಟ್ ಪ್ರಾಂಸರಿ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ತೇವಣಾತಿಯಾಗಿ ಹಾಜರ್ಮಾಡಬೇಕು, ಮತ್ತು ಲಖೋಟೆ ಮೇಲೆ ಕೊಪ್ಪದ ತಲಾವ್ ಕಾಂಗಾರಿಬಗ್ಯೆ ದರಖಾಸ್ತೆಂಬದಾಗಿ ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನ ತಿರಸ್ಕರಿಸಲಾಧೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಚೀಫ್ ಇಂಜನಿಯರ್ ಸಾಹೆಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ವಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲಾ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ 8 ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರ್ಯಾಕ್ಟ ಬಾಂಡ್ ಎಂಬ ಕರಾರು ಪತ್ರವನ್ನ ಬರದುಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದು ಮಾಡಲ್ಪಟ್ಟು ತೇವಣಾತಿ ಹಣವನ್ನ ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸ್ ಮುಂಭಾಗದಲ್ಲಿ ನೋಟಿಸ್ ಬೋರ್ಡ್ ಮೇಲೆ ಬರದು ಚಿಕಟಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬೂ ದೊರಿಯಲಾರದು.

VIII. ಯಾವದಾದರೂ ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವನ್ನ ಅವರಿಗೆ ವಾಪಸ್ ಮಾಡಲ್ಪಡುತ್ತೆ.

ಟಿ. ಇರ್ವ್ಯಾನ್,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಹಾಸನ ಡಿಸ್ಟ್ರಿಕ್ಟು.

ಬೇಲೂರು ತಾಲ್ಲೂಕು.

ಇಸ್ತಿಹಾರ್‌ನಾಮಾ.

ತಾರೀಖು 25ನೇ ಏಪ್ರೆಲ್ ಸನ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಬೇಲೂರು ತಾಲ್ಲೂಕು ದೊಡ್ಡಬಿಕ್ಕೋಡು ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸನ್ 1895ನೇ ಇಸವಿ ಜುಲೈ

ತಾರೀಖು 10ನೇ ಬುಧವಾರ ಹಗಲು 11 ಘಂಟೆಗೆ ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಡಿಸಿ ಬೇಲೂರು ತಾಲ್ಲೂಕು ಅಮಲ್ದಾರರ ರೂಬರೂ ಬೇಲೂರು ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು, ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್‌ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಅಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೆ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್‍ಯಾರಾದರೂ ಪಡದರೆ ದರಖಾಸ್ತುದಾರನ ಪೂರಾ ಠೇವಣೀ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್‌ಯಾನೆ ನಿಯಮವಾದ ಸರ್ಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೇ ಖರ್ಚು ಮೊಬಲಗು ಮತ್ತು ಸರ್ಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರ್ಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣೀ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ಒಳಪಟ್ಟು ಅಖೈರ್ ಚಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಅಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಠೇವಣೀ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳದದ್ದನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದಲ್ಲದೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು, ಆದರೆ ಜಾಸ್ತೀ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು. ನಂತರ ನಡದ ಹರಾಜಿನಲ್ಲಿ ಹುಟ್ಟಿದ ಮೊಬಲಗು, ಹಣ ಕೊಡಲು ತಪ್ಪಿದಂಥಾ ಷುರೂ ಹರಾಜುದಾರನ ಸವಾಲ್ ಮೊಬಲಗಿಂತಲೂ ಕಮ್ಮಿಯಾದಲ್ಲಿ ಆ ಮೇರೆ ಕಮ್ಮಿಯಾದ ಮೊಬಲಗನ್ನು ಸದರೀಯವನಿಂದ ರವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಆದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೇ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ, ವಿಸ್ತೀರ್ಣ.	ಆಕಾರ.	ಷರಾ.
2 ಪೈಕಿ ಫೋಡಾದ ನಂಬರು 172.	ಮಿಸ್ಟರ್ ಜೆ. ಜಿ. ಎಚ್. ಕ್ರಾಫರ್ಡ್ ಸಾಹೆಬರು.	ದೊಡ್ಡಬಿಕ್ಕೋಡು ಗ್ರಾಮ.	ಉತ್ತರಕ್ಕೆ—ಸರ್ವೆ ನಂ. 7, 8, 9, 10 ಮತ್ತು ಮಳೆ ದಕ್ಷಿಣಕ್ಕೆ—ಸರ್ವೆ 2ನೇ ನಂಬರು ಪೈಕಿ ಭಾಗ ಪೂರ್ವಕ್ಕೆ—ಸರ್ವೆ ನಂ. 88 ಮತ್ತು 1 ಪಶ್ಚಿಮಕ್ಕೆ—ಸರ್ವೆ 2ನೇ ನಂಬರು ಪೈಕಿ ಭಾಗ	ಎ. ಗು. 109—24		ಖಾಯಂ ಕಂದಾಯ ಎಕರೆ 1ಕ್ಕೆ 1—8—0 ಹಂಗಾಮಿ ಕಂದಾಯ ಡಿಟೋ 1—0—0 ಜಮೀನ್ ಪಡಿಯುವನ ಇಷ್ಟದಂತೆ ಇದು ನಿರ್ಧರಪಡಿಸಲ್ಪಡತಕ್ಕದ್ದು.

ತಿಳುವಳಿಕೆ ಷರಾ,—ಒಂದು ಸರ್ವೇ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೇ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತಿ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ್ ಹಿಡುವಳಿದಾರನು ಬದ್ಧ ವ ಅರ್ಹನಾಗಿರಬೇಕು.

ಪಿ. ಎನ್. ಪೂರ್ಣಯ್ಯ,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 10ನೇ ಮೇ 1895.

ಶೇಕಡಾ ಹತ್ತು ರೂಪಾಯಿ ಇನಾಂ.

ಸನ್ 1895ನೇ ಇಸವಿ ಏಪ್ರಿಲ್ ತಾರೀಖು 30ನೇ ರಾತ್ರೆ ಶಿವಮೊಗ್ಗಾ ಡಿಸ್ಟ್ರಿಕ್ಟು ಸೊರಬ ತಾಲ್ಲೂಕು ಕುಮ್ಮೂರ ಗ್ರಾಮದಲ್ಲಿ ಜಾಡರಭೀಮನ ಮನೆ ಕಳವು ಮಾಡಿಕೊಂಡು ಹೋದ ಅಪರಾಧಿಗಳನ್ನ ಮಾಲ್‌ನಿಶಿ ಪತ್ತೆ ಆಗತಕ್ಕ ವರ್ತಮಾನವನ್ನು ಕೊಡಬಹುದಾದ ಯಾವ ಇಸಂ ಅಥವಾ ಇಸಂಗಳಿಗೆ ಶೇಕಡಾ ಹತ್ತು ರೂಪಾಯಿನಂತೆ ಮಾಲೀಕನಿಂದ ಇನಾಂ ಕೊಡಲ್ಪಡುತ್ತದೆ.

(ಸೊರಬ ತಾಲ್ಲೂಕು ಕ್ರಿಮಿನಲ್ ನಂ. 44—1894—95)

	ರೂ.	ಆ.	ಪೈ.
I. ಒಂದು ಸಣ್ಣ ಮರನ ಸಂದೂಕದಲ್ಲಿದ್ದದ್ದು.			
1 ಗಿಣಿ ಹಚ್ಚಿದ ಭಂಗಾರದ ವಾಲೆ ಜೊತೆ ಒಂದಕ್ಕೆ 3 ಜುಮಕಿಗಳು ಹಚ್ಚಿದ್ದರ ಬಾಬತು ..	60	0	0
1 ಭಂಗಾರದ ಗೆಜ್ಜೆ ಟೀಕೆ 49 ಅಡ್ಡಿಕೆಗಳು ಇರುವದು	35	0	0
1 ಗೊಂಬೆ ಅಡ್ಡಿಕೆ 25 ಅಡ್ಡಿಕೆಗಳು ಇರುವದು	12	0	0
3 ಭಂಗಾರದ ಬಾಬತು ಮೂರು ಬುಗಡಿ ಜೊತೆ ಮುತ್ತು ಹಚ್ಚಿದ್ದರ ಬಾಬತು ..	40	0	0
II. ತಾಂಬ್ರದ ಭರಣಿಯಲ್ಲಿದ್ದದ್ದು.			
1 ಬೆಳ್ಳಿವುಡದಾರ 24 ರೂಪಾಯಿ ತೂಕದ ಬಾಬತು	18	0	0
1 ಬೆಳ್ಳಿ ಪಟ್ಟಿ	12	0	0
III. ಒಂದು ಮಣ್ಣಿನ ಮಗಿಯಲ್ಲಿಟ್ಟಿದ್ದದ್ದು.			
1 ಬೆಳ್ಳಿ ಕಾಲುಸರಪಳಿ ಜೊತೆ ಒಂದು	16	0	0
1 ಬೆಳ್ಳಿ ಪಾಡಗದ ಜೊತೆ ಒಂದು	12	0	0
1 ಬೆಳ್ಳಿ ದಸರೀಫ್—13 ತಾಳಿಗಳು ಇರುವದು ಜೊತೆ ಒಂದು	10	0	0
1 ಬೆಳ್ಳಿ ಮುಂಗೈ ಬಳೆ ಜೊತೆ ಒಂದು	10	0	0
1 ಬೆಳ್ಳಿ ತಾಯಿತಿ ಸೊಂಟಕ್ಕೆ ಹಾಕತಕ್ಕದ್ದು	6	0	0
IV. 25 ಭಂಗಾರದ ಹಳೆ ಇಕ್ಕೇರಿ ನಾಣ್ಯಗಳು	150	0	0
ಬೆಳ್ಳಿ ಯರಡು ಆಣೆ ಮತ್ತು 4 ಆಣೆಗಳು	14	0	0
500 ನಗದು ಸರಕಾರೀ ರೂಪಾಯಿಗಳು	500	0	0
V. 4 ಧೋತ್ರಗಳು ಎರಡು ಹಳೇದು ಯರಡು ಹೊಸದು ರೇಷ್ಮೆ ಅಂಚು ವುಳ್ಳದ್ದು ..	3	0	0
1 ಹಳೆ ಬಿಳೇ ರುಮಾಲು	0	4	0
2 ಹಳೆ ಶೀರೆಗಳು	0	8	0
1 ಹೊಸ ರೇಷ್ಮೆ ಅಂಚಿನ ಶೀರೆ	6	0	0
ಜುಮ್ಲಾ....	905—12—0		

ವಿ. ಏ. ಗೋಪಾಲಯ್ಯಂಗಾರ್,
ಪೊಲೀಸ್ ಅ|| ಸೂಪರಿಂಟೆಂಡೆಂಟ್.

ಹರಾಜ್ ಇಸ್ತಿಹಾರ್.

ಕಡೂರು ಡಿಸ್ಟ್ರಿಕ್ಟು ಡೆಪ್ಯುಟ ಕಮ್ಮಿಷನರ್ ಸಾಹೇಬರವರ ಆಫಿಸಿನಿಂದ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಕಡೂರಿನಲ್ಲಿ ಯಿರುವ ತಾಲ್ಲೂಕು ಕಚ್ಚೇರಿಯ ಕಟ್ಟಡ ಮತ್ತು ಅದಕ್ಕೆ ಶೇರಿದ ಕಂಪವಂಡ್ ಸಹ, ಈ ಕಟ್ಟಡವು ಕಡೂರಿನ ಕೋಟೆವಳಗೆ ರೈಲ್ವೆಸ್ಟೇಷನ್ಗೆ ಸಮೀಪವಾಗಿ ಯಿರುತ್ತೆ. ಇದು ಮಹಡಿ ಯಿರುವ ಕಟ್ಟಡ ಮತ್ತು ಕಂಪವಂಡಿನ ವಳಗೆ ವಟ್ಟು ಯಿತರ ನಾಲ್ಕು ಮನೆಗಳು ಯಿರುತ್ತೆ. ಆಳತೆ 1623½ ಚದರಗಜವುಳ್ಳದ್ದಾಗಿ ಸುತ್ತಲು ಪಾಳಿಗೋಡೆ ಇಧೆ. ಯಿದು ನೇಟಿವ್ ಜನಗಳವಾಸದ ಮನಿಗೆ ಅತ್ಯಂತಯೋಗ್ಯವಾದ್ದಾಗಿಯಿಧೆ ಈ ಕಟ್ಟಡಕ್ಕೆ ವುಪಯೋಗಿಸಿರುವ ಫಖ್ತು ಚೌಬಿನೆ ಸಾಮಾನ್ 3,065 ರೂಪಾಯಿ ಕಿಮ್ಮತುಬಾಳತಕ್ಕದ್ದಾಗಿಧೆ.

ಈ ಕಟ್ಟಡವು ಜಾಗಾ ದೇಖೀಲ್ 4,000 ರೂಪಾಯಿನ ಅಂದಾಜಾ ಕಟ್ಟಿ 1895ನೇ ಇಸವಿ ಜೂನ್ ತಾರೀಖು 15ರಲ್ಲು ಸ್ಥಳದಲ್ಲಿ ಹರಾಜು ಮಾಡಲ್ಪಡುತ್ತೆ ಈ ಹರಾಜು ಈ ಕೆಳಗಿನ ಷರತ್ತುಗಳಿಗೆ ವಳಪಟ್ಟಿದ್ದಾಗಿರುತ್ತೆ.

1. ಈ ಕಟ್ಟಡವು ಜಾಗಾ ದೇಖೀಲ್ 4,000 ರೂಪಾಯಿನ ಮೇಲೆ ಭಡಸವಾಲ್ ಮಾಡುವವರಿಗೆ ಗವರ್ನಮೆಂಟ್ ಮಂಜೂರಿಗೆ ವಳಪಟ್ಟು ನಿಲ್ಲಿಸಲ್ಪಡುತ್ತೆ. ಹೊಸ ತಾಲ್ಲೂಕು ಕಚ್ಚೇರಿ ಕಟ್ಟಡ ತಯಾರಾಗುವವರಿಗೂ ಹಳೇ ಕಟ್ಟಡವನ್ನ ಹರಾಜುದಾರರ ಸುಫರ್ದ್ ಮಾಡುವದಿಲ್ಲಾ ಮತ್ತು ಅದಕ್ಕೆ ಬಾಡಿಗೆಯೂ ಕೊಡುವದಿಲ್ಲ.

2. ಹರಾಜು ಖೈದಾದ ಕೂಡ್ಲೆ ಭಡ ಸವಾಲ್‌ದಾರನು ಹರಾಜು ಮೊಬಲಗ್ಯೆ ಶೇಕಡಾ 25 ರೂಪಾಯಿನಂತೆ ಮೊಬಲಗು ಠೇವಣೀ ಹಾಜರ್ಮಾಡಬೇಕು ಜಾತಾ ಬಾಕಿ ಆಗುವ ಹರಾಜು ಮೊಬಲಗನ್ನ ಹರಾಜು ತಾರೀಖು ಲಾಗಾಯಿತು 3 ತಿಂಗಳ ವಳಗಾಗಿ ಹಾಜರ್ಮಾಡಬೇಕು. ಹೀಂಗೆ ಮಾಡದೆ ತಪ್ಪಿದಲ್ಲಿ ಹರಾಜುದಾರನ ನಷ್ಟಕ್ಕೆ ಗುರಿಪಡಿಸಿ ಪುನಹ ಹರಾಜು ಮಾಡುವದರಲ್ಲಿ ಬರುತ್ತೆ, 2ನೇ ಹರಾಜಿನಲ್ಲಿ ಕಮ್ಮಿಬರುವ ಮೊಬಲಗನ್ನ ಅವನ ಕೈಯಿಂದ ಭರ್ತಿಮಾಡಬೇಕು, ಆದರೆ ಜಾಸ್ತೀ ಹುಟ್ಟಿದಲ್ಲಿ ಅಂತಾ ಜಾಸ್ತೀ ಮೊಬಲಗ್ಯೆ ಅವನ ಹಕ್ಕೇನೂ ಯಿರುವದಿಲ್ಲ.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮ್ಮಿಷನರ್,

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ. ಮತ್ತು ಸದರೀ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಿಷ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು.	
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ಸ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್,ಶಾನುಭೋಗರುಗಳು ಆಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ವಂದು ಸರಟಿಫಿಕೇಟನ್ನು ಪಡೆದು ಹಾಜರ್‌ಮಾಡಬೇಕಾಗಿರುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟು ಬಗ್ಗೆ ನೋಟಿಸಗಳು:—

ಮೊದಲನೇ ದಫಾ ಘಾಯಿಷ್ ಮಾಡತಕ್ಕ ಬಗ್ಗೆ (ಇಂಗ್ಲೀಷು ಅಥವಾ ಕನ್ನಡ) ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ಸ ಅನುಸರಿಸಿ ದಿವಾಳೀ ಅಪ್ಲಿಕೇಷನ್ಸಗಳ ಬಗ್ಗೆ ನೋಟಿಸಗಳಿಗೆ :—

ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ಸಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸಗಳಿಗೆ :—

ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	" ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..	..	0	4

ಷರಾ.—ಚಂದಾ ವಗೈರೇ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರು ದಿವಾನರವರ ಚೀಫ್ ಸೆಕ್ರೆಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್ಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ಗೆಜೆಟ್ಟನಲ್ಲಿ ಛಾಪಿಲ್ಪಡುತ್ತೆಂಬ ಖಾತರ್ ಯಿಲ್ಲ.

ಟಿ. ಟಿ. ಲೆನಾರ್ಡ್,
ಮೈಸೂರ ಗೆಜೆಟ್ ಕಂಪೈಲರ್.

643

ಮೈಸೂರ ಗೆಜೆಟ್.

ನಂ. 20] ಸರ್ಕಾರದಿಂದ ಛಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಮೇ ತಾ|| 30, ಸ್ತ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ ಆಫಿಸರ್‌ಗಳು, ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷನ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್‍ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ **ಪತ್ರಗಳು.**—

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

೧ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 13ನೇ ಮೇ 1895.

ನಂ. 20649.—ಆರ್. 2933.—ಮೈಸೂರ್ ಸರ್ಕಾರದವರು ತಿಳಿಯಪಡಿಸುವದೇನಂದರೆ,—ಶ್ರೀನಿವಾಸಪುರದ ಸಬ್ ತಾಲ್ಲೂಕು ಸೋಮಯಾಜಲಪಲ್ಲಿ ಹೋಬಳಿಯ ಪಡಿಗೇಪಲ್ಲಿ ಗ್ರಾಮಕ್ಕೆ ಸೇರಿದ ರಂಗಂಪೇಟೆ ಗ್ರಾಮದ ಹೆಸರು, ಐಯಿಂದ ''ಮರಿಯಂಪೇಟೆ'' ಯಂಬದಾಗಿ ಬದಲಾಯಿಸಲ್ಪಟ್ಟಿರುತ್ತದೆ.

ತಾರೀಖು 15ನೇ ಮೇ 1895.

ನಂ. 20641.—ಜೆ. 5438.—ಕಡೂರು ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಬಿ. ಜೆ. ಕುಮಾರಸಾಮಿ ನಾಯಕ್ ಯವರು, 1895ನೇ ಇಸವಿ ಮಾರ್ಚಿ 19ನೇ ಮುಕ್ಕಾಂ ಪೂರ್ವಾಹ್ನದಿಂದ ಮೇ ಗುರ್ರೇ ತಾರೀಖು ಮಧ್ಯಾಹ್ನಾತ್ಪರದವರೆಗೂ ಕಡೂರು ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜಿನಲ್ಲಿದ್ದರು.

2. ಸದರೀ ಕಾಲದಲ್ಲಿ ಕಡೂರು ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಆಫಿಸ್ ಚಾರ್ಜಿನಲ್ಲಿದ್ದ ಅದೇ ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮ್ಮಿಷನರಾದ ಮೆಸ್ಟರ್ ಜೆ. ಡಬ್ಲಿಯು. ನೈಟ್ ಸಾಹೆಬರವರು, 1895ನೇ ಇಸವಿ ಮೇ ಗುರ್ರೇ ತಾರೀಖಿನ ಮಧ್ಯಾನ್ಹಾತ್ಪರ ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜನ್ನು ವಹಿಸಿದರು.

ನಂ. 20746.—ಜಿ. ಎಫ್. 15-92.—ಹಾಸನ ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ವಿ. ಶ್ರೀನಿವಾಸಾಚಾರ್ಲು ಯವರಿಗೆ, 1895ನೇ ಇಸವಿ ಏಪ್ರೆಲ್ 2ನೇ ಮುರ್ಸ್ಕಂ 16452—ಜಿ. 4596ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ 1894ನೇ ಡಿಸೆಂಬರ್ 10ನೇ ಮುರ್ಸ್ಕಂ ಲಾಗಾಯತು 12 ದಿವಸಗಳ ಕ್ಯಾಜುಯಲ್ ರಜಾವು ಒಂದು ದಿವಸ ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 21ನೇ ಮೇ 1895.

ನಂ. 21127.—ಜಿ. 5496.—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 172ನೇ ಆರ್ಟಿಕಲ್ ಮೇರೆ, ಹಾಸನ ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ವಿ. ಶ್ರೀನಿವಾಸಾಚಾರ್ಲು ಯವರಿಗೆ, 1895ನೇ ಮೇ 29ನೇ ಮುರ್ಸ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು 10 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಮೇ 1895.

ನಂ. 21157.—ಜಿ. 5502.—ಮೈಸೂರಿಗೂ ಮಡಿಕೇರಿಗೂ ಹೋಗತಕ್ಕ ಬ್ರಿಟಿಷ್ ಮೆಯಿಲ್ ಟೊಂಗಾ ಸರ್ವಿಸ್ ಟಪಾಲನ್ನು ಟೋಲ್‌ಯಾನೆ ಸುಂಕ ಕೊಡುವದರಿಂದ ಮೈಸೂರ್ ಸರ್ಕಾರದವರು ವಿನಾಯಿಸಿರುತ್ತಾರೆ.

2. ಈ ವಿನಾಯತಿಯು ಮೆಯಿಲ್ ಯಾನೆ ಟಪ್ಪಾಲನ್ನು ಸೀದಾ ಹೊತ್ತುಕೊಂಡು ಹೋಗುವ ಟೊಂಗಾಗಳಿಗೆ ಮತ್ತು ಅವುಗಳನ್ನು ವಾಪಸ್ ತೆಗದುಕೊಂಡು ಬರುವ ತಟ್ಟುಗಳಿಗೆ ಮಾತ್ರವೇ ಲಗಾವಾಗತಕ್ಕದ್ದು.

ಹುಕುಂ ಬಮೋಜೀಬ್;
ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರೆಟರಿ.

ನಂ. 18928—ಜಿ. 1175, ತಾ॥ 23ನೇ ಏಪ್ರೆಲ್ 1895.

ಖೈದಿಗಳನ್ನು ಹಾಜರ್‌ಪಡಿಸಿಕೊಂಡು ಅವರ ಸಾಕ್ಷ್ಯವನ್ನು ತೆಗದುಕೊಳ್ಳುವ ಬಗ್ಯೆ ಅವರ ಮೇಲೆ ಪ್ರೊಸೆಸ್ ಜಾರಿಯಾಗುವ ಬಗ್ಯೆ ಸೌಲಭ್ಯಗಳನ್ನುಂಟುಮಾಡಲು ಹುಟ್ಟಿದ ರೆಗ್ಯುಲೇಷನ್ಸ್ ಅಂದರೆ 1894ನೇ ಇಸವಿಯ Vನೇ ನಂಬರ್ ರೆಗ್ಯುಲೇಷನಿನ 8ನೇ ಸೆಕ್ಷನ್ಸ್ ನಿಯಮಗಳನುಸರಿಸಿ, ಮೈಸೂರು ಸರ್ಕಾರದವರು ಆಜ್ಞಾಪಿಸುವದೇನಂದರೆ—ಯಾವ ಸಿವಿಲ್ ಯಾ ಕ್ರಿಮಿನಲ್ ಕೋರ್ಟಿನವರಾಗಲಿ ಇದರಡಿಕಂಡ ಖೈದಿಗಳು ಯಾ ಆ ತರಗತಿಗೆ ಸೇರಿದ ಖೈದಿಗಳನ್ನು ಅವರ ಸಾಕ್ಷ್ಯವನ್ನು ತೆಗದುಕೊಳ್ಳುವದಕ್ಕೋಸ್ಕರ ಬಂದೀಖಾನೆಯಿಂದ ಆಜೆಗೆ ಬರಮಾಡಿಕೊಳ್ಳಲು ಪ್ರೊಸೆಸ್ ಮೂಲಕ ಬಲಾತ್ಕರಿಸಕೂಡದು.

(*a*) ಮರಣ ದಂಡನೆ ಪಡೆದ ಖೈದಿಗಳು.
(*b*) ತಹ ಉಮ್ಮ್ರರ್ ಸಜಾ ಪಡೆದ ಖೈದಿಗಳು.
(*c*) ಕ್ರೂರಸ್ವಭಾವವುಳ್ಳ ಮತ್ತು ಅಂಥಾವರುಗಳನ್ನು ಹೊರಗೆ ಕರಿಸೋಣದರಿಂದ ಅಪಾಯವುಂಟಾಗಬಹುದೆಂದು ಜೈಲ್ ಯಾ ಲಾಕಪ್ ಚಾರ್ಜುಳ್ಳ ಆಫಿಸರರು ಅಭಿಪ್ರಾಯಪಡುವಂಥಾ ಖೈದಿಗಳು.

ಮೇಲೆ ನಮೂದ್ಮಾಡಲ್ಪಟ್ಟ ಯಾವದಾದರೂ ತರಗತಿಗೆ ಸೇರಿದ ಯಾವ ಖೈದಿಯಾದರೂ ಕೋರ್ಟಿನಲ್ಲಿ ಹಾಜರಾಗುವ ಬಗ್ಯೆ ದರಖಾಸ್ತು ತಲಪಿದ ಸಂದರ್ಭದಲ್ಲಿ, ಅಂಥಾ ದರಖಾಸ್ತನ್ನು ಜಾರಿಮಾಡದೆ, ಹಾಗೆ ಜಾರಿಮಾಡದೆ ಇರುವ ಬಗ್ಯೆ ತಕ್ಕ ಕಾರಣವನ್ನು ಅದರ ಮೇಲೆ ಇಂಡಾರ್ಸ್ ಮಾಡಿ ವಾಪಸ್ ಮಾಡುವದು ಜೈಲ್ ಯಾ ಬಂದೀಖಾನೆಯ ಚಾರ್ಜುಳ್ಳ ಆಫಿಸರಿಗೆ ನ್ಯಾಯವಾಗಿರತಕ್ಕದ್ದು.

2. ಸದರೀ ರೆಗ್ಯುಲೇಷನ್ಸ್ 17ನೇ ಸೆಕ್ಷನಿನ ನಿಯಮಗಳನುಸರಿಸಿ, ಮೈಸೂರು ಗವರ್ಣಮೆಂಟಿನವರು ಮತ್ತು ಆಜ್ಞಾಪಿಸುವದೇನಂದರೆ—ಬೆಂಗಳೂರು ಸೆಂಟ್ರಲ್ ಜೈಲ್ ವ ಮೈಸೂರು ಶಿವಮೊಗ್ಗಾ ಜೈಲ್‌ಗಳ ವಿಷಯದಲ್ಲಿ, ಆಯಾ ಜೈಲಿನ ಸೂಪರಿಂಟೆಂಡೆಂಟರೂ, ಡಿಸ್ಟ್ರಿಕ್ಟ್ ವ ತಾಲ್ಲೂಕು ಲಾಕಪ್‌ಗಳ ವಿಷಯದಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರಾಗಲಿ, ಅಥವಾ ಲಾಕಪ್ಪಿನ ಚಾರ್ಜುಳ್ಳ ಆಫಿಸರರಾಗಲಿ, ಈ ರೆಗ್ಯುಲೇಷನಿನ ಉದ್ದಿಶ್ಯಗಳಿಗಾಗಿ ಜೈಲ್ ಚಾರ್ಜುಳ್ಳ ಆಫಿಸರರೆಂದು ಎಣಿಸಲ್ಪಡತಕ್ಕದ್ದು. ಮತ್ತು ಈ ರೆಗ್ಯುಲೇಷನಿಗೆ ಲಗತ್ಮಾಡಲ್ಪಟ್ಟ ಷೆಡ್ಯೂಲಿನ *A*, *B*, ನಮೂನೆಗಳಲ್ಲಿ ದರಖಾಸ್ತುಗಳು ಸಂದರ್ಭಾನುಸಾರ ಅವರುಗಳಿಗೆ ಕಳುಹಿಸಲ್ಪಡತಕ್ಕದ್ದು.

3. ಒಬ್ಬ ಖೈದಿಯ ಹಾಜರಾತಿ ಬಗ್ಯೆ ಸಮ್ಮನ್ಸ್ ಕಳುಹಿಸುವ ಕೋರ್ಟಿನವರು, ಸದರೀ ರೆಗ್ಯುಲೇಷನಿನ 15ನೇ ಸೆಕ್ಷನ್ಸ್ ನಿಯಮಗಳಿಗೆ ಅನುಗುಣವಾಗಿ ಗವರ್ಣಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟ ನಿಬಂಧನೆಗಳ ಪ್ರಕಾರ ಆಗಿಂದಾಗ್ಯೆ ಗೊತ್ತುಮಾಡಲ್ಪಡಬಹುದಾದ ಫೀಜುಗಳ ದರದಂತೆ ಖೈದಿಗಳ ಮತ್ತು ಅವರ ಪಹರೇ ಜನಗಳ ಪ್ರಯಾಣದ ಖರ್ಚು ಮತ್ತು ಭತ್ಯ ಇವುಗಳಿಗೆ ಬೇಕಾಗುವ ಮೊತ್ತವನ್ನು ಪ್ರೊಸೆಸ್ ಒಂದಿಗೆ ಕಳುಹಿಸತಕ್ಕದ್ದು.

ತಾರೀಖು 15ನೇ ಮಾರ್ಚಿ 1895.

ನಂ. 15230—R. F. 155—92.—ಮೈಸೂರು ದೇಶದಲ್ಲಿ ಬಹಿರಂಗವಾದ ಹರಾಜು ಮೂಲಕ ಸಂದಲ್ ಬಿಕರೀ ಮಾಡುವ ಬಗ್ಗೆ ಹಾಲಿಜಾರೀಲಿರುವ ತಮಾಂ ರೂಲ್ಸುಗಳನ್ನು ರದ್ದುಮಾಡಿ ಇದರಡಿ ಬರುವ ತಿದ್ದುಪಾಟಾದ ರೂಲ್ಸ್ ಯಾನೆ ನಿಬಂಧನೆಗಳು ಮೈಸೂರು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಗೆ ಫಾಯಿಷ್ಮಾಡಲ್ಪಟ್ಟಿರುತ್ತವೆ:—

I. ನಡವಳಿತ.

1. ಪ್ರತಿ ಹರಾಜು ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಅವರಿಂದ ಮೊಕರರ್ಮಾಡಲ್ಪಟ್ಟ ಯಿತರ ಆಫಿಸರಿಂದ ಆಗಲೀ ಶೇರಿ ಫಾರೆಸ್ಟು ಆಫಿಸರವರಿಂದ ನಡಿಸಲ್ಪಡತಕ್ಕದ್ದು.

2. ಚಡದರಖಾಸ್ತುದಾರನು ಕ್ರಯದಾರನಾಗಿರತಕ್ಕದ್ದು. ಯಾವದಾದರೂ ಒಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾದರೆ, ಡಿಟೋ ಲಾಟು ಪುನಹ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ಒಂದು ಲಾಟನ್ನು ಹರಾಜಿನಲ್ಲಿ ತೆಗದುಕೊಂಡ ಕೂಡ್ಲೆ ಇದಕ್ಕಾಗಿಯೇ ಇಟ್ಟಿರುವ ಬುಕ್ಕಿನಲ್ಲಿ ತಾನು ಖರೀದಿಗೆ ತೆಗದುಕೊಂಡ ಲಾಟಿನ ನಂಬರು ಮತ್ತು ಅದರ ತಪಶೀಲು ನಮೂದಿಸಿರತಕ್ಕ ಸ್ಥಳಕ್ಕೆ ಯದುರಾಗಿ ರುಜು ಮಾಡತಕ್ಕದ್ದು. ಹಾಂಗೆ ರುಜುಮಾಡೋಣದರಿಂದ ಸದರೀ ಲಾಟನ್ನು ಆತನು ಖರೀದಿಗೆ ತೆಗದುಕೊಂಡದ್ದು ಅಂಗೀಕಾರ ಪಟ್ಟಂತೆ ತಿಳಿಯತಕ್ಕದ್ದು. ಈ ರೂಲ್ಸಿನ 6ನೇ ಪ್ಯಾರಾ ಮೇರೆ ಫಾರೆಸ್ಟು ಆಫಿಸರವರಿಂದ ತೂಕಾ ಮಾಡಲ್ಪಡುವ ತನಕ, ಹೀಗೆ ವಿಕ್ರಯಿಸಲ್ಪಟ್ಟ ಲಾಟು, ಕದಲಿಸದಂತೆ ಇರತಕ್ಕದ್ದು.

II. ಮೊಬಲಗು ಪಾವತೀ ಕ್ರಮ.

4. ಹರಾಜಾದ ಕೂಡ್ಲೆ ಖರೀದೀದಾರನಿಂದ ಬರತಕ್ಕ ಒಟ್ಟು ಮೊಬಲಗು ನಮೂದುನಿಸಿ ಒಂದು ಯಾದಿಯನ್ನು ಮತ್ತು ಡಿಪಾಜಿಟ್ಟು ತರೀಕು ಒಟ್ಟು ಮೊಲಗಿನ ಮೇಲೆ ಶೇಕಡಾ 25ರಂತೆ ಆಗುವ ಮೊಬಲಗನ್ನು ಆ ಸ್ಥಳದ ತಾಲ್ಲೂಕು ಖಜಾನೆಯಲ್ಲಿ ಆಗಲಿ ಅಥವಾ ಅಂಥಾ ಖಜಾನೆಯಿಲ್ಲದ ಪಕ್ಷದಲ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿಯೇ ಆಗಲಿ, ಹರಾಜು ತಾರೀಖು ಲಾಗಾಯತು 3 ದಿವಸಗಳೊಳಗಾಗಿ ಕೂಡ್ಲೆ ಪಾವತಿ ಮಾಡಲಿಕ್ಕೆ ಒಂದು ಲೆಟರ್ ಆಫ್ ಅಡ್ವಯಿಸ್ ಯಾನೆ ಮೇಲ್ ಕಾಗದವನ್ನು ಸುದಾ ಪ್ರತಿ ಖರೀದೀದಾರನಿಗೆ ಕೊಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫೀಸರರು ಒಂದು ರಶೀದಿಯನ್ನು ಕೊಡತಕ್ಕದ್ದು. ಆ ರಶೀದೀಯನ್ನ 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟು ಆಫೀಸರವರ ಬಳಿ ಹಾಜರ್ಮಾಡಬೇಕು. ಫಾರೆಸ್ಟು ಆಫೀಸರರು ಆ ರಸೀದೀ ಮೇಲೆ ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಆದಕ್ಕೆ ತಮ್ಮ ಚಿಕ್ಕ ಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲೀ ಈ ನಿಬಂಧನೆಗೆ ತಪ್ಪಿನಡದರೆ ಹಾಂಗೆ ತಪ್ಪಿಹೋದ ಕ್ರಯದಾರನಿಂದ ಖರೀದೀ ಮಾಡಲ್ಪಟ್ಟಿದ್ದ ಸಂದಲ್ ಮರವನ್ನು ಪೂರ್ತಿಯಾಗಿ ಯಾಗಲೀ ಯಾ ಅದರ ಪೈಕಿ ಒಂದು ಭಾಗವನ್ನಾಗಲೀ ಕೂಡ್ಲೆ ಮರಳಿ ಹರಾಜು ಮಾಡಿಸಲಿಕ್ಕೆ ಫಾರೆಸ್ಟು ಆಫೀಸರರಿಗೆ ಯಖ್ತಿಯಾರಿಯಿರತಕ್ಕದ್ದು. ಹಾಗೆ ಮರಳಿ ಹರಾಜು ಮಾಡೋಣದರಿಂದ ವುಂಟಾಗುವ ನಷ್ಟಕ್ಕೆ ಅವ್ವಲ್ ಖರೀದೀದಾರನೇ ಗುರಿಯಾಗಿರತಕ್ಕದ್ದು. ಪರಂತು ಯರಡನೇ ಹರಾಜಿನಿಂದ ಉಂಟಾಗುವ ನಫೆಗೆ ಆತನು ಅರ್ಹನಾಗುವದಿಲ್ಲವು.' ಹಾಂಗೆ ತಪ್ಪಿಹೋದವನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡತಕ್ಕದ್ದು. ವಾಡಿಕೆಯಾಗಿ ಭಾರೀ ಖರೀದಿಮಾಡುವ ಗಿರಾಕಿಗಳ ಅನುಕೂಲ್ಯಕ್ಕೋಸ್ಕರ ಅಂಥಾವರುಗಳಿಂದ ಟಪ್ಪಾಲ್ ದ್ವಾರಾ ರೆಜಿಸ್ಟರ್ ಲಖೋಟೆ ಮೂಲಕ "ಬೆಂಗಳೂರಲ್ಲಿರುವ ಸ್ಟೇಟ್ ಹುಜೂರು ಟ್ರೆಜರೀ ಆಫೀಸರ ಹೆಸರಿಗೆ" ಮುಂದಾಗಿ ಕಳುಹಿಸಲ್ಪಡುವ ಕರ್ರೆನ್ಸೀ ನೋಟುಗಳು ಡಿಪಾಜಿಟ್ ತರೀಕ ಅಂಗೀಕರಿಸಲ್ಪಡುತ್ತೆ. ಅಲ್ಲದೆ ಸದರೀ ಆಫೀಸರರ ಹೆಸರಿಗೆ ಮದರಾಸ್ ಬ್ಯಾಂಕ್ ಮೂಲಕ ಕಳುಹಿಸಲ್ಪಡುವ ಅಥವಾ ಮದರಾಸ್ ಬ್ಯಾಂಕಿಗೆ ಪಾವತೀ ಮಾಡಲ್ಪಡುವ ಮೊಬಲಗುಗಳು ಅಂಗೀಕರಿಸಲ್ಪಡುತ್ತವೆ. ಇಂಥಾ ಡಿಪಾಜಿಟ್ಟುಗಳ ದೆಶೆಯಿಂದ ಮರವನ್ನು ಡಿಪಾಜಿಟ್ಟುದಾರರಿಗೆ ಮಾರುವದಕ್ಕಾಗಲೀ ಅಥವಾ ಇತರರಿಗೆ ಯಿಲ್ಲದ ರಿಯಾಯತೀ ತೋರಿಸುವದಕ್ಕಾಗಲೀ ಅಥವಾ ಅವರುಗಳನ್ನು ಈ ರೂಲ್ಸಿಗೆ ವಳಪಡದಂತೆ ವಿನಾಯಿಸುವದಕ್ಕಾಗಲಿ ಫಾರೆಸ್ಟು ಇಲಾಖೆಯವರು ಬದ್ಧರಾಗಿರುವದಿಲ್ಲವು. ಹುಜೂರು ಟ್ರೆಜರೀ ಆಫೀಸರರು, ಹಾಜರಾದ ತಮಾಂ ಡಿಪಾಜಿಟ್ಟುಗಳೂ ಖಜಾನೆಯಲ್ಲಿ ಜಮಾ ಆದ ತಾರೀಖಿನ ದಿವಸವೇ ಆಯಾ ಫಾರೆಸ್ಟು ಆಫೀಸರುಗಳಿಗೆ ತಿಳಿಸುವದಕ್ಕೋಸ್ಕರ ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್ಯವರಿಗೆ ತಿಳಸತಕ್ಕದ್ದು. ಮತ್ತು ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್ಯವರು ತಿಳಿಸುವ ಪ್ರಕಾರ ಅಂಥಾ ಡಿಪಾಜಿಟ್ಟುಗಳನ್ನು ವ್ಯವಸ್ಥೆ ಮಾಡತಕ್ಕದ್ದು. ವುಪಯೋಗಪಡಿಸಲ್ಪಡದಂಥಾ ಡಿಪಾಜಿಟ್ಟುಗಳು ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್ಯವರ ಸರ್ಟಿಫಿಕೇಟಿನ ಮೇಲೆ ಅದಕ್ಕೆ ಸಂಬಂಧಪಟ್ಟ ಜನಗಳಿಗೆ ವಾಪಸ್ ಮಾಡಲ್ಪಡತಕ್ಕದ್ದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತೀ ಮಾಡಲ್ಪಡತಕ್ಕದ್ದು. ಹಾಗೆ ಪಾವತೀ ಮಾಡಲು ತಪ್ಪಿದರೆ ಠೇವಣಿ ಕೊಟ್ಟ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಲ್ಪಡತಕ್ಕದ್ದು. ಮತ್ತು ಅದು, ಪಾವತೀ ಮಾಡಲ್ಪಡಬೇಕಾದ ಮೊಬಲಗು ಪೈಕೀ ಒಂದು ಭಾಗವನ್ನಾಗಿ ಯಂದಿಗೂ ಯಣಿಸಲ್ಪಡಕೂಡದು. ಹಣ ಪಾವತೀಯಾಗದೇ ಇರುವ ಸಂದಲ್ ಮರವು ಪುನಹ ವಿಕ್ರಯಿಸಲ್ಪಡತಕ್ಕದ್ದು. ಪಾವತಿ ಮಾಡಲ್ಪಡಬೇಕಾದ ಮೊಬಲಗು ಕೋಠಿ ಯಿರುವ ತಾಲ್ಲೂಕಿನ ಖಜಾನೆಯಲ್ಲಿ ಆಗಲಿ ಅಥವಾ ಡಿಸ್ಟ್ರಿಕ್ಟು ಖಜಾನೆಯಲ್ಲಿಯೇ ಆಗಲಿ, ಖರೀದೀದಾರರು ಇತರ ಯಾವ ಗವರ್ನಮೆಂಟ್ ಟ್ರೆಜರೀಯಲ್ಲಿ ಹಣ ಪಾವತೀ ಮಾಡಬಹುದೆಂದು ಅಪ್ಪಣೆಯಾಗಿರುವ ಸಂದರ್ಭಗಳು ವಿನಹ, ಅನ್ಯಥಾ ಮತ್ಯಾವ ಖಜಾನೆಯಲ್ಲಿಯೂ ಪಾವತೀ ಮಾಡಲ್ಪಡಕೂಡದು. ಮೇಲೆ ಕಂಡ ಪ್ಯಾರಾ ಅನುಸರಿಸಿ ಠೇವಣಿದಾರರು ಪ್ರತಿವಂದು ಕೋಠಿಯಲ್ಲಿ ಕೊಂಡುಕೊಂಡಂಥಾ ಸಂದಲ್ ಮರಗಳಿಗೆ ಕೊಡಬೇಕಾದ ಬಾಕೀ ಹಣವನ್ನ ಹುಜೂರು ಟ್ರೆಜರೀಯಲ್ಲಿ ಪಾವತಿಮಾಡಬಹುದು. ಮತ್ತು ಇದಕ್ಕಾಗಿ ಹುಜೂರು ಟ್ರೆಜರೀ ಯಿಂದ ಪಡದಂಥಾ ರಶೀದಿಯು ಹಣಪಾವತೀ ಆಯಿತೆಂಬದಾಗಿ ಕ್ರಯಕ್ಕೆ ಕೊಟ್ಟ ಆಫೀಸರವರಿಂದ ಎಣಿಸಲ್ಪಡತಕ್ಕದ್ದು. ಹುಜೂರು ಟ್ರೆಜರೀ ಆಫೀಸರವರು ಆಯಾಸಂಬಂಧಪಟ್ಟ ಫಾರೆಸ್ಟು ಆಫೀಸರವರಿಗೆ ತಿಳಿಸುವದಕ್ಕೋಸ್ಕರ ಹೀಂಗೆ ಜಮಾ ಮಾಡಲ್ಪಡುವ ತಮಾಂ ಮೊಬಲಗಿನ ವಿಷಯವಾಗಿ ಫಾರೆಸ್ಟುಯಿನ್ಸ್ಪೆಕ್ಟರ್ ಜನರಲ್ಯವರಿಗೆ ತಿಳಿಸತಕ್ಕದ್ದು.

III. ಸಂದಲ್ ತೂಕಾ ಮಾಡೋಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ಒಟ್ಟು ತೇದಾದು ಮರಗಳು ಫಾರೆಸ್ಟು ಆಫೀಸರಿಂದ ಖುದ್ದಾಗಿಯಾಗಲಿ ಯಾ ಅವರ ಗೈರುಹಾಜರೀಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫೀಸರಿಂದಾಗಲಿ ಖುದ್ದು ತೂಗಿಸಲ್ಪಡ

ತಕ್ಕದ್ದು. ಪ್ರತಿ ಕೋಠೀಯಲ್ಲಿ ವಿಕ್ರಯಿಸಲ್ಪಟ್ಟ ಮರಗಳ ವಜನೀಕೆಲಸವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸಲ್ಪಡತಕ್ಕದ್ದು. ತೂಕಾ ಮಾಡುವಲ್ಲಿ ಜಾಸ್ತಿ ಕಾಣಬಂದರೆ ಅಂಥಾ ಜಾಸ್ತಿಯನ್ನ ವಜಾ ಮಾಡಲ್ಪಡತಕ್ಕದ್ದು. ಯೇನಾದರೂ ಕಮ್ಮಿಬಿದ್ದಲ್ಲಿ ತೂಕಾ ನಡಿಸುವ ಆಫೀಸರು ಭರ್ತಿಮಾಡಿಸಿ ಛಾಪಾ ಹಾಕಬಹುದಾದ ಪ್ರತಿ ತುಂಡಿಗೂ ಛಾಪಾ ಹಾಕಿ ಪೂರ್ತಿಯಾಗಿ ಅವು ಸಾಗಿಹೋಗುವದರೊಳಗಾಗಿ ಅವುಗಳಿಗೆ ಹೆಚ್ಚುಕಡಿಮೆ ಸಂಭವಿಸದಂತೇ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನ ವಹಿಸತಕ್ಕದ್ದು.

ಈ ರೀತಿಯಾಗಿ ಒಂದು ದಫಾ ಸರಿಮಾಡಲ್ಪಟ್ಟ ಮರಗಳು ಒಣಗುವ ದೆಸೆಯಿಂದ ಆಗಲಿ ಇತರ ಕಾರಣಗಳಿಂದಾಗಲಿ ನಷ್ಟವಾದರೆ ಆ ನಷ್ಟವು ಖರೀದಿದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನ ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫಿಸರವರು ಅಥವಾ ತೂಗಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫಿಸರು ತಮಗೆ ಅನುಕೂಲವಾದಾಗ್ಯೆ ಲಾಟುಗಳನ್ನ ತೂಗಿಸಿ ಮುದ್ರೆ ಹಾಕಿ ಮೊಹರು ಮಾಡತಕ್ಕದ್ದು. ಆ ಬಳಿಕ ಖರೀದಿದಾರನು ಮಾಡುವ ಯಾವ ಫಿರ್ಯಾದಿಗಾಗತಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕಾ ಮಾಡುವ ಬಗ್ಯೆ ತಗಲುವ ಲಾಗುವಡು ಸರಕಾರದವರಿಂದ ವಹಿಸಲ್ಪಡುವದು. ಆದರೆ ಕೋಠಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದಿದಾರನಿಂದ ವಹಿಸಲ್ಪಡತಕ್ಕದ್ದು. ಯಾವ ಖರೀದಿದಾರನಾಗಲಿ ಮುಂಚಿತವಾಗಿ ಸಂದಲ್‌ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್‌ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದಿದಾರನಿಗೆ ಮರಗಳನ್ನ ಫಾರೆಸ್ಟ್ ಆಫಿಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫಿಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವರಿಗೂ ಯಾವ ಖರೀದಿದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಠೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಛಾಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಠೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು; ಅಂಥಾ ಮರಗಳು ಹರಾಜ್ ತಾರೀಖು ಲಾಗಾಯತು ತೊಂಭತ್ತು ದಿನಗಳಿಗೆ ಜಾಸ್ತಿಯಾಗಿ ಕೋಠಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ವುತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ಟನ್ ವಂದಕ್ಕೆ ಒಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ಪಿಲ್ಲಾ—ಚಿಲ್ಟಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡೀಗೆ 2 ಆಣೆ ದರ ಪ್ರಕಾರ ಅಥವಾ ಟನ್‌ವಂದಕ್ಕೆ 8 ಆಣೆಗಳ ಮೇರೆ ಕೋಠೀಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳು ಮಾಯಿದೇ ನೋಟಸು ಕೊಟ್ಟನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು, ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್‌ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡುಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್‌ಪೆಕ್ಟರ್ ಜನರಲ್‌ಯವರು, ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಒಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಯೆ ಲೈಸೆನ್ಸ್.

9. ಫಾರೆಸ್ಟ್ ಇನ್‌ಚಾರ್ಜ್ ಆಫಿಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಠಿಯಿಂದ ಯಾವ ಮರವೂ ಸಾಗಿಸಲ್‌ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸ್ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ಮಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಜಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ಮಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತೀ ಮಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರವರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು:

VI. ಒಟ್ಟು ವಿಷಯ.

10. ಜಾರೀಲಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ್ ಶೀಮೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು. ಅಥವಾ ರೇಂಜ್ ಇನ್‌ಛಾರ್ಜ್ ಫಾರೆಸ್ಟ್ ಆಫಿಸರರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಯಿಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರವರ ಯಾ ಅವರಿಂದ ನೇಮಿಸಲ್ಪಡುವ ಆಫಿಸರರ ಮಂಜೂರಾತಿಸಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇನ್‌ಛಾರ್ಜ್ ಫಾರೆಸ್ಟ್ ಆಫಿಸರು ತಮ್ಮ ಸ್ವಂತ ಜವಾಬ್‌ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೀ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ವುಂಟಾಗಿರತಕ್ಕದ್ದು.

ತಾರೀಖು 17ನೇ ಮೇ 1795.

ನಂ. 20963-ಜೆ. 1256.—ಮೈಸೂರು ಸಬ್ ಜಡ್ಜಿಯರಾದ ಮಿಸ್ಟರ್ ಯಂ. ರಾಮಸ್ವಾಮಿ ಅಯ್ಯರ್, ಬಿ. ಎ; ಬಿ. ಎಲ್. ಯವರು, 1895ನೇ ಇಸವಿ ಏಪ್ರೈಲ್ 30ನೇ ಮರ್ಕುಂ ಮಧ್ಯಾಹ್ನಾತ್ಪರ ಮೈಸೂರು ಡಿಸ್ಟ್ರಿಕ್ಟ್ ಷ ಸೆಷನ್ ಕೋರ್ಟಿನ ಚಾರ್ಜನ್ನು ವಹಿಸಿದರು.

ತಾರೀಖು 21ನೇ ಮೇ 1895.

ನಂ. 21072.—ಯಲ್. ಯಫ್. 428—92. ಮಿಸ್ಟರ್ ಯರ್ನೂಲ್ ನರಸಿಂಹಯ್ಯನವರು, ಮೃತಪಟ್ಟ ಮಿಸ್ಟರ್ ವಕ್ಕಾಕುಲ ಮುನಿಯಪ್ಪನವರಿಗೆ ಬದಲಾಗಿ ಚಿಕ್ಕಬಳ್ಳಾಪುರದ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 83.—ಡಿ. ಹೆಚ್. ಓ. ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮಿಸ್ಟರ್ ಪಿ. ಆರ್. ಡಬ್ಲಿಯು. ವೆದರಾಲ್ ಯವರು, ಮಿಸ್ಟರ್ ಪಿ. ಪಂಚನಾಥರಾಯರು ಇತರ ಕೆಲಸದ ಮೇಲಿರುವಾಗ ಯಾ ಮತ್ತೊಂದು ಹುಕುಂ ಕೊಡುವಪರಿಯಂತ ಸಬ್ ಪ್ರೊಟೆಂ ಮೈಸೂರು ಸಿಟಿ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 18ನೇ ಮೇ 1895.

ನಂಬರ್—20887.—ಎಲ್. ಎಫ್. 257—92.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮವನ್ನನುಸರಿಸಿ ಪ್ರಕಟಪಡಿಸುವದೇನಂದರೆ,—ಇದಕ್ಕೆ ಲಗತ್ ಮಾಡಿರುವ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ ಕಸಾಯಿ ಮನೆಗೆ ಕೊಲ್ಲುವದಕ್ಕೆ ತೆಗದುಕೊಂಡು ಹೋಗುವ ಕುರಿಗಳನ್ನು ಇಟ್ಟುಕೊಂಡಿರುವದಕ್ಕೆ ಬೇಕಾಗಿರುತ್ತೆ.

ಸೀರಿಯಲ್ ನಂಬರ್ 1.

ಮಾಲೀಕನ ಹೆಸರು ಮೃತಪಟ್ಟ ಸೈಜಾಮ್ ಷಾಹೀತ್‌ನ ಹೆಂಡತಿ ಬುರ್ಹಾಬೀ ಹೊಂದಬೇಕಾದ ವಿಸ್ತೀರ್ಣ:—

ಪೂರ್ವ ಪಶ್ಚಿಮ 75 ಅಡಿ
ಉತ್ತರ ದಕ್ಷಿಣ 75 ಅಡಿ

ವಿವರ—ಖಾಲೀಜಮೀನ್ ಚಕ್ಕುಬಂದಿ.

ಪೂರ್ವಕ್ಕೆ—ಕಸಾಯಿ ಮನೆ ರೋಡಿಗೆ ಹೋಗುವ ರಸ್ತೆ
ಪಶ್ಚಿಮಕ್ಕೆ—ಸರ್ಕಾರದ ಖಾಲಿ ಜಮೀನ್
ಉತ್ತರಕ್ಕೆ—ಕಸಾಯಿಮನೆ ಯದುರಿಗೆ ಇರುವ ರಸ್ತೆ
ದಕ್ಷಿಣಕ್ಕೆ—ಖಾಲೀ ಜಮೀನ್

"ಹುಕುಂ ಬಮೋಜೀಬ್"
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂಬರ್ 1441. ತಾರೀಖು 22ನೇ ಮೇ 1895ನೇ ಇಸವಿ, ಮೊಕ್ಕಾಂ ಶ್ರೀರಂಗಪಟ್ಣ.

ಅರಕಲ್‌ಗೂಡು ತಾಲ್ಲೂಕು ರಾಮನಾಥಪುರದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ಗಾಡೀಪಾಳ್ಯದ ನರಸಿಂಹಾಚಾರ್ರು
(2) ಶೇಷಭಟ್ಟರು
(3) ಕೊರ್ಟಿಕೆರೆ ಅಣ್ಣಾಜಯ್ಯಂಗಾರ್ರು
(4) ಪುಟ್ಟಶಾಮಯ್ಯ ಪುರಫ್ ಸುಬ್ಬರಾಯರು

ನಂಬರ್ 1442.

ಅರಕಲ್‌ಗೂಡು ತಾಲ್ಲೂಕು ರಾಮನಾಥಪುರದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ರಾಮೇಶ್ವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ಶೇಷಭಟ್ಟರು
(2) ವ್ರೋಣಿ ವಾಸುದೇವಾಚಾರ್ರು
(3) ಪಂಚಾಂಗದ ಸುಬ್ಬಾಭಟ್ಟರು
(4) ತೆಂಗಿನಮನೆ ಶ್ರೀನಿವಾಸಯ್ಯಂಗಾರ್ರು
(5) ರಾಮಾವಧಾನಿಗಳು

ನಂಬರ್ 1443.

ಅರಕಲ್‌ಗೂಡು ತಾಲ್ಲೂಕು ರಾಮನಾಥಪುರದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಶ್ರೀಪಟ್ಟಾಭಿರಾಮ ದೇವರ ದೇವಸ್ಥಾನಕ್ಕೆ ಈ ಕೆಳಗೆ ನಮೂಧಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ಶೇಷಭಟ್ಟರು
(2) ಹುಲಿಕಲ್ಲು ಕೃಷ್ಣಯ್ಯಂಗಾರ್ರು
(3) ಕೊರ್ಟಿಕೆರೆ ಅಣ್ಣಾಜಯ್ಯಂಗಾರ್ರು
(4) ಗಾಡೀಪಾಳ್ಯದ ನರಸಿಂಹಾಚಾರ್ರು
(5) ವೆಂಡರ್ ಪುಟ್ಟಶಾಮಯ್ಯನವರು
(6) ಫ್ರೋಣಿ ವಾಸುದೇವಾಚಾರ್ರು

ಎ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೆಕ್ರೆಟರಿ.

ತಾರೀಖು 17ನೇ ಮೇ 1795.

ನಂ. 20963.—ಜೆ. 1256.—ಮೈಸೂರು ಸಬ್ ಜಡ್ಜೀರಾದ ಮೆಸ್ಟರ್ ಯಂ. ರಾಮಸ್ವಾಮಿ ಅಯ್ಯರ್, ಬಿ. ಎ; ಬಿ. ಎಲ್. ಯವರು, 1895ನೇ ಇಸವಿ ಏಪ್ರೆಲ್ 30ನೇ ಮರ್ಕಂ ಮಧ್ಯಾಹ್ನಾತ್ಪರ ಮೈಸೂರು ಡಿಸ್ಟ್ರಿಕ್ಟ್ ಪ ಸೆಷನ್ ಕೋರ್ಟು ಚಾರ್ಜನ್ನು ವಹಿಸಿದರು,

ತಾರೀಖು 21ನೇ ಮೇ 1895.

ನಂ. 21072.—ಯಲ್. ಯಫ್. 428—92. ಮೆಸ್ಟರ್ ಯರ್ನೂಲ್ ನರಸಿಂಮಯ್ಯನವರು, ಮೃತಪಟ್ಟ ಮೆಸ್ಟರ್ ವಕ್ಕಾಕುಲ ಮುನಿಯಪ್ಪನವರಿಗೆ ಬದಲಾಗಿ ಚಿಕ್ಕಬಳ್ಳಾಪುರದ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 83.—ಡಿ. ಹೆಚ್. ಓ. ಮೈಸೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮೆಸ್ಟರ್ ಪಿ. ಆರ್. ಡಬ್ಳ್ಯು. ವೆದರಾಲ್ ಯವರು, ಮೆಸ್ಟರ್ ಪಿ. ಪಂಚನಾಥರಾಯರು ಇತರ ಕೆಲಸದ ಮೇಲಿರುವಾಗ ಯಾ ಮತ್ತೊಂದು ಹುಕುಂ ಕೊಡುವಪರಿಯಂತ ಸಬ್ ಪ್ರೊಟೆಂ ಮೈಸೂರು ಸಿಟಿ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 18ನೇ ಮೇ 1895.

ನಂಬರ್—20887.—ಎಲ್. ಎಫ್. 257—92.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮವನ್ನನುಸರಿಸಿ ಪ್ರಕಟಪಡಿಸುವದೇನಂದರೆ,—ಇದಕ್ಕೆ ಲಗತ್ ಮಾಡಿರುವ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ ಕಸಾಯಿ ಮನೆಗೆ ಕೊಲ್ಲುವದಕ್ಕೆ ತೆಗದುಕೊಂಡು ಹೋಗುವ ಕುರಿಗಳನ್ನು ಇಟ್ಟುಕೊಂಡಿರುವದಕ್ಕೆ ಬೇಕಾಗಿರುತ್ತೆ.

ಸೀರಿಯಲ್ ನಂಬರ್ 1.

ಮಾಲೀಕನ ಹೆಸರು ಮೃತಪಟ್ಟ ನೈಜಾಮ್ ಷಾಹೀತ್‌ನ ಹೆಂಡತಿ ಬುರ್ಡಬೀ ಹೊಂದಬೇಕಾದ ವಿಸ್ತೀರ್ಣ:—

ಪೂರ್ವ ಪಶ್ಚಿಮ 75 ಅಡಿ
ಉತ್ತರ ದಕ್ಷಿಣ 75 ಅಡಿ

ವಿವರ—ಖಾಲೀಜಮೀನ್ ಚಕ್ಕುಬಂದಿ.

ಪೂರ್ವಕ್ಕೆ—ಕಸಾಯಿ ಮನೆ ರೋಡಿಗೆ ಹೋಗುವ ರಸ್ತೆ
ಪಶ್ಚಿಮಕ್ಕೆ—ಸರ್ಕಾರದ ಖಾಲಿ ಜಮೀನ್
ಉತ್ತರಕ್ಕೆ—ಕಸಾಯಿಮನೆ ಯದುರಿಗೆ ಇರುವ ರಸ್ತೆ
ದಕ್ಷಿಣಕ್ಕೆ—ಖಾಲೀ ಜಮೀನ್

''ಹುಕುಂ ಬಮೋಜೀಬ್''
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂಬರ್ 1441. ತಾರೀಖು 22ನೇ ಮೇ 1895ನೇ ಇಸವಿ, ಮೊಕ್ಕಾಂ ಶ್ರೀರಂಗಪಟ್ಣ.

ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಅಗಸ್ತೀಶ್ವರಸ್ವಾಮಿ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇಧೆ:—

(1) ಗಾಡೀಪಾಳ್ಯದ ನರಸಿಂಹಾಚಾರ್ರು
(2) ಶೇಷಭಟ್ಟರು
(3) ಕೋಟೆಕೆರೆ ಅಂಣಾಜಯ್ಯಂಗಾರ್ರು
(4) ಪುಟ್ಟಶಾಮಯ್ಯ ಪುರಫ್ ಸುಬ್ಬರಾಯರು

ನಂಬರ್ 1442.

ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ರಾಮೇಶ್ವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇಧೆ:—

(1) ಶೇಷಭಟ್ಟರು
(2) ಪೋಣಿ ವಾಸುದೇವಾಚಾರ್ರು
(3) ಪಂಚಾಂಗದ ಸುಬ್ಬಾಭಟ್ಟರು
(4) ತೆಂಗಿನಮನೆ ಶ್ರೀನಿವಾಸಯ್ಯಂಗಾರ್ರು
(5) ರಾಮಾವಧಾನಿಗಳು

ನಂಬರ್ 1443.

ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಶ್ರೀಪಟ್ಟಾಭಿರಾಮ ದೇವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇಧೆ:—

(1) ಶೇಷಭಟ್ಟರು
(2) ಹುಲಿಕಲ್ಲು ಕೃಷ್ಣಯ್ಯಂಗಾರ್ರು
(3) ಕೋಟೆಕೆರೆ ಅಂಣಾಜಯ್ಯಂಗಾರ್ರು
(4) ಗಾಡೀಪಾಳ್ಯದ ನರಸಿಂಹಾಚಾರ್ರು
(5) ಮೆಂಡ5 ಪುಟ್ಟಶಾಮಯ್ಯನವರು
(6) ಪೋಣಿ ವಾಸುದೇವಾಚಾರ್ರು

ಎ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೆಕ್ರೆಟರಿ.